ಗಾಂಧೀ ಮಾರ್ಗಿ

ಹೊ. ಶ್ರೀ



ಗಾಂಧೀ ಮಾರ್ಗ

ಹೊ. ಶ್ರೀ

ಪ್ರಕಾಶಕರು :



ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು - 560 001
ದೂ : 080-22261967
e-mail : gandhibhavanbangalore@gmail.com

ಗಾಂಧೀ ಮಾರ್ಗಿ ಹೊ. ಶ್ರೀ – ಡಾ. ಹೊ, ಶ್ರೀನಿವಾಸಯ್ಯನವರ ಸಂಸ್ಮರಣ ಗ್ರಂಥ.
ಪ್ರಕಾಶಕರು ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಗಾಂಧೀ ಭವನ, ಕುಮಾರ ಪಾರ್ಕ್
ಪೂರ್ವ, ಬೆಂಗಳೂರು–560001.
ದೂರವಾಣಿ ಸಂಖ್ಯೆ : 08022261967
g-mail : gandhibhavnbangalore@gmail.com

ಮೊದಲನೇಯ ಮುದ್ರಣ : 2018
ಪ್ರತಿಗಳು : 1000
ಪುಟಗಳು : 164 + 28
ಬೆಲೆ : 75/–
ಬಳಸಿದ ಕಾಗದ : 70 ಜಿ.ಎಸ್.ಎಂ. Maplitho Paper

ಅಕ್ಷರ ಜೋಡಣೆ
ರಿಪ್ಲಿಕ ಆಫ್‌ಸೆಟ್ ಪ್ರಿಂಟರ್ಸ್

ಮುದ್ರಕರು :
ರಿಪ್ಲಿಕ ಆಫ್‌ಸೆಟ್ ಪ್ರಿಂಟರ್ಸ್
ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್
ಬೆಂಗಳೂರು – 560 044.
ದೂರವಾಣಿ : 080–23357963

ಅಧ್ಯಕ್ಷರ ನುಡಿ

ಡಾ: ಹೊ.ಶ್ರೀನಿವಾಸಯ್ಯ ಅವರು ಈ ನಾಡು ಕಂಡ ಅಪರೂಪದ ಸಾಧಕರು. ನಮ್ಮ ನಾಡಿನಲ್ಲಿ ಹಿರಿಯ ಚಿಂತಕರು ಕೆಲವರಿದ್ದಾರೆ. ಇನ್ನೂ ಕೆಲವರು ಸಮಾಜ ಸೇವಕರೂ, ಗಾಂಧೀವಾದಿಗಳೂ ಇದ್ದಾರೆ. ಅವರಲ್ಲಿ ಇನ್ನೂ ಕೆಲವರು ಪ್ರಕೃತಿ ಚಿಕಿತ್ಸಾ ತಜ್ಞರು, ಯೋಗಪಟುಗಳೂ ಇದ್ದಾರೆ. ಆದರೆ ಈ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವರು ವಿರಳ. ಅಂತಹ ವಿರಳರಲ್ಲಿ ವಿರಳರು ಡಾ: ಹೊ. ಶ್ರೀನಿವಾಸಯ್ಯ ಅವರು. ಶ್ರೀಯುತರು ಅಪ್ಪಟ ಗ್ರಾಮೀಣ ಪ್ರತಿಭೆ ಡಾ: ಹೊ. ಶ್ರೀನಿವಾಸಯ್ಯ ಅವರ ಜೀವನದ 9 ದಶಕಗಳ ಕಲ್ಲು ಮುಳ್ಳುಗಳ ಹಾದಿಯಲ್ಲಿ ಅತ್ಯಂತ ಕಠಿಣ, ದುರ್ಗಮ ಹಾಗೂ ಜೀವನೋತ್ಸಾಹ ಹುಟ್ಟಿಸುವಂತಹ ಯಶೋಗಾಥೆಯನ್ನು ನಾವು ಕಾಣಬಹುದು.

ಡಾ: ಹೊ. ಶ್ರೀನಿವಾಸಯ್ಯ ಅಪ್ಪಟ ಗಾಂಧೀ ಅನುಯಾಯಿ ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಹರ್ನಿಸಿ ದುಡಿದವರು. 1949ರಲ್ಲೇ ಇಂಜಿನಿಯರಿಂಗ್ ಪದವಿ ಪಡೆದು ವೃತ್ತಿಯಲ್ಲಿ ಇಂಜಿನಿಯರಾದರೂ ಕನ್ನಡ ಮತ್ತು ಇಂಗ್ಲೀಷ್ ಸಾಹಿತ್ಯಲೋಕಕ್ಕೆ 80ಕ್ಕೂ ಹೆಚ್ಚು ಮೌಲ್ಯಯುತ ಗ್ರಂಥಗಳ ಅಮೂಲ್ಯ ಕೊಡುಗೆ ನೀಡಿದ್ದಾರೆ. ತಮ್ಮ 9ನೇ ವಯಸ್ಸಿನಲ್ಲೇ ಅಂದರೆ 1934ರಲ್ಲಿ ಗಾಂಧೀಜಿಯವರನ್ನೂ ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಬಹಳ ಸಮೀಪದಲ್ಲಿ ಕಂಡದ್ದನ್ನು ಅತ್ಯಂತ ಕೃತಾರ್ಥ ಭಾವದಿಂದ ಸ್ಮರಿಸುತ್ತಾರೆ. 21ನೇ (1946) ವಯಸ್ಸಿನಲ್ಲಿ ಮದರಾಸಿನಲ್ಲಿ ಅಖಿಲಭಾರತ ಹಿಂದೀ ಸಮ್ಮೇಳನದಲ್ಲಿ ಗಾಂಧೀಜಿ ಅವರ ಜೊತೆ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡವರು. 12ನೇ ವಯಸ್ಸಿನಲ್ಲಿ ಖಾದಿ ಧರಿಸಲು ಪ್ರಾರಂಭಿಸಿದವರು. ಜರ್ಮನಿ ಮೊದಲಾದ ರಾಷ್ಟ್ರಗಳಲ್ಲಿ ಹಲವು ಅವರ ಜೀವನದಲ್ಲಿ ಆದ ಸ್ಮರಣೀಯ ಘಟನೆಗಳು ಡಾ: ಹೊ. ಶ್ರೀ ಅವರ ವ್ಯಕ್ತಿತ್ವದ ಹಿರಿಮೆ ಗರಿಮೆಯನ್ನು ಸಾರುತ್ತದೆ. ಅವುಗಳ ಸಂಕ್ಷಿಪ್ತ ಪ್ರಸ್ತಾಪ ಇಲ್ಲಿ ಅನಿವಾರ್ಯವೆಂದು ದಾಖಲಿಸಲಿಚ್ಚಿಸುತ್ತೇನೆ.

ಶ್ರೀಯುತರ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಯಾಗಿದ್ದಾಗ ಬೆಂಗಳೂರಿಗೆ ಕಾವೇರಿ ಕುಡಿಯುವ ನೀರಿಗಾಗಿ ಸುಪ್ರಿಂಕೋರ್ಟಿಗೆ ಮೊಕದ್ದಮೆ ಹಾಕಿ ಯಶಸ್ವಿಯಾದ ಘಟನೆಗೆ ಬೆಂಗಳೂರಿನ ಜನತೆ ಅವರಿಗೆ ಋಣಿಯಾಗಿರಬೇಕು.

ನಾಗಮಂಗಲಕ್ಕೆ ಇವರ ಹೋರಾಟದ ಫಲವಾಗಿ 200 ಹಾಸಿಗೆಯುಳ್ಳ ಪ್ರಕೃತಿ ಚಿಕಿತ್ಸಾ ಮತ್ತು ಸಂಶೋಧನಾ ಕೇಂದ್ರ ಆಸ್ಪತ್ರೆಯನ್ನು ತಂದು ಈಗಾಗಲೇ ಈ ಆಸ್ಪತ್ರೆ 15 ಎಕರೆ ಪ್ರದೇಶದಲ್ಲಿ 100ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದೆ.

ಅವರು ಪಿತೃಸಮಾನರೆಂದೇ ಭಾವಿಸಿದ್ದ ಗುರು ಸಿದ್ಧವನಹಳ್ಳಿ ಕೃಷ್ಣಶರ್ಮರನ್ನು ಸ್ಮರಿಸುತ್ತಿದ್ದ ರೀತಿ, ಎಲ್ಲಾ ರಾಜಕೀಯಪಕ್ಷದವರ ಪ್ರೀತಿಗೆ ಪಾತ್ರರಾಗಿ ಹಲವಾರು ಕೋಟಿ ನೆರವು ಪಡೆದು ಇಡೀ ರಾಷ್ಟ್ರದಲ್ಲಿಯೇ ಒಂದು ಮಾದರಿ ಗಾಂಧೀ ಸಂಸ್ಥೆಯನ್ನಾಗಿ ಮಾಡಿದ ಅವರ ಅಸಾಧಾರಣ ವ್ಯಕ್ತಿತ್ವ ಪ್ರತಿಭೆ ಗುರುತಿಸಿ ನಮ್ಮಂತಹವರನ್ನು ವಿಶೇಷವಾಗಿ ಯುವಕರನ್ನು ಪ್ರೋತ್ಸಾಹಿಸಿ ಬೆಳೆಸುತ್ತಿದ್ದ ರೀತಿ, ಅವರ ನಿರಂತರ ಅಧ್ಯಯನ, ಅಮೂಲ್ಯವಾದವುಗಳನ್ನು ದಾಖಲಿಸುತ್ತಿದ್ದ ರೀತಿ, ಅತ್ಯಂತ ನಿಗರ್ವಿ ಸ್ವಭಾವ ಸದಾ ಹಸನ್ಮುಖಿಗಳಾಗಿ ಯುವಜನರನ್ನು ಪ್ರೀತಿಸಿ, ಆನಂದದಲ್ಲಿ ನೋಡುವ ಪರಿ, ಅನನ್ಯ ಹಾಗೂ ಮಾದರಿಯಾದದ್ದು.

ಬಿ.ಜೆ.ಪಿ ಸರ್ಕಾರ ಕರ್ನಾಟಕದಲ್ಲಿ ಅಧಿಕಾರದಲ್ಲಿದ್ದಾಗ ಎಂ.ಎಲ್.ಸಿ ಯಾಗಿ ಎಂಬ ಕೋರಿಕೆಯನ್ನು ವಿನಮ್ರವಾಗಿ ಬೇಡವೆಂದು ಗಾಂಧೀ ಭವನದ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ತನ್ನ ಸ್ವಗ್ರಾಮ ನಾಗಮಂಗಲ ತಾಲ್ಲೂಕನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಸ್ಥಳೀಯ ಸಂಸದರಾದ ಶ್ರೀ ಪುಟ್ಟರಾಜು ಮತ್ತು ಶಾಸಕರಾದ ಶ್ರೀ ಚಲುವರಾಯಸ್ವಾಮಿ ಅವರ ನೆರವಿನಿಂದ ಗಾಂಧೀ ಭವನದ ದತ್ತು ಗ್ರಾಮವಾಗಿಸಿ ಮಾದರಿ ಗ್ರಾಮವನ್ನಾಗಿ ಮಾಡುವಲ್ಲಿ ಶ್ರಮಿಸಿ ಅದನ್ನು ಆನಂದಿಸಿದ್ದನ್ನು ನಾನು ಹತ್ತಿರದಿಂದ ಬಲ್ಲೆ.

ಡಾ: ಹೊ. ಶ್ರೀ ಕೇವಲ ಸ್ಮರಣೆಯಲ್ಲಿ ಮಾತ್ರ ಉಳಿಯದೇ ಅವರ ಬದುಕು ನಾಡಿನ ಜನತೆಗೆ ವಿಶೇಷವಾಗಿ ಯುವಜನತೆಗೆ ತಲುಪಿ ಅದರಿಂದ ಪ್ರಭಾವಿತರಾಗು ವಂತೆ ಮಾಡುವ ಉದ್ದೇಶದಿಂದ ಗಾಂಧೀ ಭವನ ಅವರ ಸಂಸ್ಮರಣೆ ಗ್ರಂಥ ಮತ್ತು ದತ್ತಿ ಕಾರ್ಯಕ್ರಮವನ್ನು ಎಲ್ಲರ ನೆರವು ಮತ್ತು ಸಹಕಾರದಿಂದ ಏರ್ಪಡಿಸಿದೆ. ಸಹಕರಿಸಿದ ಎಲ್ಲರಿಗೂ ನನ್ನ ಕೃತಜ್ಞತೆಗಳು.



ಡಾ: ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ,
ಗಾಂಧೀ ಭವನ, ಬೆಂಗಳೂರು

ಕೃತಜ್ಞತೆಗಳು

"The example of great and pure individuals is the only thing that can lead us to noble thoughts and deeds"

- Albert Einstien

"ಶ್ರೇಷ್ಠ ಮತ್ತು ಪರಿಶುದ್ಧವಾದ ವ್ಯಕ್ತಿಗಳ ಉದಾಹರಣೆಯೊಂದೇ ನಮ್ಮನ್ನು ಉತ್ತಮ ಆಲೋಚನೆ ಮತ್ತು ಕಾರ್ಯಗಳೆಡೆಗೆ ಮುನ್ನಡೆಸಬಲ್ಲದು."

- ಆಲ್ಬರ್ಟ್ ಐನ್‌ಸ್ಟೀನ್

ಮನುಕುಲ ಉಳಿಯಬೇಕಾದರೆ ಮಹಾನ್ ಸಾಧಕರ, ದಾರ್ಶನಿಕರ, ಚಿಂತಕರ ಮತ್ತು ತ್ಯಾಗಿಗಳ ಜೀವನ ನಿದರ್ಶನಗಳು ಸಮಾಜದ ಎಲ್ಲಾ ಜನರಿಗೆ ಶ್ರೇಷ್ಠ ಆದರ್ಶವಾಗಿ ಬಾಳು ರೂಪಿಸಿಕೊಳ್ಳಲು ಸಾಧನಗಳಾಗಿರದಿದ್ದರೆ ವಿಶ್ವ ಎಂದೋ ಬರಿದಾಗುತ್ತಿತ್ತು, ಎಂಬುದು ಅಕ್ಷರಶ: ಸತ್ಯ. ಈ ಗಣ್ಯರ ಸಾಲಿನಲ್ಲಿ ಸೇರಿದವರು ಡಾ: ಹೊ ಶ್ರೀನಿವಾಸಯ್ಯನವರು ಅವರ ವ್ಯಕ್ತಿ ವಿಚಾರಗಳು ಜನಸಾಮಾನ್ಯರಿಗೆ ವಿಶೇಷವಾಗಿ ಯುವಜನರಿಗೆ ತಲುಪಿ ಅವರ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಲಿ ಎಂಬ ಆಶಯದಿಂದ ಡಾ: ಹೊ ಶ್ರೀ ಅವರನ್ನು ಹತ್ತಿರದಿಂದ ಬಲ್ಲವರಿಂದ ಪಡೆದ ಲೇಖನಗಳ ಸಂಗ್ರಹವೇ "ಗಾಂಧೀ ಮಾರ್ಗಿ ಹೊ ಶ್ರೀ" ಕೃತಿಯಾಗಿದೆ.

ಡಾ: ಹೊ ಶ್ರೀ ಯವರನ್ನು ಬಾಲ್ಯದಿಂದ ಮತ್ತು ಸಮೀಪದಿಂದ ಬಲ್ಲವರು, ಅವರೊಡನೆ ಸ್ವಾತಂತ್ರ್ಯ ಹೋರಾಟದಲ್ಲಿ ಸಹಭಾಗಿಯಾದವರು ಪ್ರೀತಿ ವಿಶ್ವಾಸದಿಂದ ಸಕಾಲದಲ್ಲಿ ಲೇಖನಗಳನ್ನು ಬರೆದುಕೊಟ್ಟು ಈ ಕೃತಿಯ ಮೌಲ್ಯವನ್ನು ಔನತ್ಯಕ್ಕೇರಿಸಿದ್ದಕ್ಕಾಗಿ ಅವರೆಲ್ಲರಿಗೂ ಹೃದಯಪೂರ್ವಕ ಅಭಿನಂದನೆಗಳು. ಈ ಕೃತಿರೂಪಕ್ಕೆ ಅತ್ಯಂತ ಆತ್ಮೀಯವಾಗಿ ಸಂದೇಶಗಳನ್ನು ಕಳುಹಿಸಿದ ಎಲ್ಲಾ ಸ್ವಾಮೀಜಿ ಯವರುಗಳಿಗೆ ಮತ್ತು ಇತರ ಗಣ್ಯರಿಗೆ ಗೌರವ ಪೂರ್ವಕ ನಮನಗಳು. ಅತೀವ ಪ್ರೀತಿಯಿಂದ ಲೇಖನಗಳನ್ನು ಬರೆದು ಅವರ ಭಾವ ಚಿತ್ರಗಳನ್ನು ಪ್ರಕಟಣೆಗಾಗಿ ಒದಗಿಸಿದ ಬಂಧುಗಳಿಗೆ ಹಾಗೂ ಮಿತ್ರರುಗಳಿಗೆ ವಂದನೆಗಳನ್ನು ಸಲ್ಲಿಸಲಾಗಿದೆ. ಕೇಂದ್ರ ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿಗಳು ಮತ್ತು ಹೊರರಾಜ್ಯಗಳ ಗಾಂಧೀ ಸ್ಮಾರಕ ನಿಧಿಗಳ ಮುಖಸ್ಥರುಗಳ ನುಡಿ ನಮನಗಳಿಗಾಗಿ ಮನಪೂರ್ವಕ ಕೃತಜ್ಞತೆಗಳು.

ಡಾ. ಹೊ. ಶ್ರೀ ಟ್ರಸ್ಟ ನ ಎಲ್ಲಾ ಪದಾಧಿಕಾರಿಗಳ ಸಹಭಾಗಿತ್ವಕ್ಕಾಗಿ ಪ್ರೀತಿಯ ನಮನಗಳು. ಡಾ. ಹೊ. ಶ್ರೀ ಯವರು ಕಾಲವಶರಾದ ಸಂಧರ್ಭದಲ್ಲಿ ಪ್ರಕಟವಾದ ಪತ್ರಿಕಾ ನುಡಿನಮನಗಳನ್ನು ಕೃತಿಯಲ್ಲಿ ಅಳವಡಿಸಿಕೊಂಡಿದ್ದು ಆ ಎಲ್ಲಾ ಪತ್ರಿಕಾ ಬಳಗದ ವರಿಗೂ ಹೃತ್ಪೂರ್ವಕ ನಮಸ್ಕಾರಗಳು.

ಈ ಪುಸ್ತಕ ಹೊರಬರಲು ಕಾರಣರಾದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ ಡಾ: ವೂಡೇ ಪಿ. ಕೃಷ್ಣ ಅವರಿಗೂ ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಚಂದವಾಗಿ ಪುಸ್ತಕ ಮುದ್ರಣ ಮಾಡಿದ ರಿಪ್ಲಿಕ ಆಫ್‌ಸೆಟ್ ಪ್ರಿಂಟರ್ಸ್‌ನ ಶ್ರೀ ದಯಾನಂದಸಾಗರ್, ಶ್ರೀ ರವಿ ಪ್ರಕಾಶ್, ಶ್ರೀ ಮಹೇಶ್ ಅವರಿಗೂ ಮತ್ತು ಅಂದವಾದ ಮುಖಪುಟ ರಚಿಸಿಕೊಟ್ಟ ಶ್ರೀ ಜಗದೀಶ್ ಅವರಿಗೂ ಕೃತಜ್ಞತೆಗಳು ಸಲ್ಲುತ್ತವೆ.

ಸಂಪಾದಕ ಸಮಿತಿ

– ಇಂದಿರಾಕೃಷ್ಣಪ್ಪ
– ವಿ.ಎನ್. ತಿಪ್ಪನಗೌಡ
– ಹೆಚ್. ಯೋಗೇಶ್

ಪರಿವಿಡಿ

ನ್ಯಕ್ಷರ ನುಡಿ – ಡಾ: ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಕಜ್ಞತೆಗಳು – ಸಂಪಾದಕರ ಸಮಿತಿ
ಣ್ಯರ ಸಂದೇಶ –
ಣ್ಯರು ಕಂಡಂತೆ ಡಾ. ಹೊ. ಶ್ರೀ –
ಖನಗಳು
ಶ್ರೀ ಎಚ್.ಕೆ. ಪಾಟೀಲ್ – ಗಾಂಧಿ ಆದರ್ಶಗಳ ಚಿಲುಮೆ – ಹೊ. ಶ್ರೀನಿವಾಸಯ್ಯ
ನಾಡೋಜ ಡಾ. ಪಾಟೀಲ್ ಪುಟ್ಟಪ್ಪ – ಶ್ರೀ ಹೊ. ಶ್ರೀನಿವಾಸಯ್ಯನವರ ಮಾದರಿ ನಮಗೆ ಬೇಕು 1
ಡಾ. ಎಂ.ವಿ. ರಾಜಶೇಖರನ್ – ನಮ್ಮೆಲ್ಲರ ರೋಲ್ ಮಾಡೆಲ್ ಹಿರಿಯ ಗಾಂಧೀವಾದಿ ಡಾ: ಹೊ. ಶ್ರೀನಿವಾಸಯ್ಯನವರು 5
ಡಾ. ಜಿ. ಮಾದೇಗೌಡ – ಹೊ. ಶ್ರೀನಿವಾಸಯ್ಯ : ಒಂದು ಮಾಸದ ನೆನಪು 8
ಡಾ. ಬಿ.ಎಲ್ ಶಂಕರ್ – ಕರ್ನಾಟಕದ ಚಿರಂತನ ಗಾಂಧಿ ಡಾ:ಹೊ. ಶ್ರೀನಿವಾಸಯ್ಯ 10
ಶ್ರೀ ಪಿ. ರಾಮಯ್ಯ – ವಿಭೂತಿ ಪುರುಷ –ಡಾ: ಹೊ. ಶ್ರೀನಿವಾಸಯ್ಯ 14
.ಶ್ರೀ ಮಾರ್ಕಂಡಪುರಂ ಶ್ರೀನಿವಾಸ್ – ಬಹುಶೃತ ಕರ್ಮಯೋಗಿ ಡಾ: ಹೊ. ಶ್ರೀನಿವಾಸಯ್ಯ 18
.ಡಾ: ಬಿ.ಎಸ್. ಶ್ರೀಕಂಠ – ಡಾ: ಹೊ. ಶ್ರೀನಿವಾಸಯ್ಯ ಹಿರಿಯ ಚಿಂತಕರು ಗಾಂಧೀವಾದಿಗಳು ಹಾಗೂ ಆದರ್ಶ ಪ್ರಾಯರು 23
. ಇಂದಿರಾ ಕೃಷ್ಣಪ್ಪ – ಹೀಗಿದ್ದರು ಡಾ॥ ಹೊ. ಶ್ರೀ ಅವರು 25
.ಶ್ರೀ ಎನ್.ಆರ್. ವಿಶುಕುಮಾರ್ – ಹೊ. ಶ್ರೀನಿವಾಸಯ್ಯ : ಒಂದು ಸಾರ್ಥಕ ಬದುಕು 30
0.ಶ್ರೀ ಹೆಚ್.ಬಿ. ದಿನೇಶ್ – ಗಾಂಧೀಜಿ ನೈಜಸ್ವರೂಪ – ಡಾ: ಹೊ. ಶ್ರೀ 33
1.ಶ್ರೀ ಡಿ.ಎಸ್. ನಾಗಭೂಷಣ – ಡಾ: ಹೊ. ಶ್ರೀನಿವಾಸಯ್ಯ ಗಾಂಧೀ ಗಾಂಧಿವಾದ ಮತ್ತು ಗಾಂಧೀಭವನ 37
2.ಶ್ರೀ ವೇಮಗಲ್ ಸೋಮಶೇಖರ್ – ಗಾಂಧೀ ಭವನದ ರೂವಾರಿ ಡಾ. ಹೊ. ಶ್ರೀನಿವಾಸಯ್ಯ 48
3.ಪ್ರೊ. ಎನ್. ಕೃಷ್ಣಸ್ವಾಮಿ – ನನ್ನ ಗೆಳೆಯ ಶ್ರೀನಿವಾಸಯ್ಯ 54
4.ಶ್ರೀ ಹೆಚ್.ಎಂ. ಶಿವಣ್ಣ – ನಾ ಕಂಡಂತೆ ಡಾ: ಹೊ. ಶ್ರೀನಿವಾಸಯ್ಯ ಕಳಚಿದ ಗಾಂಧಿ ಯುಗದ ಕೊಂಡಿ 57
5.ಡಾ. ಎಂ.ಎಸ್. ಪಾಟೀಲ – ಅಪರೂಪದ ಅಧ್ಯಕ್ಷರು ಗಾಂಧೀ ಭವನದ ಹೊ. ಶ್ರೀ... 58
6.ಶ್ರೀಮತಿ ಎಸ್.ಜಿ. ಸುಶೀಲಮ್ಮ – ಡಾ: ಹೊ. ಶ್ರೀನಿವಾಸಯ್ಯ 62
7.ಶ್ರೀ ಬಿ.ಎಂ. ಹರಿಪ್ರಸಾದ್ – ಡಾ॥ ಹೊ. ಶ್ರೀನಿವಾಸಯ್ಯನವರಿಗೊಂದು ಶ್ರದ್ಧಾಂಜಲಿ 67
8.ಶಶಿಕೃಷ್ಣ – ನನ್ನ ಅಪ್ಪ 70
9.ಶ್ರೀ ಬಳಕೂರು ವಿ.ಎಸ್. ನಾಯಕ – ಗಾಂಧೀವಾದಿ, ಸಾಹಿತಿ, ಪ್ರಕೃತಿಚಿಕಿತ್ಸಕ ಡಾ.ಹೊ.ಶ್ರೀನಿವಾಸಯ್ಯ 73
20.ಆರ್.ಡಿ.ಜಿ. – ಚರಕ ಸಂಪ್ರದಾಯದ ವಸ್ತ್ರಧಾರಿ ಡಾ॥ ಹೊ. ಶ್ರೀನಿವಾಸಯ್ಯ 76
21.ಡಾ. ಅಭಿದಾ ಬೇಗಂ – ಮಾರ್ಗದರ್ಶಕರು 79
22.ಶ್ರೀ ಹೆಚ್.ಹೆಚ್. ನಾಗರಾಜ – ಸಮಾಜರತ್ನ ಡಾ: ಹೊ. ಶ್ರೀನಿವಾಸಯ್ಯ 82

23.ಶ್ರೀ ಟಿ. ವೆಂಕಟೇಶ್	–	ಡಾ. ಹೊ. ಶ್ರೀನಿವಾಸಯ್ಯ	86
24.ಶ್ರೀ ಕೆ.ಹೆಚ್. ಗೋಪಾಲಕೃಷ್ಣೇಗೌಡ	–	ನಾ ಕಂಡ ಶ್ರೀನಿವಾಸಯ್ಯನವರು?	88
25.Sri Ram Chandra Rahi	–	The Remembrance of H. Sreenivasaih	92
26.Sri K.m. Natarajan	–	Srinivasaiah Chairman Karnataka Gandhi Smaraka Nidhi Passed Away	95
27.Sri Sanjoy Singha	–	Great Gandhian Dr. H. Sreenivasiah	98
28.Sri Santhe Narayana Swamy	–	Jai Jagath" Dr. Ho. Srinivasaiah's Catch Phrase Extinguished for Ever	100
29. Sri Anirudh Aditya	–	Dear Thata	106

30. ಮಾಧ್ಯಮ ಕಂಬನಿ

31. ಕಿರು ಪರಿಚಯ

32. ಲೇಖಕರ ಮಾಹಿತಿ

33. ಭಾವ ಚಿತ್ರಗಳು

॥ ನಿರ್ಮಲಾನಂದನಾಥಸ್ವಾಮಿಗಳು ಪೀಠಾಧ್ಯಕ್ಷರು
ಆದಿಚುಂಚನಗಿರಿ ಮಹಾಸಂಸ್ಥಾನ ಮಠ
ಆದಿಚುಂಚನಗಿರಿ ಕ್ಷೇತ್ರ,
ಗಮಂಡಲ ತಾಲ್ಲೂಕು, ಮಂಡ್ಯ ಜಿಲ್ಲೆ–571811



ಸಂದೇಶ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ, ಗಾಂಧೀ ಅನುಯಾಯಿಗಳೂ, ಪ್ರಕೃತಿ ಚಿಕಿತ್ಸಾ ತಜ್ಞರೂ, ೋಗ ಪಟುಗಳೂ ಆಗಿದ್ದ ಡಾ॥ ಹೊ. ಶ್ರೀನಿವಾಸಯ್ಯರವರು ಮಹಾತ್ಮ ಗಾಂಧೀಜಿಯವರ ಸತ್ಯ, ಅಹಿಂಸೆ, ್ಯಗಳೆಂಬ ಆದರ್ಶದ ವ್ಯಕ್ತಿತ್ವಕ್ಕೆ ಮಾರು ಹೋದವರು. ಗಾಂಧೀಜಿಯವರ ಆದರ್ಶಗಳನ್ನು ತಮ್ಮ ದುಕಿನಲ್ಲಿ ಅಳವಡಿಸಿಕೊಂಡು ಅಂತೆಯೇ ಬಾಳಿದವರು. ಯುವ ಜನಾಂಗಕ್ಕೆ ಆದರ್ಶಪ್ರಾಯ ಗಿದ್ದವರು. 1983ರಲ್ಲಿ ತಮ್ಮ ಸೇವಾ ನಿವೃತ್ತಿಯ ನಂತರ ಗಾಂಧೀ ಸಾಹಿತ್ಯ, ಗಾಂಧೀ ಚಿಂತನೆಗಳ ಪ್ರಚಾರ ಾತ್ರವಲ್ಲದೆ ಒಬ್ಬ ಶಿಕ್ಷಣ ತಜ್ಞರಾಗಿ, ಸಮಾಜ ಸೇವಕರಾಗಿ, ಪ್ರಕೃತಿ ಚಿಕಿತ್ಸಾ ಪ್ರತಿಪಾದಕರಾಗಿ, ್ರಿಕೋದ್ಯಮಿಯಾಗಿ, ಸಮಾಜಮುಖಿ ಚಿಂತಕರಾಗಿ ಸೇವೆ ಸಲ್ಲಿಸುತ್ತಾ ಜನಮನಕ್ಕೆ ಹತ್ತಿರವಾಗಿದ್ದರು. ತಾವು ೇವೆ ಸಲ್ಲಿಸದಿರುವ ಸೇವಾ ಕ್ಷೇತ್ರವೇ ಇಲ್ಲವೇನೋ ಎನ್ನುವಷ್ಟರ ಮಟ್ಟಿಗೆ ತಮ್ಮ ಇಡೀ ಬದುಕನ್ನು ಸಮಾಜದ ಳಿಗೆಗೆ ಮೀಸಲಿಟ್ಟಿದ್ದರು. ಭಾರತ ಮತ್ತು ಜರ್ಮನಿಯ ಹಲವು ತಾಂತ್ರಿಕ ಸಂಸ್ಥೆಗಳ ಸದಸ್ಯರಾಗಿಯೂ ಸಂಸ್ಥೆಗಳ ಅಭ್ಯುದಯಕ್ಕಾಗಿ ಶ್ರಮಿಸಿದ್ದ ಇವರು ಬೆಂಗಳೂರಿನಲ್ಲಿರುವ ಶ್ರೀ ಆಂಜನೇಯ ೋ–ಅಪರೇಟೀವ್ ಬ್ಯಾಂಕಿನ ಸ್ಥಾಪಕರು.

ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಜೈಲುಶಿಕ್ಷೆ ಅನುಭವಿಸಿದ್ದ ಹೊ. ಶ್ರೀಯವರು ಈ ಸೇವೆಗೆ ರ್ಕಾರದಿಂದ ಯಾವುದೇ ಪ್ರತಿಫಲ ಪಡೆಯದೆ ಆದರ್ಶಪ್ರಾಯರಾಗಿದ್ದರು. ಶ್ರೀಯುತರು ತಮಗೆ ಜನ್ಮ ೀಡಿದ ಚೌದರಿಕೊಪ್ಪಲು ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ರೂಪಿಸಿದರು. ಲಕ್ಷಾಂತರ ಶಾಲಾ ಕಾಲೇಜು ದ್ಯಾರ್ಥಿಗಳಿಗೆ ಗಾಂಧೀ ತತ್ವಾದರ್ಶಗಳ ಕುರಿತು ಉಪನ್ಯಾಸ ನೀಡಿ ಯುವ ಶಕ್ತಿಯ ಮನದಾಳದಲ್ಲಿ ್ರೀತಿಯ "ತಾತ"ನೇ ಆಗಿದ್ದರು. "ಕರ್ನಾಟಕ ಗಾಂಧೀ ಸ್ಮಾರಕ ನಿಧಿ" ಸಂಸ್ಥೆಯನ್ನು ಇಡೀ ರಾಷ್ಟ್ರದಲ್ಲಿಯೇ ುಂಚೂಣಿಯ ಆದರ್ಶ ಸಂಸ್ಥೆಯನ್ನಾಗಿ ರೂಪಿಸಿರುವುದು ಶ್ರೀನಿವಾಸಯ್ಯರವರ ಕ್ರಿಯಾಶೀಲತೆಗೆ ಾಕ್ಷಿಯಾಗಿದೆ.

ಗಾಂಧೀ ತತ್ವಗಳನ್ನು ನಂಬಿ ಅದರಂತೆ ಬಾಳಿದ ಹೊ. ಶ್ರೀಯವರು ವೈಚಾರಿಕ ಮನೋಭಾವವನ್ನುಳ್ ರಾಗಿದ್ದರೂ ಸ್ವಭಾವತಃ ಶ್ರೀ ಗುರು ದೇವತೆಗಳಲ್ಲಿ ಅಪಾರ ಶ್ರದ್ಧಾಭಕ್ತಿಯನ್ನು ಹೊಂದಿದ್ದರು. ವಿಶೇಷವಾಗಿ ಮ್ಮ ಶ್ರೀ ಆದಿಚುಂಚನಗಿರಿ ಕ್ಷೇತ್ರದ ಗುರು ದೇವತೆಗಳಲ್ಲಿ ಅಪಾರ ಭಕ್ತಿ ಗೌರವ. ನಮ್ಮ ಪರಮಪೂಜ್ಯ ುರುಗಳಾದ ಜಗದ್ಗುರು ಶ್ರೀ ಶ್ರೀ ಶ್ರೀ ಪದ್ಮಭೂಷಣ ಡಾ॥ ಬಾಲಗಂಗಾಧರನಾಥ ಮಹಾಸ್ವಾಮಿಗಳವರ ೇವಾಕೈಂಕರ್ಯಕ್ಕೆ ಮಾರುಹೋಗಿದ್ದ ಇವರು ಶ್ರೀಮಠದ ಧರ್ಮದರ್ಶಿಯಾಗಿಯೂ ಸಲ್ಲಿಸಿದ ಸೇವೆ ವಿಸ್ಮರಣೀಯ. ಶ್ರೀಮಠವು ಕಳೆದ ಎರಡು ದಶಕಗಳಿಂದ ಆಯೋಜಿಸುತ್ತಿರುವ ಜನ ಜಾಗೃತಿ ಮತ್ತು ುಹಿಳಾ ಜಾಗೃತಿ ಶಿಬಿರಗಳ ನೇತೃತ್ವವನ್ನು ವಹಿಸಿಕೊಂಡು ಲಕ್ಷಾಂತರ ಯುವಜನರ ಮನಸ್ಸನ್ನು ಗೆದ್ದಿದ್ದರು. ಾ॥ ಹೊ. ಶ್ರೀಯವರು ಶ್ರೀಮಠದ ಅಭಿವೃದ್ಧಿಯ ವಿಷಯದಲ್ಲಿ ನಮ್ಮೊಡನೆ ನಿಕಟ ಸಂಪರ್ಕವನ್ನಿರಿಸಿ ೊಂಡಿದ್ದು ಸಮಾಜಮುಖಿ ಸೇವಾಕಾರ್ಯಗಳಿಗೆ ಪೂರಕವಾದ ಸಲಹೆ ಸೂಚನೆಗಳನ್ನು ನೀಡುತ್ತಾ ್ರೀಮಠದ ಏಳಿಗೆಯಲ್ಲಿ ಸಕ್ರಿಯರಾಗಿದ್ದರು.

ಇಳೆಯ ಮೇಲಿನ ತಮ್ಮ ಬದುಕಿನ ತೊಂಭತ್ತೂರು ವರ್ಷಗಳನ್ನು ಸಾರ್ಥಕವಾದ ರೀತಿಯಲ್ಲಿ ೂರ್ಣಗೊಳಿಸಿ ಇತ್ತೀಚೆಗಷ್ಟೆ ಇನ್ನಿಲ್ಲವಾದ ಶ್ರೀನಿವಾಸಯ್ಯರವರು ತಮ್ಮ ಭೌತಿಕ ಶರೀರವನ್ನಷ್ಟೇ ್ಯಜಿಸಿದ್ದಾರೆ; ತಮ್ಮ ಆದರ್ಶವನ್ನು ಬಿಟ್ಟು ಹೋಗಿದ್ದಾರೆ. ಅವರ ಆದರ್ಶವನ್ನು ಜನಮನದಲ್ಲಿ ಶಾಶ್ವತವಾಗಿ ುಳಿಯುವಂತೆ ಮಾಡುವ ನಿಟ್ಟಿನಲ್ಲಿ ಶ್ರೀಯುತರ ಸಂಸ್ಮರಣೋತ್ಸವದ ಸಂದರ್ಭದಲ್ಲಿ ಅವರ ಡನಾಡಿಗಳೆಲ್ಲರೂ ಕೂಡಿ ಕೃತಾರ್ಥಭಾವದಿಂದ ಸಂಸ್ಮರಣ ಗ್ರಂಥವೊಂದನ್ನು ಪ್ರಕಾಶಿಸುತ್ತಿರುವುದು ತ್ಯಂತ ಶ್ಲಾಘನೀಯ. ಹೊ. ಶ್ರೀರವರ ಆದರ್ಶ ಬದುಕಿನ ಸಾರ ಸಂಗ್ರಹವನ್ನು ತನ್ನೊಡಲಿನೊಳಗೆ ುರಿಸಿಕೊಂಡಿರುವ ಈ ಗ್ರಂಥವು ಮುಂದಿನ ಪೀಳಿಗೆಯ ಬದುಕಿಗೆ ದಾರಿದೀಪವಾಗಲೆಂದೂ, ಜನತೆ ಈ ೃತಿಯನ್ನು ಆದರದಿಂದ ಸ್ವೀಕರಿಸಲೆಂದು ಆಶಿಸುತ್ತಾ, ಹಮ್ಮಿಕೊಂಡಿರುವ ಸಮಾರಂಭವು ಯಶಸ್ವಿಯಾಗಿ ೆರವೇರಲೆಂದು ತುಂಬು ಹೃದಯದಿಂದ ಹಾರೈಸುತ್ತೇವೆ.

ಇಂತು ಭಗವತ್ಸೇವೆಯಲ್ಲಿ

ರಾಮಕೃಷ್ಣ ಮಠ
ಬಸವನಗುಡಿ ರಸ್ತೆ
ಬೆಂಗಳೂರು – 560 019
266 1349, 26671 1010
ಇ–ಮೇಲ್: bengaluru@rkmm.org



ಸಂದೇಶ

ಬಹುಮುಖಿ ವ್ಯಕ್ತಿಗಳು ಬಹಳ ವಿರಳ. ಅವರು ಕಾಡಿನಂಚಿನ, ಮರೆಯಲ್ಲಿದ್ದು ತನ್ನ ಸುಗಂಧವನ್ನು ಗಾಳಿಯಲ್ಲಿ ತೂರಿಬಿಡುವ ಹೂವಿನಂತೆ.

ಅಂತೆಯೇ, ಡಾ॥ ಶ್ರೀನಿವಾಸಯ್ಯನವರು ಸಾಹಿತ್ಯಕ್ಷೇತ್ರ, ಕೈಗಾರಿಕಾ ಕ್ಷೇತ್ರ ಮತ್ತು ವಿದ್ಯಾಕ್ಷೇತ್ರಗಳಲ್ಲಿ ಅಪಾರಸೇವೆಸಲ್ಲಿಸಿ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸಂಸ್ಥೆಯಲ್ಲಿ ಸುಮಾರು 30 ವರ್ಷ ಅಧ್ಯಕ್ಷರಾಗಿದ್ದು, ಅದಕ್ಕಾಗಿ ದುಡಿದಿದ್ದು, ದೇಶದ ಹಿತಕ್ಕಾಗಿ, ಪ್ರೀತಿಗಾಗಿ.

ನಮಗೆ ಅವರ ಪರಿಚಯ ಸುಮಾರು 1948 ರಿಂದ. ನಾವು ಭೇಟಿಯಾದಾಗ ಅನೇಕ ಗಹನ ವಿಚಾರಗಳ ವಿನಿಮಯ ಮಾಡಿದ ಸಂದರ್ಭಗಳು ನಮ್ಮ ಜ್ಞಾಪಕದಲ್ಲಿದೆ.

ಬಹಳಕಾಲದವರೆಗೆ, ಜನರ ಮನಸ್ಸಿನಿಂದ ಅಳಿಸಿ ಹೋಗದ ವ್ಯಕ್ತಿ ಅವರು. ಅವರ ಜೀವನ ಒಂದು ಮಾದರಿ. ಈಗಿನ ಯುವಜನಾಂಗ ಅವರಿಟ್ಟ ಹೆಜ್ಜೆಯ ಮೇಲೆ, ತಮ್ಮ ಹೆಜ್ಜೆಯನಿಟ್ಟು ಮುಂದುವರಿಯಲೆಂದು ನಮ್ಮ ಆಶಯ ಮತ್ತು ಹಾರೈಕೆ.

ಅವರ ಆತ್ಮಕ್ಕೆ ಶಾಂತಿಯಿರಲೆಂದು ಭಗವಂತನಲ್ಲಿ ಪ್ರಾರ್ಥನೆ.

ಭಗವತ್ಸೇವೆಯಲ್ಲಿ
ಸ್ವಾಮಿ ಹರ್ಷಾನಂದ

ಡಿ. ವೀರೇಂದ್ರ ಹೆಗ್ಗಡೆಯವರು
ಶ್ರೀ ಧರ್ಮಸ್ಥಳ-574 216
ದಕ್ಷಿಣ ಕನ್ನಡ, ಕರ್ನಾಟಕ
ಕಚೇರಿ: (08256) 277121
Fax: 277116
E-Mail: dvheggade@hotmail.com



ಸಂದೇಶ

ಪ್ರಕೃತಿ ಚಿಕಿತ್ಸಾ ತಜ್ಞರೂ, ಹಿರಿಯ ಗಾಂಧೀವಾದಿಗಳೂ ಆದ ಡಾ. ಹೊ. ಶ್ರೀನಿವಾಸಯ್ಯ ಅವರ ಬಗ್ಗೆ ಸಂಸ್ಮರಣ ಗ್ರಂಥವನ್ನು ಪ್ರಕಟಿಸಲಿರುವ ವಿಚಾರ ತಿಳಿದು ಸಂತೋಷವಾಯಿತು.

ಸರಳ ಜೀವನ ಹಾಗೂ ಉನ್ನತ ಚಿಂತನೆಯೊಂದಿಗೆ ಅವರು ಅನೇಕ ಸೇವಾ ಕಾರ್ಯಗಳನ್ನು ಮಾಡಿದ್ದಾರೆ. ಗಾಂಧೀ ಭವನದ ಅಧ್ಯಕ್ಷರಾಗಿ ಅವರ ಕೊಡುಗೆ ಅಮೂಲ್ಯವಾಗಿದೆ. ಅವರ ಜೀವನ-ಸಾಧನೆ ಆದರ್ಶ ಹಾಗೂ ಅನುಕರಣೀಯ ವಾಗಿದೆ. ಅವರ ಸೇವಾ ಕೈಂಕರ್ಯದ ಸಮಗ್ರ ಮಾಹಿತಿಯೊಂದಿಗೆ ಸಂಸ್ಮರಣ ಗ್ರಂಥ ಪ್ರಕಾಶನಾಕಾರ್ಯ ಯಶಸ್ವಿಯಾಗಲೆಂದು ಹಾರೈಸುತ್ತೇನೆ,

ಶ್ರೀ ಮಂಜುನಾಥ ಸ್ವಾಮಿಯ ಅನುಗ್ರಹವಿರಲಿ.

(ಡಿ. ವೀರೇಂದ್ರ ಹೆಗ್ಗಡೆಯವರು)

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ,
ಸುತ್ತೂರು, ಶ್ರೀಕ್ಷೇತ್ರ-571129, ಮೈಸೂರು ಜಿಲ್ಲೆ.
ಇ-ಮೇಲ್: jssashram@yahoo.com



ಶುಭ ಹಾರೈಕೆ

ಕರ್ನಾಟಕದ ಹಿರಿಯ ಗಾಂಧಿವಾದಿ ಡಾ॥ ಹೊ. ಶ್ರೀನಿವಾಸಯ್ಯನವರ ಗೌರವಾರ್ಥ ಸಂಸ್ಮರಣ ಗ್ರಂಥವನ್ನು ಹೊರತರಲು ಉದ್ದೇಶಿಸಿರುವುದು ಅತ್ಯಂತ ಸ್ವಾಗತಾರ್ಹ.

ಡಾ॥ ಹೊ. ಶ್ರೀನಿವಾಸಯ್ಯನವರು ಅಂದಿನ ಕಾಲಕ್ಕೆ ತುಂಬ ವಿದ್ಯಾವಂತರಾಗಿದ್ದರೂ ಗಾಂಧೀಜಿಯವರ ತತ್ತ್ವಗಳನ್ನು ತ್ರಿಕರಣಪೂರ್ವಕವಾಗಿ ನಂಬಿ ಆಚರಿಸಿದ ಒಬ್ಬ ಅಪರೂಪದ ಸಾಧಕರು. ಅವರು ಸೇವೆ ಸಲ್ಲಿಸುತ್ತಿದ್ದ ದೊಡ್ಡ ಹುದ್ದೆ, ಅವರ ಸಾಹಿತ್ಯ ಕೃತಿಯ ನಡುವೆಯೂ ಅವರು ಗಾಂಧೀ ಪ್ರಣಾಳಿಕೆಯ ಪಾಲನೆಯನ್ನು ಒಂದು ವ್ರತವನ್ನಾಗಿಸಿಕೊಂಡಿದ್ದು ಒಂದು ಅಚ್ಚರಿ. ಸ್ವಭಾವತಃ ತುಂಬ ಸಜ್ಜನರಾಗಿದ್ದ ಅವರು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಮೂವತ್ತೊಂದು ವರ್ಷ ಕಾಲ ಸಂಸ್ಥೆಯನ್ನು ಮುನ್ನಡೆಸಿರುವುದು ಅವರ ಅಪಾರ ತಾಳ್ಮೆ, ಶ್ರದ್ಧೆ, ಜನಪ್ರೀತಿಗಳ ದ್ಯೋತಕವಾಗಿದೆ.


ಸಂಸ್ಥೆಯ ಈಗಿನ ಅಧ್ಯಕ್ಷರಾದ ಡಾ॥ ವೂಡೇ ಪಿ. ಕೃಷ್ಣರವರು ತಮ್ಮ ಸಹೋದ್ಯೋಗಿಗಳ ಜೊತೆ ಸಮಾಲೋಚಿಸಿ ಡಾ॥ ಶ್ರೀನಿವಾಸಯ್ಯನವರನ್ನು ಕುರಿತು ಇಂಥದೊಂದು ಸಂಸ್ಮರಣ ಗ್ರಂಥ ಪ್ರಕಟಿಸಲು ನಿರ್ಧರಿಸಿರುವುದು ಆ ಪುಣ್ಯಜೀವಿಗೆ ಸಲ್ಲಿಸುವ ಕೃತಜ್ಞತೆಯಾಗಲಿದೆ.

ಹಳೆಯ ತಲೆಮಾರಿನ ಶ್ರದ್ಧೆ, ತಾಳ್ಮೆ, ಪ್ರಾಮಾಣಿಕತೆ, ವಿದ್ವತ್ತುಗಳ ಮೂರ್ತ ರೂಪದಂತಿದ್ದ ಡಾ॥ ಹೊ. ಶ್ರೀನಿವಾಸಯ್ಯನವರ ಬಹುಮುಖ ವ್ಯಕ್ತಿತ್ವಕ್ಕೆ ಹೊಂದುವಂಥ ರೀತಿಯಲ್ಲಿ ಸಂಸ್ಮರಣ ಗ್ರಂಥ ರೂಪುಗೊಳ್ಳಲಿ, ಅವರ ಜೀವನ-ಸಾಧನೆ ಕಿರಿಯರಿಗೆ ಮಾರ್ಗದರ್ಶಿ ದೀಪವಾಗಲೆಂದು ಹಾರೈಸುತ್ತೇವೆ.

ಶುಭಮಸ್ತು

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಗಣ್ಯರು ಕಂಡಂತೆ ಡಾ: ಹೊ. ಶ್ರೀನಿವಾಸಯ್ಯ



"ಶ್ರೀಮಾನ್ ಹೊ. ಶ್ರೀನಿವಾಸಯ್ಯ ಅವರದು ಅಪೂರ್ವವಾದ ವ್ಯಕ್ತಿತ್ವ, ಉತ್ತಮವಾದ ಜೀವನಾದರ್ಶ, ಸಮದೃಷ್ಟಿ, ಸಮಾಜ ಕಲ್ಯಾಣದೃಷ್ಟಿ, ಐಹಿಕ ಪಾರಲೌಕಿಕಗಳ ಮಧುರ ಮಿಲನ. ಕರ್ಮಜ್ಞಾನ ಭಕ್ತಿ ಸೇವಾ-ಪೂಜೆ ಇವುಗಳ ಸಮೀಕರಣದಿಂದ ಲಭ್ಯವಾದ ಒಂದು ಪೂರ್ಣದೃಷ್ಟಿ. ದೇಹ, ಆತ್ಮ ಭಾವನೆಗಳು, ಸೇವಾತತ್ಪರತೆ, ಮಾನವೀಯತೆ ಎಲ್ಲವನ್ನೂ ಒಳ್ಳೆ ಹದದಲ್ಲಿ ವೈಣಿಕ ತನ್ನ ವೀಣೆಯ ತಂತಿಗಳನ್ನು ನುಡಿಸಲು ಸಿದ್ಧಮಾಡಿಟ್ಟಿರುವಂತೆ ಇಟ್ಟಿದ್ದಾರೆ. ಇವರ ಒಂದೊಂದು ಸಾಧನೆಯೇ, ಒಬ್ಬ ಮನುಷ್ಯನಿಗೆ ಜೀವಿತದ ಪೂರ್ತಿಯ ಗುರಿ ಆಗಬಹುದು. ಅವರ ಬುದ್ಧಿಯ ಸ್ವಚ್ಛತೆ ಮತ್ತು ಚುರುಕು, ಆ ಬಗೆಯ ಸ್ವಸುಖಾಭಿಲಾಷಿ ತಾಮಸಕ್ಕೆ ಎಡಗೊಡಲಿಲ್ಲ. ಅವರ ಹೃದಯದಲ್ಲಿ ಜನತಾ ಸೇವೆಯ ಕಿಡಿ ಸದಾ ಜಾಗೃತವಾಗಿದೆ. "ಬುದ್ದಿವಂತರು ಒಳ್ಳೆಯವರಲ್ಲ. ಒಳ್ಳೆಯವರು ಬುದ್ಧಿವಂತರಲ್ಲ" ಎಂಬ ಒಂದು ನುಡಿಯುಂಟು. ಶ್ರೀನಿವಾಸಯ್ಯವನರು ಬುದ್ಧಿವಂತರೂ ಹೌದು ಒಳ್ಳೆಯವರು ಹೌದು".

– ಡಾ॥ ಗೊರೂರು ರಾಮಸ್ವಾಮಿ ಐಯ್ಯಂಗಾರ್

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಾಹಿತಿಗಳು



"ಶ್ರೀ ಹೊ. ಶ್ರೀನಿವಾಸಯ್ಯ ಅವರ ನಿಕಟ ಸಂಪರ್ಕವನ್ನು ಸ್ವಾತಂತ್ರ್ಯ ಸಂಗ್ರಾಮದ ವೇಳೆಯಿಂದಲೂ ಹೊಂದಿರುವವರಲ್ಲಿ ನಾನೂ ಒಬ್ಬ. ತ್ಯಾಗಮಯಿ, ಸಾಹಿತ್ಯ ಪ್ರೇಮಿ, ಸಮಾಜ ಸೇವೆಗೆ ಸದಾ ದುಡಿಯುತ್ತಿರುವ ಹಾಗೂ ಸ್ನೇಹಪರ ವ್ಯಕ್ತಿಯಾಗಿರುವ ಶ್ರೀ ಹೊ. ಶ್ರೀನಿವಾಸಯ್ಯ ಅವರು ಬಡ ಕುಟುಂಬದಲ್ಲಿ ಹುಟ್ಟಿ, ಬಹಳ ಕಷ್ಟಪಟ್ಟು ವಿದ್ಯಾಭ್ಯಾಸ ಪೂರೈಸಿ ಇಂಜಿನಿಯರ್ ಆಗಿ ಇಂದು ದೊಡ್ಡ ಹುದ್ದೆಯನ್ನು ಅಲಂಕರಿಸಿದ್ದಾರೆ. ಅದರೂ ಕೂಡ ಅವರ ಜೀವನದಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ. ಖಾದಿ ಬಟ್ಟೆಯನ್ನು ಬಿಡದ ಈ ಖಾದಿಪ್ರೇಮಿಯ ದೇಶಪ್ರೇಮ ಪ್ರತಿಯೊಬ್ಬರೂ ಅನುಕರಣೆ ಮಾಡುವಂಥದ್ದಾಗಿದೆ. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ದುಡಿದು, ಮಹಾತ್ಮ


ಗಾಂಧೀಜಿಯವರ ಅನುಯಾಯಿಗಳಾಗಿ ಹಲವಾರು ಸಮಾಜಸೇವಾ ಕೆಲಸಗಳನ್ನು ಮಾಡಿದ್ದಾರೆ. ಗಾಂಧಿ ಸಾಹಿತ್ಯ ಸಂಘವನ್ನು ಸ್ಥಾಪಿಸಿ, ಆ ಮೂಲಕ ಗಾಂಧೀಜಿಯವರ ತತ್ವಗಳನ್ನು ಪ್ರಚುರ ಪಡಿಸಲು ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ಕನ್ನಡಭಾಷೆಯ ಮೇಲೆ ಅಪಾರ ಅಭಿಮಾನವಿದ್ದು ಅಚ್ಚ ಕನ್ನಡಿಗ ಶ್ರೀ ಹೊ. ಶ್ರೀನಿವಾಸಯ್ಯ ಅವರು ಹಲವಾರು ಪ್ರವಾಸ ಸಾಹಿತ್ಯ ಮತ್ತು ಮಕ್ಕಳ ಪುಸ್ತಕಗಳನ್ನು ಬರೆದಿದ್ದಾರೆ. ಶ್ರೀ ಹೊ. ಶ್ರೀನಿವಾಸಯ್ಯರವರು ಹಲವಾರು ಸಂಘ ಸಂಸ್ಥೆಗಳನ್ನು ಕಟ್ಟಿದ್ದಾರೆ. ಅವರು ಸ್ಥಾಪಿಸಿರುವ ಸಂಘ ಸಂಸ್ಥೆಗಳಿಂದ ಇಂದು ಸಮಾಜಕ್ಕೆ ಆಗಿರುವ ಉಪಕಾರ ಅಪಾರವಾದುದು".

– **ಎ.ಎಸ್. ಕೃಷ್ಣಯ್ಯರ್**
ಗಾಂಧೀ ಅನುಯಾಯಿ ಮತ್ತು
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು.



"ಖಾದಿ ಲುಂಗಿ, ಅರೆತೋಳಿನ ಖಾದಿ ಶರಟು, ಸೈಕಲ್ ಮೇಲೆ ಓಡಾಟ. ಗಾಂಧೀ ಸಾಹಿತ್ಯ ಸಂಘದ ಕಾರ್ಯಕ್ರಮಗಳನ್ನು ಮಲ್ಲೇಶ್ವರದಲ್ಲಿ ಪ್ರಚಾರಮಾಡಲು ಕೈಯಲ್ಲಿ ಡಬ್ಬ ತಗಡಿನ ತುತ್ತೂರಿ ಹಿಡಿದು ಹಣ ವಸೂಲಿ ಮಾಡಲು ಮನೆಮನೆಗೆ ಅಲೆತ. ಸಂಘದಲ್ಲಿ ಕಸ ಗುಡಿಸುವುದು, ಜಮಖಾನ ಎತ್ತುವುದು, ಪುಸ್ತಕ ಜೋಡಿಸುವುದು, ಬಂದವರಿಗೆ ಪುಸ್ತಕ ಕೊಡುವುದು ಇತ್ಯಾದಿ ಕೆಲಸ. ಇದ್ದದ್ದು ಮಲ್ಲೇಶ್ವರದ ಆರನೆಯ ಕ್ರಾಸಿನಲ್ಲಿ ಶಾಲೆ ಹಿಂದೆ ಒಂದು ಸಣ್ಣ ಮನೆ. ಬಡತನದಲ್ಲೇ ಹುಟ್ಟಿ ಬೆಳೆದ ವ್ಯಕ್ತಿ ಶ್ರೀನಿವಾಸಯ್ಯ, ನಾಲ್ಕಾರು ಜನರ ನೆರಳಿನಿಂದ ಪ್ರೋತ್ಸಾಹದಿಂದ ರೂಪುಗೊಂಡ ವ್ಯಕ್ತಿತ್ವ, ಶಿಸ್ತಿನ ನಡೆ, ಹಿಡಿದುದನ್ನು ಬಿಡದೆ ನಡೆಸುವ ಹಟ, ಕಾರ್ಯಕ್ಷಮತೆ, ನಾಲ್ಕು ಜನರನ್ನು ಕಟ್ಟಿಕೊಂಡು ಕೆಲಸ ಮಾಡುವ ರೀತಿ, ಇಲ್ಲಿರಲಿ, ಜರ್ಮನಿಯಲ್ಲಿರಲಿ, ಎಲ್ಲೆಲ್ಲೂ ತಮ್ಮತನವನ್ನು ತಮ್ಮ ತತ್ವನಿಷ್ಠೆಯನ್ನು ಕಾಪಾಡಿಕೊಳ್ಳುವ ದೃಢತೆ, ತಮ್ಮ ಆನಂದವನ್ನು ಇತರರಿಗೆ ನೀಡಲು ಕಾತರ–ಎಲ್ಲ ಅವರ ಬದುಕನ್ನು ತುಂಬಿವೆ. ಎಲ್ಲ ಶರ್ಮಾರ್ಜಿಯಿಂದ ಬಂದ ಬಳುವಳಿ, ಬೆಳಕು".

– **ನೀಲತ್ತಹಳ್ಳಿ ಕಸ್ತೂರಿ**
ಹಿರಿಯ ಗಾಂಧೀ ಅನುಯಾಯಿ
ಮಾಜಿ ಕಾರ್ಯದರ್ಶಿಗಳು,
ಗಾಂಧೀ ಸಾಹಿತ್ಯ ಸಂಘ, ಮಲ್ಲೇಶ್ವರಂ.



"ಶ್ರೀ ಶ್ರೀನಿವಾಸಯ್ಯನವರು ವೃತ್ತಿಯಿಂದ ಇಂಜಿನಿಯರು, ಪ್ರವೃತ್ತಿಯಿಂದ ಗಾಂಧೀತತ್ತ್ವೋಪಾಸಕರು; ಸಾಹಿತ್ಯಕೃಷಿ ಅವರ ಪ್ರೀತಿಯ ಹವ್ಯಾಸ. ನಿಷ್ಠಾವಂತ ಸಮಾಜಸೇವಕರಾದ ಶ್ರೀ ಶ್ರೀನಿವಾಸಯ್ಯ ನವರ ಆಳವಾದ ಅನುಭವ ಎಂಥ ಕ್ಲಿಷ್ಟಕರವಾದ ವಿಷಯವನ್ನಾದರೂ ಸರಸವಾಗಿ ಕನ್ನಡದಲ್ಲಿ ಹೇಳಬಲ್ಲರೆಂಬುದಕ್ಕೆ "ನಾ ಕಂಡ ಜರ್ಮನಿ" ಹಾಗೂ ಅವರ ಇತರ ಲೇಖನಗಳು ಸಾಕ್ಷಿಯಾಗಿವೆ. ಕನ್ನಡ ಜನ ಅವರ ಲೇಖನಿಯಿಂದ ಅಪಾರ ವೈಚಾರಿಕ ಹಾಗು ವೈಜ್ಞಾನಿಕ ಸಾಹಿತ್ಯವನ್ನು ನಿರೀಕ್ಷಿಸುತ್ತಾರೆ'.

– ದೇ.ಜ.ಗೌ
ವಿಶ್ರಾಂತ ಕುಲಪತಿ ಮತ್ತು ಸಾಹಿತಿಗಳು



"ಬಹುಮುಖ ಪ್ರತಿಭಾಶೀಲರಾದ, ಸೇವಾ ಸನ್ಮಾರ್ಗಿಗಳಾದ, ಸುಸಂಸ್ಕೃತರೆನಿಸಿದ ಡಾ॥ ಹೊ. ಶ್ರೀನಿವಾಸಯ್ಯ ಗ್ರಾಮೀಣ ಪರಿಸರದಲ್ಲಿ ಜನ್ಮ ತಳೆದು ಸ್ವತಃ ಪರಿಶ್ರಮ, ಶ್ರದ್ಧೆಗಳಿಂದ ಸಾರ್ಥಕ ಹೆಜ್ಜೆಗಳನ್ನು ತುಳಿದು ಗಾಂಧೀಜಿಯವರ ತತ್ವನಿಷ್ಠರಾಗಿ, ಶಿಕ್ಷಣ ತಜ್ಞರೆನಿಸಿ, ಸಾಹಿತ್ಯ ಕೃಷಿಕರಾಗಿ, ಸೇವೆಯೇ ಶಿವಪೂಜೆಯೆಂದರಿತು ಸಾತ್ವಿಕ ಜೀವನ ನಡೆಸಿದ ಅಪಾರ ಅಭಿಮಾನೀ ಬಳಗ ಸಂಪನ್ನರು. ಅವರ ಬಾಳು ಇಂದಿನ ಯುವಜನತೆಗೆ ದಾರಿದೀಪ".

– ಡಾ॥ ಶಿವಕುಮಾರ ಸ್ವಾಮೀಜಿ
ಪೀಠಾಧ್ಯಕ್ಷರು, ಶ್ರೀ ಸಿದ್ಧಗಂಗಾ ಕ್ಷೇತ್ರ



"ಹುಟ್ಟು ಹೋರಾಟಗಾರರಾದ, ತುಂಬು ಚಟುವಟಿಕೆಯ ಶಿಸ್ತಿನ ಸೇವಕರಾದ ಡಾ॥ ಹೊ. ಶ್ರೀನಿವಾಸಯ್ಯ ಅವರು ಅನೇಕ ಸಂಘ ಸಂಸ್ಥೆಗಳಲ್ಲಿ ಯಾವುದೇ ಫಲಾಪೇಕ್ಷೆ ಇಲ್ಲದೇ ಸೇವೆ ಸಲ್ಲಿಸಿ ಹಿರಿಯ ಕಿರಿಯರೆಲ್ಲರಿಗೂ ಆತ್ಮೀಯ ವ್ಯಕ್ತಿಯಾಗಿದ್ದಾರೆ. ಪ್ರಕೃತಿ ವಿಜ್ಞಾನ, ತಂತ್ರಜ್ಞಾನ, ಗಾಂಧೀಜಿ ವಿಚಾರಗಳನ್ನು ಮೊದಲ್ಗೊಂಡು ಆತ್ಮಜ್ಞಾನದವರೆಗೆ ಬಹಳ ಕ್ಷೇತ್ರಗಳಿಗೆ ಅವರು ಸಲ್ಲಿಸಿರುವ ಸೇವೆ ಅನುಪಮವಾದುದು. ಅವರು ಲೋಕವನ್ನೇ ತನ್ನದಾಗಿಸಿಕೊಂಡಿರುವ ಸರಳಜೀವನದ ಸೌಜನ್ಯಮೂರ್ತಿ. ಅವರ ಪಾಲಿಗೆ ಲೋಕಸೇವೆಯೇ ಈಶ ಪೂಜೆಯಾಗಿದೆ".

– ಡಾ॥ ಬಾಲಗಂಗಾಧರನಾಥ ಸ್ವಾಮೀಜಿ
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಕ್ಷೇತ್ರ



“ಡಾ॥ ಹೊ. ಶ್ರೀನಿವಾಸಯ್ಯ ಅವರು “ವಿಶೇಷವಾಗಿ ಸದಾಚಾರ ಸತ್ಯಸಂಧತೆಗಳ ಪುಣ್ಯ ಸಂಚಯದ ಫಲವಾಗಿ ಬಹುಮುಖ ಪ್ರತಿಭೆಯಿಂದ, ತಮ್ಮ ಸರಳ ಸ್ವಭಾವದೊಂದಿಗೆ ಸದಾ ತೀವ್ರ ಚಟುವಟಿಕೆಯುಳ್ಳವರಾಗಿ ತಮ್ಮ ಬಹುಮುಖ ವ್ಯಕ್ತಿತ್ವದಿಂದ ಸಮಾಜದ ಎಲ್ಲ ರಂಗಗಳ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹಾನ್ ಚೇತನ”.

– ಶ್ರೀ ಶ್ರೀ ಶ್ರೀ ಶಿವಾನಂದಭಾರತಿ ಸ್ವಾಮೀಜಿ
ಸುಕ್ಷೇತ್ರ, ಇಂಚಲಾ, ಸವದತ್ತಿ



“ನುಡಿದಂತೆ ನಡೆದ ಮಹಾನುಭಾವರ ಶ್ರೇಣಿಗೆ ಸೇರಿದವರು ಪೂಜ್ಯ ಶ್ರೀ ಸಿದ್ಧವನಪಳ್ಳಿ ಕೃಷ್ಣಶರ್ಮಾಜಿ ಅವರು. ಅವರ ನೇತೃತ್ವದಲ್ಲಿ ಇದ್ದ ಹದಿನೈದು ಇಪ್ಪತ್ತು ಯುವಕರಿಗೆ ಡಾ॥ ಹೊ. ಶ್ರೀನಿವಾಸಯ್ಯ ಲೀಡರ್, ಕ್ಯಾಪ್ಟನ್, ಹಿರಿಯಣ್ಣ ಇದ್ದಹಾಗೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿ ಜನಪ್ರಿಯರಾಗಿದ್ದವರು. ಗಾಂಧೀಜಿ ಅವರ ಆದರ್ಶಗಳನ್ನು ಪಾಲಿಸುತ್ತಿದ್ದರು. ಚರಕದಲ್ಲಿ ನೂಲುವುದು, ಶೌಚಾಲಯಗಳನ್ನು ಚೊಕ್ಕಟವಾಗಿ ಡುವುದು, ಗಾಂಧೀ ಸಾಹಿತ್ಯವನ್ನು ಓದುವುದು, ಗಾಂಧೀ ಜಯಂತಿಗೆ ಮನೆ ಮನೆಗೆ ಅಂಗಡಿ ಮುಂಗಟ್ಟುಗಳಿಗೆ ಹೋಗಿ ಚಂದಾ ವಸೂಲಿ ಮಾಡುವುದು, ಭಾಷಣ ಮಾಡುವುದನ್ನು ರೂಢಿಸಿಕೊಳ್ಳುವುದು–ಮೊದಲಾದವುಗಳಲ್ಲಿ ತಾವೂ ತೊಡಗಿ, ನಮ್ಮನ್ನು ತೊಡಗಿಸಿದರು.

“ಯಾವುದೇ ಕೆಲಸವನ್ನು ನಿಷ್ಠೆಯಿಂದ ಮಾಡಬೇಕು ಎಂಬುದನ್ನು ನನ್ನ “ಅಣ್ಣ” ಶ್ರೀನಿವಾಸಯ್ಯನವರಿಂದ ನಮ್ಮಲ್ಲಿ ಕೆಲವರು ಕಲಿತೆವು ಎಂದರೆ ಅತ್ಯುಕ್ತಿ ಆಗದು. ಶ್ರೀನಿವಾಸಯ್ಯನವರಿಂದ ನಾನು ಕಲಿತ ರಾಷ್ಟ್ರನಿಷ್ಠೆಯ ಮೌಲ್ಯ ಮತ್ತು ಸೇವಾ ಮನೋಭಾವನೆಯನ್ನು ನಾನು ಗೌರವದಿಂದ ನೆನೆಯುತ್ತೇನೆ”.

– ಡಾ॥ ಮತ್ತೂರು ಕೃಷ್ಣಮೂರ್ತಿ
ಮಾಜಿ ಅಧ್ಯಕ್ಷರು, ಭಾರತೀಯ ವಿದ್ಯಾಭವನ, ಬೆಂಗಳೂರು.



“ಡಾ॥ ಹೊ. ಶ್ರೀನಿವಾಸಯ್ಯಅವರು ಅಚ್ಚ ಗಾಂಧೀವಾದಿಗಳು, ಭಾರತೀಯ ಸಂಸ್ಕೃತಿ ಪರಂಪರೆಯಲ್ಲಿ ಗಾಢ ವಿಶ್ವಾಸವುಳ್ಳವರು. ಮಾತೃಭಾಷೆಯಾದ ಕನ್ನಡದ ಕಟ್ಟಭಿಮಾನಿಗಳು. ಅವರು ವೃತ್ತಿಯಲ್ಲಿ ಎಂಜಿನಿಯರ್. ಆದರೆ ಅವರ ಪ್ರವೃತ್ತಿ ಬರವಣಿಗೆ. ನಿರಾಡಂಬರ


ಜೀವಿಯಾದ ಡಾ॥ ಹೊ. ಶ್ರೀನಿವಾಸಯ್ಯ ಅವರು ಎಂದೂ ತಮ್ಮ ಕೆಲಸ ಕಾರ್ಯ ಸಾಧನೆಗಳ ಬಗ್ಗೆ ಪ್ರಚಾರ ಬಯಸಿದವರಲ್ಲ. ಎಲೆಮರೆಯ ಹೂವಾಗಿ ದುಡಿಯುತ್ತಲೇ ಬಂದಿದ್ದಾರೆ. ಅದರ ಪರಿಮಳದಂತೆ ಅವರ ದುಡಿಮೆಯ ಪ್ರಭಾವವು ಮಾತ್ರ ಎಲ್ಲ ಕ್ಷೇತ್ರಗಳಲ್ಲಿಯೂ ಪಸರಿಸಿದೆ".

– ಪ್ರೊ॥ ಜಿ. ವೆಂಕಟಸುಬ್ಬಯ್ಯ
ಶತಾಯುಷಿ, ನಿಘಂಟು ತಜ್ಞರು



"ಬಡಕುಟುಂಬದಲ್ಲಿ ಜನಿಸಿ ಸ್ವಯಂ ಪ್ರತಿಭೆ ಸಾಹಸಗಳಿಂದ ಉಚ್ಚವ್ಯಾಸಂಗ ಮಾಡಿ ಒಂದು ದೊಡ್ಡ ಕೈಗಾರಿಕಾ ಸಂಸ್ಥೆಯಲ್ಲಿ ಮುಖ್ಯ ಸ್ಥಾನದಲ್ಲಿರುವುದು ಡಾ॥ ಹೊ. ಶ್ರೀನಿವಾಸಯ್ಯನವರ ಒಂದು ಸಾಧನೆಯಾದರೆ, ಅದಕ್ಕಿಂತ ಹೆಚ್ಚಿನ ಸಾಧನೆಯೆಂದರೆ, ಅವರ ನಿರಂತರ ಸ್ವಾರ್ಥರಹಿತ ಸಾರ್ವಜನಿಕ ಸೇವೆ. ಅವರ ಸರಳತೆ, ಸೌಜನ್ಯ, ನಿರಾಡಂಬರ, ಪರಿಶುದ್ಧ ಜೀವನ, ಆದರ್ಶವಾದಿತ್ವ ಮತ್ತು ಸೇವಾಮನೋಭಾವ ಗಳು ಅವರ ಸಂಗಡ ಕೆಲಸ ಮಾಡುವ ಯಾರಿಗಾದರೂ ಸ್ಫೂರ್ತಿಯನ್ನು ಕೊಡದಿರಲಾರವು".

– ನ್ಯಾಯಮೂರ್ತಿ ಡಿ.ಎಂ. ಚಂದ್ರಶೇಖರ್
ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು



ಏಪ್ರಿಲ್ 21 ರಂದು ಅವರನ್ನು ಬೀಳ್ಕೊಡುವಾಗ ಗಾಂಧೀಭವನದ ಬಗ್ಗೆ ವಿಶೇಷವಾಗಿ ಗಾಂಧೀಭವನದ ಅಧ್ಯಕ್ಷರಾದ "ಡಾ॥ ಹೊ. ಶ್ರೀನಿವಾಸಯ್ಯ ಅವರಲ್ಲಿ ನಾನು ಬಾಪು ಕಂಡೆ" ಎಂಬುದನ್ನು ತಮ್ಮ ಸ್ವಹಸ್ತಾಕ್ಷರದಲ್ಲಿ ಬರೆದ ಈ ಕೆಳಗಿನ ವಾಕ್ಯ ನಮ್ಮನ್ನು ಬಾವುಕರಾಗುವಂತೆ ಮಾಡಿತು "My talks with H.Sreenivasiah was very inspiring. I Saw my late Bapu in his sacred and most honourable personality. I was spell bound listening to him" – Kanu R. Gandhi 21.4.2014. ಅವರ ಸೇವೆ ಮಾಡುವುದರಿಂದ ಗಾಂಧೀಜಿ ಸೇವೆ ಮಾಡಿದ ಧನ್ಯತಾ ಭಾವನೆ ನಮಗೆ ಬಂದು ಆ ಕ್ಷಣಗಳಲ್ಲಿ ನಾವು ಬಾವುಕರಾದೆವು. ನನ್ನ ಜೊತೆ ಈ ಆನಂದದ ಕ್ಷಣಗಳನ್ನು ಸವಿದವರು ಸಂಪಾದಕರಾದ ಶ್ರೀ ಜೇರಿಗೆ ಲೋಕೇಶ್ ಹಾಗೂ ನಿರ್ವಾಹಕರಾದ ಶ್ರೀ. ವಿ.ಟಿ. ಹುಡೇದ್. ಬೆಂಗಳೂರಿನಿಂದ ಸೂರತ್‌ಗೆ ಪ್ರಯಾಣಿಸಿ ಮಾರನೆ ದಿನ ಅವರ ಕಿರಿಯ ಸಹೋದರಿ ಬಾಂಬೆ ನಿವಾಸಿ

ಶ್ರೀಮತಿ ಉಷಾ ಗೋಕರ್ಣೆ ಅವರನ್ನು ಸೇರಿದರು. ಅವರ ಈ ಅಲ್ಪ ಕಾಲದ ಭೇಟಿ ಗಾಂಧಿ ನೆನಪನ್ನು ನಮ್ಮಲ್ಲಿ ಸದಾ ಹಸಿರಾಗಿರುವಂತೆ ಮಾಡಿತು.

ಕನು ಗಾಂಧೀ
(ಮಹಾತ್ಮ ಗಾಂಧೀಜಿ ಮೊಮ್ಮಗ)



ಡಾ॥ ಹೊ. ಶ್ರೀನಿವಾಸಯ್ಯನವರು ಈ ನಾಡುಕಂಡ, ಗಾಂಧೀ ಬದುಕನ್ನು ಅಪ್ಪಿಕೊಂಡು ಬದುಕಿದ ಅಪ್ಪಟ ಗಾಂಧೀ ಅನುಯಾಯಿ. ತಮ್ಮ 93ನೇ ವಯಸ್ಸಿನಲ್ಲೂ ರಾಜ್ಯದಾದ್ಯಂತ ಪ್ರವಾಸಮಾಡಿ ಗಾಂಧೀ ವ್ಯಕ್ತಿ ವಿಚಾರಗಳನ್ನು ಜನರಲ್ಲಿ, ವಿಶೇಷವಾಗಿ ಯುವಜನರಲ್ಲಿ ಬಿತ್ತಿ ಅವರಲ್ಲಿ ಜೀವನೋತ್ಸಾಹ ತುಂಬುತ್ತಿರುವ ಚೈತನ್ಯ ಚಿಲುಮೆ. ಗ್ರಾಮೀಣ ಜನರ ಬಗ್ಗೆ ಅವರ ಕಾಳಜಿ ಅನುಕರಣೀಯ"

– ಶ್ರೀ ಎಚ್.ಕೆ. ಪಾಟೀಲ್
ಗ್ರಾಮಸ್ವರಾಜ್ಯ ಮತ್ತು ಪಂಚಾಯತ್‌ರಾಜ್ ಇಲಾಖೆ ಸಚಿವರು



"ಗಾಂಧೀ ಭವನದ ಗೋಡೆಗಳು ಗಾಂಧೀಜಿಯವರ ಜೀವನ ಕಥನ ಹೇಳುವುದರ ಜೊತೆಗೆ ಹೊ. ಶ್ರೀ ಅವರ ಕಾರ್ಯ ಕ್ಷಮತೆಯನ್ನು ತಿಳಿಸುತ್ತದೆ. ಗ್ರಾಮೀಣ ರೈತ ಕುಟುಂಬದ ಹಿನ್ನೆಲೆಯಿಂದ ಬಂದಿರುವ ಡಾ॥ ಹೊ. ಶ್ರೀನಿವಾಸಯ್ಯ ತಮ್ಮ ಬೇರುಗಳನ್ನು ಮರೆಯದಿರುವುದು ಅವರ ಬದುಕು–ಬರಹ–ಕಾರ್ಯಕ್ಷಮತೆಯಿಂದ ವ್ಯಕ್ತವಾಗುತ್ತದೆ. ತಾವು ಬೆಳೆಯುತ್ತಾ, ಸಾವಿರಾರು ಶಿಷ್ಯರನ್ನು ಬೆಳೆಸಿದ ಕೀರ್ತಿ ಇವರದ್ದು."

– ಡಾ॥ ವೂಡೇ ಪಿ. ಕೃಷ್ಣ
ಅಧ್ಯಕ್ಷರು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹಾಗೂ ಗಾಂಧೀ ಶಾಂತಿ ಪ್ರತಿಷ್ಠಾನ




'ಡಾ॥ ಹೊ. ಶ್ರೀನಿವಾಸಯ್ಯ ಪವಿತ್ರಾತ್ಮರು. ಗಾಂಧಿ ಪಡಿಯಚ್ಚಿನಲ್ಲಿ ಮೂರ್ತಿಯಾದವರು"

– ನಾಡೋಜ ಡಾ॥ ಪಾಟೀಲ ಪುಟ್ಟಪ್ಪ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು
ಅಧ್ಯಕ್ಷರು, ಕರ್ನಾಟಕ ಖಾದಿ ಗ್ರಾಮೋದ್ಯೋಗ (ಸಂ)ಸಂಘ, ಹುಬ್ಬಳ್ಳಿ

★ ★ ★

ಲೇಖನಗಳು



ಗಾಂಧಿ ಆದರ್ಶಗಳ ಚಿಲುಮೆ – ಹೊ. ಶ್ರೀನಿವಾಸಯ್ಯ

– ಎಚ್.ಕೆ. ಪಾಟೀಲ

“ಗಾಂಧಿ ಸ್ಮೃತಿ” ಎಂಬ ಅನುಕರಣೀಯವಾದ ತತ್ವಾದರ್ಶಗಳ ಅನುಷ್ಠಾನಕ್ಕೆ ಅನ್ವರ್ಥಕನಾಮವಾದ ಡಾ. ಹೊ. ಶ್ರೀನಿವಾಸಯ್ಯನವರು ನಾಡು ಕಂಡ ಅಪ್ರತಿಮ ಗಾಂಧಿವಾದಿ. ಗಾಂಧಿ ಬದುಕನ್ನು ಅಪ್ಪಿಕೊಂಡು ಬದುಕುತ್ತಿರುವ ಅಪ್ಪಟ ಗಾಂಧಿ ಅನುಯಾಯಿಯಾಗಿದ್ದರು. ತಮ್ಮ ಇಳಿ ವಯಸ್ಸಿನಲ್ಲೂ ರಾಜ್ಯಾದ್ಯಂತ ಪ್ರವಾಸ ಮಾಡಿ ಗಾಂಧಿ ವ್ಯಕ್ತಿ ವಿಚಾರಗಳನ್ನು ಜನರಲ್ಲಿ ವಿಶೇಷವಾಗಿ ಯುವಜನರಲ್ಲಿ ಬಿತ್ತಿ ಅವರಲ್ಲಿ ಜೀವನೋತ್ಸಾಹ ತುಂಬಿದ ಚೈತನ್ಯದ ಚಿಲುಮೆ.

ಗ್ರಾಮೀಣ ಜನರ ಬಗ್ಗೆ ಅನುಕರಣೀಯ ಕಾಳಜಿ ಹೊಂದಿದ್ದ ಅವರು ಚೌದರಿ ಕೊಪ್ಪಲನ್ನು ಮಾದರಿ ಗ್ರಾಮ ಮಾಡಿ, ಗಾಂಧಿ ದರ್ಶನಕ್ಕೊಂದು ಆಯಾಮ ಕಲ್ಪಿಸಿಕೊಟ್ಟವರು ಶ್ರೀನಿವಾಸಯ್ಯ. 20,000 ಶಾಲಾ ಕಾಲೇಜುಗಳಲ್ಲಿ ಗಾಂಧಿ ಕುರಿತು ಪ್ರವಚನ ನೀಡಿ ಯುವ ಮನಗಳಿಗೆ ಕ್ರಿಯಾತ್ಮಕ ಆಯಾಮ ಕೊಟ್ಟವರು ಶ್ರೀನಿವಾಸಯ್ಯ ಅವರು 200ಕ್ಕೂ ಹೆಚ್ಚು ಗಾಂಧಿಅಧ್ಯಯನ ಕೇಂದ್ರಗಳ ಸ್ಥಾಪನೆಗೆ ಕಾರಣರಾಗಿದ್ದಾರೆ ಎಂದರೆ ಈ ನಾಡಿಗೆ ಅವರು ನೀಡಿದ ಕೊಡುಗೆ ಚಿಕ್ಕದಲ್ಲ. ಬಡವರ ಕಂಬನಿಯೊರೆಸಲು ಸಹಕಾರ ತತ್ವದ ಮೇಲೆ ಸಹಕಾರಿ ಬ್ಯಾಂಕ್‌ಗಳನ್ನು ಪ್ರಾರಂಭಿಸಿದರು.

ಗಾಂಧೀಜಿಯವರ ಕುರಿತು ಹಲವಾರು ಕೃತಿ ರಚಿಸಿ, ಗಾಂಧೀಜಿಯವರ ಚಿಂತನೆಯನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುವ ಕೈಂಕರ್ಯ ಕೈಗೊಂಡ ಶ್ರೀನಿವಾಸಯ್ಯ ಅವರ “ನಾ ಕಂಡ ಜರ್ಮನಿ” ಪುಸ್ತಕ ಶ್ರೇಷ್ಠ ಪ್ರವಾಸಕಥನವಾಗಿ, ಪಠ್ಯವಾಗಿ, ಸಾಹಿತ್ಯಾಸಕ್ತರ ಗಮನ ಸೆಳೆದಿದ್ದು ವಿಶೇಷ.

ಡಾ. ಶ್ರೀನಿವಾಸಯ್ಯನವರ 9 ದಶಕಗಳ ಸುದೀರ್ಘವಾದ ಬದುಕಿನ ಅನುಕ್ಷಣವು ಸರಳ, ಪ್ರಾಮಾಣಿಕ ಮತ್ತು ಪರಿಶ್ರಮದಿಂದ ಕೂಡಿದ ಒಂದು ಅಪೂರ್ವವಾದ ಆದರ್ಶದ ಬದುಕು. 1942ರಷ್ಟು ಹಿಂದೆ ರಾಷ್ಟ್ರೀಯ

ಆಂದೋಲನದಲ್ಲಿ ಧುಮುಕಿ ಸ್ವಾತಂತ್ರ ಚಳುವಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡವರು. ಸಹಕಾರಿ, ಸಮಾಜ ಸೇವಾ ಕಾರ್ಯಕರ್ತ, ಸಾಹಿತಿ, ಶಿಕ್ಷಣ ತಜ್ಞ, ಹೋರಾಟಗಾರ ಹೀಗೆ ಹಲವಾರು ರೀತಿಯ ಉಪಮಾನ ಉಪಮೆಗಳಿಂದ ಖ್ಯಾತರಾದ ಅವರು ಗಾಂಧಿ ವಿಚಾರಧಾರೆಯನ್ನು ಅಕ್ಷರಶಃ ಮಾತು ಮತ್ತು ಕೃತಿಯಲ್ಲಿ ಪಾಲಿಸಿದವರು.

ಅಸ್ಪೃಶ್ಯತೆ ನಿವಾರಣೆಯಲ್ಲಿ ದಿಟ್ಟ ಹೆಜ್ಜೆಗಳನ್ನು ಇರಿಸಿದ ಶ್ರೀನಿವಾಸಯ್ಯನವರು ಹರಿಜನರಿಗೆ ದೇವಸ್ಥಾನ ಪ್ರವೇಶ ದುಸ್ತರವಾಗಿದ್ದ ಕಾಲದಲ್ಲಿ ದೇವಾಲಯಕ್ಕೆ ಹರಿಜನರ ಪ್ರವೇಶಕ್ಕೆ ಮುಂದಾಳತ್ವ ವಹಿಸಿ ಅಂದು ಮುಜರಾಯಿ ಮಂತ್ರಿಯಾಗಿದ್ದ ಪಾಮಡಿ ಸುಬ್ಬರಾಯಶೆಟ್ಟಿ ಅವರನ್ನು ಕರೆಸಿ ದೇವಾಲಯಗಳಿಗೆ ಹರಿಜನರ ಪ್ರವೇಶವನ್ನು ಮುಜರಾ ಹೊಸಳ್ಳಿಯಲ್ಲಿ ಗ್ರಾಮ ಸೇವೆಯ ಮೂಲಕ ಸಾಧ್ಯಗೊಳಿಸಿದ ಖ್ಯಾತಿಗೆ ಪಾತ್ರರಾದರು. ಹಳ್ಳಿಗಳಲ್ಲಿ ವಯಸ್ಕರ ಶಿಕ್ಷಣ, ಹರಿಜನರ ದೇವಸ್ಥಾನ ಪ್ರವೇಶ, ಅಕ್ಷರಾಭ್ಯಾಸ, ಹಳ್ಳಿಯ ಆರ್ಥಿಕ ಯೋಜನೆ ತಯಾರಿಸಿ ಮಜುರಾ ಹೊಸಳ್ಳಿ ಮತ್ತು ಸುತ್ತಮುತ್ತಲಿನ 5 ಗ್ರಾಮಗಳಲ್ಲಿ ಗ್ರಾಮೀಣಾಭಿವೃದ್ಧಿಗೆ ತಮ್ಮನ್ನು ತಾವು ತೊಡಗಿಸಿಕೊಂಡವರು.

"ಹಳ್ಳಿಯವರು ಯಾರೇ ಬಂದರೂ ತಮಗೆ ಸೇರಿದವರೇ ಅಥವಾ ಬೇರೆಯವರೇ ಎಂಬುದನ್ನು ಬಹಳ ಬೇಗ ಗುರುತಿಸುತ್ತಾರೆ. ತಮಗೆ ಸೇರಿದವರಲ್ಲ ಎಂದು ಗೊತ್ತಾದರೆ ಆತ ದೂರವೇ ಉಳಿಯುತ್ತಾನೆ. ಆದ್ದರಿಂದ ಹಳ್ಳಿಯಲ್ಲಿ ಕೆಲಸ ಮಾಡಬೇಕಾದರೆ ಸರಳ ಉಡುಪು ಧರಿಸಬೇಕು, ಸರಳವಾಗಿರಬೇಕು ಮತ್ತು ಅವರಂತೆಯೇ ಬದುಕಬೇಕು ಆಗಲೇ ಹಳ್ಳಿಯವನ ಜೊತೆ ಸೇರಲು ಸಾಧ್ಯ" ಎಂಬ ಆದರ್ಶವನ್ನು ಪಾಲನೆ ಮಾಡುವ ಮೂಲಕ ಸರಳ ಜೀವನಕ್ಕೆ ನಾಂದಿ ಹಾಡಿದವರು.

ಸಹಕಾರ ಕ್ಷೇತ್ರದಲ್ಲಿ ಇವರ ಸೇವೆ ಅಪಾರ. 1952ರಲ್ಲಿ ಶ್ರೀರಾಮ ಕೋ-ಆಪರೇಟಿವ್ ಬ್ಯಾಂಕ್ ಪ್ರಾರಂಭಿಸಿದರು. ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮಾರವರ ಸಹಾಯದಿಂದ ಬಡವರಿಗಾಗಿ ಒಂದು ಬ್ಯಾಂಕ್ ಸ್ಥಾಪಿಸಿದರು. ಅದು ಈಗ ಹೆಮ್ಮರವಾಗಿ ಬೆಳೆದಿದೆ.

ಜಾತಿ, ಮತ ಬೇಧವಿಲ್ಲದೇ ಅರ್ಹತೆ ಇರುವ ವಿದ್ಯಾರ್ಥಿಗಳಿಗೆ, ಬಲಹೀನರಿಗೆ ಸಮಾಜದ ಸೇವಾ ಸಂಸ್ಥೆಗಳಿಗೆ ಸಹಾಯ ಮಾಡುವ ಉದ್ದೇಶ ಹೊಂದಿದ ಹಲವಾರು ಶೈಕ್ಷಣಿಕ ಟ್ರಸ್ಟ್‌ಗಳನ್ನು ಸ್ಥಾಪಿಸಿದ ಅವರು "ಎಷ್ಟೋ ಜನರ

ಕೃಪಾಶ್ರಯ, ಹಿರಿಯರ ಪ್ರೀತಿ, ಸ್ನೇಹಿತರ ಬೆಂಬಲ, ತಾಯಿ ತಂದೆಯರ ಆಶೀರ್ವಾದ ನನ್ನನ್ನೂ, ನನ್ನ ಮನೆಯ ವಾತವರಣವನ್ನು ನೆಮ್ಮದಿಯಾಗಿ ಇರಿಸಿದೆ. ನಾವು ಬದುಕುವದು ಮಾತ್ರವಲ್ಲ, ಸುತ್ತಲಿನವರ ಬದುಕು ಸಹ್ಯಗೊಳ್ಳುವಂತೆ ಬದುಕಬೇಕು. ಇದು ನನ್ನ ಜೀವನ ಸೂತ್ರ. ಇದಕ್ಕೆ ತಕ್ಕಂತೆ ಈ ನನ್ನ ಜೀವನ ಸುಖ ದು:ಖಗಳನ್ನು ಕಂಡು ಸಮರಸವಾಗಿ ನಡೆದುಕೊಂಡು ಬಂದಿದೆ". ಎಂದು ಕೃತಾರ್ಥ ಭಾವ ಹೊಂದಿದವರು.

ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಸತ್ವಭರಿತ ತತ್ವಗಳು ಹಾಗೂ ಮೌಲಿಕ ಆದರ್ಶಗಳಿಂದ ಪ್ರಾಭಾವಿತರಾಗಿದ್ದ ಶ್ರೀನಿವಾಸಯ್ಯನವರು ಸರಳತೆಯ ಸಿದ್ಧಾಂತವನ್ನು ಅಪ್ಪಿಕೊಂಡವರು. ಮದ್ಯಪಾನ ಸಂಯಮ ಮತ್ತು ಮಾದಕ ವಸ್ತುಗಳ ಬಳಕೆಯನ್ನು ತಡೆಯುವ ಮೂಲಕ ವ್ಯಸನಮುಕ್ತ ಕರ್ನಾಟಕದ ಕನಸು ಕಂಡವರು.

ಹೊ. ಶ್ರೀನಿವಾಸಯ್ಯನವರೊಂದಿಗೆ ವೈಯಕ್ತಿಕವಾಗಿ ನನ್ನದು ಅವಿನಾಭಾವ ಸಂಬಂಧ. ನನ್ನ ಪೂಜ್ಯ ತಂದೆಯವರೊಂದಿಗೆ ಒಡನಾಟ ಹೊಂದಿದ್ದ ಅವರು ನಮಗೆಲ್ಲ ಆದರ್ಶಪ್ರಾಯರು. ಗಾಂಧಿ ತತ್ವ ಮತ್ತು ಆದರ್ಶಗಳು ಇಂದಿಗೂ ಪ್ರಸ್ತುತ ಎಂಬುದನ್ನು ತಮ್ಮ ವಿಚಾರ ಮತ್ತು ಆಚರಣೆಗಳಿಂದ ಸಮಕಾಲಿನ ಜಗತ್ತಿಗೆ ಪರಿಚಯಿಸಿದವರು.

ಗ್ರಾಮೀಣಾಭಿವೃದ್ಧಿ ಮೂಲಕ ನಾಡಿನ ಅಭಿವೃದ್ಧಿಯನ್ನು ಸಾಧಿಸಬೇಕೆನ್ನುವ ಅವರ ಹೃದಯಾಂತರಾಳದ ಕನಸು ಸಾಕಾರಗೊಳ್ಳುವಲ್ಲಿ ರಚನಾತ್ಮಕ ಕಾರ್ಯಗಳ ಪಾತ್ರ ಬಹುದೊಡ್ಡದು ಎಂಬ ಅವರ ಹಿರಿಮೆ ಗಾಂಧೀಜಿಯವರ ಚಿಂತನ ಚಿಲುಮೆಯಿಂದ ಹೊರಹೊಮ್ಮಿದ ಒಂದು ಮಹತ್ವದ ತುಣುಕು. ಪ್ರಸ್ತುತ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವನಾಗಿ ಸೇವೆ ಸಲ್ಲಿಸುವ ಅವಕಾಶ ದೊರಕಿದಾಗ ನನ್ನನ್ನು ಹರಸಿ ಹಲವಾರು ಪ್ರಮುಖವಾದ ಸಲಹೆ, ಸೂಚನೆಗಳನ್ನು ನೀಡಿ ಮಾರ್ಗದರ್ಶನ ಮಾಡಿದರು.

ಗಾಂಧೀಜಿಯವರಂತೆ ಅವರ ಆದರ್ಶಪ್ರಾಯವಾದ ಬದುಕು ನಮ್ಮೆಲ್ಲರಿಗೂ ಇಂದಿಗೂ ಪ್ರಸ್ತುತ. ಹುಟ್ಟು ಹೋರಾಟಗಾರರಾದ ತುಂಬು ಚಟುವಟಿಕೆಯ ಶಿಸ್ತಿನ ಸೇವಕರೆಂಬ ಖ್ಯಾತಿಯ ಶ್ರೀನಿವಾಸಯ್ಯನವರು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಗಾಂಧಿ ಭವನಕ್ಕೆ ಬಂದವರಿಗೆಲ್ಲ ಆಶ್ರಮದ ವಾತಾವರಣ

ನಿರ್ಮಿಸಿಕೊಟ್ಟವರು. "ಶಾಲೆಯಿಂದ-ಶಾಲೆಗೆ, ಕಾಲೇಜಿನಿಂದ ಕಾಲೇಜಿಗೆ ಗಾಂಧಿ" ಎಂಬ ಚಟುವಟಿಕೆಯ ಮೂಲಕ ಗಾಂಧಿ ತತ್ವ ಪ್ರೇರಿತ ಯುವ ಪ್ರೇರಣಾ ಶಿಬಿರಗಳನ್ನು ನಡೆಸಿ ಅತ್ಯಮೂಲ್ಯವಾದ ಗಾಂಧಿ ತತ್ವಗಳನ್ನು ಪ್ರಚಾರ ಮಾಡಿ ಯುವ ಪೀಳಿಗೆಯನ್ನು ಹುರಿದುಂಬಿಸಿದ ಪಂಚಮಹಾಭೂತಗಳಲ್ಲಿ ಲೀನರಾಗಿ ನಮ್ಮನ್ನು ಆಶೀರ್ವದಿಸುತ್ತಿದ್ದಾರೆ. ಅವರ ಕಿರೀಟಪ್ರಾಯ ಆದರ್ಶಗಳು ನಮಗೆ ಸದಾವಕಾಲ ದಾರಿದೀಪ.



ಶ್ರೀ ಹೊ. ಶ್ರೀನಿವಾಸಯ್ಯನವರ ಮಾದರಿ ನಮಗೆ ಬೇಕು

– ನಾಡೋಜ ಡಾ॥ ಪಾಟೀಲ್ ಪುಟ್ಟಪ್ಪ

ಶ್ರೀ ಹೋ. ಶ್ರೀನಿವಾಸಯ್ಯ ಅವರು ಅರ್ಪಿತ ಜೀವನವನ್ನು ಬದುಕಿದ್ದರು. ಅವರು ಬಡತನದ ಮನೆಯಲ್ಲಿ ಜನ್ಮವೆತ್ತಿ ಬಂದು ಬಾಲ್ಯದಿಂದಲೂ ಸರ್ವರಿಗೂ ಮಾದರಿ ಎನಿಸುವ ಜೀವನವನ್ನು ಬದುಕಿದ್ದರು. ಬಾಲಕರು ಇದ್ದರೆ ಅವರು ಶ್ರೀನಿವಾಸಯ್ಯ ಅವರಂತೆ ಇರಬೇಕೆನ್ನುವ ರೀತಿಯಲ್ಲಿ ಅವರು ತಮ್ಮ ಬಾಲ್ಯ ಜೀವನ ರೂಪಿಸಿಕೊಂಡಿದ್ದರು.

ಅವರ ಮನೆಯಲ್ಲಿ ಯಾರೊಬ್ಬರೂ ಓದಿದವರಲ್ಲ. ಆದರೆ, ಶ್ರೀನಿವಾಸಯ್ಯ ಅವರು ತಮ್ಮ ಬಾಲ್ಯವನ್ನು ಹಾಳು ಮಾಡಿಕೊಳ್ಳದಂತೆ ಅವರು ಅದನ್ನು ಬಹು ಅರ್ಥಪೂರ್ಣವಾಗಿ ಇರಿಸಿಕೊಂಡಿದ್ದರು. ಅವರು ಒಕ್ಕಲುತನದ ಬಡ ಕುಟುಂಬದಲ್ಲಿ ಜನ್ಮವೆತ್ತಿ ಬಂದರಾದರೂ ಬ್ರಾಹ್ಮಣ ಮಕ್ಕಳನ್ನು ಮೀರಿಸುವಂತೆ ತಮ್ಮ ಜೀವನವನ್ನು ರೂಢಿಸಿಕೊಂಡು ಬಂದವರು. ತಮ್ಮ ಬಾಲ್ಯ ಕಾಲದಿಂದಲೂ ಮಾದರಿ ಎನಿಸುವ ಜೀವನವನ್ನು ಬದುಕಿ, ಮಕ್ಕಳಿದ್ದರೆ ಅವರು ಶ್ರೀನಿವಾಸಯ್ಯ ಅವರಂತೆ ಇರಬೇಕೆನ್ನುವ ಮಾದರಿ ಜೀವನವನ್ನು ಬದುಕಿದ್ದರು. ಅವರು ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳದೆ ಅದನ್ನು ಪ್ರಯೋಜನಕಾರಿ ಎನ್ನುವಂತೆ ಅದನ್ನು ಉಪಯೋಗಿಸಿಕೊಂಡು ಬೆಳೆದು ಬಂದರು.

ಬಾಲ್ಯ ಕಾಲದಿಂದಲೂ ಅವರು ತಮ್ಮ ಜೀವನವನ್ನು ಪ್ರಯೋಜನಕಾರಿ ಎನಿಸುವಂತೆ ತಮಗೆ ತಾವೇ ಗುರುವಾಗಿ ಅದನ್ನು ಪೋಷಿಸಿಕೊಂಡು ಬಂದರು. ಬಾಲ್ಯ ಕಾಲದಿಂದಲೂ ಬಹುದೊಡ್ಡ ಜೀವನವನ್ನೇ ಮಾದರಿಯಾಗಿ ಇರಿಸಿಕೊಂಡು ನಡೆದುಕೊಂಡು ಬಂದರು. ಅವರು ಬಹುದೊಡ್ಡ ಜನರ ಜೀವನವನ್ನೇ ಮಾದರಿಯಾಗಿ ಇರಿಸಿಕೊಂಡು ಬಂದ ಕಾರಣದಿಂದ ಅವರ ಮೇಲೆ ಅವರನ್ನು ಹಾಳು ಮಾಡುವಂಥ ಗುಣಧರ್ಮಗಳು ಬೆಳೆದು ಬರಲಿಲ್ಲ. ಅವರಿಗೆ ತಮ್ಮ ಬಾಲ್ಯ ಕಾಲದಿಂದಲೂ ಮಹಾತ್ಮಾ ಗಾಂಧಿ ಅವರಿಂದ ಪ್ರಭಾವಿತರಾದ ಸಿದ್ಧವನಹಳ್ಳಿ ಕೃಷ್ಣಶರ್ಮರಂಥ ಪ್ರಭಾವಶಾಲಿ ಜನರು ಮಾದರಿ ಎನಿಸಿದ್ದರು. ಹೀಗಾಗಿ ಅವರು ತಮ್ಮ ಬಾಲ್ಯವನ್ನು ಕಳೆದು ಹೈಸ್ಕೂಲು ಮಟ್ಟಕ್ಕೆ ಬಂದಾಗ ಬಹುದೊಡ್ಡ ವಿಚಾರಗಳಿಂದ ಪ್ರಭಾವಿತರಾದರು.

ಬೆಂಗಳೂರಿಗೆ ಬಂದು ಹೋಗುತ್ತಿದ್ದ ದೊಡ್ಡ ದೊಡ್ಡ ಜನರೆಲ್ಲರೂ ಅವರ ಮೇಲೆ ತಮ್ಮ ಪ್ರಭಾವವನ್ನು ಬೀರಿದರು. ಒಬ್ಬ ವ್ಯಕ್ತಿಯು ಗಾಂಧಿ ಆಶ್ರಮದಲ್ಲಿ ಬೆಳೆದಂತೆ ಶ್ರೀನಿವಾಸಯ್ಯ ಅವರು ತಮ್ಮ ಜೀವನವನ್ನೇ ಇರಿಸಿಕೊಂಡಿದ್ದರು.

ಅವರು ಇಂಜನೀಯರಿಂಗ್ ಶಿಕ್ಷಣ ಪಡೆದು ಪರಿಣಿತರಾದರೂ ಇನ್ನುಳಿದ ವಿಷಯಗಳ ಬಗೆಗೂ ಅವರು ತಮ್ಮ ಆಸಕ್ತಿಯನ್ನು ಹೊಂದಿದ್ದರು. ಅನೇಕ ವಿಷಯಗಳಲ್ಲಿ ಅವರು ಆಸಕ್ತಿಯನ್ನು ಹೊಂದಿ ಅವುಗಳಿಂದ ಪ್ರಭಾವಿತರಾಗಿ ಅವೆಲ್ಲವುಗಳಲ್ಲಿ ಅವರು ಪರಿಣತಿಯನ್ನು ಸಾಧಿಸಿದರು. ಅವರು ಆಯುರ್ವೇದ ಮೊದಲಾದ ವಿಷಯಗಳಲ್ಲಿ ಬಹುದೊಡ್ಡ ಪ್ರಾವೀಣ್ಯವನ್ನು ಸಾಧಿಸಿದರು.

ಅವರ ಜೀವನ ಬೆಳೆಯುವುದಕ್ಕೆ ಅವರ ಹೆಂಡತಿ ಶ್ರೀಮತಿ ಜಯಶ್ರೀ ಅವರು ಬಹುದೊಡ್ಡ ಪ್ರಭಾವವನ್ನು ಬೀರಿದ್ದಾರೆ. 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬಂತೆ ಅವರು ದಂಪತಿಗಳಿಗೆಲ್ಲ ಮಾದರಿ ಎನಿಸುವಂತೆ ತಮ್ಮ ಜೀವನವನ್ನು ಸಾಧಿಸಿದ್ದರು. ಶ್ರೀನಿವಾಸಯ್ಯ ಅವರು ದೊಡ್ಡ ಇಂಜನೀಯರಾಗಿ ಜರ್ಮನಿಗೆ ಹೋದಾಗಲು ಕೂಡ ಶ್ರೀಮತಿ ಜಯಶ್ರೀ ಅವರು ಅವರ ನೆರಳಿನಂತೆ ಅವರನ್ನು ಹಿಂಬಾಲಿಸುತ್ತಿದ್ದರು. ಈ ದಂಪತಿಗಳ ಜೀವನವು ದಂಪತಿಗಳಿಗೆಲ್ಲ ಮಾದರಿ ಎನಿಸುವಂತಿತ್ತು.

ತಮ್ಮ ಸಾರ್ವಜನಿಕ ಜೀವನದ ಅನೇಕ ಜನರು ಗಾಂಧಿ ಹೆಸರನ್ನು ಹೇಳುತ್ತಿರುವರಾದರೂ ಅವರು ಗಾಂಧಿ ಜೀವನವನ್ನು ಬದುಕಿರುವುದಿಲ್ಲ. ಆದರೆ, ಶ್ರೀನಿವಾಸಯ್ಯ ಅವರು ತಮ್ಮ ಜೀವನದ ಉದ್ದಕ್ಕೂ ಗಾಂಧಿ ಜೀವನವನ್ನೇ ಬದುಕಿಕೊಂಡು ಬಂದರು. ತಮ್ಮ ಜೀವನದ ಉದ್ದಕ್ಕೂ ಅವರು ಯಾವುದನ್ನೂ ಹಾಳು ಮಾಡದೇ ಎಲ್ಲವನ್ನು ಗಾಂಧೀಜಿಯವರಂತೆ ಬೆಳೆಸಿಕೊಂಡು ಬಂದರು. ಮಾದರಿ ಜೀವನವನ್ನು ಬದುಕಬೇಕೆನ್ನುವವರೆಲ್ಲ ಶ್ರೀನಿವಾಸಯ್ಯ ಅವರ ಜೀವನವನ್ನು ಅನುಸರಿಸಬೇಕು. ಅವರು ತಮ್ಮ ಜೀವನದಲ್ಲಿ ಯಾವುದನ್ನು ಹಾಳು ಮಾಡುತ್ತಿರಲಿಲ್ಲ. ಅದರಲ್ಲಿಯೂ ವಿಶೇಷವಾಗಿ ಸಮಯವನ್ನು ಹಾಳು ಮಾಡುವಂಥ ಯಾವ ಹವ್ಯಾಸಗಳನ್ನು ಅವರು ಇರಿಸಿಕೊಂಡಿರಲಿಲ್ಲ. ಗಾಂಧಿ ಜೀವನವನ್ನು ಬದುಕಬೇಕೆನ್ನುವವರು ಶ್ರೀನಿವಾಸಯ್ಯ ಅವರ ಆದರ್ಶಗಳನ್ನು ಇರಿಸಿಕೊಂಡು ನಡೆದರೆ ಮಾತ್ರ ಅದು ಅವರಿಂದ ಸಾಧ್ಯವಾಗುತ್ತದೆ.

ಶ್ರೀನಿವಾಸಯ್ಯ ಅವರು ತಮ್ಮ ಅನುಭವ ಹಾಗೂ ಅಭ್ಯಾಸಗಳನ್ನು ಹೆಚ್ಚು ಮಾಡಿಕೊಳ್ಳಲು ಜರ್ಮನಿಗೆ ಹೋಗಿದ್ದರು. ಬಹುಶಃ ಜರ್ಮನಿಗೆ ಹೋದ ಯಾರೊಬ್ಬರು ಶ್ರೀನಿವಾಸಯ್ಯ ಅವರಂತೆ ಪ್ರಯೋಜನಕಾರಿ ಅನುಭವಗಳನ್ನು

ಪಡೆದುಕೊಂಡು ಜರ್ಮನಿಯಿಂದ ಹಿಂದುರುಗಿ ಬರಲಿಲ್ಲ. ತಮ್ಮ ದೇಶದ ಬಗ್ಗೆ ಜರ್ಮನಿಯಲ್ಲಿ ಕೂಡ ಶ್ರೀನಿವಾಸಯ್ಯ ಅವರಂತೆ ಬರೆಯಲು ಸಮರ್ಥವಾಗಿ ಇರಲಿಲ್ಲ ಎಂದು ಹೇಳಿದರೆ ಅತಿಶಯೋಕ್ತಿಎನಿಸಲಾರದು.

ವೃತ್ತಿಯಿಂದ ನಿವೃತ್ತರಾದ ಮೇಲೆ ಕೂಡ ಅವರು ಬೆಂಗಳೂರಿನಲ್ಲಿ ಅನೇಕ ಉಪಯುಕ್ತ ಸಂಸ್ಥೆಗಳನ್ನು ಸ್ಥಾಪಿಸಿ, ಸಮಾಜಕ್ಕೆ ಪ್ರಯೋಜನಕಾರಿಯಾಗಿ ಬದುಕಿದರು.

ಶ್ರೀನಿವಾಸಯ್ಯ ಅವರು ಆಸಕ್ತಿ ವಹಿಸದಿದ್ದರೆ ಆದಿಚುಂಚನಗಿರಿ ಶ್ರೀಮಠವು ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಸೇವೆಯನ್ನು ಪಡೆದು ಬೃಹತ್ತಾಗಿ ಬೆಳೆಯುತ್ತಿರಲಿಲ್ಲ. ಈ ಸಂಗತಿಯನ್ನು ಸ್ವಾಮಿಜಿಯವರು ಸದಾ ಸ್ಮರಣೆಯಲ್ಲಿ ಇರಿಸಿಕೊಂಡು ಸದಾ ಸ್ಮರಿಸುತ್ತಲೇ ಇರುತ್ತಿದ್ದರು.

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಬಹುದೊಡ್ಡ ವಿಚಾರಗಳನ್ನು ಇರಿಸಿಕೊಂಡು ನಡೆದಿದ್ದರು. ಒಳ್ಳೆಯದನ್ನು ಮಾಡಬೇಕೆಂದು ಸದಾ ಕಾಲವೂ ಹಂಬಲಿಸುತ್ತಿದ್ದರು ಹಾಗೂ ಮಾಡುತ್ತಿದ್ದರು. ಜನರು ಬೆಳೆದರೆ ಅವರು ಶ್ರೀನಿವಾಸಯ್ಯ ಅವರಂತೆ ಬೆಳೆಯಬೇಕು. ಸಮಾಜದ ಹಿತ ಚಿಂತನೆಯನ್ನು ಅವರು ಸದಾಕಾಲವೂ ತಮ್ಮ ಸ್ಮರಣೆಯಲ್ಲಿ ಇರಿಸಿಕೊಂಡಿದ್ದರು.

ಆದಿಚುಂಚನಗಿರಿ ಮಠದ ಬಗ್ಗೆ ಅವರಿಗೆ ಯಾವ ಚಿಂತನೆ ಇದ್ದಿತೊ ಅದಕ್ಕೆ ಸರಿದೊರೆ ಎನ್ನುವ ಚಿಂತನೆಯನ್ನು ಅವರು ಗಾಂಧೀಜಿ ಚಿಂತನೆಗಳ ಬಗ್ಗೆ ಇದ್ದಿತು. ಶ್ರೀನಿವಾಸಯ್ಯ ಅವರು ಗಾಂಧಿ ಜೀವನದ ಬಗ್ಗೆ ತಮ್ಮ ಜೀವನದ ಸರ್ವಸ್ವವನ್ನು ಅರ್ಪಿಸಿಕೊಂಡಿದ್ದರು. ಬೆಂಗಳೂರು ಗಾಂಧಿ ಆಶ್ರಮವು ಬೆಳೆಯುವುದರಲ್ಲಿ, ಅಭಿವೃದ್ಧಿ ಸಾಧಿಸುವಲ್ಲಿ ಶ್ರೀನಿವಾಸಯ್ಯ ಅವರ ಕೊಡುಗೆ ಅಪಾರವಾಗಿದೆ. ಅವರು ಗಾಂಧಿ ವಿಚಾರಗಳನ್ನು ತಮ್ಮೊಂದಿಗೆ ಇರಿಸಿಕೊಂಡು ಹೋಗುತ್ತಿದ್ದರು.

ನಮ್ಮ ದೇಶದಲ್ಲಿ ಗಾಂಧಿ ವಿಚಾರಗಳು ತಮ್ಮ ಪ್ರಭಾವವನ್ನು ಬೀರಬೇಕೆಂದರೆ ಗಾಂಧೀ ಅವರನ್ನು ನಾವು ವಿದ್ಯಾರ್ಥಿ ಸಮೂಹದ ಸಮೀಪಕ್ಕೆ ಕೊಂಡೊಯ್ಯ ಬೇಕೆಂದು ಹೇಳುತ್ತಿದ್ದರು. ತಾವು ಹೇಳುವ ವಿಚಾರಗಳಂತೆ ಅವರು ಜೀವನವನ್ನು ಬದುಕಿದ್ದರು. ಅವರು ಗಾಂಧಿ ವಿಚಾರಗಳನ್ನು ಶಾಲೆ-ಕಾಲೇಜುಗಳು ಇದ್ದಲ್ಲಿಯೇ ಕೊಂಡೊಯ್ಯುತ್ತಿದ್ದರು. ಈ ಹವ್ಯಾಸವನ್ನು ಅವರು ತಮ್ಮ ಜೀವಿತಾವಧಿಯ ಕೊನೆಯ ಗಳಿಗೆಯವರೆಗೂ ಇರಿಸಿಕೊಂಡಿದ್ದರು. ಶ್ರೀನಿವಾಸಯ್ಯ ಅವರಿಗೆ ಗಾಂಧಿ ಜೀವನದ ಒಂದು ಕಾಸೂ ಪೋಲಾಗಿ ಹೋಗುವುದು ಬೇಕಾಗಿರಲಿಲ್ಲ.

ತಮಗೆ ಬೇಕೆಂದು ಅವರು ಯಾವ ಆಸ್ತಿಯನ್ನು ಇರಿಸಿಕೊಂಡಿರಲಿಲ್ಲ. ಸರ್ವಸ್ವವು ಸಮಾಜದ ಸ್ವತ್ತು ಎಂದು ಬಗೆದು ಅದನ್ನೆಲ್ಲ ಧಾರೆ ಎರೆದಿದ್ದರು. ಅವರು ಬರಿಗೈಯಿಂದ ಬಂದು ಸಮೃದ್ಧ ಜೀವನವನ್ನು ಹೇಗೆ ಬದುಕಬೇಕೆನ್ನುವ ಮಾದರಿಯನ್ನು ಸಮಾಜಕ್ಕೆ ತೋರಿಸಿ ಬರಿಗೈಯಿಂದ ಹೊರಟು ಹೋದರು. ಅವರನ್ನು ಅನುಸರಿಸಿ ನಡೆಯುವುದೊಂದೇ ನಮಗೆ ಮಾದರಿ. ಶ್ರೀನಿವಾಸಯ್ಯ ಅವರು ಹೋದರು, ಅವರಂಥ ಇನ್ನೊಬ್ಬರು ನಮಗೆ ಎಲ್ಲಿ ಸಿಕ್ಕುತ್ತಾರೆ ?



ನಮ್ಮೆಲ್ಲರ ರೋಲ್ ಮಾಡೆಲ್-ಹಿರಿಯ ಗಾಂಧೀವಾದಿ ಡಾ॥ ಹೊ. ಶ್ರೀನಿವಾಸಯ್ಯನವರು

– ಡಾ. ಎಂ.ವಿ. ರಾಜಶೇಖರನ್

ಕಳೆದ 35–40 ವರ್ಷಗಳಿಂದ ನಿಕಟ ಸಂಪರ್ಕದಲ್ಲಿದ್ದ ನಮ್ಮೆಲ್ಲರ ಗೌರವಕ್ಕೆ ಅಷ್ಟೇ ಅಲ್ಲ ಇಡೀ ರಾಜ್ಯದ, ಇಡೀ ರಾಷ್ಟ್ರದ ಗೌರವಕ್ಕೆ ಪಾತ್ರರಾಗಿ ಗಾಂಧೀಜಿಯವರ ವಿಚಾರಧಾರೆಗಳನ್ನು ತತ್ವಗಳನ್ನು ಮೈಗೂಡಿಸಿಕೊಂಡು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಗಾಂಧೀಜಿಯವರ ತತ್ವಗಳ ಪ್ರಚಾರ ಕಾರ್ಯವನ್ನು ನಾನಾ ರೀತಿಯ ಚಟುವಟಿಕೆಗಳ ಮೂಲಕ ಅತ್ಯಂತ ಶ್ರದ್ಧಾ ಭಕ್ತಿಯಿಂದ ಮುನ್ನಡೆಸಿಕೊಂಡು ಬರುತ್ತಿದ್ದವರು ಕೀರ್ತಿಶೇಷ ಡಾ॥ ಹೊ. ಶ್ರೀನಿವಾಸಯ್ಯನವರು.

ಡಾ॥ ಹೊ. ಶ್ರೀನಿವಾಸಯ್ಯನವರು, ಪ್ರಥಮತಃ ಹೆಚ್.ಎ.ಎಲ್.ನಲ್ಲಿ ಅಧಿಕಾರಿಯಾಗಿ ತದನಂತರ ಬಿ.ಇ.ಎಂ.ಎಲ್.ನಲ್ಲಿ ದಶಕಗಳ ಕಾಲ ಇಂಜಿನೀಯರ್/ ಉಪ ವ್ಯವಸ್ಥಾಪಕರಾಗಿ ಉತ್ತಮ ಆಡಳಿತಗಾರ ಹಾಗೂ ಕೌಶಲ್ಯತೆಯುಳ್ಳ ನಿಷ್ಠಾವಂತ ಅಧಿಕಾರಿ ಎನಿಸಿದ್ದರು. ಜರ್ಮನಿಯಲ್ಲಿ ವಿಶಿಷ್ಟ ತರಬೇತಿ ಪಡೆದು ರೈಲ್ವೆ ಕೋಚ್ ನಿರ್ಮಾಣದಲ್ಲಿ ಅವರ ಕೊಡುಗೆ ಸ್ಮರಣೀಯವಾಗಿದೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ, ಎಲ್ಲ ರಾಜಕೀಯ ಧುರೀಣರ, ಗಣ್ಯರ, ಚಿಂತಕರ, ವಿಚಾರ ವಾದಿಗಳ ಸಹಕಾರದೊಂದಿಗೆ ಗಾಂಧೀ ಭವನವನ್ನು ಪುನರುಜ್ಜೀವನಗೊಳಿಸಿ ಅಲ್ಲಿ ಸಕ್ರಿಯವಾಗಿ ಚಟುವಟಿಕೆಗಳು ನಡೆಯುವ ತಾಣವನ್ನಾಗಿಸಿದವರು ಡಾ॥ ಹೊ. ಶ್ರೀನಿವಾಸಯ್ಯನವರು.

ವಿಶೇಷ ಏನೆಂದರೆ ಅವರು ಸ್ವಂತ ಸಂಪಾದನೆಯನ್ನು ಮನೆ ಆಸ್ತಿಯನ್ನು ಸಮಾಜ ಸೇವೆಗಾಗಿ ನಿಯೋಜಿಸಿ, ಕೊನೆಯಲ್ಲಿ ತಮ್ಮ ದೇಹವನ್ನು ಸಹ ದಾನ ಮಾಡಿದ ಗಣ್ಯರು. ಡಾ॥ ಹೊ. ಶ್ರೀನಿವಾಸಯ್ಯನವರು. ಖ್ಯಾತ ಸಾಹಿತಿ, ಬರಹಗಾರರೂ ಆಗಿದ್ದು, ಹಲವು ಕೃತಿ ರಚನೆ ಮಾಡಿದ್ದಾರೆ. ಅವರು ಬರೆದ "ನಾನು ಕಂಡ ಜರ್ಮನಿ" ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಮಹಾತ್ಮ ಗಾಂಧೀಜಿಯವರನ್ನು ಕುರಿತು ಮಕ್ಕಳಿಗೆ ಬರೆದ "ನಮ್ಮ ಗಾಂಧೀ ತಾತ" ಕೃತಿಗಳು ಪ್ರಮುಖವಾದವು. ಅವರು ರಚಿಸಿ ಪ್ರಕಟಿಸಿದ ಎಲ್ಲಾ ಪುಸ್ತಕಗಳನ್ನು ಗಾಂಧಿ ಭವನಕ್ಕೆ

ದಾನ ಮಾಡುವ ಮೂಲಕ ಗಾಂಧೀಜಿಯವರ ತತ್ವಗಳ ಪ್ರಚಾರಕ್ಕೆ ಇಂಬು ಕೊಟ್ಟವರು. ಡಾ॥ ಹೊ. ಶ್ರೀನಿವಾಸಯ್ಯನವರು ಗಾಂಧೀಜಿಯವರು ಹೇಳಿರುವಂತೆ "ನನ್ನ ಜೀವನವೇ ನನ್ನ ಸಂದೇಶ" ಎಂಬ ಮಾತಿಗೆ ಅನ್ವರ್ಥನಾಮರಾಗಿದ್ದರು.

ಕೀರ್ತಿಶೇಷ ಡಾ॥ ಹೊ. ಶ್ರೀನಿವಾಸಯ್ಯನವರು ಗಾಂಧೀಜಿಯವರು ಪ್ರತಿಪಾಧಿಸಿದ್ದ ಮದ್ಯಪಾನ ನಿಷೇಧ, ಹರಿಜನೋದ್ಧಾರ, ಖಾದಿ ಅವಲಂಬನೆ, ಪ್ರಕೃತಿ ಚಿಕಿತ್ಸೆ, ಸಹಕಾರ ತತ್ವ, ಆಧ್ಯಾತ್ಮಿಕ ಮನೋಭಾವ ಹಾಗೂ ವಿಶ್ವಪ್ರಜ್ಞೆಯನ್ನು ಸದಾಕಾಲ ಪರಿಪಾಲಿಸಿಕೊಂಡು ಬರುತ್ತಿದ್ದರು. ಯುವನಜರಿಗೆ ಗಾಂಧೀಜಿಯವರ ಆದರ್ಶ ನುಡಿಗಳನ್ನು ವಿಚಾರಗಳನ್ನು ತಲುಪಿಸಿ ಗಾಂಧೀಜಿಯವರ ಚಿಂತನೆಗಳನ್ನು ಪರಿಚಯಿಸುವ ಕೆಲಸವನ್ನು ಕೊನೆ ಉಸಿರಿರುವವರೆಗೂ ಪಾಲಿಸುತ್ತಿದ್ದರು. ಸಂಯಮ ಮೂರ್ತಿಗಳಾಗಿ, ಮಾನವೀಯ, ಮೌಲ್ಯಗಳ ಪಾತ್ರರಾಗಿದ್ದವರೆಂದರೆ ಅತಿಶಯೋಕ್ತಿ ಆಗಲಾರದು. ಕನ್ನಡದ ಖ್ಯಾತ ಕವಿ ಶ್ರೀ ಸಿದ್ದಯ್ಯ ಪುರಾಣಿಕರು ಹೇಳಿದಂತೆ "ನೀನೇನಾದರೂ ಆಗು ನೀನು ಬಯಸಿದಂತೆ ಆಗು ಆದರೆ, ಮೊದಲು ಮಾನವನಾಗು" ಎಂಬ ಕವಿವಾಣಿಯಂತೆ ಮಾನವೀಯತೆ ಎಂಬ ಪದಕ್ಕೆ ಅನ್ವರ್ಥನಾಮರಾಗಿದ್ದವರು ಡಾ. ಹೊ. ಶ್ರೀನಿವಾಸಯ್ಯನವರು.

ಬೆಂಗಳೂರಿನಲ್ಲಿ ಸಕ್ರಿಯರಾಗಿದ್ದಾಗ ಅನೇಕ ಸಹಕಾರ ಸಂಘ, ಸಹಕಾರಿ ಬ್ಯಾಂಕ್‌ಗಳಲ್ಲಿ, ಹೌಸಿಂಗ್ ಸೊಸೈಟಿಗಳಲ್ಲಿ, ಧಾರ್ಮಿಕ ಸಂಸ್ಥೆಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆಗಳಲ್ಲಿ ಕ್ರಿಯಾಶೀಲತೆಯಿಂದ ಕೆಲಸ ಮಾಡಿ ತಮ್ಮದೇ ಆದ ಕೊಡುಗೆ ಸಲ್ಲಿಸಿದ್ದರು. ಹಿರಿಯ ಗಾಂಧಿವಾದಿಗಳು, ಸ್ವಾತಂತ್ರ್ಯ ಹೋರಾಟಗಾರರು, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರೂ ಆಗಿ ಕೆಲಸ ಮಾಡಿ ನೀಡಿರುವ ಕೊಡುಗೆ ಶ್ಲಾಘನೀಯ. ಡಾ॥ ಹೊ. ಶ್ರೀನಿವಾಸಯ್ಯರವರಿಗೆ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ರಾಜ್ಯ ಸರ್ಕಾರದ ಪತಂಜಲಿ ಸುವರ್ಣಪದಕ, ಕೆಂಪೇಗೌಡ ಪ್ರಶಸ್ತಿ ಅದರಲ್ಲೂ 2015ರಲ್ಲಿ ರಾಜ್ಯ ಸರ್ಕಾರದ ಗಾಂಧೀ ಸೇವಾ ಪ್ರಶಸ್ತಿಗಳಿಗೆ ಭಾಜನರಾದ ಇವರ ಜೀವನ ಸ್ಫೂರ್ತಿ ನಮಗೆಲ್ಲ ಸ್ಮರಣೀಯವಾದುದು.

ಕೀರ್ತಿಶೇಷ ಡಾ॥ ಹೊ. ಶ್ರೀನಿವಾಸಯ್ಯನವರು ನಮ್ಮೊಡನಿದ್ದ ಕಾಲಾವದಿಯಲ್ಲಿ ಅವರು ಯಾವುದೇ ಸಭೆ ಸಮಾರಂಭಗಳಲ್ಲಿ ಮಾಡುತ್ತಿದ್ದ ಅವರ ಭಾಷಣದ ಕೊನೆಯಲ್ಲಿ ಯಾವಾಗಲು ಶ್ರೀ ಆಚಾರ್ಯ ವಿನೋಭ ಭಾವೆರವರ "ಜೈ ಜಗತ್" ಎಂಬ ಘೋಷಣೆಯನ್ನು ಅತ್ಯಂತ ಎತ್ತರದ ಧ್ವನಿಯಲ್ಲಿ ಮೊಳಗಿಸಿ ಸಭಿಕರ ಗಮನಕ್ಕೆ ತರುತ್ತಿದ್ದರು. ಇಂತಹ ಮಹಾನ್ ಗಣ್ಯ ವ್ಯಕ್ತಿ ಜೀವನವೇ ಒಂದು ದಾರಿ ದೀಪ ಮತ್ತು ಸ್ಫೂರ್ತಿದಾಯಕವಾಗಿದೆ ಹಾಗೂ ಆದರ್ಶಮಯವಾಗಿದೆ.

ಅವರಲ್ಲಿದ್ದ ಆದರ್ಶಮಯ ಹಾಗೂ ಮಾನವೀಯ ಮೌಲ್ಯಗಳನ್ನು ಅನುಷ್ಠಾನಕ್ಕೆ ತರುವಲ್ಲಿ ನಾವೆಲ್ಲ ಸರ್ವ ಪ್ರಯತ್ನ ಮಾಡುವುದರ ಜೊತೆಗೆ ಅವರ ಕನಸನ್ನು ನನಸಾಗಿಲು ನಾವೆಲ್ಲರೂ ಸೇರಿ ಗಾಂಧೀಜಿಯವರ ತತ್ವಾದರ್ಶಗಳು ವಿಚಾರಧಾರೆಗಳ ಪ್ರಚಾರದ ಮೂಲಕ ಅವರ ಅನುಪಮ ಸೇವೆಯನ್ನು ಮತ್ತೊಮ್ಮೆ ಈ ಲೇಖನದ ಮೂಲಕ ನೆನಪಿಸಿಕೊಳ್ಳುತ್ತೇನೆ.



ಹೊ. ಶ್ರೀನಿವಾಸಯ್ಯ: ಒಂದು ಮಾಸದ ನೆನಪು

– ಡಾ: ಜಿ. ಮಾದೇಗೌಡ

ಆಗ ನಾನು ಕಾನೂನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕಾಲ. ನಾನು ಓದುವ ದಿನಗಳಲ್ಲೇ ಹಿರಿಯರಾದ ಹೊ. ಶ್ರೀನಿವಾಸಯ್ಯನವರ ಹೆಸರು ಚಾಲ್ತಿಯಲ್ಲಿತ್ತು.

ನಾನು ಮಂಡ್ಯದಲ್ಲಿ ಕಾಸಿನ ಆಸೆಗೆ ಕಾಂಗ್ರೆಸ್ ಕರಪತ್ರ ಹಂಚುತ್ತಿದ್ದೆ. ಆದರೆ ಮುಂದೆ ಕಾಂಗ್ರೆಸ್ ನನ್ನ ಮೈಯ್ಯನೆಲ್ಲಾ ಆವರಿಸಿಕೊಂಡು ಬಿಟ್ಟಿತ್ತು. ಹೀಗಿರುವಾಗ ರಾಷ್ಟ್ರ ಮಟ್ಟದಲ್ಲಿ ಹಾಗೆಯೇ ಬೆಂಗಳೂರಿನಲ್ಲಿ ಕಾಂಗ್ರೆಸ್ ಸದಸ್ಯತ್ವ ನೊಂದಣಿ ಅಭಿಯಾನ ಆರಂಭಗೊಂಡಿತ್ತು. ಕಾಂಗ್ರೆಸ್ ಸದಸ್ಯರಾಗಬೇಕಾದರೆ ನಾಲ್ಕಾಣಿ ಸದಸ್ಯತ್ವ ಶುಲ್ಕ. ಅಷ್ಟಾದರೆ ನಾಲ್ಕಾಣಿ ಕೊಟ್ಟು ಸದಸ್ಯರಾಗಿ ಬಿಡಬಹುದಿತ್ತು. ಆದರೆ ಸದಸ್ಯರಾಗುವವರಿಗೆ ಖಾದಿ ತೊಡುವುದು ಕಡ್ಡಾಯವಾಗಿತ್ತು. ಈಗಿನಂತೆ ಯಾರು ಬೇಕಾದರೂ ಕಾಂಗ್ರೆಸ್ ಪಕ್ಷ ಸೇರುವ ಜಾಯಮಾನ ಆಗ ಇರಲಿಲ್ಲ. ಆದರೆ, ಆಗ ಖಾದಿ ಭಂಡಾರಗಳಲ್ಲಿ ಸಿಗುತ್ತಿದ್ದ ಖಾದಿ ಗಟ್ಟಿ ಹಾಗೂ ಒರಟು ಖಾದಿ. ಬೆಂಗಳೂರಿನ ಮಾರ್ಕೆಟ್ ಹತ್ತಿರ, ಖಾದಿ ಭಂಡಾರ ಇತ್ತು. ಅಲ್ಲಿ ಬಟ್ಟೆ ನೋಡಲು ಹೋದಾಗ ಆ ಒರಟು ಖಾದಿ ಮುಟ್ಟಿ ಮುಟ್ಟಿ ನೋಡುವಾಗ ಯಾರೋ ಒಬ್ಬರು ನನಗೆ ಸಲಹೆ ಕೊಟ್ಟರು. 'ನೋಡಿ, ನಿಮಗೆ ಚಂದದ ಖಾದಿ ಬೇಕೆಂದರೆ, ಇದಕ್ಕಿಂತ ಸುಧಾರಿಸಿದ ಖಾದಿ ಬಟ್ಟೆ ಬೇಕೆಂದರೆ ಇಲ್ಲೇ ಹೊ. ಶ್ರೀನಿವಾಸಯ್ಯ ಅಂತ ಇದ್ದಾರೆ. ಅವರೇ ದಿನವೂ ನೂಲುತ್ತಾರೆ. ಗುಡಿ ಕೈಗಾರಿಕೆ ನಡೆಸುತ್ತಿದ್ದಾರೆ. ಅಲ್ಲಿ ಹೋದರೆ ನಿಮಗೆ ಒಳ್ಳೆಯ ಖಾದಿ ಸಿಗಬಹುದು' ಎಂದರು. ಅದೇ ಮೊದಲಬಾರಿಗೆ ಅವರ ನಮ್ಮ ಭೇಟಿ. ಅಲ್ಲಿಂದ ಅವರು ನಿಧನರಾಗುವವರೆಗೂ ನಾನು ಗಮನಿಸುತ್ತಾಬಂದಂತೆ ಖಾದಿ, ಗ್ರಾಮೋದ್ಯೋಗ, ಗಾಂಧಿ ತತ್ವಾದರ್ಶಗಳ ಪ್ರತಿರೂಪವೇ ಆಗಿ ನನಗೆ ಕಾಣುತ್ತಿದ್ದರು.

ಬೆಂಗಳೂರು ಗಾಂಧಿಭವನದ ಅಧ್ಯಕ್ಷರಾದ ಮೇಲೆ ಆ ಸಂಸ್ಥೆಯನ್ನು ಹೆಮ್ಮರವಾಗಿ ಬೆಳೆಸಿದ ಕೀರ್ತಿ ಅವರಿಗೆ ಸಲ್ಲಬೇಕು. ನಾನು ವ್ಯಾಸಂಗ ಮಾಡುತ್ತಿರುವ ಕಾಲದಲ್ಲಿ ಬೆಂಗಳೂರಿನ ಗಾಂಧಿಭವನದ ಅಧ್ಯಕ್ಷರಾದ ನಂತರ ಪ್ರತಿದಿನವೂ ಯಾವುದಾದರೊಂದು ಕಾರ್ಯಕ್ರಮ ನಡೆಸುತ್ತಿದ್ದರು. ಆಗ ನಾನು ದಿನವೂ ಕಾರ್ಯಕ್ರಮಕ್ಕೆ ಹಾಜರಾಗುತ್ತಿದ್ದೆ. ಅದು ನನ್ನ ಮೇಲೆ ಆಗಲೇ ಗಾಂಧಿ ಪ್ರಭಾವ ಬೀರಿತು. ಅವರ


ಪ್ರಯತ್ನದಿಂದಾಗಿ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರ ಮನವೊಲಿಸಿ ಪ್ರತಿಯೊಂದು ಜಿಲ್ಲೆಯಲ್ಲೂ ಒಂದು 'ಗಾಂಧಿಗ್ರಾಮ' ಸ್ಥಾಪನೆಯನ್ನು ಮಾಡಲು ಕಾರಣರಾದರು. ತಮ್ಮ ಸ್ವಂತ ಗ್ರಾಮವನ್ನು ಸ್ವಚ್ಛ, ಶುದ್ಧ, ಸಕಲ ಸೌಲಭ್ಯ ಪೂರಿತ ಗ್ರಾಮವನ್ನಾಗಿ ರೂಪಿಸಿ ಮಾದರಿಯಾಗಿದ್ದಾರೆ.

ನಾವು ಮಂಡ್ಯದಲ್ಲಿ ಮತ್ತು ಭಾರತೀ ನಗರದಲ್ಲಿ "ಗಾಂಧಿಭವನ" ನಿರ್ಮಾಣ ಮಾಡುವ ಸಂದರ್ಭದಲ್ಲಿ ಅವರ ಭೇಟಿಯಾಗಿ ಅವರ ಸಲಹೆ, ಮಾರ್ಗದರ್ಶನ ಪಡೆಯುತ್ತಿದ್ದೆ. ಅವರೇ ಖುದ್ದಾಗಿ ಮಂಡ್ಯಕ್ಕೆ ಬಂದು ಗಾಂಧಿಭವನದ ನಿರ್ಮಾಣ ಹಂತದಲ್ಲಿ ಅನೇಕ ಸಲಹೆ ಸೂಚನೆಗಳನ್ನು ನೀಡಿ ಪ್ರೋತ್ಸಾಹಿಸಿದರು. ಹಾಗೂ ಮಂಡ್ಯದ ಗಾಂಧಿಭವನ ಕಟ್ಟಡ ನಿರ್ಮಾಣವಾದ ಮೇಲೆ ಉದ್ಘಾಟನಾ ಸಮಾರಂಭದಲ್ಲೂ ನಮ್ಮ ಕರೆಗೆ ಓಗೊಟ್ಟು ಆಗಮಿಸಿ ಆಶೀರ್ವದಿಸಿದರು.

ಅನೇಕ ಸಂದರ್ಭದಲ್ಲಿ ಅವರೊಡನೆ ಸಮಾರಂಭದಲ್ಲಿ ಭಾಗಿಯಾಗಿದ್ದೇನೆ. ಅವರು ಮಕ್ಕಳಿಗಾಗಲೀ, ಯುವಕರಿಗಾಗಲೀ, ವಯಸ್ಕರಿಗಾಗಲೀ ಮಾತನಾಡುವಾಗ ಮೈರೋಮಾಂಚನವಾಗುವಂತೆ, ಎಲ್ಲರಿಗೂ ದೇಶಭಕ್ತಿ ಪ್ರಚೋದನೆಯಾಗುವಂತೆ ಮಾತನಾಡುವುದನ್ನು ಕಂಡಾಗ ನನಗೆ ಹೆಮ್ಮೆ ಉಂಟಾಗಿದೆ.

ಹೊ. ಶ್ರೀನಿವಾಸಯ್ಯ ಈಗ ಇಲ್ಲ ಅನ್ನುವವರು ಯಾರು? ಅವರ ಭೌತಿಕ ಶರೀರ ಇಲ್ಲ; ಆದರೆ ಅವರು ನೆಟ್ಟ ಸಂಸ್ಥೆಗಳ ವೃಕ್ಷಗಳೆಲ್ಲಾ ಹೊ. ಶ್ರೀನಿವಾಸಯ್ಯ ನವರನ್ನು ಪ್ರತಿ ಕ್ಷಣದಲ್ಲೂ ನೆನಪಿಸುತ್ತವೆ.

ಶ್ರೀನಿವಾಸಯ್ಯರವರೆಂದರೆ ನನಗೆ ಅಭಿಮಾನ, ಗೌರವ. ಅಂತ ದಿವ್ಯ ಚೇತನದ ಸಂಸ್ಮರಣೆ ಚಿರಕಾಲವಿರಲೆಂಬುದೇ ನನ್ನ ಮನದಾಳದ ಹಾರೈಕೆ.



ಕರ್ನಾಟಕದ ಚಿರಂತನ 'ಗಾಂಧಿ' – ಡಾ. ಹೊ. ಶ್ರೀನಿವಾಸಯ್ಯ

– ಡಾ. ಬಿ.ಎಲ್. ಶಂಕರ್

ತೆರೆಯಾಗು ವಿಶ್ವಜೀವನದ ದಿವ್ಯಾಬ್ಧಿಯಲಿ
ಕರಗಿಸದಿರಲಿ ನಿನ್ನ ಬೇರೆತನದರಿವ
ಮರುತನುರುಬನು ತಾಳುತೇಳುತೋಲಾಡುತ್ತ
ವಿರಮಿಸ ಲೀಲೆಯಲಿ – ಮಂಕುತಿಮ್ಮ

ಅಪ್ಪಟ ದೇಶಭಕ್ತ, ಮನುಜಕುಲ ಪ್ರೇಮಿ ಹೊ.ಶ್ರೀನಿವಾಸಯ್ಯನವರ ಬಗ್ಗೆ ನುಡಿಗಳನ್ನಾಡುವುದೆಂದರೆ ಅದು ಸಮುದ್ರದಲ್ಲಿ ಉಕ್ಕಿಬರುವ ಎಲ್ಲಾ ಅಲೆಗಳನ್ನೂ ಸ್ಪರ್ಶಿಸಬೇಕು ಎಂದಂದು ಕೊಂಡಂತೆಯೇ!

"ಕರ್ನಾಟಕದ ಗಾಂಧಿ"ಯೆಂದೇ ನಾಡಿನ ಜನಮಾನಸದಲ್ಲಿ ಪರಿಗಣಿಸಲ್ಪಟ್ಟಿರುವ ಡಾ. ಹೊ. ಶ್ರೀನಿವಾಸಯ್ಯನವರಂಥ ದಿವ್ಯ ಚೇತನಗಳು ತಮ್ಮ ಕಾರ್ಯಗಳಿಂದಾಗಿ ಸದಾ ಸ್ಮರಣೆಯಲ್ಲಿ ನಿಲ್ಲುತ್ತಾರೆ. ಅಪ್ಪಟ ಗ್ರಾಮೀಣ ಪರಿಸರದಲ್ಲಿ 1925ರಲ್ಲಿ ಈ ಪುಣ್ಯಭೂಮಿಗೆ ಬಂದ ಶ್ರೀನಿವಾಸಯ್ಯನವರಿಗೆ ಅಪ್ಪಟ ಗಾಂಧಿ ಅನುಯಾಯಿಯಾಗಿದ್ದ ಸಿದ್ದವನಹಳ್ಳಿ ಕೃಷ್ಣಶರ್ಮರು ತಂದೆ, ತಾಯಿ, ಗುರುಶ್ರೇಷ್ಠ ಮಾರ್ಗದರ್ಶಕ, ದೈವ ಎಲ್ಲವೂ ಆಗಿದ್ದರು. ತಮ್ಮ 9ನೇ ವಯಸ್ಸಿನಲ್ಲಿಯೇ 'ಗಾಂಧಿ ದರ್ಶನ' ಹೊಂದಿದ್ದ ಪರಿಣಾಮವೋ ಏನೋ, ಶ್ರೀನಿವಾಸಯ್ಯನವರ ಬದುಕು ನಂತರದಲ್ಲಿ ಪೂರ್ಣಾರ್ಥದಲ್ಲಿ ಗಾಂಧಿಮಯ! ಅವರೇ ಹೇಳಿರುವಂತೆ; **"ಮಹಾತ್ಮ ಗಾಂಧೀಜಿ ನನ್ನ ಮೇಲೆ ತುಂಬಾ ಪ್ರಭಾವ ಬೀರಿದ್ದಾರೆ. ಅವರ ಸತ್ಯಪರತೆ ನನ್ನ ಮನಸ್ಸನ್ನು ತುಂಬಾ ಕಾಡಿಸಿತ್ತು! ನಾನು ಹಿರಿಯರ ಮತ್ತು ಗಾಂಧೀಜಿ ಅವರ ಹಾದಿಯಲ್ಲಿ ನಡೆಯಲು ಪ್ರಯತ್ನಪಟ್ಟು ಎಷ್ಟು ಸಾಧಿಸಿದೆನೋ ಗೊತ್ತಿಲ್ಲ. ನನ್ನ ತಂದೆತಾಯಿಗಳ ಆಶೀರ್ವಾದ, ನನ್ನ ಜೀವನದಲ್ಲಿ ದೊರಕಿದ ಅನೇಕ ಗುರುಹಿರಿಯರ ಮಾರ್ಗದರ್ಶನ, ಗಾಂಧೀಜಿ, ವಿನೋಬಾ ಅವರ ಸಾನ್ನಿಧ್ಯ ನನ್ನ ಬದುಕಿಗೆ ಪ್ರೇರಣೆ."**

ನಲ್ವತ್ತು ವರ್ಷಗಳ ನಂತರದಲ್ಲಿ ಆಚಾರ್ಯ ವಿನೋಬಾ ಭಾವೆಯವರ ದರ್ಶನ ಪಡೆಯುವಷ್ಟರ ಹೊತ್ತಿಗೆ ಶ್ರೀನಿವಾಸಯ್ಯನವರು 'ಕರ್ನಾಟಕದ ಗಾಂಧೀ'ಯಾಗಿ ಪರಿವರ್ತಿತರಾಗಿದ್ದರು! ಸ್ವಾತಂತ್ರ್ಯ ಹೋರಾಟದಿಂದ ಮೊದಲ್ಗೊಂಡು ಖಾದಿ,

ಪ್ರಕೃತಿ ಚಿಕಿತ್ಸೆ, ಯೋಗ, ಸಾಹಿತ್ಯ, ಭೂದಾನ, ಅಸ್ಪೃಶ್ಯತಾ ನಿವಾರಣೆ, ಪತ್ರಿಕಾರಂಗ, ವಿದ್ಯಾರ್ಥಿ ನಾಯಕತ್ವ, ಸಹಕಾರಿ ಕ್ಷೇತ್ರ, ವಿದ್ಯಾಕ್ಷೇತ್ರ-ಹೀಗೆ ಹಲವಾರು ಮಜಲುಗಳಲ್ಲಿ ಸನ್ಮಾನ್ಯ ಶ್ರೀನಿವಾಸಯ್ಯನವರ ವ್ಯಕ್ತಿತ್ವ-ಪ್ರಭಾವ ಪ್ರತಿಫಲಿಸುತ್ತಿದ್ದು ಕನ್ನಡನಾಡಿಗೆ ಒಂದು ಅನರ್ಘ್ಯರತ್ನವಾಗಿ ಪರಿಣಮಿಸಿದ್ದು ನಮ್ಮೆಲ್ಲರ ಸುಯೋಗ! ತಮ್ಮದೆಲ್ಲವನ್ನೂ ತ್ಯಜಿಸಿ, ನಾಡಿನ ಯುವಜನತೆಯಲ್ಲಿ ಉತ್ಸಾಹ ತುಂಬುವುದನ್ನೇ 'ಕಾಯಕ'ವನ್ನಾಗಿಸಿ ಕೊಂಡ ಶ್ರೀನಿವಾಸಯ್ಯನವರು ಬಸವಣ್ಣನವರ ಕಾಯಕತತ್ತ್ವವನ್ನು ಅಕ್ಷರಶಃ ಆಚರಣೆಯಲ್ಲಿ ತಂದ ಮಹಾನುಭಾವ.

ಒಂದಿಹುದುಪಯವ್ಪೋರೊರ್ವನರೆಗಣ್ಣುಗಳು
ಮೊಂದೊಂದು ಸತ್ಯಾಂಶಕಿರಣಗಳ ಪಿಡಿದು
ಒಂದುಗೂಡಿದೊಡವರ್ಗಳರಿವನೆಲ್ಲವನಾಗ
ಮುಂದು ಸಾಗುವೆವಿನಿತು – ಮಂಕುತಿಮ್ಮ

ಒಬ್ಬೊಬ್ಬನ ಅರೆದೃಷ್ಟಿಯೂ ಒಂದೊಂದು ಸತ್ಯಾಂಶದ ಕಿರಣಗಳನ್ನು ಹೊರಹಾಕುವುದು. ಆ ಅಂಶಸತ್ಯಗಳನ್ನು ಒಗ್ಗೂಡಿಸಿದರೆ ಪೂರ್ಣಸತ್ಯವು ದೊರಕಿ, ಮುನ್ನಡೆಯಲು ನೆರವಾಗುವುವು ಎಂಬ ಡಿ.ವಿ.ಜಿ.ಯವರ ದಾರ್ಶನಿಕ ನುಡಿಯಂತೆ ಹೊ. ಶ್ರೀನಿವಾಸಯ್ಯನವರ ಬದುಕು ಕಂಡುಬರುತ್ತಿದೆ. ವಿದ್ಯಾರ್ಥಿಗಳಲ್ಲಿ ರಾಷ್ಟ್ರ ಪ್ರೇಮವನ್ನು ತುಂಬಿದರೆ ರಾಷ್ಟ್ರಪರಿವರ್ತನೆಯ ಗಾಂಧಿ ಕನಸು ಸುಲಭವಾಗಿ ಕೈಗೂಡುತ್ತದೆಂದೇ ನಂಬಿದ್ದ ಶ್ರೀನಿವಾಸಯ್ಯನವರು ಈ ದಿಸೆಯಲ್ಲಿ ಕಾಯಾ-ವಾಚ-ಮನಸಾ ತಮ್ಮನ್ನು ಅರ್ಪಿಸಿಕೊಂಡಿದ್ದರು! ಗಾಂಧಿ ಪ್ರಣೀತ ತತ್ತ್ವಾದರ್ಶಗಳ ಬೆಳಕಿನಲ್ಲಿ ಮುನ್ನಡೆಯುತ್ತಾ ಬಂದ ಶ್ರೀನಿವಾಸಯ್ಯನವರು ಹುಟ್ಟುಹಾಕಿದ ಸಂಘ-ಸಂಸ್ಥೆಗಳು, ಕಾರ್ಯಕ್ರಮಗಳು, ಸೇವಾಕಾರ್ಯಗಳು, ಶಿಷ್ಯವೃಂದಗಳು, ಪ್ರಭಾವಿಸಿದ ವ್ಯಕ್ತಿತ್ವಗಳು-ಅಷ್ಟರಮಟ್ಟಿಗೆ ವ್ಯಾಪಿಸಿದೆ ಶ್ರೀನಿವಾಸಯ್ಯನವರ ಪ್ರಭಾವಲಯ. ಅವರಿಂದ ಸೃಷ್ಟಿಸಲ್ಪಟ್ಟ ಸಂಸ್ಥೆಗಳನ್ನು ಮುನ್ನಡೆಸುವುದೇ ಒಂದು ಭಗೀರಥ ಪ್ರಯತ್ನ.

ಮರವೊಂದು ನೂರು, ಇನ್ನೂರು, ಮುನ್ನೂರು ವರ್ಷಗಳ ಕಾಲ ಮೌನವಾಗಿ ಬಾಳುತ್ತ, ನಿಸರ್ಗವನ್ನು ಸುಂದರಗೊಳಿಸುತ್ತಾ, ಹಸಿದುಬಂದವರಿಗೆ ಹಣ್ಣು, ದಣಿದವರಿಗೆ ನೆರಳುಕೊಡುವಂಥ ಬದುಕನ್ನು ನಾವು ಸಾಗಿಸಬೇಕು; ಗಿಡಮರಗಳ ಚಿಗುರು ತಿಂದು ಸುಶ್ರಾವ್ಯವಾಗಿ ಹಾಡುತ್ತಲೇ ಬದುಕುವ, ನಮಗಾಗಿ ಹಾಗೂ ಬೇರೆಯವರಿಗಾಗಿ ಬಾಳುವ ಕೋಗಿಲೆಯಂತೆ ನಾವು ಬಾಳಬೇಕು; ಗಾಳಿಯ ಒತ್ತಡಕ್ಕೆ ಕೆಳಗೆ ಬಿದ್ದರೂ ಅಂಜದೆ ಮರಳಿ ಯತ್ನವ ಮಾಡಿ ಮರವೇರಿ ತನ್ನ ಕಾಯಕ ಮುಂದುವರಿಸುವ ಇರುವೆಯಂತೆ ನಾವು ಜೀವನದಲ್ಲಿ ಯಾವುದಕ್ಕೂ ಧೃತಿಗೆಡದೆ

ಏರುತ್ತಲೇ ಇರಬೇಕು. ಮನುಷ್ಯ ಬರೀ ತಲೆಯಿಂದ ಬದುಕುವುದು ಬೇಡ; ಹೃದಯದಿಂದ ಬದುಕಬೇಕು. ಸಾಧಕನ ಬದುಕಿಗೆ ಸಾವು ಅಂತ್ಯವಾಗಬಹುದು; ಆದರೆ ಆತನ ಸಾಧನೆಗೆ ಎಂದಿಗೂ ಸಾವಿಲ್ಲ. ಎಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುವ ಮೂಲಕ ಒಬ್ಬ 'ನಾಯಕ'ನಾದವರು ಶ್ರೀನಿವಾಸಯ್ಯನವರು. **"ಭವಿಷ್ಯದ ಕುರಿತ ನೈಜ ಉದಾರತೆಯು ವರ್ತಮಾನದಲ್ಲಿರುವ ಎಲ್ಲವನ್ನೂ ನೀಡುವುದರಲ್ಲಿದೆ"** – ಆಲ್ಬರ್ಟ್ ಕಾಮುವಿನ ನುಡಿಗಳಲ್ಲಿ ಶ್ರೀನಿವಾಸಯ್ಯನವರ ಬದುಕಿನ ಪರಿ ಸ್ಪಷ್ಟವಾಗಿ ಗೋಚರಿಸುತ್ತಿದೆ.

"ನೀವು ಯಾವುದೇ ಶ್ರೇಷ್ಠ ಉದ್ದೇಶಕ್ಕಾಗಿ, ಯಾವುದೇ ಅಸಾಮಾನ್ಯ ಕಾರ್ಯಕ್ಕಾಗಿ ಪ್ರೇರಿತರಾದರೆ ನಿಮ್ಮೆಲ್ಲಾ ವಿಚಾರಗಳು ತಮ್ಮ ಬಂಧನಗಳನ್ನು ಮುರಿಯುತ್ತವೆ. ನಿಮ್ಮ ಮನಸ್ಸು ಮಿತಿಗಳನ್ನು ಮೀರುತ್ತವೆ. ನಿಮ್ಮ ಪ್ರಜ್ಞೆಯು ಪ್ರತಿದಿಕ್ಕಿನಲ್ಲಿ ವಿಸ್ತರಿಸುತ್ತದೆ, ನೀವು ನಿಮ್ಮನ್ನು ಹೊಸ, ಶ್ರೇಷ್ಠ ಮತ್ತು ಅದ್ಭುತ ಪ್ರಪಂಚದಲ್ಲಿ ಕಾಣುತ್ತೀರಿ. ಸುಪ್ತಶಕ್ತಿಗಳು, ಧೀ:ಶಕ್ತಿಗಳು ಮತ್ತು ಪ್ರತಿಭೆಗಳು ಜೀವಂತವಾಗುತ್ತವೆ. ನೀವು ಒಮ್ಮೆಯಾದರೂ ಭಾವಿಸಿದ್ದಕ್ಕಿಂತ ಹೆಚ್ಚು ಶ್ರೇಷ್ಠವ್ಯಕ್ತಿಯಾಗುತ್ತೀರೆಂದು ಕಂಡುಕೊಳ್ಳುತ್ತೀರಿ"

– ಪತಂಜಲಿ

ಕವಯಿತ್ರಿ ಎಮಿಲಿ ಡಿಕಿನ್ಸನ್‌ನ ಈ ಸಾಲುಗಳಲ್ಲಿ ನಾವು ಸನ್ಮಾನ್ಯ ಶ್ರೀನಿವಾಸಯ್ಯನವರ ಜೀವನಕ್ರಮವನ್ನು ಸ್ಮರಿಸಿಕೊಂಡರೆ ಸ್ಫೂರ್ತಿಯ ಕಿಡಿಗಳು ನಮ್ಮಲ್ಲಿ ಮೂಡಬಹುದು:

ಒಂದು ಎದೆ ಒಡೆಯುವುದನ್ನು ನಾನು ತಡೆಯಬಹುದಾದರೆ
ನನ್ನ ಬದುಕು ವ್ಯರ್ಥವಲ್ಲ;
ಒಂದು ಜೀವದ ನೋವನ್ನು ಶಮನಮಾಡುವಂತಾದರೆ;
ಅಥವಾ ಒಬ್ಬರ ವೇದನೆಯನ್ನು ಕಮ್ಮಿಮಾಡುವಂತಾದರೆ;
ಅಥವಾ ಅಶಕ್ತ ಗುಬ್ಬಚ್ಚಿಯೊಂದನ್ನು
ಅದರ ಗೂಡಿಗೆ ಮರಳಿಸಲು ಸಹಾಯಮಾಡುವಂತಾದರೆ;
ನನ್ನ ಬದುಕು ವ್ಯರ್ಥವಲ್ಲ!

ಹೊ.ಶ್ರೀನಿವಾಸಯ್ಯನವರು ತಮ್ಮ ಬದುಕಿನಲ್ಲಿ ಪ್ರಭಾವ ಬೀರಿದ ಮಹಾನುಭಾವರನ್ನು ವಿನಮ್ರತೆಯಿಂದ ನೆನೆಯುತ್ತಾ; "ನಾನೊಬ್ಬ ಹಳ್ಳಿಮುಕ್ಕ. ನಾನು ಯಾವ ಧರ್ಮ-ಕರ್ಮ ಸಂಯೋಗವೋ, ಯೋಗಾಯೋಗವೋ ಅನೇಕ ಮಹನೀಯರ ಕೃಪೆಗೆ ಪಾತ್ರನಾದೆ. ಅದನ್ನು ನನ್ನ ಜೀವನದಲ್ಲಿ ಪ್ರಯೋಗ

ಮಾಡಿನೋಡಿದೆ. ಅದು ಸರಿ ಎನಿಸಿತು. ಫಲಿಸಿತು. ಈ ಪ್ರಯೋಗದಲ್ಲಿ ನನ್ನ ಮಡದಿ ಶ್ರೀಮತಿ.ಜಯಲಕ್ಷ್ಮಿಯ ಪಾತ್ರ ದೊಡ್ಡದು. ನನ್ನ ಬದುಕಿನ ದೊಡ್ಡ ಭಾಗದ ಚರಿತ್ರೆಯಲ್ಲಿ ಆಕೆಯ ಸ್ಥಾನ ದೊಡ್ಡದು. ಈ ಇಳಿಗಾಲದಲ್ಲಿ ಆಕೆಯನ್ನು ನೆನೆಯುವುದು ಸಂತೋಷ."

ದೇವರ್ಕಳುದಿಸಿ ಮರೆಯಹರು ! ದೇವತ್ವ ಚಿರ
ಜಾವ ದಿನ ಬಂದು ಪೋಗುವುವು; ಕಾಲ ಚಿರ
ಜೀವದ ವ್ಯಕ್ತಿ ಸಾಯ್ವುದು; ಜೀವಸತ್ವ ಚಿರ
ಭಾವಿಸಾ ಕೇವಲವ – ಮಂಕುತಿಮ್ಮ

ದೇವರುಗಳು ಉದಿಸಿ ಮರೆಯಾದರೂ ದೇವತ್ವ ಚಿರವಾಗಿರುವುದು. ಹೊತ್ತುಗಳು ದಿನ ಬಂದು ಹೋಗುವುವಾದರೂ ಕಾಲ ಚಿರವಾಗಿರುವುದು. ವ್ಯಕ್ತಿಯ ಜೀವಸಾಯುವುದಾದರೂ ಜೀವಸತ್ತ್ವ ಚಿರವಾಗಿರುವುದು.


ತನ್ನ ನೋಡಲಿ ಎಂದು ಕನ್ನಡಿಯು ಕರೆಯುವುದೆ
ತನ್ನಲ್ಲಿ ಜ್ಞಾನವುದಿಸಿದ ಮಹಾತ್ಮನು
ಕನ್ನಡಿಯು ಜಗಕೆ ಸರ್ವಜ್ಞ!

ಇತಿಹಾಸವನ್ನೇ ಪ್ರಭಾವಿಸುವ ಸಾಮರ್ಥ್ಯ ಇರುವುದು ಬೆರಳೆಣಿಕೆಯಷ್ಟು ಜನರಿಗೆ ಮಾತ್ರ. ಆದರೆ ನಮ್ಮಲ್ಲಿ ಪ್ರತಿಯೊಬ್ಬರಿಗೂ ನಮ್ಮದೇ ಆದ ರೀತಿಯಲ್ಲಿ ಸಣ್ಣಸಣ್ಣ ಸಂಗತಿಗಳನ್ನು ಪ್ರಭಾವಿಸುವ ಶಕ್ತಿಯಂತೂ ಇದ್ದೇ ಇದೆ. ಹೊ.ಶ್ರೀನಿವಾಸಯ್ಯನವರ ಬದುಕನ್ನು 'ಸಂದೇಶ'ವ್ನಾಗಿ ಸ್ವೀಕರಿಸುವ ಮುಖೇನ ಕನಿಷ್ಠ ಒಬ್ಬರ ಜೀವನದಲ್ಲಿ ಬದಲಾವಣೆ ತರಬಹುದಲ್ಲವೇ?

ಸ್ಮಿತವಿರಲಿ ವದನದಲಿ, ಕಿವಿಗೆ ಕೇಳಿಸದಿರಲಿ
ಹಿತವಿರಲಿ ವಚನದಲಿ, ಋತವ ಬಿಡದಿರಲಿ
ಮಿತವಿರಲಿ ಮನಸಿನುದ್ವೇಗದಲಿ, ಭೋಗದಲಿ
ಅತಿಬೇಡವೆಲ್ಲಿಯಂ–ಮಂಕುತಿಮ್ಮ

ಎಂಬಂತೆ ಬಾಳಿಬದುಕಿ, ಭೌತಿಕವಾಗಿ ಕಣ್ಮರೆಯಾದರೂ ನಮ್ಮೆಲ್ಲರ ಮಾನಸ ಲೋಕದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿರುವ 'ದಿವ್ಯಾತ್ಮ'ಕ್ಕೆ ಸಹಸ್ರ ಸಹಸ್ರ ಪ್ರಣಾಮಗಳು.

ಫಿಲಿಪ್ಸ್ ಜೇಮ್ಸ್ ಬೇಲಿ – "ನಾವು ಬದುಕುವುದು ಕೃತಿಗಳಲ್ಲಿ; ವರ್ಷಗಳಲ್ಲಲ್ಲ. ವಿಚಾರಗಳಲ್ಲಿ; ಉಸಿರಿನಲ್ಲಲ್ಲ. ಭಾವನೆಗಳಲ್ಲಿ; ಅಂಕಿಗಳಲ್ಲಲ್ಲ. ಎದೆಬಡಿತದಿಂದ ಕಾಲವನ್ನು ಲೆಕ್ಕಿಸಬೇಕು. ಅತ್ಯಂತ ಚಿಂತನೆ, ಅತಿಶ್ರೇಷ್ಠ ಭಾವನೆ, ಅತಿಶ್ರೇಷ್ಠ ಕೃತಿ– ಅಂಥವನೇ ಪೂರ್ಣಜೀವಿ".



ವಿಭೂತಿ ಪುರುಷ – ಡಾ. ಹೊ. ಶ್ರೀ

– ಪಿ. ರಾಮಯ್ಯ

ಕೆಲವೊಮ್ಮೆ ವಿಭೂತಿ ಪುರುಷರಲ್ಲಿ ಹುದುಗಿರುವ ಪ್ರತಿಭೆ ಪ್ರಕಾಶಮಾನವಾಗಲು ಪ್ರಾಪಂಚಿಕ ಬದುಕಿನ ವಿವಿಧ ಸ್ತರಗಳನ್ನು ಹಾದು ಹೋಗಬೇಕಾಗುತ್ತದೆ. ಇತ್ತೀಚೆಗೆ ನಮ್ಮನ್ನು ಅಗಲಿದ ಪ್ರಸಿದ್ಧ ಗಾಂಧೀವಾದಿ ಹೊ. ಶ್ರೀನಿವಾಸಯ್ಯನವರು ಅಂತಹ ಒಬ್ಬ ಬಹುಮುಖದ ಪ್ರತಿಭೆಯ ವಿಭೂತಿ ಪುರುಷನೆಂದು ಹೇಳಬಹುದು.

ಶ್ರೀ ಶ್ರೀನಿವಾಸಯ್ಯನವರನ್ನು ಬಹಳ ಹತ್ತಿರದಿಂದ ಕಂಡವರಲ್ಲಿ ಮತ್ತು ಅವರ ಜೊತೆಗೂಡಿ ಧಾರ್ಮಿಕ ಹಾಗು ಸಾಮಾಜಿಕ ಕಾರ್ಯಗಳಲ್ಲಿ ಹಲವಾರು ವರ್ಷ ತೊಡಗಿಸಿಕೊಂಡವರಲ್ಲಿ ನಾನು ಒಬ್ಬ. ಸಾಮಾನ್ಯ ರೈತ ಕುಟುಂಬದಿಂದ ಬಂದು ಅಂದು ಇಂಜನಿಯರಿಂಗ್ ಪದವೀದರರಾದದ್ದೆ ಒಂದು ದೊಡ್ಡ ಸಾಧನೆ. ಅಷ್ಟು ವಿದ್ಯಾವಂತರಲ್ಲದ, ಆದರೆ ಧರ್ಮ ಬೀರುಗಳಾದ ಕುಟುಂಬದಿಂದ ಬಂದು, ಸರ್ಕಾರಿ ನೌಕರಿಯ ಕೆಳಸ್ಥಾವರದಲ್ಲಿದ್ದ ಸಮೂಹದ ಮಧ್ಯೆ ಶ್ರೀ ಶ್ರೀನಿವಾಸಯ್ಯನವರು ಮಿಂಚಿ ಬಹುಷಃ ಅವರ ಹುಟ್ಟೂರಾದ ಚೌದರಿಕೊಪ್ಪಲು ಮತ್ತು ನಾಗಮಂಗಲ ತಾಲ್ಲೂಕಿಗೆ(ಮಂಡ್ಯ ಜಿಲ್ಲೆ) ಪ್ರಥಮ ಇಂಜಿನಿಯರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಆಗ ಪ್ರತಿ ವರ್ಷ ಅವರ ತಂದೆ ಶ್ರೀ ಹೊನ್ನಪ್ಪನವರು ಪಿತೃ ಪಕ್ಷದಲ್ಲಿ ಬಹಳ ಹತ್ತಿರದವರನ್ನು ಊಟಕ್ಕೆ ಕರೆಯುವ ಸಂಪ್ರದಾಯ ನಡೆಸಿಕೊಂಡು ಬಂದಿದ್ದರು, ಹಲವು ಬಾರಿ ನಾನು ಅವರ ಮಲ್ಲೇಶ್ವರದ ಮನೆಯಲ್ಲಿ ಈ ಭೋಜನ ಕೂಟದಲ್ಲಿ ಸೇರಿದ್ದುಂಟು. ಆಗ ಶ್ರೀನಿವಾಸಯ್ಯನವರು ಒಬ್ಬ ಇಂಜಿನಿಯರ್ ಮತ್ತು ಅವರು ವೃತ್ತಿ ಆರಂಭಿಸಿದ್ದ ಬಿ.ಇ.ಎಂ.ಎಲ್.ನ ರೈಲು ಗಾಡಿಗಳ ತಯಾರಿಕ ಘಟಕದವರ ಕಾರ್ಯಕ್ಷೇತ್ರವೆಂಬ ಭಾವನೆ ಬೆಳದಿದ್ದು, ಅವರಲ್ಲಿ ಹುದುಗಿದ್ದ ಬಹುಮುಖ ಸಾಮರ್ಥ್ಯ ನಮಗೆ ಗೋಚರವಾಗುತ್ತಿರಲಿಲ್ಲ.

ಆದರೆ ಕಾಲಕ್ರಮೇಣ ಅವರ ವ್ಯಕ್ತಿತ್ವ ವಿಕಸನ ಹೊಂದಿತೆಂದು ಹೇಳಬಹುದು. ಈ ರೂಪಾಂತರ ಅವರನ್ನು ಕಂಡಿದ್ದವರಲ್ಲಿ ಆಶ್ಚರ್ಯ ಮೂಡಿಸದೆ ಇರಲಿಲ್ಲ. ಈ ಸರ್ವತೋಮುಖ ಉತ್ಕರ್ಷಕ್ಕೆ ಪ್ರಮುಖ ಕಾರಣ ಕರ್ತರು ಹೆಸರಾಂತ ಗಾಂಧೀವಾದಿ, ಪತ್ರಕರ್ತರು, ಸಾಹಿತಿಗಳು ಮತ್ತು ಬಡವರ ಬಂಧುವಾಗಿದ್ದ ಶ್ರೀ ಸಿದ್ದವನಹಳ್ಳಿ ಕೃಷ್ಣ ಶರ್ಮರು. ಅವರ ಶಿಷ್ಯರಾಗಿ ಅವರ ಪ್ರಭಾವಕ್ಕೆ ಒಳಗಾಗಿ

ಅವರ ಮೂಸೆಯಲ್ಲಿ ಬೆಂದು ಹದವಾದ ಶ್ರೀನಿವಾಸಯ್ಯ ಒಬ್ಬ ಗಾಂಧೀವಾದಿ, ಸಮಾಜಸೇವಕ, ಸಾಹಿತಿ, ಲೇಖಕ ಮತ್ತು ಗಾಂಧೀಜಿ ಜೀವನ, ಆದರ್ಶಗಳ ಮತ್ತು ಸರ್ವೋದಯ ತತ್ವದ ಹರಿಕಾರನಾಗಿ ಖ್ಯಾತಿ ಪಡೆದಿದ್ದಲ್ಲದೆ, ಪಕೃತಿ ಚಿಕಿತ್ಸೆಯ ಜನಪ್ರಿಯತೆಗೆ ಮುಂಚೂಣಿಯ ಸಿಪಾಯಿಯಾಗಿ ದುಡಿದರು. ಈ ಕ್ಷೇತ್ರಗಳಲ್ಲಿ ಸಮರ್ಪಣ ಭಾವದಿಂದ ದುಡಿದು 93 ವರ್ಷ ತುಂಬು ಜೀವನ ನಡೆಸಿ ಅಗಾದ ಜನಪ್ರಿಯತೆಗಳಿಸಿ ನಮ್ಮನ್ನು ಅಗಲಿದರು.

ಕರ್ನಾಟಕದಲ್ಲಿ ಗಾಂಧೀಜಿಯವರ ಆದರ್ಶ ಹಾಗು ಅವರ ತತ್ವಗಳು ಜನಮನದಲ್ಲಿ ಪ್ರಮುಖವಾಗಿ ವಿದ್ಯಾರ್ಥಿ ಸಮೂಹದಲ್ಲಿ ಉಳಿಸಲು ಶ್ರಮಿಸಿದ ಅಗ್ರಗಣ್ಯರಲ್ಲಿ ಶ್ರೀನಿವಾಸಯ್ಯನವರು ಒಬ್ಬರು. ಮೂರು ದಶಕಗಳಿಗೂ ಹೆಚ್ಚು ಕಾಲ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರಾಗಿ ಆ ಸಂಸ್ಥೆಯ ಕಾರ್ಯ ಕಲ್ಪಕ್ಕೆ ಹಗಲಿರುಳು ದುಡಿದು ದೇಶದಲ್ಲೆ ಒಂದು ಪ್ರಮುಖ ಗಾಂಧಿತತ್ವ ಪ್ರಚಾರ ಮತ್ತು ಗಾಂಧಿ ಆದರ್ಶಗಳ ಅಧ್ಯಯನಕ್ಕೆ ಮುಡಿಪಾದ ಕೇಂದ್ರವನ್ನಾಗಿ ಮಾಡಿದರು.

ಶ್ರೀನಿವಾಸಯ್ಯನವರು ತುಂಬಾ ಹಳೆಯದಾಗಿ ಕೆಲವು ಭಾಗಗಳು ಶಿಥಿಲಾವಸ್ಥೆ ತಲುಪಿದ್ದ ಗಾಂಧೀ ಸ್ಮಾರಕ ನಿಧಿ ಭವನವನ್ನು ಆಧುನೀಕರಣಗೊಳಿಸಲು ತೋರಿದ ಆಸಕ್ತಿ ಮತ್ತು ಶ್ರಮವನ್ನು ಹತ್ತಿರದಿಂದ ಕಂಡಿದ್ದೇನೆ. ಕೆಲವೊಮ್ಮೆ ಅವರ ಜೊತೆಯಲ್ಲಿ ಕೈಗೂಡಿಸುವ ಅವಕಾಶ ನನ್ನದಾಗಿತ್ತು. ಹೇಳಬೇಕೆಂದರೆ ಭವನದ ಆಧುನೀಕರಣಕ್ಕೆ ನಾಂದಿಯಾದ್ದು ಅಂದಿನ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ. ನಮ್ಮ ಅವರ ಮನವೊಲಿಸಿ ಈ ಆಧುನೀಕರಣ ಕಾರ್ಯಕ್ಕೆ ಒಂದು ರೂಪ ಕೊಟ್ಟಿದ್ದು.

ಶ್ರೀನಿವಾಸಯ್ಯನವರ ಒಂದು ವಿಶಿಷ್ಟ ಗುಣವೇನೆದರೆ ಯಾವುದಾದರು ಒಂದು ಕೆಲಸವನ್ನು ಅಥವಾ ಯಾವುದಾದರು ಯೋಜನೆಯನ್ನು ಕೈಗೆ ಎತ್ತಿಕೊಂಡರೆ ಸಮರ್ಪಣೆ ಭಾವನೆಯಿಂದ ದುಡಿಯುವುದು, ಯಾವ ಮೂಲದಿಂದ ಸಹಾಯ ದೊರೆಯಬಹುದು ಎಂದರೆ ಅದನ್ನು ಅರಸಿ ಹೋಗುವುದು. ಶ್ರೀ ರಾಮ ಸಹಕಾರಿ ಬ್ಯಾಂಕ್, ಶ್ರೀ ಆಂಜನೇಯ ಸಹಕಾರಿ ಬ್ಯಾಂಕ್, ಶ್ರೀ ರಾಮ ಮಂದಿರ ಟ್ರಸ್ಟ್, ಮಧ್ಯಮವರ್ಗ ಮತ್ತು ಕೆಳವರ್ಗದವರ ಸಹಾಯಕ್ಕಾಗಿ ಕಟ್ಟಿದ ಸಂಸ್ಥೆಗಳಲ್ಲಿ ಕೆಲವು.

ಶ್ರೀ ರಾಮ ಮಂದಿರದ ಟ್ರಸ್ಟ್‌ನ ಒಬ್ಬ ಸದಸ್ಯನಾಗಿ ಬಡವರಿಗಾಗಿ ಟ್ರಸ್ಟ್ ವತಿಯಿಂದ ಕಲ್ಯಾಣ ಮಂಟಪಗಳನ್ನು ನಿರ್ಮಿಸಬೇಕು ಮತ್ತು ಬರುವ ಆದಾಯದ ಸ್ವಲ್ಪ ಭಾಗವನ್ನು ವಿನಿಯೋಗಿಸಿ ಆಸರೆಯಿಲ್ಲದ ವೃದ್ದರಿಗೆ, ಅವರ ಕೊನೆಯ ಕಾಲದಲ್ಲಿ ಒಂದು ವೃದ್ದಾಶ್ರಮದ ಮೂಲಕ ಆಸರೆ ಒದಗಿಸಬೇಕು ಎಂಬ ತೀರ್ಮಾನಕ್ಕೆ ಬಂದೆವು. ಅವುಗಳಿಗೆ ಬೇಕಾದ ಹಣಕೂಡಿಸಲು ಪಟ್ಟ ಶ್ರಮ ನನ್ನ ಕಣ್ಮುಂದೆ ಇದೆ. ಶ್ರೀರಾಮ ಬ್ಯಾಂಕಿನ ಸದಸ್ಯರು ತಮಗೆ ಬರುವ ವಾರ್ಷಿಕ ಡಿವಿಡೆಂಡ್‌ನ್ನು ಪೂರ್ತಿ ಕಲ್ಯಾಣ ಮಂಟಪದ ಕಾರ್ಯಕ್ಕೆ ಬಿಟ್ಟು ಕೊಟ್ಟಿದ್ದು ನನ್ನ ಮನದಲ್ಲಿ ಇನ್ನು ಹಸಿರಾಗಿದೆ.

ಇನ್ನು ನಮ್ಮಗಳ ಮನದಲ್ಲಿ ಅಚ್ಚಳಿಯದೆ ಉಳಿದಿರುವವುದು ಶ್ರೀ ಆದಿ ಚುಂಚನಗಿರಿ ಸಂಸ್ಥಾನ ಮಠದ ಹಿಂದಿನ ಪೀಠಾಧ್ಯಕ್ಷರಾಗಿದ್ದ, ಯುಗ ಪುರುಷ ದಿವ್ಯ ಚೇತನ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಯವರು ದೀರ್ಘ ಕಾಲದ ಪ್ರಥಮ ಭೇಟಿಗೆ ಬೆಂಗಳೂರಿಗೆ ಬಂದಾಗ ಶ್ರೀನಿವಾಸಯ್ಯನವರು ಬೆಂಗಳೂರು ಹಾಗು ಮಲ್ಲೇಶ್ವರದ ಜನತೆಯ ಸಂಪರ್ಕ ಸಾಧನೆಗೆ ಹಗಲಿರುಳು ದುಡಿದವರಲ್ಲಿ ಪ್ರಮುಖರು.

ಅಂದು ನಾವು ಪ್ರಥಮ ಬಾರಿಗೆ ಶ್ರೀ ಕ್ಷೇತ್ರದ ಬಗ್ಗೆ ಅಷ್ಟಾಗಿ ತಿಳಿಯದಿದ್ದ ನೂರಾರು ಕುಟುಂಬಗಳಿಗೆ ಸ್ವಾಮೀಜಿಯವರನ್ನು ಪರಿಚಯಿಸಿ ಶ್ರೀರಾಮ ಮಂದಿರ ಕಲ್ಯಾಣ ಮಂಟಪದಲ್ಲಿ ನಡೆದ ಪಾದಪೂಜೆ ಮೂಲಕ ಮಠದ ಭಕ್ತರ ಸಾಲಿಗೆ ಸೇರ್ಪಡೆ ಮಾಡಿಸಿದ್ದು ಮರೆಯಲಾಗದ ಅನುಭವ. ಶ್ರೀ ಚುಂಚನಗಿರಿ ಮಠದ ಅಭಿವೃದ್ಧಿಯಲ್ಲೂ ಶ್ರೀನಿವಾಸಯ್ಯನವರ ಸೇವೆ ನೆನೆಯುವಂತಹದು.

ಶ್ರೀ ಬಾಲಗಂಗಾಧರನಾಥ ಸ್ವಾಮಿಯವರು ಶ್ರೀರಾಮ ಮಂದಿರಕ್ಕೆ ಬಂದಮೇಲೆ ನಮ್ಮಗಳ ಮೇಲೆ ತುಂಬ ಪ್ರೀತಿಯನ್ನು ತೋರುತ್ತಿದ್ದರು ಮತ್ತು ಟ್ರಸ್ಟಿನ ಯಾವುದೇ ಕಾರ್ಯಕ್ರಮಕ್ಕೆ ತಪ್ಪದೇ ಬರುತ್ತಿದ್ದರು. ಶ್ರೀನಿವಾಸಯ್ಯನವರು ಮಠದ ಯಾವ ಕಾರ್ಯಕ್ರಮಕ್ಕೂ ಸರಿ ಟೊಂಕಕಟ್ಟಿ ನಿಂತಿರುತ್ತಿದ್ದರು. ಶ್ರೀ ಮಠದ "ಆದಿಚುಂಚನಗಿರಿ" ಪತ್ರಿಕೆ ಸ್ಥಾಪನೆಯಲ್ಲಿ ಮತ್ತು ಅನಂತರ ಅದರ ಸಂಪಾದಕರಾಗಿ ದುಡಿದು ಅದು ಶ್ರೀಮಠದ ಧಾರ್ಮಿಕ ಚಟುವಟಿಕೆಗಳ ಪ್ರಚಾರಕ್ಕೆ ಸಾಧನವಾಯಿತು.

ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥರು ಪೀಠಾಧ್ಯಕ್ಷರಾದ ಕೆಲವು ಸಮಯದ ನಂತರ ಕೂಡ ಸ್ವಾಮೀಜಿಯವರ ಒಳ್ಳೆಯ ಭಾವಚಿತ್ರ ಮತ್ತು ಶ್ರೀ ಕ್ಷೇತ್ರದ ಅಧಿ ದೇವತೆ ಕಾಲಭೈರವೇಶ್ವರ ಸ್ವಾಮಿಯ ಚಿತ್ರ ಕೂಡ ಭಕ್ತರಿಗೆ ಸಿಗುತ್ತಿರಲಿಲ್ಲ. ಆಗ ನಾನು ಶ್ರೀನಿವಾಸಯ್ಯನವರು ಬೆಂಗಳೂರಿನಿಂದ ನನಗೆ ಪರಿಚಿತರಿದ್ದ ಹಿರಿಯ ಪತ್ರಿಕಾ ಛಾಯಾಗ್ರಾಹಕ, ಶ್ರೀ ರಾಮಚಂದ್ರ ಸ್ವಾಮಿಯವರನ್ನು ಕರೆದು ಕೊಂಡು ಹೋಗಿ ಸರ್ವಾಲಂಕಾರ ಭೂಷಿತರಾದ ಸ್ವಾಮೀಜಿ ಭಾವ ಚಿತ್ರ ಹಾಗೆಯೆ ಶ್ರೀ ಕಾಲಭೈರವೇಶ್ವರ ಸ್ವಾಮಿ ಚಿತ್ರಗಳನ್ನು ತೆಗೆಸಿದೆವು. ಆ ನಂತರ ನಾನು ಆ ಚಿತ್ರಗಳನ್ನು ಅಚ್ಚು ಹಾಕಿಸಿ ಜಾತ್ರೆಯಲ್ಲಿ ಭಕ್ತರಿಗೆ ಒದಗಿಸಿ ಬಂದ ಹಣ ಮಠಕ್ಕೆ ಸಂದಾಯವಾಯಿತು.

ಪ್ರಕೃತಿ ಚಿಕಿತ್ಸೆ, ಶ್ರೀನಿವಾಸಯ್ಯನವರು ಬಲವಾಗಿ ನಂಬಿದ್ದ ಮತ್ತು ರಾಜ್ಯ ಹಾಗು ರಾಷ್ಟ್ರ ಮಟ್ಟದಲ್ಲಿ ಅದರ ಅಭಿವೃದ್ಧಿಗೆ ಶ್ರಮಿಸಿದ ಪ್ರಮುಖರಲ್ಲಿ ಒಬ್ಬರು. ಪ್ರಕೃತಿ ಜೀವನ ಕೇಂದ್ರ ಮತ್ತು ಪ್ರಕೃತಿ ಚಿಕಿತ್ಸೆಗೆ ಸಂಭಂದಿಸಿದ ಹಲವಾರು ಸಮಿತಿಗಳಲ್ಲಿ ಸಕ್ರಿಯರಾಗಿದ್ದರು. ಎಲ್ಲಕ್ಕೂ ಮಿಗಿಲಾಗಿ ನಾನು ಶ್ರೀನಿವಾಸಯ್ಯ ಕೂಡಿ ಸರ್ಕಾರದ ಮಟ್ಟದಲ್ಲಿ ಅಂದು ಆರೋಗ್ಯ ಮಂತ್ರಿಗಳಾಗಿದ್ದವರ ಸಹಕಾರ ಮತ್ತು ಸಹಾಯ ದೊಂದಿಗೆ ನಾಗಮಂಗಲ ಪಟ್ಟಣದಲ್ಲಿ ಆಧುನಿಕ ಪ್ರಕೃತಿ ಚಿಕಿತ್ಸಾ ಕೇಂದ್ರ

ಸ್ಥಾಪನೆಯಾಗಲು ದುಡಿದೆವು. ಕೇಂದ್ರ ಪ್ರಕೃತಿ ಚಿಕಿತ್ಸಾ ಮಂಡಲಿಯ ಸದಸ್ಯರಾಗಿದ್ದ ಶ್ರೀನಿವಾಸಯ್ಯನವರು ನಾಗಮಂಗಲದ ಕೇಂದ್ರಕ್ಕೆ ಬೇಕಾದ ಹಣವನ್ನು ಮಂಡಲಿಯು ಕೊಡುವಂತೆ ಮಾಡಲು ಯಶಸ್ವಿಯಾಗಿದ್ದರು.

ಬಹಳ ಎತ್ತರಕ್ಕೆ ಬೆಳೆದವರು ತಮಗೆ ಜನ್ಮ ಕೊಟ್ಟ ಕುಗ್ರಾಮಗಳನ್ನು ಮರೆಯುವುದು ಸಾಮಾನ್ಯ ಶ್ರೀನಿವಾಸಯ್ಯ ಮತ್ತು ನಾಗಮಂಗಲ ತಾಲ್ಲೂಕಿನ ಕುಗ್ರಾಮಗಳಿಂದ ಬಂದವರು. ಶ್ರೀನಿವಾಸಯ್ಯನವರಾಗಲಿ ಮತ್ತು ನಾನಾಗಲಿ ನಮ್ಮ ಹಳೆಯ ಬೇರುಗಳನ್ನು ಮರೆತವರಲ್ಲ. ಶ್ರೀನಿವಾಸಯ್ಯನವರು ತಮ್ಮ ಹುಟ್ಟೂರಿನ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ರೂಪಿಸಿದರು. ನಾನು ವಿಧಾನ ಪರಿಷತ್ ಸದಸ್ಯನಾಗಿದ್ದಾಗ ಅವರ ಊರಿಗೆ ರಸ್ತೆ ನಿರ್ಮಾಣ ಮಾಡಿಸಿಕೊಡುವ ಅವಕಾಶ ನನಗೂ ದೊರೆತಿತ್ತು.

ಆ ಭಾಗದಲ್ಲಿ ಚೌದರಿಕೊಪ್ಪಲು ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆ ಪಠಣಕ್ಕೆ ಮೆಚ್ಚಿಗೆ ಪಡೆದಿತ್ತು. ಊರಿನ ಹಿರಿಯರು ಪ್ರತಿದಿನ ಸಂಜೆ ಗ್ರಂಥಪಠಣದ ಪರಿಪಾಠ ಬೆಳೆಸಿಕೊಂಡು ಆ ಊರಿಗೆ ಒಂದು ಸಾಂಸ್ಕೃತಿಕ ಹಿನ್ನೆಲೆಯನ್ನು ಕೊಟ್ಟಿದ್ದರು. ಶ್ರೀನಿವಾಸಯ್ಯನವರು ಅವರ ಹುಟ್ಟೂರನ್ನು ಮಾದರಿ ಗ್ರಾಮವಾಗಿ ಬೆಳೆಸಲು ಕಳೆದ ಕೆಲವು ವರ್ಷಗಳಿಂದ ಶ್ರಮಿಸಿದ್ದರು.

ಆಡು ಮುಟ್ಟಿದ ಸೊಪ್ಪಿಲ್ಲ ಎನ್ನುವ ಗಾದೆಯಂತೆ ಶ್ರೀನಿವಾಸಯ್ಯನವರು ಆಸಕ್ತಿ ತೋರದ ಕ್ಷೇತ್ರವಿರಲಿಲ್ಲ ನಾನು ಒಬ್ಬ ಪತ್ರಕರ್ತನಾಗಿ ಮೆಚ್ಚಿದ್ದು ಅವರ ಸಾಹಿತ್ಯ ಕೃಷಿಯನ್ನು. ಅವರ ಬರವಣಿಗೆ ಸರಳವಾಗಿ ಓದುಗರ ಮನ ಮುಟ್ಟುವಂತೆ ಇರುತ್ತಿತ್ತು. ಅವರು ದೇಶ ವಿದೇಶಗಳಲ್ಲಿ ಕಂಡ ಸಂಸ್ಕೃತಿ, ಜನ ಜೀವನ, ಆ ದೇಶಗಳು ಸಾಧಿಸಿರುವ ಅಭಿವೃದ್ಧಿಯನ್ನು ಪ್ರವಾಸ ಸಾಹಿತ್ಯದ ಮೂಲಕ ಕಣ್ಣಿಗೆ ಕಟ್ಟುವಂತೆ ವರ್ಣಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಅವರ ಲೇಖನಿಗೆ ಸಿಗದಂತ ವಿಷಯವಿರಲಿಲ್ಲ. ಅದರಲ್ಲೂ ಗಾಂಧೀಜಿ ಜೀವನ, ಆದರ್ಶಗಳ ಬಗ್ಗೆ ಬರೆದ ಲೇಖನಗಳು ಹಾಗು ಪುಸ್ತಕಗಳು ಗಾಂಧೀ ಸ್ಮಾರಕ ನಿಧಿ ಸಂಸ್ಥೆಯ ಸರ್ವಕಾಲಿಕ ಆಸ್ತಿಗಳಾಗಿ ಉಳಿದಿವೆ.

ಕೊನೆಯದಾಗಿ ಶ್ರೀನಿವಾಸಯ್ಯನವರು ತಮ್ಮ ದೀರ್ಘ ಪಯಣದ ಕಾಲದಲ್ಲಿ ಕರ್ನಾಟಕದಲ್ಲಿ ಗಾಂಧೀ ವಿಚಾರಧಾರೆ ಬೇರೂರಲು ನಿರಂತರ ಶ್ರಮವಹಿಸಿದ್ದಾರೆ. ಗಾಂಧೀ ಸ್ಮಾರಕ ಭವನ, ಗಾಂಧೀ ತತ್ವಗಳು ಹಾಗು ಅವರ ಜೀವನ, ಆದರ್ಶಗಳನ್ನು ವಿದ್ಯಾರ್ಥಿಗಳಿಗೆ, ಕೃಷಿಕರಿಗೆ, ಜನಸಾಮಾನ್ಯರಿಗೆ ಮನದಟ್ಟು ಮಾಡುವ ಕಾರ್ಯವನ್ನು ನಿರಂತರವಾಗಿ ಮಾಡಿ, ಅಮರರಾಗಿದ್ದಾರೆ.



ಬಹುಶ್ರುತ ಕರ್ಮಯೋಗಿ ಡಾ॥ ಹೊ. ಶ್ರೀನಿವಾಸಯ್ಯ

– ಮಾರ್ಕಂಡಪುರಂ ಶ್ರೀನಿವಾಸ್

ನಾಡುಕಂಡ ಅಪರೂಪದ ಹಿರಿಯ ಚೇತನಗಳಲ್ಲಿ ಡಾ॥ ಹೊ. ಶ್ರೀನಿವಾಸಯ್ಯನವರು ಒಬ್ಬರು. ಇವರದು ಬಹುಮುಖ ವ್ಯಕ್ತಿತ್ವ ವೃತ್ತಿಯಲ್ಲಿ ಇಂಜಿನಿಯರ್ ಆಗಿ ಸ್ವಾತಂತ್ರ್ಯ ಹೋರಾಟಗಾರರಾಗಿ, ವೈದ್ಯರಾಗಿ, ಅಪ್ಪಟ ಗಾಂಧೀವಾದಿಗಳಾಗಿ, ಸೃಜನಶೀಲ ಸಾಹಿತಿಗಳಾಗಿ, ಅನೇಕ ಸಂಘ–ಸಂಸ್ಥೆಗಳ ಪದಾಧಿಕಾರಿಗಳಾಗಿ, ಸಂಘಟಕರಾಗಿ, ಸಲಹೆಗಾರರಾಗಿ ಇವರ ಸೇವೆ ನಾಡಿಗೆ, ದೇಶಕ್ಕೆ ಅಪಾರ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ದೇವಲಾಪುರ ಹೋಬಳಿ ಚೌದರಿ ಕೊಪ್ಪಲಿನಲ್ಲಿ ಶ್ರೀ ಹೊನ್ನಪ್ಪ ಮತ್ತು ಶ್ರೀಮತಿ ತಿಮ್ಮಮ್ಮ ದಂಪತಿಗಳ ಸುಪುತ್ರರಾಗಿ ದಿನಾಂಕ 4–1–1925ರಲ್ಲಿ ಜನಿಸಿದ ಇವರು ಬಿ.ಇ.(ಮೆಕಾನಿಕಲ್) ಎಫ್.ಐ.ಇ., ಎಂ.ಎಸ್.ಇ., ಐ.ವಿ.ಡಿ.ಐ., ಪದವೀಧರರು. ಹಿಂದುಸ್ಥಾನ ವಿಮಾನ ಕಾರ್ಖಾನೆಯಲ್ಲಿ ಡಿಸೈನರ್ ಆಗಿ 1949 ರಲ್ಲಿ ತಮ್ಮ ವೃತ್ತಿ ಜೀವನ ಪ್ರಾರಂಭಿಸಿದ ಶ್ರೀಯುತರು ಹಂತ ಹಂತವಾಗಿ ಮೇಲೇರಿ 1983ರಲ್ಲಿ ಬಿ.ಇ.ಎಂ.ಎಲ್.ನಲ್ಲಿ ಉಪವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿ, ವೃತ್ತಿ ಜೀವನದಿಂದ ನಿವೃತ್ತರಾಗಿರುತ್ತಾರೆ. ಇವರ ಸದರಿ ಸೇವಾವಧಿಯಲ್ಲಿ ರೈಲ್ವೇಕೋಚ್, ಬಸ್‌ಬಾಡಿ, ಅತಿಭಾರವಾದ ಟ್ರೇಲರುಗಳ ಯೋಜನೆ ತಯಾರಿಕೆಯಲ್ಲಿ ಪರಿಣತಿಯನ್ನು ಪಡೆದು, ಆ ಕುರಿತು ಸಂಶೋಧನೆ, ಅಭಿವೃದ್ಧಿಗಳ ಮೇಲ್ವಿಚಾರಣೆಗಳನ್ನು ವಹಿಸಿ ತಮ್ಮದೇ ಆದ ರೀತಿಯಲ್ಲಿ ಹೆಚ್ಚಿನ ಸೇವೆಯನ್ನು ಸಲ್ಲಿಸಿರುತ್ತಾರೆ. ಈ ಸಂಬಂಧವಾಗಿ 1954ರಲ್ಲಿ ಅವರು ಪಶ್ಚಿಮ ಜರ್ಮನಿಯ ಎಲ್.ಹೆಚ್.ಬಿ. ಸಂಸ್ಥೆಯಲ್ಲಿ ಒಂದೂವರೆ ವರ್ಷಕಾಲ ರೈಲು ನಿರ್ಮಾಣದ ತರಬೇತಿ ಯನ್ನು ಪಡೆದಿದ್ದಾರೆ ಮತ್ತು 1957ರಲ್ಲಿ ಪಶ್ಚಿಮ ಜರ್ಮನಿ ಎಂ.ಎ.ಎಸ್. ಕಾರ್ಖಾನೆಯಲ್ಲಿ ಒಂದೂವರೆ ವರ್ಷ ಸಹರಚನೆ ಕೆಲಸ ನಿರ್ವಹಿಸಿದ್ದಾರೆ.

ಬಾಂಗ್ಲಾದೇಶಕ್ಕೆ ಹಾಗೂ ಶ್ರೀಲಂಕಾಕ್ಕೆ ಭೇಟಿನೀಡಿ, ರೈಲುಗಾಡಿಗಳ ರಫ್ತು ಕಾರ್ಖಾನೆಯಲ್ಲಿ ನೆರವಾಗಿದ್ದಾರೆ. 1985ರಲ್ಲಿ ಪಶ್ಚಿಮ ಜರ್ಮನಿಯ ಬರ್ಲಿನ್‌ನಲ್ಲಿ ನಡೆದ ಅಂತರ್‌ರಾಷ್ಟ್ರೀಯ ಶಿಕ್ಷಣ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಆ ನಂತರದಲ್ಲಿ

ಇಟಲಿ, ಜರ್ಮನಿ, ಹಾಲೆಂಡ್, ಫ್ರಾನ್ಸ್, ಇಂಗ್ಲೇಂಡ್, ಅಮೇರಿಕಾ, ಜಪಾನ್, ಚೈನಾ, ಹಾಂಕಾಂಗ್, ಬ್ಯಾಂಕಾಕ್, ಸಿಂಗಾಪುರಗಳಿಗೆ ಭೇಟಿನೀಡಿದ್ದಾರೆ.

ಡಾ॥ ಹೊ. ಶ್ರೀನಿವಾಸಯ್ಯನವರು ಸ್ವಾತಂತ್ರ್ಯ ಹೋರಾಟಗಾರರಾಗಿ ತಮ್ಮದೇ ಆದ ಸೇವೆ ಸಲ್ಲಿಸಿದ್ದಾರೆ. 1942–47 ಅವಧಿಯಲ್ಲಿ ಸಕ್ರಿಯ ಪಾತ್ರವಹಿಸಿ ರಹಸ್ಯ ಪತ್ರಿಕೆಗಳನ್ನು ಪ್ರಕಟಿಸಿ ಹಂಚಿಕೆ ಮಾಡಿದ್ದಾರೆ. 1946ರಲ್ಲಿ ವಂದೇಮಾತರಂ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದಾರೆ. ಜೈಲುವಾಸವನ್ನು ಅನುಭವಿಸಿದ್ದಾರೆ. 1942–50ರಲ್ಲಿ ವಿದ್ಯಾರ್ಥಿಗಳ ಕಾಂಗ್ರೇಸ್ ಮತ್ತು ಯುವ ಕಾಂಗ್ರೇಸ್ ಸಮಿತಿಯ ಸದಸ್ಯರಾಗಿ ಸಕ್ರಿಯಪಾತ್ರವಹಿಸಿ, ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. 1943ರಲ್ಲಿ ಚರಕಾ ಕೇಂದ್ರ ಸ್ಥಾಪನೆ ಮತ್ತು ವಯಸ್ಕರ ಶಿಕ್ಷಣ ಕೇಂದ್ರಗಳ ಸ್ಥಾಪನೆ ಹಾಗೂ ವಿದ್ಯಾರ್ಥಿನಿಲಯ ಸ್ಥಾಪನೆ ಕಾರ್ಯಗಳಲ್ಲಿ ಪ್ರಧಾನ ಪಾತ್ರ ವಹಿಸಿದ್ದಾರೆ. 1943–44ರಲ್ಲಿ ವಿದ್ಯಾರ್ಥಿ ಸ್ವಯಂ ಸೇವಕರಾಗಿ ಆಹಾರ ಹಂಚಿಕೆ ಕಾರ್ಯದಲ್ಲಿ ಸ್ವಯಂ ಸೇವಕರಾಗಿ ದುಡಿದಿದ್ದಾರೆ. ವಿದ್ಯಾರ್ಥಿ ಕಾಂಗ್ರೇಸ್ ಕಾರ್ಯದರ್ಶಿಯಾಗಿ ಗ್ರಾಮ ಸೇವಾ ಶಿಬಿರಗಳನ್ನು ಯಶಸ್ವಿಯಾಗಿ ಏರ್ಪಡಿಸಿದ್ದಾರೆ.

ಡಾ॥ ಹೊ. ಶ್ರೀನಿವಾಸಯ್ಯನವರು 1942ರಲ್ಲಿ ವಿದ್ಯಾರ್ಥಿದೆಸೆಯಲ್ಲಿ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರ ನೇತೃತ್ವದಲ್ಲಿ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘ ಸ್ಥಾಪನೆಮಾಡಿ, ಮಹಾತ್ಮಗಾಂಧೀಜಿ ಅವರ ವಿಚಾರ ಪ್ರಚಾರ ಸೇವೆಗಾಗಿ ಗ್ರಂಥ ಭಂಡಾರ ಸ್ಥಾಪನೆ ಮಾಡಿದ್ದಾರೆ. ಸಮಾಜ ಸೇವೆಗಾಗಿ ಸ್ಥಾಪಿಸಿದ ಸಂಸ್ಥೆಯ ಧರ್ಮದರ್ಶಿ ಮತ್ತು ಗೌರವ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

ದಕ್ಷಿಣ ಭಾರತ ಗೋ ಸೇವಾ ಸಂಘದ ಧರ್ಮದರ್ಶಿ ಮತ್ತು ಗೌರವ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಜನಶ್ರೀ ಟ್ರಸ್ಟಿನ ಸ್ಥಾಪಕರು ಧರ್ಮದರ್ಶಿಯಾಗಿದ್ದು, ಬಡಮಕ್ಕಳ ಶಿಕ್ಷಣಕ್ಕೆ ಆ ಸಂಸ್ಥೆಯ ಮೂಲಕ ನೆರವಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಸಮಿತಿಯ ಸದಸ್ಯರಾಗಿ ಹಾಗೂ 1968–78 ನಾಡೋಜ ಡಾ॥ ಜಿ. ನಾರಾಯಣ ಅವರು ಅಧ್ಯಕ್ಷರಾಗಿದ್ದಾಗ 9 ವರ್ಷಗಳ ಕಾಲ ಸಂಘ–ಸಂಸ್ಥೆಗಳ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು ಪುಸ್ತಕ ಪ್ರಕಾಶನ ಮತ್ತು ಮಾರಾಟಗಾರರ ಸಂಘದ ಉಪಾಧ್ಯಕ್ಷ ರಾಗಿ ಸೇವೆ ಸಲ್ಲಿಸಿದ್ದಾರೆ.

1985ರಿಂದ ಕರ್ನಾಟಕ ಗಾಂಧೀಸ್ಮಾರಕ ನಿಧಿ ಸಂಸ್ಥೆಯಲ್ಲಿ 31 ವರ್ಷಗಳ ಕಾಲ ಗೌರವ ಅಧ್ಯಕ್ಷರಾಗಿ ಹಾಗೂ ದೆಹಲಿ ಕೇಂದ್ರ ಗಾಂಧೀ ಸ್ಮಾರಕ ನಿಧಿಯಲ್ಲಿ 2003 ರಿಂದ 13 ವರ್ಷಗಳ ಕಾಲ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಡಾ॥ ಹೊ. ಶ್ರೀನಿವಾಸಯ್ಯನವರಿಗೂ ನನಗೂ ಸುಮಾರು ನಾಲ್ಕು ದಶಕಗಳಷ್ಟು ಅವಿನಾಭಾವ ಸಂಬಂಧವಿತ್ತು. ನಾನು 1969-70ರ ಕಾಲಕ್ಕೆ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ.(ಆನರ್ಸ್) ಓದಲು ಸೇರಿದಾಗ, ಒಂದೆರಡು ವರ್ಷ ಬೆಂಗಳೂರು ಕೆ.ಆರ್. ರಸ್ತೆಯಲ್ಲಿದ್ದ, ಒಕ್ಕಲಿಗರ ಸಂಘದ ಹಾಸ್ಟಲಿನಲ್ಲಿದ್ದೆ. ಆಗ ಆ ಸಂಸ್ಥೆ ಅಷ್ಟಾಗಿ ಬೆಳೆದಿರಲಿಲ್ಲ. ಆ ಕಾಲಕ್ಕೆ ಇವರ ಬಗ್ಗೆ ಕೇಳಿದ್ದೆ. ನಂತರ ನಾನು 1975ರಲ್ಲಿ ಕನ್ನಡ ಉಪನ್ಯಾಸಕನಾಗಿ ಸರ್ಕಾರಿ ಸೇವೆಗೆ ಸೇರಿದ್ದು, 1980ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಹಾಯಕ ನಿರ್ದೇಶಕನಾಗಿ ನೇಮಕವಾಗಿದ್ದೆ. ಅಂದಿನಿಂದ ಹಿರಿಯರಾದ ಡಾ॥ ಹೊ. ಶ್ರೀನಿವಾಸಯ್ಯ ನವರೊಂದಿಗೆ ನನ್ನ ಬಾಂಧವ್ಯ ಆಳವಾಗಿ ಬೆಳೆಯಿತು. ಇದಕ್ಕೆ ಮುಖ್ಯಕಾರಣ ಅವರು ಸಾಹಿತಿಯೂ ಆಗಿದ್ದು. ಅವರು ಭಾಷೆ ಮತ್ತು ಸಾಹಿತ್ಯಪರವಾದ ಚಟುವಟಿಕೆಗಳಲ್ಲಿ ತಮ್ಮನ್ನು ಕ್ರಿಯಾಶೀಲರಾಗಿ ತೊಡಗಿಸಿಕೊಂಡಿದ್ದರು. ಸುಮಾರು 90 ಕೃತಿಗಳನ್ನು ರಚಿಸಿ ಪ್ರಕಟಿಸಿರುತ್ತಾರೆ. ಈ ಕೃತಿಗಳ ಪೈಕಿ ಕೆಲವು ಇಂಗ್ಲೀಷ್, ತಮಿಳು, ಮಲೆಯಾಳಂ ಮೊದಲಾದ ಭಾಷೆಗಳಿಗೂ ಅನುವಾದ ಗೊಂಡಿವೆ.

ಡಾ॥ ಹೊ. ಶ್ರೀನಿವಾಸಯ್ಯನವರು ಗಾಂಧೀ ಭವನದಲ್ಲಿ ತಮ್ಮ ಅಧಿಕಾರಾವಧಿಯಲ್ಲಿ ನಡೆದ ಬಹುತೇಕ ಕಾರ್ಯಕ್ರಮಗಳಿಗೆ ನನ್ನನ್ನು ಅಕ್ಕರೆಯಿಂದ ಬರಮಾಡಿಕೊಂಡು, ಗಾಂಧೀ ಭವನದಲ್ಲಿ ನನ್ನನ್ನೂ ತಮ್ಮಲ್ಲಿ ಒಬ್ಬನಂತೆ ನೋಡಿಕೊಂಡು ಔದಾರ್ಯಮೆರೆದಿದ್ದಾರೆ. ಹಿರಿಯರಾದ ಅವರೊಂದಿಗಿನ ನನ್ನ ಒಡನಾಟ ನನ್ನ ಜೀವನದಲ್ಲಿ ಬಹಳಷ್ಟು ಚೇತೋಹಾರಿಯಾಗಿದೆ.

ಅನೇಕ ಸಭೆ-ಸಮಾರಂಭಗಳಲ್ಲಿ ನಾನು ಅವರೊಂದಿಗೆ ಭಾಗವಹಿಸುವ ಅವಕಾಶ ನನಗೆ ಲಭಿಸಿದೆ. ನಾನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿದ 'ತೆಲುಗು ಗಜಲು' ಕೃತಿಯನ್ನು (ತೆಲುಗು ಮೂಲಃ ಡಾ॥ ಗಜಲ್ ಶ್ರೀನಿವಾಸ್) ದಿನಾಂಕ: 6-7-2014ರಂದು ಗಾಂಧೀ ಭವನದಲ್ಲಿ ನಡೆದ ಸಮಾರಂಭದಲ್ಲಿ ಬಿಡುಗಡೆ ಮಾಡಿದಾಗ ಸಮಾರಂಭದ ಅಧ್ಯಕ್ಷತೆವಹಿಸಿ ಹರಿಸಿದ್ದಾರೆ. ನನ್ನ ಸಾಹಿತ್ಯ ಚಟುವಟಿಕೆಗಳ ಬಗ್ಗೆ ಹೆಚ್ಚು ಅಕ್ಕರೆಯಿಂದ ಕಾಲಕಾಲಕ್ಕೆ ವಿಚಾರಿಸುತ್ತಾ, ಸಲಹೆ ಪ್ರೋತ್ಸಾಹಗಳನ್ನು ನೀಡುತ್ತಾ ಬಂದಿರುತ್ತಾರೆ. ನಾನು ಗಾಂಧೀಭವನಕ್ಕೆ ಭೇಟಿ ನೀಡಿದಾಗಲೆಲ್ಲಾ ಅವರೊಂದಿಗಿನ ನನ್ನ ಮಾತುಕತೆ ಟೀ ಸೇವನೆಯ ಒಡನಾಟದ ಸವಿನೆನಪನ್ನು ನಾನು ಎಂದೆಂದಿಗೂ ಮರೆಯುವಂತಿಲ್ಲ. ಅವರು ನಿಧನರಾಗುವ ಪೂರ್ವದಲ್ಲಿ ಒಮ್ಮೆ ಜಯದೇವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ನಾನು ದಿನಾಂಕ: 20-1-2017ರಂದು ಸಂಜೆ ಅವರೊಂದಿಗೆ ಒಂದೆರಡು ಗಂಟೆಗಳ ಕಾಲ ಲೋಕಾಭಿರಾಮವಾಗಿ ಮಾತನಾಡುತ್ತಾ ಜತೆಯಲ್ಲಿ ಚಹಾ ಕುಡಿಯುತ್ತಾ

ಕಾಲಕಳೆದಿದ್ದೆ. ಆಗ ಅವರು ಆಸ್ಪತ್ರೆಯಿಂದ ಹೊರಗೆ ಬಂದ ಮೇಲೆ ಬಹಳಷ್ಟು ಕಾರ್ಯಗಳನ್ನು ಮಾಡಬೇಕಾಗಿರುವ ಬಗ್ಗೆ ತಿಳಿಸಿ ತೋರಿಸಿದ ಚೇತೋಹಾರಿ ಉತ್ಸಾಹ ಅವರ ಬಗ್ಗೆ ನನಗೆ ಬೆರಗು ಮೂಡಿಸಿತ್ತು.

ಅಪ್ಪಟ ಗಾಂಧೀವಾದಿಗಳಾದ ಡಾ॥ ಹೊ. ಶ್ರೀನಿವಾಸಯ್ಯನವರು ರಾಷ್ಟ್ರಕವಿ ಕುವೆಂಪು ಅವರ ವಿಶ್ವಮಾನವ ತತ್ತ್ವದ ಅನುಯಾಯಿಗಳೆಂದೇ ಹೇಳಬೇಕು. ಅವರಲ್ಲಿ ದೇಶಭಕ್ತಿ, ಸಾಮಾಜಿಕ ಕಾಳಜಿ, ಮಾನವೀಯತೆ, ದೀನದಲಿತ ಬಗ್ಗೆ ಕಳಕಳಿ, ನಾಡು-ನುಡಿ, ಸಂಸ್ಕೃತಿಗಳ ಬಗ್ಗೆ ಅಭಿಮಾನ ಇತ್ಯಾದಿ ರಕ್ತಗತವಾಗಿ ಮೈಗೂಡಿಸಿ ಕೊಂಡಿದ್ದವು. ಅವರು ತಮ್ಮ ನಿಧನ ನಂತರ ತಮ್ಮ ದೇಹವನ್ನು ಆಸ್ಪತ್ರೆಯೊಂದಕ್ಕೆ ದಾನ ಮಾಡಲು ಬಯಸಿದ್ದಲ್ಲದೆ, ತಮ್ಮ ಶ್ರೀಮತಿಯವರ ನಿಧನದ ನಂತರವೂ ಅವರ ದೇಹವನ್ನು ಅದೇ ಆಸ್ಪತ್ರೆಗೆ ದಾನಮಾಡಿಸಿದ್ದು, ಅವರಲ್ಲಿನ ನಿಸ್ವಾರ್ಥ ತ್ಯಾಗಮನೋಭಾವನೆಯ ಔನ್ನತ್ಯ ಗುಣವನ್ನು ಎತ್ತಿ ಸಾರುತ್ತದೆ.

ಡಾ॥ ಹೊ. ಶ್ರೀನಿವಾಸಯ್ಯನವರು ಸಾಹಿತಿಯಾಗಿ ಮಾತ್ರವಲ್ಲದೆ 46 ವರ್ಷಗಳಿಂದ ಪ್ರಕಟವಾಗುತ್ತಿರುವ ಪ್ರಕೃತಿ ಚಿಕಿತ್ಸೆಯ ಬಗೆಗಿನ ಕನ್ನಡದ ಏಕೈಕ ಪತ್ರಿಕೆ 'ಪ್ರಕೃತಿಜೀವನ', 'ಆದಿಚುಂಚನಗಿರಿ' (ಧಾರ್ಮಿಕ, ಸಾಂಸ್ಕೃತಿಕ, ಕೃಷಿ ಪ್ರಚಾರ ಪತ್ರಿಕೆ), 'ಕರುಣಾರತ್ನ', (ಸಂಸ್ಮರಣ ಸಂಚಿಕೆ) ಮೊದಲಾದವುಗಳ ಸಂಪಾದಕರಾಗಿ ಹಾಗೂ ಪ್ರಕಾಶಕರಾಗಿ ಸೇವೆ ಸಲ್ಲಿಸಿದ್ದಾರೆ.

ಡಾ॥ ಹೊ. ಶ್ರೀನಿವಾಸಯ್ಯನವರು 1953 ಜನಸಾಮಾನ್ಯರಿಗಾಗಿ ಮಲ್ಲೇಶ್ವರ ದಲ್ಲಿ ಸ್ಥಾಪಿಸಿದ ಶ್ರೀರಾಮ ಕೋ-ಆಪರೇಟಿವ್ ಬ್ಯಾಂಕ್‌ನ ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿಯಾಗಿ 13ವರ್ಷ, 1964ರಲ್ಲಿ ಸ್ಥಾಪಿಸಿದ ಶ್ರೀ ಆಂಜನೇಯ ಕೋ-ಆಪರೇಟಿವ್ ಬ್ಯಾಂಕ್‌ನ ಸ್ಥಾಪಕ ಅಧ್ಯಕ್ಷರಾಗಿ ಏಳುವರ್ಷಗಳ ಕಾಲ, ಪ್ರಗತಿ ಕೋ-ಆಪರೇಟಿವ್ ಬ್ಯಾಂಕ್ ಸ್ಥಾಪಕ ಉಪಾಧ್ಯಕ್ಷರಾಗಿ ಎರಡು ವರ್ಷಕಾಲ ಸೇವೆ ಸಲ್ಲಿಸಿದ್ದಾರೆ. ಬಿ.ಇ.ಎಂ.ಎಲ್. ಕಾರ್ಮಿಕರ ಸಲುವಾಗಿ ಸ್ಥಾಪಿಸಿದ ಬಿ.ಇ.ಎಂ.ಎಲ್. ಎಂಪ್ಲಾಯಿಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಯ ಸ್ಥಾಪಕ ಅಧ್ಯಕ್ಷರಾಗಿ 2 ವರ್ಷಕಾಲ ಸೇವೆಸಲ್ಲಿಸಿ 800 ಸೈಟ್‌ಗಳನ್ನು ಹಂಚಿಕೆ ಮಾಡಿ ಎಲ್ಲರಿಗೂ ಮನೆ ಕಟ್ಟಿಸಿಕೊಟ್ಟಿದ್ದಾರೆ. ಲೋಕ ಪಾವನಿ ಕ್ರೆಡಿಟ್ ಸಹಕಾರ ಸೊಸೈಟಿಯ ಸ್ಥಾಪಕ ರಲ್ಲಿಯೂ ಒಬ್ಬರಾಗಿದ್ದಾರೆ. ಹೀಗೆ ಶ್ರೀಯತರು ಸಹಕಾರ ಸಂಸ್ಥೆಗಳ ಮೂಲಕ ಅನನ್ಯ ಸೇವೆ ಸಲ್ಲಿಸಿರುತ್ತಾರೆ.

ಡಾ॥ ಹೊ. ಶ್ರೀನಿವಾಸಯ್ಯನವರು ವಿಶೇಷವಾಗಿ ಪ್ರಕೃತಿ ಚಿಕಿತ್ಸೆಗೆ ಸಲ್ಲಿಸಿರುವ ಸೇವೆ ಅಪಾರ. ಪ್ರಕೃತಿ ಜೀವನ ಕೇಂದ್ರ (1969ರಲ್ಲಿ) ಸ್ಥಾಪಿಸಿ, ಅದರ ಅಧ್ಯಕ್ಷರಾಗಿ ಪುಸ್ತಕಭಂಡಾರ, ಆರೋಗ್ಯಕ್ಕಾಗಿ ತರಬೇತಿ ತರಗತಿಗಳು, ಸಲಹೆ ಪ್ರದರ್ಶನ

ಕಾರ್ಯಗಳ ಮೂಲಕ ಅಮೂಲ್ಯ ಸೇವೆ ಮಾಡಿದ್ದಾರೆ. ಈ ಕುರಿತು ನಾಡಿನೆಲ್ಲೆಡೆಯಲ್ಲಿ ಮಾತ್ರವಲ್ಲದೆ, ಹೊರನಾಡಿನಲ್ಲೂ ತರಗತಿ, ಶಿಬಿರಗಳನ್ನು ವ್ಯವಸ್ಥೆಮಾಡಿದ್ದಾರೆ. ಕರ್ನಾಟಕ ಸರ್ಕಾರದ ಕರ್ನಾಟಕ ಪ್ರಕೃತಿಯ ಮತ್ತು ಯೋಗ ಚಿಕಿತ್ಸಾ ಸಲಹಾ ಸಮಿತಿಯ ಸದಸ್ಯರಾಗಿ (1972 ರಿಂದ 2005ರವರೆಗೆ), 2005 ರಿಂದ 2 ವರ್ಷಕಾಲ ಅದರ ಅಧ್ಯಕ್ಷರಾಗಿ ಸೇವೆಸಲ್ಲಿಸಿರುತ್ತಾರೆ. ಹೀಗೆ ಖಾಸಗಿ ಮತ್ತು ಸರ್ಕಾರದ ಹಲವಾರು ಸಂಘಟನೆ ಮತ್ತು ಕಾರ್ಯಕ್ರಮಗಳಲ್ಲಿ ಪದಾಧಿಕಾರಿಯಾಗಿ, ಸದಸ್ಯರಾಗಿ, ಸಲಹೆಗಾರರಾಗಿ ಸಕ್ರಿಯವಾಗಿ ಪಾಲ್ಗೊಂಡು ಶ್ಲಾಘನೀಯ ಸೇವೆ ಸಲ್ಲಿಸಿದ್ದಾರೆ.

ಡಾ॥ ಹೊ. ಶ್ರೀನಿವಾಸಯ್ಯನವರು ಚೌದರಿ ಕೊಪ್ಪಲು ಶ್ರೀರಾಮ ಯುವ ಜನ ಸೇವಾ ಸಂಸ್ಥೆ (ರಿ) ಸ್ಥಾಪಕ ಅಧ್ಯಕ್ಷರಾಗಿ, ಪೀಪಲ್ಸ್ ಟ್ರಸ್ಟ್‌ನ ಧರ್ಮದರ್ಶಿ ಅಧ್ಯಕ್ಷರಾಗಿ ಹಲವಾರು ಜನೋಪಯೋಗಿ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಗ್ರಾಮೀಣ ಸೇವೆ ಮಾಡಿದ್ದಾರೆ. ನಾಗಮಂಗಲ ತಾಲ್ಲೂಕು ಚೌದ್ರಿ ಕೊಪ್ಪಲು ಗ್ರಾಮವನ್ನು ಗಾಂಧೀಭವನ ದತ್ತು ತೆಗೆದುಕೊಂಡು ಕೆಲವು ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಗಾಂಧೀಕನಸಿನ ಗ್ರಾಮ ರಚನೆಯ ಸೇವೆ ಮಾಡಿ ಆದರ್ಶಗ್ರಾಮ ರಚನೆ ಮಾಡಿರುತ್ತಾರೆ. ಡಾ॥ ಹೊ. ಶ್ರೀನಿವಾಸಯ್ಯನವರು ಶಿಕ್ಷಣ ಕ್ಷೇತ್ರಕ್ಕೂ ತಮ್ಮನ್ನು ಕ್ರಿಯಾಶೀಲವಾಗಿ ತೊಡಿಗಿಸಿ ಕೊಂಡು ಸೇವೆಸಲ್ಲಿಸಿದ್ದಾರೆ.

ಡಾ॥ ಹೊ. ಶ್ರೀನಿವಾಸಯ್ಯನವರು ಶ್ರೀರಾಮ ಮಂದಿರ ಟ್ರಸ್ಟ್ (ಸ್ಥಾಪನೆ 1928) ಗೌರವ ಅಧ್ಯಕ್ಷರಾಗಿ, ಶ್ರೀರಾಮ ಕಲ್ಯಾಣ ಮಂಟಪ ಮತ್ತು ವೃದ್ಧಾಶ್ರಮದ(ಸ್ಥಾಪನೆ 1976) ಗೌರವ ಅಧ್ಯಕ್ಷರಾಗಿ, ಯಲಹಂಕ ಬಾಗಿಲು ಆಂಜನೇಯಸ್ವಾಮಿ ದೇವಾಲಯದ ಕಾರ್ಯನಿರ್ವಾಹಕ ಧರ್ಮದರ್ಶಿಯಾಗಿ, ಶ್ರೀ ಆದಿ ಚುಂಚನ ಗಿರಿ ಎಜುಕೇಷನ್ ಟ್ರಸ್ಟ್‌ನ ಟ್ರಸ್ಟಿಯಾಗಿ, ಬೆಂಗಳೂರು ಒಕ್ಕಲಿಗರ ಸಂಘದ ಆಡಳಿತ ಸಮಿತಿಯಲ್ಲಿ 10 ವರ್ಷಕಾಲ ಸದಸ್ಯರಾಗಿ ಹಾಗೂ 10 ವರ್ಷಕಾಲ ಖಜಾಂಚಿಯಾಗಿ ಸಮರ್ಥವಾಗಿ ಸಂಘದ ಸರ್ವ ತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಬಿ.ಐ.ಟಿ. ಕಾಲೇಜುಸ್ಥಾಪನೆ ಮತ್ತು ವೈಧ್ಯಕೀಯ ಕಾಲೇಜು ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ಮಹಾನ್ ವ್ಯಕ್ತಿತ್ವದ ಅಮರ ಜೀವಿ ಡಾ॥ ಹೊ. ಶ್ರೀನಿವಾಸಯ್ಯನವರನ್ನು ಸ್ಮರಿಸಿ ಅವರ ಕುರಿತಾಗಿ ಒಂದು ಸಂಸ್ಮರಣ ಗ್ರಂಥವನ್ನು ಕರ್ನಾಟಕ ಗಾಂಧೀ ಸ್ಮಾರಕ ನಿಧಿ (ರಿ) ವತಿಯಿಂದ ಹೊರತರುತ್ತಿರುವುದು ತುಂಬಾ ಶ್ಲಾಘನೀಯ ವಿಚಾರ.

ಡಾ॥ ಹೊ. ಶ್ರೀನಿವಾಸಯ್ಯನವರ ಆತ್ಮಕ್ಕೆ ಭಗವಂತ ಚಿರಶಾಂತಿನೀಡಲಿ, ಅವರ ಆದರ್ಶ ಎಲ್ಲರಿಗೂ ಮಾರ್ಗ ದರ್ಶನವಾಗಲಿ, ಅವರ ಸವಿನೆನಪು ಎಲ್ಲರಲ್ಲಿ ಸದಾ ಉಳಿಯಲಿ.



ಡಾ. ಹೊ. ಶ್ರೀನಿವಾಸಯ್ಯ – ಹಿರಿಯ ಚಿಂತಕರು, ಗಾಂಧೀವಾದಿಗಳು ಹಾಗೂ ಆದರ್ಶ ಪ್ರಾಯರು

– ಡಾ: ಬಿ.ಎಸ್. ಶ್ರೀಕಂಠ

ಡಾ. ಹೊ. ಶ್ರೀನಿವಾಸಯ್ಯ ಬಗ್ಗೆ ಬರೆಯುವುದು ಬಹಳ ಕಷ್ಟಕರವಾದ ಸಂಗತಿ ಎಂದೇಹೇಳಬಹುದು. ಅವರ ನಾನಾ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಯುವ ಜನತೆಗೆ ಆದರ್ಶ ಪ್ರಾಯಾರಾದಂತಹ ವ್ಯಕ್ತಿ. ಚಿಂತಕ, ಅಪ್ಪಟ ಗಾಂಧೀವಾದಿ, ಸಮಾಜಸೇವಕ, ಸ್ವಾತಂತ್ರ್ಯಹೋರಾಟಗಾರ, ಇಂಜಿನಿಯರ್ ಮತ್ತು ಲೇಖಕರೂ ಆದ ಶ್ರೀನಿವಾಸಯ್ಯನವರು ನಮ್ಮೆಲ್ಲರಿಗೂ ಸ್ಫೂರ್ತಿದಾಯಕರು ಹಾಗೂ ಮಾರ್ಗದರ್ಶಕರು. ಅವರ ಬಗ್ಗೆ ನನ್ನ ಅನಿಸಿಕೆಗಳನ್ನು ಹಂಚಿಕೊಳ್ಳುವುದು ನಿಜವಾಗಿಯೂ ಸೌಭಾಗ್ಯವೆಂದು ತಿಳಿದಿದ್ದೇನೆ.

2014 ರ ಪೂರ್ವದಲ್ಲಿ ಡಾ. ಹೊ. ಶ್ರೀನಿವಾಸಯ್ಯ ಅವರನ್ನು ದೂರದಿಂದ ಕಂಡ ನನಗೆ, 2014ರಲ್ಲಿ ನನ್ನ ಸ್ನೇಹಿತರು ಮತ್ತು ಕಾಲೇಜಿನಲ್ಲಿ ಸಹೊದ್ಯೋಗಿ ಮಿತ್ರರಾದಂತ ಪ್ರೊ. ಜಿ.ಬಿ ಶಿವರಾಜು ಅವರ ಮೂಲಕ ಶ್ರೀನಿವಾಸಯ್ಯನವರನ್ನು ಹತ್ತಿರದಿಂದ ಕಾಣುವ ಮತ್ತು ಅವರೊಂದಿಗೆ ಹಲವಾರು ವಿಷಯಗಳ ಬಗ್ಗೆ ಚರ್ಚಿಸುವ ಭಾಗ್ಯ ನನಗೆ ದೊರೆಯಿತು. ತೊಂಬತ್ತು ವಸಂತಗಳನ್ನು ನೋಡಿದ್ದ ಶ್ರೀನಿವಾಸಯ್ಯನವರ ಕಾರ್ಯನಿಷ್ಠೆ, ಉತ್ಸಾಹ, ಗಾಂಧೀತತ್ವಗಳನ್ನು ಯುವಜನತೆಗೆ ತಲುಪಿಸಬೇಕೆಂಬ ಹಂಬಲ, ಪ್ರಾಮಾಣಿಕತೆ, ಪ್ರಾಂಶುಪಾಲರ ಹುದ್ದೆಯಿಂದ ನಿವೃತ್ತಿ ಹೊಂದಿದ್ದ ನನಗೆ ಸ್ಫೂರ್ತಿದಾಯಕವಾಯಿತು. ಅವರೊಂದಿಗೆ ಕೂಡಿ ನಾನು ಗಾಂಧೀ ತತ್ವಗಳನ್ನು ಪಸರಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕೆಂಬ ಹಂಬಲ ದುಪ್ಪಟ್ಟಾಯಿತೆಂದರೆ ಅತಿಶಯೋಕ್ತಿಯ ಮಾತಲ್ಲ.

ವೃತ್ತಿಯಲ್ಲಿ ಇಂಜಿನಿಯರರಾದರೂ, ಆಂಗ್ಲ ಮತ್ತು ಕನ್ನಡ ಸಾಹಿತ್ಯಲೋಕಕ್ಕೆ 80ಕ್ಕೂ ಹೆಚ್ಚು ಗ್ರಂಥಗಳನ್ನು ಕೊಡುಗೆಯಾಗಿ ಕೊಟ್ಟಿರುತ್ತಾರೆ. ಬಹಳ ಚಿಕ್ಕವಯಸ್ಸಿನಲ್ಲಿಯೇ(09–12ವರ್ಷಗಳಲ್ಲಿ) ಗಾಂಧೀಜಿಯವರ ತತ್ವಗಳಿಗೆ ಆಕರ್ಷಣೆಗೊಂಡ ಶ್ರೀನಿವಾಸಯ್ಯನವರು, 12ನೇ ವಯಸ್ಸಿಗೆ ಖಾದಿ ಬಟ್ಟೆಗಳನ್ನು ಧರಿಸಲು ಪ್ರಾರಂಭಿಸಿದರು. ಅವರು ಬರೆದಿರುವ 'ನಾ ಕಂಡ ಜರ್ಮನಿ' ಪುಸ್ತಕ ಇಂಗ್ಲೀಷ್ ಹಾಗೂ ಹಲವಾರು ಭಾಷೆಗಳಿಗೆ ಭಾಷಾಂತರಗೊಂಡಿದೆ, ಜೊತೆಗೆ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿದ್ದ ಅಂಶ ನಿಜವಾಗಿಯೂ

ಪ್ರಶಂಸನೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದಿರುವ ಸಾಹಿತ್ಯವಾಗಿದೆ.

ವಿದ್ಯಾರ್ಥಿ ದಿನಗಳಿಂದಲೂ ಶಿಸ್ತಿನಿಂದ ಬದುಕುವುದನ್ನು ರೂಢಿಸಿಕೊಂಡು ಕೊನೆ ಉಸಿರುವವರೆಗೂ ಪಾಲಿಸಿದಂತಹ ಅಪರೂಪದ ವ್ಯಕ್ತಿ ಶ್ರೀನಿವಾಸಯ್ಯನವರು. ಅವರ ಶಿಸ್ತಿನ ಜೀವನ ಸೇವಾದಳಕ್ಕೆ ಸೇರುವಂತೆ ಮಾಡಿತು. ಶ್ರೀಯುತರಿಗೆ ತಮ್ಮ 9ನೇ ವಯಸ್ಸಿನಲ್ಲಿ ಗಾಂಧೀಜಿಯವರನ್ನು ನೋಡುವ, 21ನೇ ವಯಸ್ಸಿನಲ್ಲಿ ಮದ್ರಾಸಿನಲ್ಲಿ ನಡೆದಂತಹ ಶಿಬಿರದಲ್ಲಿ ಅವರ ಜೊತೆ ಮೂರುದಿನಗಳು ಕಳೆಯುವ ಅವಕಾಶ ದೊರೆತದ್ದು ನನ್ನ ಸೌಭಾಗ್ಯವೆಂದು ಹಲವು ಬಾರಿ ಹೇಳಿದ್ದನ್ನು ನಾನು ಕೇಳಿದ್ದೇನೆ. 1942ರ ನಂತರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧೀಜಿವರ ಕರೆಗೆ ಓಗೊಟ್ಟು ಸಕ್ರಿಯರಾಗಿ ತೊಡಗಿಸಿಕೊಂಡರು. ಬ್ರಿಟಿಷ್ ಸರ್ಕಾರದ ವಿರುದ್ಧ ರಹಸ್ಯವಾಗಿ ಪತ್ರಿಕೆಗಳ ಪ್ರಕಟಣೆಗೆ ಮತ್ತು ಹಂಚಿಕೆ, ಕೈಬಾಂಬ್ ಇಡುವುದು, ಬೆಂಕಿಹಚ್ಚುವುದು ಮೊದಲಾದ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದೆ ಎಂದು ಒಂದು ಸಂದರ್ಭದಲ್ಲಿ ನನ್ನೊಡನೆ ಹಂಚಿಕೊಂಡ ಸಂದರ್ಭ ಜ್ಞಾಪಕಕ್ಕೆ ಬರುತ್ತದೆ. ಅವರು ಹೇಳಿದ ಒಂದು ವಿಷಯ ನನ್ನ ಮನಸ್ಸಿನಲ್ಲಿ ಆಳವಾಗಿ ಉಳಿದಿದೆ. ಬ್ರಿಟಿಷರು ಪಿರಿಬರುತ್ತಿದ್ದ ಕುದುರೆಗಳು ಜಾರಿ ಬೀಳಲಿ ಎಂಬ ಉದ್ದೇಶದಿಂದ ಮಲೇಶ್ವರಂ ರಸ್ತೆಗಳಲ್ಲಿ ರಾಗಿ ಚೆಲ್ಲುತ್ತಿದ್ದರಂತೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ. ತದನಂತರ ಶ್ರೀನಿವಾಸಯ್ಯನವರು ಸಮಾಜ ಸೇವೆ, ಅಸ್ಪೃಶ್ಯತಾನಿವಾರಣೆ, ಗ್ರಾಮ ಸೇವೆ, ಗಾಂಧಿ ತತ್ವಗಳನ್ನು ಯುವ ಜನತೆಗೆ ತಿಳಿಸಿಕೊಡುವ ಮಹತ್ಕಾರ್ಯ, ದಲಿತೋದ್ಧಾರ, ಶಿಕ್ಷಣ, ಪ್ರಕೃತಿಚಿಕಿತ್ಸೆ, ಬರಹ, ಹೀಗೆ ಹಲವಾರು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡು ಆದರ್ಶ ಪ್ರಾಯರಾದರು. 32 ವರ್ಷಗಳಕಾಲ ಸತತವಾಗಿ ಕರ್ನಾಟಕ ಗಾಂಧಿಸ್ಮಾರಕ ನಿಧಿಯ ಅಧ್ಯಕ್ಷರಾಗಿ ತಮ್ಮ ಮನೆಗಿಂತಲೂ ಹೆಚ್ಚಿನ ಮುತುವರ್ಜಿ ತೋರಿಸಿ ಗಾಂಧೀಭವನದ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದಂತಹ ಮಹಾನ್ ಪುರುಷ.

ಶ್ರೀನಿವಾಸಯ್ಯನವರಿಗೆ ಮಕ್ಕಳನ್ನು ಕಂಡರೆ ಬಹಳ ಇಷ್ಟ. ಪ್ರತಿಯೊಂದು ಭಾಷಣದಲ್ಲಿ ನಾನು ಭೇಟಿ ನೀಡಿದ ಪ್ರತಿಯೊಂದು ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ನನ್ನನ್ನು ಪ್ರೀತಿಯಿಂದ ತಾತ ಎಂದು ಕರೆಯುತ್ತಾರೆ ಎಂದು ಬಹಳ ಹೆಮ್ಮೆಯಿಂದ ಹೇಳುತ್ತಿದ್ದರು. ಭಾಷಣದ ಕೊನೆಯಲ್ಲಿ ಎಲ್ಲರೂ ಕೂಡಿ 'ಜೈ ಜಗತ್' ಎಂದು ಘೋಷಣೆಯನ್ನು ಜೋರಾಗಿ ಕೂಗುವಂತೆ ಮಾಡುತ್ತಿದ್ದರು. ಇಂತಹ ಅಸಮಾನ್ಯ ಅಪರೂಪದ ವ್ಯಕ್ತಿಯ ಜೊತೆಯಲ್ಲಿ ಪರಸ್ಪರ ಮಾತನಾಡುವ ಅವಕಾಶ ದೊರೆತಿದ್ದು ನನ್ನ ಜೀವನದ ಪುಣ್ಯ. ಇವರ ಕಾರ್ಯನಿಷ್ಠೆ, ಸರಳತೆ, ಸೌಜನ್ಯತೆ, ಸ್ವಾರ್ಥರಹಿತಸೇವೆ, ಪರಶುದ್ಧಜೀವನ, ಯುವ ಪೀಳಿಗೆಗೆ ಆದರ್ಶ ವಾಗಲೆಂದು ಹಾರೈಸುತ್ತೇನೆ.



“ಹೀಗಿದ್ದರು ಡಾ॥ ಹೊ. ಶ್ರೀ ಅವರು”

– ಇಂದಿರಾ ಕೃಷ್ಣಪ್ಪ

ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಸುಮಾರು ಮೂರು ದಶಕಗಳ ಕಾಲ ಅವಿಶ್ರಾಂತವಾಗಿ ಶ್ರಮಿಸಿದ ಡಾ॥ ಹೊ. ಶ್ರೀನಿವಾಸಯ್ಯ ಅವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರಂತೆ ದೇಶ ಕಟ್ಟುವ ಕೆಲಸದಲ್ಲಿ ತೊಡಗಿರುವವರೆಲ್ಲರಿಗೂ ಬಹು ದೊಡ್ಡ ಮಾದರಿಯಾಗಿದ್ದಾರೆ. ಗ್ರಾಮೀಣ ಬಡ ಕುಟುಂಬದ ಸಾಮಾನ್ಯ ಬಾಲಕನೊಬ್ಬ ಪ್ರತಿಷ್ಠಿತ ಗಾಂಧೀಭವನದ ಅಧ್ಯಕ್ಷನಾಗುವ ಹಂತಕ್ಕೆ ಏರಿದ ಪರಿ ಮತ್ತು ರಾಜ್ಯ ಸರ್ಕಾರದ ಗಾಂಧಿ ಸೇವಾ ಪ್ರಶಸ್ತಿಗೆ ಭಾಜನರಾಗುವ ಎತ್ತರಕೇರಿದ ಯಶೋಗಾಥೆ ಯುವಜನರಿಗೆ ಸ್ಫೂರ್ತಿಯ ಕಥನ ಬಡತನಕ್ಕೆ ಭಾಗದ ಅವರ ತಾಯಿಯ ಧೀಮಂತ ವ್ಯಕ್ತಿತ್ವ ಡಾ॥ಹೊ.ಶ್ರೀನಿವಾಸಯ್ಯ ಅವರನ್ನು ಈ ರಾಷ್ಟ್ರದ ಗೌರವಾನ್ವಿತ ವ್ಯಕ್ತಿಯಾಗಿ ಬೆಳೆಸಿದ್ದನ್ನು ನಾವು ಕಾಣಬಹುದು.

ಅವರು ಜೀವನದುದ್ದಕ್ಕೂ ಹಲವು ಪ್ರಯೋಗಗಳಿಗೆ ತಮ್ಮನ್ನು ಒಡ್ಡಿಕೊಳ್ಳುತ್ತಾ, ಪ್ರಯೋಗದ ಫಲಿತಗಳನ್ನು ಸಮಾಜದಲ್ಲಿ ಹಂಚುತ್ತಾ, ಸಮುದಾಯಗಳೊಂದಿಗೆ ತಾವೂ ಬೆಳೆದವರು. ಸರ್ವೆ ಸಾಮಾನ್ಯವಾಗಿ ವೈದ್ಯಕೀಯ, ತಾಂತ್ರಿಕ ಶಿಕ್ಷಣ ಪಡೆದವರು, ಸಾಮಾಜಿಕ ಜೀವನದಲ್ಲಿ ತೊಡಗಿಸಿಕೊಳ್ಳುವುದು ತೀರಾ ಅಪರೂಪವಾದುದ್ದು. ಹೀಗಾಗಿ ತಾಂತ್ರಿಕ ಶಿಕ್ಷಣ ಪಡೆದರೂ, ಸಮಾಜಮುಖಿ ಜೀವನಕ್ಕೆ ತೆರೆದು ಕೊಂಡ ಅವರ ಬದುಕು ವಿಶಿಷ್ಟವಾದುದಾಗಿದೆ. ಡಾ॥ ಹೊ. ಶ್ರೀಯವರು ಇಂಜಿನಿಯರಿಂಗ್ ಪದವಿಗಳಿಸುವ ಪೂರ್ವದಲ್ಲಿಯೇ ಅಂದರೆ ವಿದ್ಯಾರ್ಥಿಯಾದಾಗಿನಿಂದಲೂ ಬ್ರಿಟಿಷ್ ಆಡಳಿತದ ವಿರೋಧಿ ಭಾವವನ್ನು ಹೊಂದಿದವರಾಗಿದ್ದರಿಂದಲೇ ಅವರಿಗೆ ಗಾಂಧೀಜಿಯವರ “ಸ್ವದೇಶಿ” ಹೋರಾಟ ಬಹುವಾಗಿ ಆಕರ್ಷಿಸಿತ್ತು. ಹನ್ನೆರಡು ವರ್ಷದ ಬಾಲಕ ಶ್ರೀನಿವಾಸಯ್ಯನವರು ಗಾಂಧೀಜಿಯವರನ್ನು ಕಂಡಾಗ ಉಂಟಾದ ಅತ್ಯುತ್ಸಾಹದ ಮಹದಾನಂದವನ್ನು ಎಲ್ಲರೊಡನೆ ಹಲವಾರು ಬಾರಿ ಹಂಚಿಕೊಳ್ಳುತ್ತಿದ್ದರು. ಸೇವಾಶ್ರಮದ ಶಿಬಿರದಲ್ಲಿ ಗಾಂಧೀಜಿಯವರ ಒಡನಾಟ ಲಭ್ಯವಾಗಿದ್ದು ಅವರ ಸತ್ಯ,ಅಹಿಂಸೆ ಮತ್ತು ಸರಳ ಜೀವನಗಳು ಬಾಲಕನ ಮೇಲೆ ತೀವ್ರ ಪ್ರಭಾವ ಬೀರಿದ್ದನ್ನು ಆ ಆದರ್ಶಗಳು “ಬದುಕ ಬದಲಿಸಿದ ಕ್ಷಣ”ಗಳೆಂದು ನೆನಪಿಸಿಕೊಳ್ಳುತ್ತಿದ್ದರು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭೂಗತ ಪತ್ರಿಕೆಗಳನ್ನು ಗುಪ್ತವಾಗಿ, ಹೋರಾಟಗಾರರಿಗೆ ತಲುಪಿಸುತ್ತಿದ್ದದ್ದು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಿಗೆ ಪತ್ರ-ಕರಪತ್ರ ಸಂದೇಶಗಳನ್ನು ರವಾನಿಸುತ್ತಿದ್ದದ್ದು ಹಿರಿಯ ಸ್ವಾತಂತ್ರ್ಯ ಹೋರಾಟ ಗಾರರಾದ ಹೆಚ್.ಎಸ್. ದೊರೆಸ್ವಾಮಿ, ಡಾ॥ ಹೆಚ್. ನರಸಿಂಹಯ್ಯ, ವಿ.ಎನ್. ರೆಡ್ಡಿ, ಕೆ.ಜಿ. ಸತ್ಯನಾರಾಯಣಶೆಟ್ಟಿ, ರಂ.ಶ್ರೀಮುಗುಳಿ, ಹೆಚ್.ಕೆ. ಸುಬ್ಬರಾವ್, ಅ.ನ. ಸುಬ್ಬರಾವ್, ಬಿ. ಕಾಮಾಕ್ಷಮ್ಮ, ರುಮಾಲೆಚನ್ನಬಸವಯ್ಯ, ಕುಂತಳಸೇತುರಾವ್, ಶಿವಪ್ಪಬಸಪ್ಪವೆಲ್ಲೂರ್, ಡಿ. ರಾಮಮೂರ್ತಿ, ಎಸ್.ಕೆ. ರಾಮಾಚಾರ್ ಇನ್ನೂ ಮುಂತಾದವರುಗಳ ಒಡನಾಟದ ಚಿತ್ರಗಳನ್ನು ಅವರ ಅನೇಕ ಕೃತಿಗಳಲ್ಲಿ ದಾಖಲಿ ಸಿರುವುದನ್ನು ಓದುತ್ತಿದ್ದರೆ ರೋಮಾಂಚನವಾಗುತ್ತದೆ ಮತ್ತು ನಾವಿಂದು ಸ್ವತಂತ್ರ ರಾಷ್ಟ್ರದಲ್ಲಿ ನೆಮ್ಮದಿಯಾಗಿರಲು ಅವರೆಲ್ಲರ ತ್ಯಾಗ-ಬಲಿದಾನಗಳೇ ಪ್ರಮುಖ ಕಾರಣವೆಂಬುದನ್ನು ಜ್ಞಾಪಿಸುತ್ತದೆ.

ಡಾ॥ಹೊ.ಶ್ರೀನಿವಾಸಯ್ಯನವರು ಇಂಜಿನಿಯರಿಂಗ್ ವೃತ್ತಿಯಲ್ಲಿ ಸಾರ್ಥಕ ಸೇವಕರಾಗಿ, ಸಹಕಾರ ತತ್ವ ಪಾಲಕನಾಗಿ ಹಲವಾರು ಸಹಕಾರ ಸಂಘಗಳನ್ನು ಸ್ಥಾಪಿಸಿ ಸಾವಿರಾರು ಜನರ ನಿರುದ್ಯೋಗದ ಸಮಸ್ಯೆಯನ್ನು ಪರಿಹರಿಸಿದ್ದಾರೆ; ಆರ್ಥಿಕ ಮುಗ್ಗಟನ್ನು ಪರಿಹರಿಸಿದ್ದಾರೆ; ಹಿಂದುಳಿದ ಸಮುದಾಯದವರ ಶಿಕ್ಷಣಕ್ಕೆ ನೆರವಾಗಿದ್ದಾರೆ.

ನುಡಿದಂತೆ ನಡೆದ, ನಡೆದಂತೆ ನುಡಿದ ಡಾ॥ ಹೊ. ಶ್ರೀ ಅವರು ಪ್ರಕೃತಿ ಚಿಕಿತ್ಸೆ ವಿಧಾನವನ್ನು ಅಭ್ಯಸಿಸಿದವರು ಮತ್ತು ತಮ್ಮ ಮೇಲೆ ಅವುಗಳನ್ನು ಪ್ರಯೋಗಿಸಿ ಕೊಳ್ಳುತ್ತಾ ಆರೋಗ್ಯಕರ ಜೀವನ ವಿಧಾನವನ್ನು ಮಾದರಿಯಾಗಿ ನಮ್ಮ ಮುಂದೆ ಇಟ್ಟಿದ್ದಾರೆ. “Healthy Mind Leads To Healthy Body” ಎಂಬ ಘೋಷವಾಕ್ಯ ಅವರ 93 ವರ್ಷಗಳ ಅನುಕರಣೀಯ ವ್ಯಕ್ತಿತ್ವವನ್ನು ನಮ್ಮ ಮುಂದೆ ತೆರೆದಿಡುತ್ತದೆ. ಹಾಗೆಯೇ ಪರಿಸರವಾದಿಯಾದ ಅವರು ದೇಶದ, ಜಲ ನೆಲ, ವಾಯು, ಪ್ರಕೃತಿಸಂಪತ್ತು, ಪರಿಸರ ಮಾಲಿನ್ಯಗಳ ಕುರಿತಾಗಿ ಚಿಂತಿಸಿದವರು. ಕುಡಿಯುವ ನೀರಿನ ಬಗ್ಗೆ ಅವರು ಎತ್ತಿದ ಪ್ರಶ್ನೆಗಳು ಸವಾಲುಗಳು ವರ್ತಮಾನದ ಜಲ ಸಮಸ್ಯೆಯ ಚಿತ್ರಣವನ್ನೇ ನಮ್ಮ ಮುಂದೆ ತೆರೆದಿಡುತ್ತದೆ. “ಎಲ್ಲೆಲ್ಲೂ ನೀರು ಆದರೆ ಕುಡಿಯಲು ನೀರಿಲ್ಲ” “21ನೇ ಶತಮಾನದ ಕೊನೆಯಲ್ಲಿ ನೀರಿನ ಸಮರ ಕಾದಿದೆ” “ಈಗಾಗಲೇ ನೀರಿನ ಸಮರ ಹೊಗೆಯಾಡುತ್ತಿದೆ” “ತೈಲವಿಲ್ಲದೆ ನಾವು ಜೀವಸಬಹುದು, ಆದರೆ ನೀರಿಲ್ಲದೆ ಜೀವಿಸಲಾರೆವು ಎಚ್ಚರಿಕೆ ಇರಲಿ” ಎಂದೂ ಭಾರತದಲ್ಲಿ ನೀರಿನ ದುರುಪಯೋಗ, ಅಧಿಕ ಬಳಕೆ, ಅವೈಜ್ಞಾನಿಕ ಬಳಕೆಯ ವಿವರಗಳನ್ನು ಮಂಡಿಸುತ್ತಾ ನೀರಿನ ವೈಜ್ಞಾನಿಕ ವಿಧಾನದ ಬಳಕೆ, ಜಲಮರು

ಪೂರಣ, ಮಳೆನೀರು ಸಂಗ್ರಹ, ಕೆರೆಕಟ್ಟೆಗಳ ಅಭಿವೃದ್ಧಿ, ಕೃಷಿ ವಿಧಾನಗಳು ಮತ್ತು ಇಸ್ರೇಲ್ ಮಾದರಿ ಜಲಸಂಪತ್ತು ಇತ್ಯಾದಿ ವಿಚಾರಗಳನ್ನು ವಿಸ್ತಾರವಾಗಿ ತಿಳಿಸಿದ್ದಾರೆ.

ವಿದ್ಯಾಭ್ಯಾಸಕ್ಕಾಗಿ ಅವರು ಎದುರಿಸಿದ ಸಮಸ್ಯೆಗಳು ತನ್ನ ಸುತ್ತಲಿನ ಸಮಾಜದ ಮಕ್ಕಳಿಗೆ ಎದುರಾಗಬಾರದೆಂದು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದ್ದರು. ಪಿಠೋಪಕರಣಗಳ ವಿತರಣೆ, ಶುಲ್ಕ ಪಾವತಿ, ಸಮವಸ್ತ್ರ ಹಂಚಿಕೆ ಇತ್ಯಾದಿ ನೆರವನ್ನು ಒದಗಿಸುತ್ತಾ ಬಡ ಸಮುದಾಯದ ಮಕ್ಕಳು ಶಿಕ್ಷಣ ವಂಚಿತರಾಗುವುದನ್ನು ತಡೆದಿದ್ದಾರೆ. ಶಿಕ್ಷಣವೇ ನಮ್ಮ ದೇಶದ ಮಕ್ಕಳನ್ನು ಸತ್ಪ್ರಜೆಗಳನ್ನಾಗಿಸುತ್ತದೆ ಎಂದು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುತ್ತಾ, ಎಳೆ ಮನಸ್ಸುಗಳು ಗಾಂಧೀಜಿ, ವಿನೋಬಾಬಾವೆ, ಅವರನ್ನು ಅರ್ಥೈಸಿಕೊಳ್ಳಬೇಕಾಗಿದೆ ಎಂದು ಗಾಂಧೀಭವನದ ಮುಖಾಂತರ ಮಕ್ಕಳನ್ನು ತಲುಪುವ ಯೋಜನೆಗಳನ್ನು ಹಮ್ಮಿಕೊಂಡರು. ಸರ್ಕಾರದ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಗಳನ್ನು ಗಾಂಧೀಭವನದ ಸಹಭಾಗಿತ್ವದೊಂದಿಗೆ ಶಾಲಾ ಕಾಲೇಜು ಮಕ್ಕಳಿಗೆ ತಲುಪಿಸುವ ಬಹುದೊಡ್ಡ ಕಾರ್ಯಕ್ರಮವನ್ನು ಕೈಗೆತ್ತಿಕೊಂಡರು. “ಶಾಲೆಯಿಂದ ಶಾಲೆಗೆ ಕಾಲೇಜಿನಿಂದ ಕಾಲೇಜುಗಳಿಗೆ ಗಾಂಧಿಯೆಂಬ” ಘೋಷ ವಾಕ್ಯವಾಗಿ ಹೊಸ ಸ್ಫೂರ್ತಿಯನ್ನು ಈ ಯೋಜನೆಗೆ ತಂದು ಕೊಟ್ಟಿದೆ. ಆದ್ದರಿಂದಲೇ ಸುಮಾರು 80ಕ್ಕೂ ಹೆಚ್ಚು ಗಾಂಧಿ ಅಧ್ಯಯನ ಕೇಂದ್ರಗಳು ಕಾಲೇಜುಗಳಲ್ಲಿ ಸ್ಥಾಪನೆಯಾಗಿವೆ. ಸಾಪ್ತಾಹಿಕ, ಮಾಸಿಕ, ಪಾಕ್ಷಿಕ-ವಿದ್ಯಾರ್ಥಿ ಶಿಬಿರಗಳು ಗ್ರಾಮೀಣ ಪರಿಸರದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಗಾಂಧಿ ವಿಚಾರ ಸಂಸ್ಕಾರ ಪರೀಕ್ಷೆಗಳನ್ನು ನಡೆಸಲಾಗುತ್ತಿದ್ದು, ಉತ್ತೀರ್ಣರಾದ ಮಕ್ಕಳಿಗೆ ಸರ್ಟಿಫಿಕೇಟ್‌ಗಳನ್ನು ಕೊಡಲಾಗುತ್ತಿದೆ. ಗಾಂಧೀಜಿಯವರ ಜೀವನ-ಸಾಧನೆ, ತತ್ವ ವಿಚಾರಗಳು, ಹೋರಾಟಗಳು, ಗಾಂಧಿ ಚಿಂತನೆಗಳ ಗ್ರಂಥಗಳು, ಕಿರುಹೊತ್ತಿಗೆಗಳನ್ನು ಮುದ್ರಿಸುವುದು, ಪ್ರದರ್ಶಿಸುವುದು, ಪ್ರಚಾರ ಮಾಡುವ ಜವಾಬ್ದಾರಿಯನ್ನು ಗಾಂಧೀಭವನ ನಿರ್ವಹಿಸುತ್ತಿದೆ. ಗಾಂಧೀಭವನದ ಮತ್ತೊಂದು ಮಹಾತ್ವಾಕಾಂಕ್ಷೆ ಯೋಜನೆ ಎಂದರೆ ಗಾಂಧಿ ಮ್ಯೂಸಿಯಂ ಸ್ಥಾಪನೆ, ಮತ್ತು ವೀಕ್ಷಣೆಗೆ ಮುಕ್ತ ಅವಕಾಶ ಇವು ಡಾ॥ಹೊ.ಶ್ರೀಯವರ ದೂರಗಾಮಿ ಚಿಂತನಾ ಕ್ರಮದ ನಿದರ್ಶನಗಳಾಗಿವೆ.

ಅವರು ದಿನಾಂಕ 10.9.2012ರಲ್ಲಿ ಗಾಂಧೀಭವನದಲ್ಲಿ ನಡೆದ ವಿಶ್ವವಿದ್ಯಾನಿಲಯದ ಕುಲಪತಿಗಳು ಮತ್ತು ಶಿಕ್ಷಣ ತಜ್ಞರ ಸಭೆಯಲ್ಲಿ ಗೌರವಾನ್ವಿತ ಗೌರ್ನರ್ ಅವರ ಸಮ್ಮುಖದಲ್ಲಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಾ “ಗಾಂಧೀಜಿಯುವರ ಅಹಿಂಸಾ ಮಾರ್ಗವೇ, ಇಂದಿಗೂ ವಿಶ್ವದ ವಿಚಿದ್ರಕಾರಿ ಸಮಸ್ಯೆಗಳಿಗೆ ಪರಿಹಾರವಾಗಿದೆ.” ಎಂದು ಕರೆಯಿತ್ತರು. ವಿಶ್ವವಿದ್ಯಾಲಯಗಳಲ್ಲಿ ಗಾಂಧೀಭವನ ಸ್ಥಾಪನೆ, ಕಾಲೇಜು ಪಠ್ಯಗಳಲ್ಲಿ ಗಾಂಧೀಜಿ ತತ್ವ-ಚಿಂತನೆಗಳ

ಅಳವಡಿಕೆ ವಿದ್ಯಾರ್ಥಿಗಳು ವಾರಕ್ಕೊಂದಾವರ್ತಿ ಖಾದಿ ಉಡುಪು ತೊಡುವಿಕೆ ಇನ್ನು ಮುಂತಾದ ನೀತಿ ನಡಾವಳಿಗಳನ್ನು ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಲು ಕುಲಪತಿಗಳಲ್ಲಿ ಕೋರಿದ್ದರು.

ಗಾಂಧೀಜಿ ಅವರ ಸ್ವದೇಶಿ ತತ್ವವನ್ನು ಅಕ್ಷರಶ: ಡಾ|| ಹೊ. ಶ್ರೀ ಅವರು ಪಾಲಿಸಿದ್ದಾರೆ. ಅರಿವು ಮೂಡಿದಾಗಿನಿಂದ ಖಾದಿಗೆ ಮಾರು ಹೋದ ಡಾ||ಹೊ.ಶ್ರೀ. ಅವರು ತಾವೇ ಚರಕದಲ್ಲಿ ನೂಲು ತೆಗೆದು ಖಾದಿ ಬಟ್ಟೆ ತಯಾರಿಸಿ ಮನೆ ಮನೆಗೆ ಮಾರಾಟ ಮಾಡಿದ್ದಾರೆ. ಖಾದಿ ಮಂದಿರಗಳನ್ನು ಪ್ರಾರಂಭಿಸಿದ್ದಾರೆ. ಗಾಂಧೀಭವನದಲ್ಲಿ ಗಾಂಧೀಜಿಯವರ ಚರಕದ ಮಾದರಿಗಳನ್ನು ತರಿಸಿ ಮಕ್ಕಳಲ್ಲಿ ಸ್ವದೇಶಿ ಉಡುಪು ಧರಿಸಲು ಪ್ರೇರಣೆ ನೀಡಿದ್ದಾರೆ. ಕರ್ನಾಟಕದ ಈಗಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ.ಸಿದ್ಧರಾಮಯ್ಯನವರು ಚರಕದಲ್ಲಿ ನೂಲು ತೆಗೆಯುವ ಇಚ್ಛೆಯನ್ನೂ ಕಾರ್ಯಗತ ಮಾಡಿದ್ದೂ ಅಲ್ಲದೆ ಅವರು ಅಜೀವ ಪರ್ಯಂತ ಖಾದಿ ಧರಿಸಲು ಪ್ರೇರಣೆ ನೀಡಿದ್ದಾರೆ.

ಪ್ರಸ್ತುತ ಗಾಂಧೀಭವನದ ಕಂಬಗಳು ಅವರ ಆಶಯಗಳನ್ನು ಹೊತ್ತು ನಿಂತಿವೆ. ಗೋಡೆಗಳು ಅವರ ಮಾತುಗಳನ್ನೇ ಪಿಸುಗುಡುತ್ತವೆ. ಗಾಂಧೀಭವನದ ಅಧ್ಯಕ್ಷರಾಗುವವರು ಹೇಗಿರಬೇಕೆಂಬುದಕ್ಕೆ ಸಾಕಾರ ಸ್ವರೂಪವಾಗಿ ಡಾ|| ಹೊ. ಶ್ರೀ ಯವರು ನಮ್ಮ ಮುಂದಿದ್ದಾರೆ. ನಿಸ್ವಾರ್ಥ, ಪ್ರಾಮಾಣಿಕ, ಸ್ವದೇಶಿ, ಡಾ|| ಹೊ. ಶ್ರೀ ಯವರನ್ನು ಹಲವಾರು ಪ್ರಶಸ್ತಿಗಳು ಅರಸಿ ಬಂದಿವೆ. ಆ ಎಲ್ಲಾ ಪ್ರಶಸ್ತಿಗಳು, ಫಲಕಗಳು, ಫಲಗಳು, ಧನ ಸಂಪತ್ತು ಮತ್ತು ಗ್ರಂಥ ಸಂಪತ್ತನ್ನು ಸಂಸ್ಥೆಗಳ ಸಾಮಾಜಿಕ ಕಾರ್ಯಗಳಿಗೆ ದಾನವಾಗಿ ನೀಡಿ ದಾನ ಶೂರ ಕರ್ಣನೇ ಆಗಿದ್ದಾರೆ. ಕಟ್ಟ ಕಡೆಗೆ ದೇಹವನ್ನೂ ದಾನಮಾಡಿ ಮಹಾನ್ ಚೇತನ ಜೀಮೂತವಾಹನನ ಪರಂಪರೆಯ ವಾರಸುದಾರರೇ ಆಗಿದ್ದಾರೆ.

ಗಾಂಧೀಭವನದಲ್ಲಿ 2013ರಲ್ಲಿ ನಡೆದ ಗಾಂಧಿ ಜಯಂತಿಯಲ್ಲಿ ಭಾಗವಹಿಸಿದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ.ಸಿದ್ಧರಾಮಯ್ಯನವರು, ಸಚಿವರುಗಳಾದ ಮಾನ್ಯ ಶ್ರೀ.ಹೆಚ್.ಕೆ.ಪಾಟೀಲ್ ಮತ್ತು ಶ್ರೀಮತಿ ಉಮಾಶ್ರೀ ಅವರ ಸಮ್ಮುಖದಲ್ಲಿ ಅಧ್ಯಕ್ಷೀಯ ಭಾಷಣ ಮಾಡುತ್ತಾ ಸರ್ಕಾರದ ನೆರವನ್ನು ಸ್ಮರಿಸುತ್ತಾ ಗಾಂಧೀಭವನದ ಕಾರ್ಯ ಯೋಜನೆಗಳನ್ನು ವಿವರಿಸುತ್ತಾ ಈ ಕೆಳಕಂಡ ಕಾರ್ಯಕ್ರಮಗಳನ್ನು ಸರ್ಕಾರವೇ ಮಾಡಬೇಕೆಂದು ಒತ್ತಾಯಿಸಿದರು. ಅವುಗಳೆಂದರೆ

1.ಜಿಲ್ಲೆಗೊಂದು ಗಾಂಧೀಭವನ.

2.ಪೂರ್ವ ಪ್ರಾಥಮಿಕದಿಂದ – ಕಾಲೇಜು ಶಿಕ್ಷಣದಲ್ಲಿ ಗಾಂಧೀಜಿ ವಿಚಾರ ಗಳನ್ನು ಪಠ್ಯ ಪುಸ್ತಕದಲ್ಲಿ ಅಳವಡಿಕೆ.

3.ಶಿಕ್ಷಣ ಸಂಸ್ಥೆಗಳಲ್ಲಿ ಗಾಂಧಿ ಅಧ್ಯಯನ ಕೇಂದ್ರ ಸ್ಥಾಪಿಸುವುದು.

4.ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗದವರು ವಾರಕೊಮ್ಮೆಯಾದರೂ ಕಡ್ಡಾಯವಾಗಿ ಖಾದಿ ಉಡುಪು ಧರಿಸುವುದು.

5.ಅತ್ಯಾಧುನಿಕ ಗಾಂಧಿ ಮ್ಯೂಸಿಯಂ ಸ್ಥಾಪನೆ.

6.ಗಾಂಧಿ ಜಯಂತಿಯನ್ನು ಸರ್ಕಾರದ ರಜಾ ದಿನವನ್ನಾಗಿಸದೆ ಎಲ್ಲಾ ಸಂಘ-ಸಂಸ್ಥೆಗಳಲ್ಲಿ ಗಾಂಧಿ ದಿನಾಚರಣೆ ಮಾಡುವುದು.

ಈ ಎಲ್ಲಾ ಬೇಡಿಕೆಗಳು ಕಾರ್ಯಗತವಾಗುವ ಸುಸಂದರ್ಭಗಳನ್ನು ಅವರು ಕಾಣಲಾಗಲಿಲ್ಲ. ಆದರೆ ಮೇಲಿನ ಅವರ ಕೆಲವು ಬೇಡಿಕೆಗಳು ಅನುಷ್ಠಾನಗೊಳ್ಳುವ ಹಂತದಲ್ಲಿವೆ. ಅವುಗಳನ್ನು ಪೂರ್ಣಗೊಳಿಸುವ ಮತ್ತು ಉಳಿದ ಕೋರಿಕೆಗಳನ್ನು ಶೀಘ್ರವಾಗಿ ಜಾರಿಗೊಳಿಸುವ ಹೊಣೆಗಾರಿಕೆ ಸರ್ಕಾರ ಮತ್ತು ನಮ್ಮೆಲ್ಲರ ಮೇಲಿದೆ ಎಂದು ಭಾವಿಸಿದ್ದೇನೆ.



ಹೊ. ಶ್ರೀನಿವಾಸಯ್ಯ : ಒಂದು ಸಾರ್ಥಕ ನೆನಪು

– ಎನ್.ಆರ್. ವಿಶುಕುಮಾರ್

ಮಹಾತ್ಮ ಗಾಂಧೀಜಿಯವರ ಚಿಂತನೆಗಳು ಅವರ ತವರುನಾಡು ಭಾರತದಲ್ಲಿಯೇ ಮಸುಕಾಗುತ್ತಿರುವ ಕಾಲಘಟ್ಟದಲ್ಲಿ ಇಂದು ನಾವಿದ್ದೇವೆ. ಆದರೆ ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಮರಳುಗಾಡಿನಲ್ಲಿನ ಓಯಸಿಸ್‌ನಂತೆ ಗಾಂಧಿ ಚಿಂತನೆಗಳಿಗೆ ಮರುಜೀವ ತುಂಬುವ ಕಾರ್ಯ ನಮ್ಮ ಕರ್ನಾಟಕದಲ್ಲಿ ಆಗುತ್ತಿರುವುದು ಹೆಮ್ಮೆಯಸಂಗತಿ. ರಾಜ್ಯದ ಮೂವತ್ತು ಜಿಲ್ಲೆಗಳಲ್ಲಿ ಗಾಂಧೀಜಿ ಯವರ ನೆನಪನ್ನು ಚಿರಸ್ಥಾಯಿಗೊಳಿಸಲು ಗಾಂಧಿಭವನಗಳನ್ನು ನಿರ್ಮಿಸುವ ಕಾರ್ಯ ಕರ್ನಾಟಕ ಸರ್ಕಾರದಿಂದ ಆಗುತ್ತಿರುವುದು ನಮ್ಮ ಹೆಮ್ಮೆಗೆ ಕಾರಣ.

ಗಾಂಧೀಜಿ ಹುಟ್ಟಿದ ನಾಡು ಗುಜರಾತ್ ನಲ್ಲಿಯೇ ಸಾಧ್ಯವಾಗದಿರುವ ಈ ಸಾಧನೆ ಕರ್ನಾಟಕದಲ್ಲಿ ಹೇಗೆ ಆಯಿತು ಎನ್ನುವ ಕುತೂಹಲದ ಎಳೆ ಹಿಡಿದು ಹೊರಟರೆ ಅದು ಹೊ. ಶ್ರೀನಿವಾಸಯ್ಯನವರ ಸನಿಹಕ್ಕೆ ಸಾಗಿ ನಿಲ್ಲುತ್ತದೆ. ಅದು 2016–17ರ ಕರ್ನಾಟಕ ಆಯವ್ಯಯ ರಚನೆಯ ಸಿದ್ದತಾ ಕಾರ್ಯಗಳು ನಡೆಯುತ್ತಿದ್ದ ಸಮಯ. ಅದರ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಗಾಂಧಿಭವನದ ಅಧ್ಯಕ್ಷರಾಗಿದ್ದ ಹೊ. ಶ್ರೀನಿವಾಸಯ್ಯನವರ ನೆನಪು ಮಾಡಿಕೊಂಡು ಪ್ರತಿ ಜಿಲ್ಲೆಯಲ್ಲಿ ಗಾಂಧೀಭವನ ನಿರ್ಮಿಸುವ ಅವರ ಮನವಿಯನ್ನು ಒಪ್ಪಿ ಆಯವ್ಯಯದಲ್ಲಿ ಸೇರಿಸುವಂತೆ ಸೂಚಿಸಿದರು. ಈ ಭವನದ ನಿರ್ಮಾಣವನ್ನು ಯಾವ ಇಲಾಖೆ ಮಾಡಬೇಕು ಎನ್ನುವ ಚರ್ಚೆ ನಡೆದು ಅಂತಿಮವಾಗಿ ಗಾಂಧಿ ವಿಚಾರಧಾರೆಗಳನ್ನು ಪ್ರಚುರಪಡಿಸಲು ಸಮನ್ವಯ ಇಲಾಖೆಯಾಗಿ ನಾಮಕರಣಗೊಂಡಿರುವ ವಾರ್ತಾಇಲಾಖೆಯ ಮೂಲಕ ಜಿಲ್ಲೆಗಳಲ್ಲಿ ಗಾಂಧಿಭವನಗಳನ್ನು ನಿರ್ಮಿಸಬಹುದು ಎನ್ನುವ ವಾರ್ತಾಇಲಾಖೆಯ ಸಲಹೆ ಒಪ್ಪಿತವಾಯಿತು. ಅಂತೆಯೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರತಿ ಜಿಲ್ಲೆಯಲ್ಲಿ ಗಾಂಧಿಭವನ ನಿರ್ಮಿಸುವುದಾಗಿ 2016–17ರ ಆಯವ್ಯಯ ಭಾಷಣದಲ್ಲಿ ಘೋಷಿಸಿದರು.

ಈಗ ತಲಾ ಮೂರು ಕೋಟಿ ರೂಗಳ ವೆಚ್ಚದಲ್ಲಿ ರಾಜ್ಯದ 30 ಜಿಲ್ಲೆಗಳಲ್ಲಿ ಗಾಂಧಿಭವನ ನಿರ್ಮಾಣ ಕಾರ್ಯಕ್ಕೆ ಪೂರಕ ಚಟುವಟಿಕೆಗಳು ನಡೆದಿವೆ. ಇದರ

ಶ್ರೇಯಸ್ಸು ಹೊ. ಶ್ರೀನಿವಾಸಯ್ಯನವರಿಗೆ ಸಲ್ಲಬೇಕು ಎನ್ನುವ ಕಾರಣಕ್ಕಾಗಿ ಈ ವಿಷಯವನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಆಯವ್ಯಯದಲ್ಲಿ ಈ ಯೋಜನೆ ಘೋಷಣೆಯಾದ ಮರುದಿನವೇ ಶ್ರೀನಿವಾಸಯ್ಯನವರು ಮುಖ್ಯಮಂತ್ರಿಗಳ ನಿವಾಸಕ್ಕೆ ತೆರಳಿ ಅವರಿಗೆ ಅಭಿನಂದನೆ ಸಲ್ಲಿಸಿದರು. ಇಳಿವಯಸ್ಸಿನ ನಾನಾ ತೊಂದರೆಗಳಿದ್ದರೂ ಸಹ ಲೆಕ್ಕಿಸದೆ ವಾರ್ತಾಇಲಾಖೆಗೂ ಬಂದು ಈ ಯೋಜನೆಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಹೇಳಿದರು. ಈ ಘಟನೆ ಗಾಂಧಿ ಕಾರ್ಯಗಳ ಹಿಂದೆ ಬೆನ್ನಬಿದ್ದು ಓಡಾಡಿ ಅದು ಕಾರ್ಯಗತವಾದ ನಂತರ ಸಂಬಂಧಿಸಿದವರಿಗೆ ಕೃತಜ್ಞತೆ ಸಲ್ಲಿಸುವ ಶ್ರೀನಿವಾಸಯ್ಯನವರ ದೊಡ್ಡ ಗುಣಕ್ಕೆ ಹಿಡಿದ ಕೈಗನ್ನಡಿ.

ಕರ್ನಾಟಕದಲ್ಲಿ ಮಹಾತ್ಮ ಗಾಂಧೀಜಿ ಚಿಂತನೆಗಳಿಗೆ ಮರುಜೀವ ನೀಡಿದ ಸಾಧಕದಲ್ಲಿ ಹೊ. ಶ್ರೀನಿವಾಸಯ್ಯ ಅವರದ್ದು ಪ್ರಮುಖ ಹೆಸರು. ಸತತವಾಗಿ 30 ವರ್ಷಗಳಿಗೂ ಹೆಚ್ಚು ಕಾಲ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸಂಸ್ಥೆಯ ಅಧ್ಯಕ್ಷರಾಗಿ ಅವರು ಮಾಡಿರುವ ಸೇವೆ ಅನನ್ಯ. ಗಾಂಧೀಜಿ ಚಿಂತನೆಗಳನ್ನು ಸಮಾಜಕ್ಕೆ ಪ್ರಚುರ ಪಡಿಸುವಲ್ಲಿ ಅವರ ಕೊಡುಗೆ ಅಪಾರ. ಅದರಲ್ಲೂ ವಿಶೇಷವಾಗಿ ಯುವ ಸಮುದಾಯಕ್ಕೆ ಗಾಂಧೀಜಿಯವರ ಜೀವನ ಸಾಧನೆಗಳ ಮಾಹಿತಿಯನ್ನು ತಲುಪಿಸುವಲ್ಲಿ ಇವರು ಹಲವರಿಗೆ ಪ್ರೇರಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಇವರು ಕರ್ನಾಟಕದ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಈ ಸಂಸ್ಥೆಯನ್ನು ಜನಪ್ರಿಯಗೊಳಿಸಿದಷ್ಟೆ ಅಲ್ಲ. ಬೆಂಗಳೂರು ನಗರದ ಕುಮಾರಕೃಪ ರಸ್ತೆಗೆ ಸೀಮಿತವಾಗಿದ್ದ ಗಾಂಧಿಭವನದ ಒಳಕ್ಕೆ ಸರ್ಕಾರವನ್ನು ಸೆಳೆದುತಂದು ಸೇರಿಸಿ ಗಾಂಧಿ ಸ್ಮಾರಕ ನಿಧಿಯ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಿದರು. ಗಾಂಧಿ ಸ್ಮಾರಕ ನಿಧಿಯಂತಹ ಸಂಸ್ಥೆಗಳು ಸರ್ಕಾರದ ನೆರವು ಪಡೆಯಬಾರದು ಎನ್ನುವ ಮಡಿವಂತಿಕೆಯ ನಿಲುವನ್ನು ಸಡಿಲಿಸಿ ಸರ್ಕಾರದ ಬಳಿ ಸಾಗಿ ಅವರ ಮನ ಒಲಿಸಿ ಗಾಂಧೀ ಸ್ಮಾರಕ ನಿಧಿಯ ಚಟುವಟಿಕೆಗಳಿಗೆ ಧಾರಾಳ ಧನಸಹಾಯ ಪಡೆದರು. ಈಗ ಈ ಸಂಸ್ಥೆ ಬೆಂಗಳೂರು ನಗರದಲ್ಲಿ ಹಲವಾರು ಜನಪರ ನಿಲುವಿನ ಸಂಘಟನೆಗಳಿಗೆ ಮತ್ತು ಚಟುವಟಿಕೆಗಳಿಗೆ ಚೈತನ್ಯಧಾಮವಾಗಿದೆ.

ಆರಂಭದಲ್ಲಿ ಶ್ರೀನಿವಾಸಯ್ಯನವರು ಗಾಂಧಿಜಿಯವರ ನೆಚ್ಚಿನ ಹೋರಾಟವಾಗಿದ್ದ ಮದ್ಯಪಾನ ನಿಷೇಧ ವಿಚಾರವನ್ನು ಕೇಂದ್ರವಾಗಿಟ್ಟುಕೊಂಡು ಆರಂಭದಲ್ಲಿ ರಾಜ್ಯ ಮಧ್ಯಪಾನ ಸಂಯಮ ಮಂಡಳಿಯ ಜೊತೆ ಗಾಂಧಿ ಸ್ಮಾರಕ ಭವನದ ಚಟುವಟಿಕೆಗಳನ್ನು ಬೆಸೆದರು. ಅಲ್ಲಿಂದ ಆರಂಭವಾದ ಅವರ ಸರ್ಕಾರದ ಜೊತೆಗಿನ ಸಖ್ಯ ಈಗ ಜಿಲ್ಲೆಗೊಂದು ಗಾಂಧಿ ಭವನ ನಿರ್ಮಿಸುವ ಸರ್ಕಾರದ ಸಂಕಲ್ಪದವರೆಗೆ ಬಂದು ತಲುಪಿದೆ. ತಮ್ಮ ಬಹುದಿನದ ಜಿಲ್ಲೆಗೊಂದು ಗಾಂಧಿಭವನದ

ಕನಸು ಸಾಕಾರವಾದ ಕ್ಷಣಗಳನ್ನು ಕಣ್ತುಂಬಿಸಿಕೊಳ್ಳಲು ನಮ್ಮೊಡನೆ ಅವರಿಲ್ಲ ಎನ್ನುವುದು ಒಂದು ಕೊರಗು.

ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆ ಗಾಂಧೀಜಿಯವರ ಜೀವನ ಸಾಧನೆಗಳನ್ನು ಸಮಾಜಕ್ಕೆ ತಲುಪಿಸುವ ಸಾರ್ಥಕ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಹೋ. ಶ್ರೀನಿವಾಸಯ್ಯನವರೇ ಪ್ರಮುಖ ಪ್ರೇರಣೆ. ಮದ್ಯಪಾನ ಸಂಯಮ ಮಂಡಳಿಯ ಸಂಯೋಜನೆಯಲ್ಲಿ ಅವರು ರೂಪಿಸುತ್ತಿದ್ದ ಮದ್ಯಪಾನ ವಿರೋಧಿ ಚಳುವಳಿಯಿಂದ ಪ್ರೇರಣೆ ಪಡೆದ ವಾರ್ತಾ ಇಲಾಖೆ ಗಾಂಧೀಜಿಯವರ ವಿಚಾರಧಾರೆಗಳನ್ನು ಜನರಿಗೆ ಪರಿಚಯಿಸುವ ಪ್ರಮುಖ ಕಾರ್ಯವನ್ನು ತನ್ನ ಚಟುವಟಿಕೆಯ ಒಂದು ಭಾಗವನ್ನಾಗಿ ಒಪ್ಪಿಕೊಂಡು ಹೆಜ್ಜೆ ಹಾಕುತ್ತಿದೆ. ಗಾಂಧೀ ಚಿಂತನೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ದೊಡ್ಡ ಸಾಧನೆ ಮಾಡಿದ ಹಿರಿಯ ಚೇತನಗಳಿಗೆ "ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ" ನೀಡಿ ಸತ್ಕರಿಸುತ್ತಿದೆ. ಐದು ಲಕ್ಷ ರೂಗಳ ಮೊತ್ತದ ಈ ಪ್ರಶಸ್ತಿ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪ್ರಶಸ್ತಿಯಾಗಿದೆ.

ಹೊ. ಶ್ರೀನಿವಾಸಯ್ಯನವರ ನಿಷ್ಕಪಟ ಜೀವನದ ಬಗ್ಗೆ ನಾಡಿನ ಮುಖ್ಯಮಂತ್ರಿಗಳಾದಿಯಾಗಿ ಸಮಾಜದಲ್ಲಿ ಎಲ್ಲರಿಗೂ ಅಭಿಮಾನವಿತ್ತು. ಅಂತೆಯೆ ಅವರ ಎಲ್ಲಾ ಚಟುವಟಿಕೆಗಳಿಗೆ ಆಶಯಗಳಿಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿ ಗಾಂಧಿ ಭವನಕ್ಕೆ ಎಲ್ಲ ರೀತಿಯ ನೆರವನ್ನು ನೀಡುತ್ತಿದೆ. ಗಾಂಧೀಜಿಯವರ ವಿಚಾರಧಾರೆಗಳು ಸಮಾಜಕ್ಕೆ ಸದಾ ಅಗತ್ಯವಿದೆ ಎನ್ನುವುದನ್ನು ಸರಕಾರಕ್ಕೆ ಮನವರಿಕೆ ಮಾಡಿ ಪ್ರತಿ ಜಿಲ್ಲೆಯಲ್ಲೂ ಗಾಂಧಿ ಭವನ ನಿರ್ಮಾಣವಾಗಬೇಕೆನ್ನುವ ತಮ್ಮ ಕನಸನ್ನು ನನಸು ಮಾಡಲು ಶ್ರೀನಿವಾಸಯ್ಯನವರು ಪಟ್ಟಿರುವ ಪರಿಶ್ರಮಕ್ಕೆ ಬೆಲೆ ಕಟ್ಟಲಾಗದು.

ಕರ್ನಾಟಕದಲ್ಲಿ ನಡೆಯುತ್ತಿರುವ ಗಾಂಧೀ ಚಿಂತನೆಯ ಪ್ರಚಾರ ಕಾರ್ಯ ಮತ್ತು ಚಟುವಟಿಕೆಗಳ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಬಹುದೊಡ್ಡ ಮನ್ನಣೆ ಸಿಕ್ಕಿದೆ. ಹಿರಿಯ ಗಾಂಧೀವಾದಿಗಳು ಕರ್ನಾಟಕದ ಈ ಸಾಧನೆಯ ಬಗ್ಗೆ ಅಚ್ಚರಿಯ ನೋಟ ಬೀರುತ್ತಿದ್ದಾರೆ. ಇದಕ್ಕೆ ನಮ್ಮ ಹಿರಿಯ ಗಾಂಧೀವಾದಿಗಳಾಗಿದ್ದ ಹೊ. ಶ್ರೀನಿವಾಸಯ್ಯನವರ ಪರಿಶ್ರಮವೇ ಪ್ರಮುಖ ಕಾರಣ ಎನ್ನಲು ಯಾವ ಅಡ್ಡಿಯೂ ಇಲ್ಲ.



ಗಾಂಧೀಜಿ ನೈಜಸ್ವರೂಪ – ಡಾ: ಹೊ. ಶ್ರೀ.

– ಹೆಚ್.ಬಿ. ದಿನೇಶ್

ಮಹಾತ್ಮಗಾಂಧಿ ಅವರು ಸ್ವತಂತ್ರ ಹೋರಾಟದ ಶ್ರೇಷ್ಠ ನಾಯಕ ಎಂದೇ ಬಿಂಬಿತವಾಗಿರುವ ವ್ಯವಸ್ಥೆಯಲ್ಲಿ ಗಾಂಧೀಜಿಯವರ ನೈಜ, ಅಪಾರ ಜನಪರ ಚಿಂತನೆ, ಸಮಾಜಮುಖಿ ಆಲೋಚನೆಗಳನ್ನು ಅಕ್ಷರಶಃ ಅರ್ಥೈಸಿಕೊಂಡು, ಗಾಂಧೀ ಪ್ರಣೀತ ಸಂಪನ್ನ ಸಮಾಜ ನಿರ್ಮಾಣಕ್ಕೆ ತನ್ನನ್ನು ತಾನು ಅರ್ಪಿಸಿಕೊಂಡ ದಿವ್ಯ ಚೇತನಗಳಲ್ಲಿ ಡಾ: ಹೊ. ಶ್ರೀನಿವಾಸಯ್ಯ ನಿಶ್ಚಿತವಾಗಿಯೂ ಮುಂಚೂಣಿಯಲ್ಲಿದ್ದವರು.

ಡಿ.ವಿ.ಜಿ. ಒಂದೆಡೆ ಹೇಳುತ್ತಾರೆ.

ಘನತತ್ವವೊಂದಕ್ಕೆ ದಿನರಾತ್ರಿ ಮನಸೋತು ।
ನೆನೆಯ ದಿನ್ನೊಂದನೆಲ್ಲವ ನೀಡುತದರಾ ॥
ಅನುಸಂಧಿಯಲಿ ಜೀವ–ಭಾರಪನು ಮರೆಯುವುದು
ಹನುಮಂತನುಪದೇಶ–ಮಂಕುತಿಮ್ಮ.

ಒಂದು ಆದರ್ಶವನ್ನು ಕಣ್ಣುಮುಂದಿರಿಸಿಕೊಂಡು, ಆ ಗುರಿ ಸಾಧನೆಯತ್ತ ತೊಡಗಿ, ಆದರ್ಶ ಪಾಲನೆಯಲ್ಲಿ ಮಿಕ್ಕೆಲ್ಲವನ್ನೂ ಮರೆವುದು ಹನುಮಂತ ಹಾಕಿಕೊಟ್ಟ ಹಾದಿಯಂತೆ. ಆಧ್ಯಾತ್ಮ ಸಾಧನೆಗೆ ತೊಡಗಿದ ಹನುಮಂತ ರಾಮನನ್ನೂ ಮರೆತನಂತೆ. ಅದು ಬೇರೆ ಕಥೆ. ಅದಿರಲಿ, ಒಂದು ಸುಭದ್ರ, ಸದೃಢ ಸಮಾಜ ಕಟ್ಟಬೇಕು. ಎಲ್ಲರೂ ಒಪ್ಪಬಹುದಾದ ಜೀವನ ಮಾರ್ಗವೊಂದನ್ನು ರೂಢಿಸುವ ಕಾರ್ಯವಾಗಬೇಕು ಎನ್ನುವುದು ಮಹಾತ್ಮಗಾಂಧೀಜಿಯವರ ಪರಮ ಧ್ಯೇಯ ವಾಗಿತ್ತು. ರಾಷ್ಟ್ರಕ್ಕೆ ಸ್ವಾತಂತ್ರ್ಯ ದೊರಕಿಸುವುದು ಅವರ ನಂತರದ ಪ್ರಾಶಸ್ತ್ಯವಾಗಿತ್ತು.

"ನಡುರಾತ್ರಿಯಲ್ಲಿ ಮಹಿಳೆಯೊಬ್ಬಳು ನಿರ್ಭಯವಾಗಿ ಓಡಾಡುವ ಕಾಲ ಬರುವಂತೆ ಮಾಡುವುದು ಸ್ವಾತಂತ್ರ್ಯ", "ಹಳ್ಳಿಗಳ ಉದ್ಧಾರದಿಂದ ದೇಶದ ಉದ್ಧಾರ" "ಭಾರತ ಉಸಿರಾಡುತ್ತಿರುವುದು ಅದರ ಹಳ್ಳಿಗಳಲ್ಲಿ", ಎಂಬ ಅವರ ಎಲ್ಲ ಹೇಳಿಕೆಗಳಲ್ಲಿ ವ್ಯಕ್ತವಾಗುವುದು ಗಾಂಧೀಜಿಯವರ ಅಪರಿಮಿತ ಜೀವನ ಪ್ರೀತಿ. ಅವರ ಅನನ್ಯ ಜನಕಾಳಜಿ. ಅವರು ಸಿದ್ಧಪಡಿಸಿಕೊಟ್ಟ 18 ರಚನಾತ್ಮಕ ಕಾರ್ಯಕ್ರಮಗಳಲ್ಲಿ

ಪ್ರಥಮ ವಾದದ್ದು "ಪಾನ ನಿರೋಧ". ನಿಜಗಾಂಧೀಜಿಯವರ ಅವ್ಯಕ್ತ ಮುಖವಿದು. "ಸಾಮಾನ್ಯ ಮನುಷ್ಯ ಶೀಲವಂತನಾಗದೇ, ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ" ಎಂಬುದು ಗಾಂಧೀಜಿಯವರ ನಿಲುವಾಗಿತ್ತು.

ಬಾಲ್ಯದಲ್ಲಿಯೇ ಗಾಂಧೀಜಿಯವರ ಪ್ರಭಾವಕ್ಕೊಳಗಾಗಿದ್ದ ಡಾ: ಹೊ. ಶ್ರೀ ಅವರು ಗಾಂಧೀಜಿಯ ಆದರ್ಶಗಳನ್ನು ಅಕ್ಷರಶಃ ಅರ್ಥ ಮಾಡಿಕೊಂಡಿದ್ದವರು. ಗಾಂಧೀಜಯವರ ಸಂದೇಶಗಳನ್ನು ಮನೆ-ಮನಗಳಿಗೆ ಮುಟ್ಟಿಸುವಲ್ಲಿ ನಿರಂತರ ಪ್ರವಾಸ ಮಾಡಿದ ಡಾ: ಹೊ. ಶ್ರೀ ಅವರು ತಮ್ಮ ನೂರಾರು ಭಾಷಣಗಳಲ್ಲಿ ಎಂದೂ ಗಾಂಧೀಜಿ ಮತ್ತು ಸ್ವಾತಂತ್ರ್ಯ ಹೋರಾಟದ ಕುರಿತು ಪ್ರಸ್ತಾಪ ಮಾಡಲೇ ಇಲ್ಲ. ಅದರ ಬದಲಿಗೆ ಅವರು ಗಾಂಧೀಜಿಯವರು ನಾಡ ಪರಿವರ್ತನೆಗೆ ಒತ್ತು ಕೊಟ್ಟ 18 ರಚನಾತ್ಮಕ ಕಾರ್ಯಕ್ರಮಗಳಾದ 1)ಪಾನನಿರೋಧ, 2)ಅಸ್ಪೃಶ್ಯತಾ ನಿವಾರಣೆ, 3)ಖಾದಿ, 4)ರೈತರ ಮಧ್ಯ ಕೆಲಸ, 5)ವಯಸ್ಕರ ಶಿಕ್ಷಣ, 6)ಗ್ರಾಮೋದ್ಯೋಗ, 7)ಕಾರ್ಮಿಕರು, 8)ಮಹಿಳೆಯರು, 9)ನೂತನ ಶಿಕ್ಷಣ, 10)ಗ್ರಾಮ ಸ್ವಚ್ಛತೆ, 11)ಆರ್ಥಿಕ ಸಮಾನತೆ, 12)ಆದಿವಾಸಿಗಳು, 13)ಸಮುದಾಯದ ಐಕ್ಯತೆ, 14)ವಿದ್ಯಾರ್ಥಿಗಳು, 15)ರಾಷ್ಟ್ರಭಾಷೆ, 16)ಸಾರ್ವಜನಿಕ ಆರೋಗ್ಯ ಶಿಕ್ಷಣ, 17)ಮಾತೃ ಭಾಷೆ, 18)ಕುಷ್ಠ ರೋಗಿಗಳು ಹಾಗೂ ಏಕಾದಶ ವ್ರತಗಳಾದ 1)ಸತ್ಯ, 2)ಅಹಿಂಸೆ, 3)ಅಸ್ತೇಯ (ಕದಿಯದಿರುವುದು), 4)ಬ್ರಹ್ಮಚರ್ಯ, 5)ಅಸಂಗ್ರಹ(ಅಪರಿಗ್ರಹ), 6)ಶರೀರಶ್ರಮ, 7) ಆಸ್ವಾದ(ನಾಲಿಗೆ ಚಪಲ), 8)ಸರ್ವತ್ರ ಭಯವರ್ಜನ(ಅಭಯ), 9)ಸರ್ವಧರ್ಮ ಸಮಾನತ್ವ, 10) ಸ್ವದೇಶಿ, 11)ಸ್ಪರ್ಶಭಾವನೆ(ಅಸ್ಪೃಶ್ಯತಾ ನಿವಾರಣೆ) ಕಾರ್ಯಕ್ರಮಗಳ ಬಗ್ಗೆ ಸಭಿಕರ ಗಮನ ಸೆಳೆಯುತ್ತಿದ್ದರು. ವಿದ್ಯಾರ್ಥಿಗಳೆಂದರೆ ಡಾ: ಹೊ. ಶ್ರೀ ಅವರಿಗೆ ಅಚ್ಚುಮೆಚ್ಚು. ವಿದ್ಯಾರ್ಥಿಗಳ ಗಮನವನ್ನು ಕೇಂದ್ರೀಕರಿಸಿ ಗಾಂಧೀಜಿಯವರ ಸಂದೇಶಗಳನ್ನು ಅವರಿಗೆ ಮನಮುಟ್ಟುವಂತೆ ವಿವರಿಸುತ್ತಿದ್ದ ಡಾ: ಹೊ. ಶ್ರೀ ಅವರ ನೈಪುಣ್ಯತೆ ವೈಶಿಷ್ಟ್ಯಪೂರ್ಣವಾಗಿರುತ್ತಿತ್ತು. ಸದಾ ಯುವಜನರ ನಡುವೆ ತಮ್ಮ ಅಸ್ಮಿತೆ ಕಂಡುಕೊಂಡ ಡಾ: ಹೊ. ಶ್ರೀ ಜೀವನ ಪೂರ್ತಿ ಮಾಡಿದ್ದು ಗಾಂಧೀಜಿಯವರ ಪರಿಕಲ್ಪನೆಯ ಸಮಾಜ ಪರಿವರ್ತನೆಯ ಕಾಯಕ. ಅವರ ಸ್ವಗ್ರಾಮ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಚೌಧರಿಕೊಪ್ಪಲು ಇದಕ್ಕೆ ಸಾಕ್ಷಿ.

ಗಾಂಧಿ ಭವನ ಹಾಗೂ ಸರ್ಕಾರದ ನಡುವೆ ಸೇತುವೆಯಾದವರು ಡಾ: ಹೊ. ಶ್ರೀ ಬೆಂಗಳೂರಿನ ಗಾಂಧಿ ಭವನ ಕರ್ನಾಟಕ ಸರ್ಕಾರ ಮಂಜೂರು ಮಾಡಿದ ನಿವೇಶನದಲ್ಲಿ ನಿರ್ಮಾಣವಾದರೂ ಕಾರ್ಯಕ್ರಮಗಳ ನಿರ್ವಹಣೆಯಲ್ಲಿ ಸರ್ಕಾರ ಅಷ್ಟಾಗಿ ತನ್ನನ್ನು ತಾನು ತೊಡಗಿಸಿಕೊಂಡಿರಲಿಲ್ಲ. ಈ ಕೊರತೆಯನ್ನು ಗುರುತಿಸಿ ಸರ್ಕಾರದ ವಿವಿಧ ಇಲಾಖೆಗಳ ನಡುವೆ ಬಾಂಧವ್ಯ ವೃದ್ಧಿಸಲು ತಮ್ಮದೇ ಆದ ವಿಶಿಷ್ಟ ಕಾರ್ಯಕ್ರಮ ರೂಪಿಸಿದವರು ಡಾ: ಹೊ. ಶ್ರೀ ಮುಖ್ಯಮಂತ್ರಿಗಳಾಗಿದ್ದ

ಶ್ರೀ ಧರಂಸಿಂಗ್, ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಸದಾನಂದಗೌಡ, ಶ್ರೀ ಜಗದೀಶ್ ಶೆಟ್ಟರ್ ಹಾಗೂ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರನ್ನು ಸಂದರ್ಭ ಸಿಕ್ಕಾಗಲೆಲ್ಲಾ ಭೇಟಿ ಮಾಡಿ ಗಾಂಧಿ ಭವನಕ್ಕೆ ಆಹ್ವಾನಿಸಿ, ಗಾಂಧಿ ತತ್ವಗಳನ್ನು ಪಸರಿಸಲು ಸರ್ಕಾರದ ಅನಿವಾರ್ಯತೆಯನ್ನು ಅವರಿಗೆ ಮನನ ಮಾಡಿದರು. ಇದರ ಪರಿಣಾಮವಾಗಿ ಶಿಥಿಲ ಸ್ಥಿತಿಯಲ್ಲಿದ್ದ ಗಾಂಧಿ ಭವನಕ್ಕೆ ಇಂದು ಆಧುನಿಕ ಸ್ಪರ್ಶ ದೊರಕಿದೆ. ಪ್ರತಿ ಜಿಲ್ಲೆಯಲ್ಲಿಯೂ ಗಾಂಧಿ ಭವನ ನಿರ್ಮಾಣಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಆಯವ್ಯಯದಲ್ಲಿ ಘೋಷಣೆ ಮಾಡಿದ್ದಾರೆ. ಅಲ್ಲದೇ, ರಾಜ್ಯದೆಲ್ಲೆಡೆ ಗಾಂಧಿ ಜಯಂತಿ ಆಚರಣೆಗೆ ಹಾಗೂ ಗಾಂಧಿ ಚಿಂತನೆಗಳ ಸಾರವನ್ನು ಪ್ರಕಟಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯನ್ನು ಸಮನ್ವಯ ಇಲಾಖೆಯನ್ನಾಗಿ ನೇಮಿಸಲಾಗಿದೆ. ಗಾಂಧಿ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮುದಾಯಕ್ಕಾಗಿ ಶ್ರಮಿಸುತ್ತಿರುವ ಗಾಂಧಿಚಿಂತಕರನ್ನು ಗುರುತಿಸಿ ಗೌರವಿಸಲು ರೂ. 5.00 ಲಕ್ಷಗಳನ್ನು ಒಳಗೊಂಡ "ಗಾಂಧಿ ಸೇವಾ ಪ್ರಶಸ್ತಿ-ಕರ್ನಾಟಕ" ಅನ್ನು ಸ್ಥಾಪಿಸಲಾಗಿದೆ. ಶಿಕ್ಷಣ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಗಾಂಧಿ ವಿಚಾರಗಳನ್ನು ಆಧರಿಸಿದ ಕಾರ್ಯಕ್ರಮಗಳು ರೂಪುಗೊಂಡಿವೆ. ಎನ್.ಎಸ್.ಎಸ್. ವಿದ್ಯಾರ್ಥಿಗಳಿಗೆ ಗಾಂಧಿ ಚಿಂತನೆಗಳನ್ನು ಪರಿಚಯಿಸುವ ವಿಶೇಷ ಕಾರ್ಯಕ್ರಮಗಳು ರೂಪುಗೊಂಡಿವೆ. ಈ ಎಲ್ಲಾ ಚಟುವಟಿಕೆಗಳ ಹಿಂದಿನ ಶಕ್ತಿ ಡಾ: ಹೊ. ಶ್ರೀ.

ಮದ್ಯಪಾನದ ವಿರುದ್ಧ ಜನಜಾಗೃತಿಗೊಳಿಸಲು ರಾಜ್ಯ ಸರ್ಕಾರ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯನ್ನು ಸ್ಥಾಪಿಸಿದೆ. ಈ ಮಂಡಳಿಯ ಕಾರ್ಯಕ್ರಮಗಳನ್ನು ಗಾಂಧಿ ಭವನದ ಮೂಲಕ ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಿದವರು ಡಾ: ಹೊ. ಶ್ರೀ ಇಂದು ಗಾಂಧಿ ಭವನ ಮತ್ತು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಸೋದರ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಈ ಸ್ನೇಹಸೇತು ಗಟ್ಟಿಯಾಗಲು ಡಾ: ಹೊ.ಶ್ರೀ ಅವರ ದೂರದೃಷ್ಟಿಯೇ ಕಾರಣ. ಮದ್ಯಪಾನದ ವಿರುದ್ಧ ಜನಜಾಗೃತಿ ಸರ್ಕಾರದಿಂದ ಸಾಧ್ಯವಿಲ್ಲ. ಗಾಂಧಿ ವಿಚಾರ ಧಾರೆಗಳ ಮೂಲಕ ಮದ್ಯಪಾನದ ವಿರುದ್ಧ ಜನ ಪರಿವರ್ತನೆ ಸಾಧ್ಯ ಎಂಬ ಅಂಶವನ್ನು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಗೆ ಮನವರಿಕೆ ಮಾಡಿ, ಗಾಂಧಿ ಭವನದೊಂದಿಗೆ ಜೊತೆಜೊತೆಯಾಗಿ ಹೆಜ್ಜೆ ಹಾಕಲು ಮಂಡಳಿಗೆ ನೆರವಾದವರು ಡಾ: ಹೊ. ಶ್ರೀ.

ಕಳೆದ 12 ವರ್ಷಗಳಿಂದ ಡಾ: ಹೊ. ಶ್ರೀ ಅವರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದೆ. ಐ.ಎ.ಎಸ್. ಅಧಿಕಾರಿಗಳಾದ ಶ್ರೀ ಎಂ.ಕೆ. ಶಂಕರಲಿಂಗೇಗೌಡ, ಶ್ರೀ ಬಿ.ಎಸ್. ಕೃಷ್ಣಯ್ಯ, ಡಾ॥ ಬಿ.ಆರ್. ಮಮತ, ಗಾಂಧಿ ಭವನದ ಅಧ್ಯಕ್ಷರಾದ

ಶ್ರೀ ವೂಡೇ ಪಿ. ಕೃಷ್ಣ, ಉಪಾಧ್ಯಕ್ಷರಾದ ಪ್ರೊ॥ ಜಿ.ಬಿ. ಶಿವರಾಜ್ ಅವರೊಂದಿಗೆ ಹತ್ತಾರು ಕಾರ್ಯಕ್ರಮಗಳಲ್ಲಿ ಡಾ: ಹೊ. ಶ್ರೀ ಅವರೊಂದಿಗೆ ಭಾಗಿಯಾಗಿದ್ದೇನೆ. ಡಾ: ಹೊ.ಶ್ರೀ ಅವರ ಚುಟುಕಾದ, ಪರಿಣಾಮಕಾರಿಯಾದ ಮಾತುಗಳು ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ. ಅವರೊಂದಿಗೆ ಕಳೆದ ಕ್ಷಣಕ್ಷಣವೂ ಬದುಕಿಗೆ ದಾರಿದೀಪ. ಕಾರ್ಯಕ್ರಮದ ಅಂತ್ಯದಲ್ಲಿ ಅವರು ಮೊಳಗಿಸುತ್ತಿದ್ದ "ಜೈಜಗತ್" ಎಂದೆಂದೂ ಮರೆಯಲಾಗದ ಸ್ಫೂರ್ತಿ ಧ್ಯೇಯ. ಡಾ: ಹೊ. ಶ್ರೀ ಅವರ ಪ್ರಭಾವಲಯದಲ್ಲಿ ಬೆಳಕು ಕಂಡವನು, ಅವರ ಜೊತೆ ದುಡಿಮೆಯ ಸಾರ್ಥಕತೆಯ ಕಂಡವನು ನಾನು ಎಂಬ ನೆಮ್ಮದಿ ನನ್ನದು.

"ಋಣವ ತೀರಿಸಬೇಕು. ಋಣವ ತೀರಿಸುತ
ಜಗದಾದಿ ಸತ್ವವನು ಜನದಿ ಕಾಣುತ್ತ
ಅದರಲ್ಲೊಂದು ಗೂಡಬೇಕು, ಮನೆಯೊಳಗೆ
ಮಠ ಕಟ್ಟಿದಂತಿರಬೇಕು" ಎಂಬುದು ಕವಿವಾಣಿ.

ಈ ಕವಿವಾಣಿಗೆ ಅಕ್ಷರಶಃ ಅರ್ಥಕೊಟ್ಟ ಮಹಾನ್ ಅನುಭವಿ ಡಾ: ಹೊ.ಶ್ರೀ.



ಡಾ. ಹೊ. ಶ್ರೀನಿವಾಸಯ್ಯ, ಗಾಂಧೀ, ಗಾಂಧೀವಾದ ಮತ್ತು ಗಾಂಧೀ ಭವನ

– ಡಿ.ಎಸ್. ನಾಗಭೂಷಣ್

ಡಾ. ಹೊ. ಶ್ರೀನಿವಾಸಯ್ಯ ಅವರ ಬಗ್ಗೆ ಬರೆಯಲು ನಾನೆಷ್ಟು ಯೋಗ್ಯನೋ ನನಗೆ ತಿಳಿಯದು. ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷರಾದ ಗೆಳೆಯ ಜಿ.ಬಿ. ಶಿವರಾಜು ಅವರು ಏನಾದರೂ ಬರೆಯಿರಿ–ಗಾಂಧಿ ಭವನ ಕುರಿತ ನಿಮ್ಮ ಕಲ್ಪನೆಯ ಬಗ್ಗೆಯೇ ಬರೆಯಿರಿ–ಎಂದು ಪ್ರೀತಿಪೂರ್ವಕವಾಗಿ ಆಗ್ರಹಿಸಿದ್ದರಿಂದ ಈ ಬರಹದ ಪ್ರಯತ್ನ ಮಾಡುತ್ತಿದ್ದೇನೆ. ಏಕೆಂದರೆ ಹೊ. ಶ್ರೀನಿವಾಸಯ್ಯನವರ ಹೆಸರು ಬಹು ಬಾರಿ ಮತ್ತು ಬಹು ಸಂದರ್ಭಗಳಲ್ಲಿ ನಾನು ಕೇಳಿದ್ದೆನಾದರೂ, ಅವರನ್ನು ಮುಖತಃ ಕಂಡು ಮಾತಾಡಿದ್ದು, ಎರಡು ಬಾರಿಯೋ ಮೂರು ಬಾರಿಯೋ ಇರಬೇಕು. ಅದೂ ಅವರು ಗತಿಸುವ ಮುಂಚಿನ ಎರಡು–ಮೂರು ವರ್ಷಗಳಲ್ಲಿ.

ಗಾಂಧಿ ವ್ಯಕ್ತಿತ್ವ ಮತ್ತು ವಿಚಾರಗಳ ಕುರಿತು ನನಗೆ ವಿದ್ಯಾರ್ಥಿ ದೆಸೆಯಿಂದಲೂ ಕುತೂಹಲ ಮತ್ತು ಆಸಕ್ತಿಗಳಿದ್ದುದರಿಂದ ಗಾಂಧಿ ಸಾಹಿತ್ಯವನ್ನು ಓದುವ ಸಂದರ್ಭಗಳಲ್ಲಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಶ್ರೀನಿವಾಸಯ್ಯನವರ ಹೆಸರು ಕಣ್ಣಿಗೆ ಅಥವಾ ಕಿವಿಗೆ ಬೀಳುತ್ತಿತ್ತು. ಅವರೊಬ್ಬರು ಕರ್ನಾಟಕದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಗಾಂಧಿವಾದಿಯೆಂಬುದು ನನ್ನ ಮನಸ್ಸಿನಲ್ಲಿ ಅಚ್ಚೊತ್ತಿತ್ತು. ಜೊತೆಗೆ ನಾನು ಬಹುವಾಗಿ ಮೆಚ್ಚುವ ಗಾಂದಿವಾಧಿ ಲೇಖಕ ದಿ.ಸಿದ್ಧವನಳ್ಳಿ ಕೃಷ್ಣಶರ್ಮರ ನಿಕಟವರ್ತಿಯಾಗಿ 1942ರಷ್ಟು ಹಿಂದೆಯೇ–ತಮ್ಮ ವಿದ್ಯಾರ್ಥಿ ದೆಸೆಯಲ್ಲಿಯೇ ಇವರು ಬೆಂಗಳೂರಿನ ಮಲ್ಲೇಶ್ವರಂನಲ್ಲಿ 'ಗಾಂಧಿ ಸಾಹಿತ್ಯ ಸಂಘ'ವನ್ನು ಗಾಂಧಿ ವಿಚಾರಗಳ ಪ್ರಚಾರಕ್ಕಾಗಿ ಸ್ಥಾಪಿಸಿದ್ದರೆಂಬ ಸಂಗತಿ ಅವರಲ್ಲಿ ನನಗೆ ಹೆಚ್ಚಿನ ಅಭಿಮಾನ ಹುಟ್ಟಿಸಿತ್ತು. ಅಷ್ಟೇ ಅಲ್ಲ, ಈ ಸಂಸ್ಥೆಗೆ ಪೂರಕವಾಗಿ ಗಾಂಧಿಗೆ ಪ್ರಿಯವಾಗಿದ್ದ ನಿಸರ್ಗ ಚಿಕಿತ್ಸಾ ಕೇಂದ್ರವೊಂದನ್ನು ತೆರೆದು ನಿರ್ವಹಿಸಿದರೆಂಬುದೂ ಗಾಂಧಿ ವಿಚಾರಧಾರೆ ಕುರಿತ ಅವರ ಸಮಗ್ರ ಗ್ರಹಿಕೆ ಮತ್ತು ಬದ್ಧತೆಗಳ ಪ್ರತೀಕವೇ ಆಗಿತ್ತೆಂದು ನಾನು ಭಾವಿಸಿದ್ದೇನೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಾನು ಮಾರಕ ಅಸ್ವಸ್ಥತೆಗೆ ಈಡಾಗಿ ಎಲ್ಲ ಚಿಕಿತ್ಸೆಗಳು ಅನುಮಾನಾಸ್ಪದವೆನಿಸಿದಾಗ ನಾನು

ಪರಿಚಯ ಪುಸ್ತಕದಲ್ಲಿ ಗಮನಿಸಿದ ನಂತರ ಮತ್ತು ಅವರೊಡನೆ ಬೆರೆತ ಒಂದೆರಡು ಸಂದರ್ಭಗಳನ್ನೇ ಮೆಲುಕು ಹಾಕಿದಾಗ ಅವರ ಒಂದೆರಡು ದೌರ್ಬಲ್ಯಗಳೂ ನನ್ನ ಗಮನಕ್ಕೆ ಬಂದುದನ್ನು ಇಲ್ಲಿ ದಾಖಲಿಸದಿದ್ದರೆ ತಪ್ಪಾದೀತು;ನನ್ನ ಈ ಬರಹದ ಅಪ್ರಾಮಾಣಿಕತೆಯೂ ಆದೀತು. ಹುಟ್ಟಿನಿಂದ ಒಕ್ಕಲಿಗ ಜಾತಿಗೆ ಸೇರಿದ್ದ ಅವರು ಅದೇ ಜಾತಿಯವರ 'ಕೇಂದ್ರಸ್ಥಾನ'ವಾದ ಆದಿಚುಂಚನಗಿರಿ ಮಠದೊಂದಿಗೆ ಹೊಂದಿದ್ದ ವಿಶೇಷ ಸಂಬಂಧ, ಅವರು ಹಿರಿಯ ಗಾಂಧಿವಾದಿಯೂ ಆಗಿದ್ದರು ಎಂಬ ಸಂಗತಿಯ ಹಿನ್ನೆಲೆಯಲ್ಲಿ ನನ್ನಲ್ಲಿ ಒಂದು ಅಸಮಧಾನದ ಅಲೆಯನ್ನೂ ಎಬ್ಬಿಸಿದೆ. ಇಂದು ನಮ್ಮ ಮಠಗಳು ಎಂತಹ ಜಾತಿಕೂಪಗಳಾಗಿವೆ ಮತ್ತು ಹಲವು ತೆರೆನ ವ್ಯಾಪಾರಿ ಕೇಂದ್ರಗಳಾಗಿವೆ ಎಂಬುದು ಇಲ್ಲಿ ನೆನಪಿಗೆ ಬರದಿರಲಾರದು. ಗಾಂಧಿ ವಿಚಾರಧಾರೆಯ ಜೀವ ಶಕ್ತಿಯಂತಿರುವ ಜಾತಿ ಮತಗಳ ಬಂಧನಗಳಿಲ್ಲದ ವಿಶ್ವಭ್ರಾತೃತ್ವದ (ಉನ್ನತ ಚಿಂತನೆ-ಸರಳ ಬದುಕು ಎಂಬ) ಬೀಜ ಸಂದೇಶದ ಜೊತೆ ಇದನ್ನು ನೆನೆದಾಗ ನನ್ನ ಅಸಮಧಾನಕ್ಕೆ ಈ ಬರಹವನ್ನು ಓದುವ ಕೆಲವರಿಗಾದರೂ ಸಮರ್ಥನೆ ಕಂಡೀತು ಎಂದು ನಾನು ಭಾವಿಸಿದ್ದೇನೆ.

ಹಾಗೇ ಶ್ರೀನಿವಾಸಯ್ಯನವರಲ್ಲಿ ನಾನು ಕಂಡ ಇನ್ನೊಂದು ದೌರ್ಬಲ್ಯವೆಂದರೆ, ಅವರು ಆಳುವ ವ್ಯವಸ್ಥೆಯಿಂದ ಉದ್ದೇಶಪೂರ್ವಕವಾಗಿ ದೂರವಿರಲು ಬಯಸಲಿಲ್ಲ ಮತ್ತು ಬಹುಶಃ ಇದೇ ಕಾರಣದಿಂದಾಗಿ ಅವರು ಎಂದೂ ಸರ್ಕಾರದ ನೀತಿಗಳ ಒಳಿತು-ಕೆಡಕುಗಳ ಬಗೆಗಿನ ವಿಮರ್ಶಕರಾಗಲಿಲ್ಲ ಎಂಬುದು. ನನ್ನ ಮತ್ತು ಅವರ ಪರಿಚಯದ ಒಂದೆರಡು ವರ್ಷಗಳ ಅವಧಿಯಲ್ಲೇ ಆಳುವ ಸರ್ಕಾರದ ಹಲವು ನೀತಿ-ಕಾರ್ಯಕ್ರಮಗಳು ಜನ ವಿರೋಧಿ ಎನಿಸಿ, ಇತರೆ ಗಾಂಧಿವಾದಿಗಳೂ ಸೇರಿದಂತೆ ಸಾರ್ವಜನಿಕರ ಟೀಕೆ-ವಿರೋಧಗಳಿಗೆ ಒಳಗಾದ ಸಂದರ್ಭಗಳಲ್ಲೂ ಈ ಹಿರಿಯರು ಇದೆಲ್ಲದಕ್ಕೂ ತಮಗೂ ಸಂಬಂಧವೇ ಇಲ್ಲವೆಂಬಂತೆ ಸುಮ್ಮನಿದ್ದುಬಿಟ್ಟುದನ್ನು ಕಂಡು ನಾನು ಮೂಕವಿಸ್ಮಿತನಾಗಿದ್ದೇನೆ. ಅವರು ಸಕ್ರಿಯ ರಾಜಕಾರಣಿಯಂತೆ ಸರ್ಕಾರವನ್ನು ಟೀಕಿಸಬೇಕಿತ್ತು ಎಂದು ಯಾರೂ ನಿರೀಕ್ಷಿಸಲಾರರು. ಆದರೂ, ತಮ್ಮ ಅಸಮಧಾನ-ಅಸಮ್ಮತಿಗಳನ್ನು ಅಗತ್ಯ ಮುತ್ಸದ್ದಿತನದಿಂದಲೇ ದಾಖಲಿಸಬಹುದಿತ್ತಲ್ಲ ಎಂಬ ಕೊರಗಿಗೆ ಅವಕಾಶವಿದೆ.

ಶ್ರೀನಿವಾಸಯ್ಯನವರು ಸಾತ್ವಿಕ ವ್ಯಕ್ತಿತ್ವದ ಸಾಧು ಮನುಷ್ಯರು, ನಿಜ. ಆದರೆ ಸಾತ್ವಿಕತೆ ಎಂದರೆ ಭೋಳೆತನ, ಕೇಡಿನ ಎದುರೂ ನಿರ್ಲಿಪ್ತತೆ ಅಥವಾ ನಿಷ್ಕ್ರಿಯತೆ ಎಂದಲ್ಲವಲ್ಲ? ಗಾಂಧಿ ಭವನದ ಮುಖ್ಯಸ್ಥರಾಗಿ ಅವರು ಸರ್ಕಾರಿ ವಲಯಗಳ ಜೊತೆ ನಿಯಮಿತವಾಗಿ ಒಡನಾಡುವವರಾಗಿ ಅವರಿಗೆ ಇದೆಲ್ಲ

ಮುಜುಗರವನ್ನುಂಟು ಮಾಡುವಂತಹದಾಗಬಹುದಿತ್ತು ಎಂದೂ ಕೆಲವರು ವಾದಿಸಬಹುದು. ಆದರೆ ಅವರು ಗಾಂಧಿ ಭವನದ (ಗಾಂಧಿ ಸ್ಮಾರಕ ನಿಧಿಯ) ಮುಖ್ಯಸ್ಥರಾಗಿರುವುದು ಅವರು ಗಾಂಧಿವಾದಿಗಳೆನಿಸಿ ಕೊಂಡಿರುವುದರಿಂದ ಮತ್ತು ಈ ಗಾಂಧಿವಾದದ ಜವಾಬ್ದಾರಿಗಳು ಗಾಂಧಿ ಭವನದ ಮುಖ್ಯಸ್ಥನ ಜವಾಬ್ದಾರಿಗಳಿಗಿಂತ ಶ್ರೇಷ್ಠವಾದವು ಮತ್ತು ಮುಖ್ಯವಾದವು ಮತ್ತು ಅವೇ ಇವನ್ನೂ ನಿರ್ಧರಿಸುವವು ಎಂಬುದು ಶ್ರೀನಿವಾಸಯ್ಯನವರಿಗೆ ಏಕೆ ಹೊಳೆಯದೇ ಹೋಯಿತು ಎಂದೂ ನನಗೆ ಆಶ್ಚರ್ಯವಾಗುತ್ತದೆ.

ಈ ಆಶ್ಚರ್ಯವೇ ಹಲವು ಬಾರಿ ಗಾಂಧಿ ಭವನ ತನ್ನೆಲ್ಲ ವಿಧಾಯಕ ಕೆಲಸ ಕಾರ್ಯಗಳ ಹೊರತಾಗಿಯೂ ತನ್ನ ಸ್ವರೂಪ ಮತ್ತು ಕಾರ್ಯಶೈಲಿಯನ್ನು ನಿರ್ಣಾಯಕವಾಗಿ ಬದಲಾಯಿಸಿ ಕೊಳ್ಳುವ ಕಾಲ ಈಗ ಬಂದಿದೆಯಲ್ಲವೇ ಎಂದು ನಾನು ಯೋಚಿಸಲೂ ಅವಕಾಶ ನೀಡಿದೆ. ಕರ್ನಾಟಕ ಸರ್ಕಾರ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಒಂದು ಗಾಂಧಿ ಭವನ ನಿರ್ಮಿಸುವ ಯೋಜನೆ ಆರಂಭಿಸಿದೆ ಎಂದು ತಿಳಿದುಬಂದಾಗ ನಾನು ಈ ಯೋಜನೆ ಕುರಿತು ವ್ಯಾಪಕವಾದ ಸಾರ್ವಜನಿಕ ಚರ್ಚೆಯಾಗಬೇಕೆಂದು ಹೇಳಿದ್ದೂ, ಬರೆದದ್ದೂ ಇದೇ ಕಾರಣದಿಂದೆ. (ನೋಡಿ: 'ಪ್ರಜಾವಾಣಿ' : 'ಸಂಗತ' :) ಶ್ರೀನಿವಾಸಯ್ಯನವರ ಬಗ್ಗೆ ಬರೆಯುವ ಸಂದರ್ಭದಲ್ಲಿ ಈ ಬಗ್ಗೆ ನಾಲ್ಕು ಮಾತುಗಳನ್ನು ಬರೆಯುವುದು ಅವರಿಗೆ ಸಲ್ಲಿಸುವ ಪ್ರಾಮಾಣಿಕ ಗೌರವವೂ, ಗಾಂಧಿ ನ್ಯಾಯವೂ ಆಗಬಹುದೆಂದು ನಾನೂ ಭಾವಿಸುತ್ತೇನೆ.

ಗಾಂಧಿವಾದವೆಂಬುದಿಲ್ಲ; ಇರುವುದು ಗಾಂಧಿ ಬದುಕು ಎಂಬ ಮಾತಿದೆ. ಅಂದಾಕ್ಷಣ ಗಾಂಧಿ ವಿಚಾರಗಳೆಂಬುವು ಇಲ್ಲ ಎಂದರ್ಥವಲ್ಲ. ಗಾಂಧಿ ನುಡಿದಂತೆ ನಡೆದರು ಮತ್ತು ನಡೆದಂತೆ ನುಡಿದರು ಕೂಡ. ಇಂತಹ ಬದುಕಿನ ಅಖಂಡ ಸಾವಯತೆಯಲ್ಲಿ ನಮ್ಮ ಬದುಕಿಗೆ, ನಮ್ಮ ನಮ್ಮ ಬದುಕುಗಳ ಸತ್ಯಗಳ ಅನ್ವೇಷಣೆಗೆ ತೋರುಗೈ ಆಗಬಲ್ಲ ಅನೇಕ ವಿಚಾರಗಳು ಹೊರಹೊಮ್ಮಿವೆ. ಅವನ್ನೇ ಸ್ಥೂಲವಾಗಿ ಇಂದು ಗಾಂಧಿ ವಿಚಾರಧಾರೆ ಅಥವಾ ಗಾಂಧಿವಾದ ಎಂದು ಕರೆಯಲಾಗುತ್ತದೆ. ಇದರ ಮುಖ್ಯ ಕಳಕಳಿ ಎಂದರೆ, ಆತ್ಮಸಾಕ್ಷಿಗೆ ಎಂದೂ ಎರವಾಗದಂತೆ ನಡೆ ಎಂಬುದು. ಆ ಆತ್ಮ ಸಾಕ್ಷಿಯೇ ಗಾಂಧಿ ಕಂಡುಕೊಂಡ ದೇವರು. ಹಾಗಾಗಿಯೇ ಅವರು ದೇವರು ಸತ್ಯ ಎಂಬ ಪುರಾತನ ಮಾತನ್ನು ಸತ್ಯವೇ ದೇವರು ಎಂದು ತಲೆಕೆಳಗಾಗಿಸಿ ವೈಚಾರಿಕ ಯುಗಕ್ಕಾಗಿ ದೇವರನ್ನು ಪುನರನ್ವೇಷಿಸಿ, ಪುನರ್ವ್ಯಾಖ್ಯಾನಿಸಿ, ಪುನರ್ರೂಪಿಸಿಕೊಟ್ಟರು.

ಇದೇ ಅರ್ಥದ ಅವರ ಇನ್ನೊಂದು ಮಾತೆಂದರೆ, 'ಮನುಷ್ಯ ದೇವರಾಗುವ ತನಕ ಅವನಿಗೆ ಶಾಂತಿ ಇಲ್ಲ' ಎಂಬುದು. ಅಂದರೆ ಮನುಷ್ಯ ತನ್ನ ಬದುಕಿನ ಸತ್ಯವನ್ನು (ಅಂದರೆ ದೈವತ್ವವನ್ನು) ಕಂಡುಕೊಳ್ಳುವ ತನಕ ಅವನಿಗೆ ಶಾಂತಿಯಿಲ್ಲ. ಬದುಕಿನ ಈ ಸತ್ಯಾನ್ವೇಷಣೆಗೆ ದಾರಿ ಯಾವುದು? ಅದನ್ನೂ ಗಾಂಧಿ ತಮ್ಮ ಬದುಕಿನ ದಿಕ್ಕಿನ ಸೂಚನೆಯನ್ನೀಯುತ್ತಲೇ ಹೀಗೆ ವಿವರಿಸಿದ್ದಾರೆ: ನನಗೆ ಎಂದಾದರೂ ಧರ್ಮ ಮತ್ತು ನೀತಿಗಳ ನಡುವೆ ಆಯ್ಕೆ ಮಾಡಿಕೊಳ್ಳಬೇಕಾಗಿ ಬಂದರೆ ನೀತಿಯನ್ನೇ ಆಯ್ದುಕೊಂಡೇನು. ಅವರು ತಮ್ಮ ಬದುಕಿನದ್ದಕ್ಕೂ ಇಂತಹುದೇ ಆಯ್ಕೆ ಮಾಡಿಕೊಳ್ಳುತ್ತಾ ವೈಚಾರಿಕ ಯುಗಕ್ಕಾಗಿ ಧರ್ಮದ ಅರ್ಥವನ್ನು ಹೊಸದಾಗಿ ಕಟ್ಟಿ ಕೊಟ್ಟರು. ವರ್ಣಧರ್ಮವನ್ನು ಅವರು ವ್ಯಾಖ್ಯಾನಿಸಿದ ರೀತಿ ಮತ್ತು ಅಸ್ಪೃಶ್ಯತೆಯ ನಿವಾರಣೆಗಾಗಿ ಅವರು ನಡೆಸಿದ ಹೋರಾಟ ಇದಕ್ಕೆ ಬಹು ದೊಡ್ಡ ಉದಾಹರಣೆಗಳು.

ಈ ಉದಾಹರಣೆಗಳೇ ಅವರ ಪ್ರಕಾರ ನೀತಿ ಎಂದರೇನು ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ಕೊಡುತ್ತವೆ. ಅವರ ಪ್ರಕಾರ ನೀತಿ ಎಂದರೆ ಸೋದರತೆ, ಸಮಾಜ ಜೀವಿತ್ವ; ಅದಕ್ಕೆ ಬೇಕಾದ ಆದರ್ಶಗಳ ಹಂಬಲ ಮತ್ತು ಬದ್ಧತೆ ಹಾಗೂ ಅವು ಬೇಡುವ ತ್ಯಾಗ. ಇವುಗಳ ಕೊರತೆಯೇ ಭಾರತದ ಸಮಾಜವನ್ನು ಆಂತರಿಕವಾಗಿಯು(ಅಂದರೆ ಅದರ ಮನೋಬಲವನ್ನು) ಮತ್ತು ಬಾಹ್ಯವಾಗಿಯೂ(ಅಂದರೆ ಅದರ ಸಂಘಟನೆಯ ಬಲವನ್ನೂ) ಒಡೆದು ಗುಲಾಮಗಿರಿಗೆ ತಳ್ಳಿತು ಎಂದು ಗಾಂಧಿ ಭಾವಿಸಿದರು. ಇದಕ್ಕೆ ಪೂರಕವಾಗಿ ನಮ್ಮನ್ನು ಸೆಳೆದುಕೊಂಡ, ಮನುಷ್ಯ ಮೂಲತಃ ಭೋಗಜೀವಿ ಎಂದು ನಂಬಿದ ಪಶ್ಚಿಮದ ಆಧುನಿಕ ಜೀವನಪದ್ಧತಿಯನ್ನು ನಾಗರೀಕತೆ ಎಂದು ಕರೆಯುವುದು ತಪ್ಪು ಎಂದ ಗಾಂಧಿ, ಈ ಜೀವನ ಪದ್ಧತಿಗೆ ಪರ್ಯಾಯವಾಗಿ ಭೋಗಕ್ಕೆ ಒಂದು ವಿವೇಕದ ಮಿತಿಯುಳ್ಳ ಬದುಕಿನ ಮಾದರಿಯೊಂದರ ಹೊಳಹನ್ನು ನಮಗೆ ನೀಡಿ ಹೋಗಿದ್ದಾರೆ. ಬದುಕಿನ ಆತ್ಯಂತಿಕ ಗುರಿ ಶಾಂತಿ, ನೆಮ್ಮದಿ ಮತ್ತು ಸಮತ್ವಗಳೇ ಆಗಿರುವುದರಿಂದ ಇಂತಹ ಮಿತಿಗಳುಳ್ಳ ಸರಳ ಬದುಕೇ ಅದನ್ನು ಸಾಧಿಸಲು ಏಕೈಕ ಮಾರ್ಗ ಎಂದು ಅವರು ಪ್ರತಿಪಾದಿಸಿದರು.

ಆದರೆ ಆಧುನಿಕ ವಿಜ್ಞಾನ-ತಂತ್ರಜ್ಞಾನಗಳು ಈ ಜಗತ್ತಿನ ನಿಗೂಢತೆಯನ್ನು ಸವಾಲಾಗಿ ಸ್ವೀಕರಿಸಿ ಅದನ್ನು ಬಯಲು ಮಾಡಲು ಹಠ ತೊಟ್ಟಂತೆ ತೋರುವ ನಿರಂತರ ಶೋಧನೆ-ಸಂಶೋಧನೆಗಳಲ್ಲಿ ತೊಡಗಿವೆ. ಈ ಹಾದಿಯುದ್ದಕ್ಕೂ ಅವು ಉತ್ಪನ್ನ-ಉಪ ಉತ್ಪನ್ನಗಳ ರೂಪದಲ್ಲಿ ಅನೇಕ ಬಗೆಯ ಸುಖ ಸಾಧನಗಳನ್ನು

ನಿರಂತರವಾಗಿ ತಯಾರಿಸಿ ನೀಡುತ್ತಿದ್ದು, ಅವು ಅನುಭೋಗದ ಅಮಲಿನಲ್ಲಿರುವ ಆಧುನಿಕ ಬದುಕಿನ ಆರಾಧಕರು ಗಾಂಧಿಯವರ ಈ ಸರಳ ಬದುಕಿನ ಪರಿಕಲ್ಪನೆಯನ್ನು ಅಧ್ಯಾತ್ಮಿಕತೆಯ ಐಲು ಎಂದು ಸುಲಭವಾಗಿ ತಳ್ಳಿಹಾಕ ಬಹುದಾಗಿದೆ' ಹಾಗೆ ಆಗುತ್ತಿದೆ ಕೂಡ. ಆದರೆ ಮನುಷ್ಯನ ಬದುಕಿನಲ್ಲಿ ಅಧ್ಯಾತ್ಮಿಕ-ಲೌಕಿಕಗಳೆಂಬ ಪ್ರತ್ಯೇಕ ಕೋಣೆಗಳಿಲ್ಲ. ಅವನ್ನು ಮಾಡಿಕೊಂಡಿರುವವರು ನಾವು, ನಮ್ಮ ಬೌದ್ಧಿಕ ವಿಶ್ಲೇಷಣೆಗಳಿಗಾಗಿ. ಅದಕ್ಕೆ ಸಾಬೀತೆಂಬಂತೆ, ಗಾಂಧಿ ತಮ್ಮ ಈ ಸರಳ ಬದುಕಿನ ಅನಿವಾರ್ಯತೆ ಮತ್ತು ವ್ಯಾವಹಾರಿಕತೆಗಳನ್ನು ಜಗತ್ತು ಮನದಟ್ಟು ಮಾಡಿಕೊಳ್ಳಲು ಅನುವಾಗುವಂತೆ ತಮ್ಮ ಕಾಲಕ್ಕೆ ಅಪೂರ್ವವೆನಿಸುವ ಒಳನೋಟವುಳ್ಳ ಸತ್ಯವೊಂದನ್ನು ಹೇಳಿದರು: ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ. ಈ ಮಾತನ್ನು ಗಾಂಧಿ ಆಡಿದ್ದು ಜೀವ ಪರಿಸರ, ಪರಿಸರ ಮಾಲಿನ್ಯ, ಪರಿಸರವಾದ, ಹವಾಮಾನ ವೈಪರೀತ್ಯ, ಬಿಕ್ಕಟ್ಟು ಇತ್ಯಾದಿ ವಿಚಾರಗಳು ಅಥವಾ ಈ ಪದಪುಂಜಗಳು ಇನ್ನೂ ಚಲಾವಣೆಗೆ ಬರದಿದ್ದ ಕಾಲದಲ್ಲಿ, ಸುಮಾರು ಒಂದು ಶತಮಾನದ ಹಿಂದೆ ಎಂಬುದನ್ನು ಗಮನಿಸಿದರೆ ಗಾಂಧಿ ಚಿಂತನೆಯ ಸಮಗ್ರತೆಯೂ, ಅಧ್ಯಾತ್ಮ ಎಂದರೆ ಪ್ರಜ್ಞೆಯ ಸಮಗ್ರತೆಯೇ ಎಂಬುದೂ ಗೊತ್ತಾಗುತ್ತದೆ.

ಮನುಷ್ಯನ ಅಗತ್ಯ ಮತ್ತು ಆಸೆಗಳ ಬಗ್ಗೆ ಹೊಸ ಜಿಜ್ಞಾಸೆಯನ್ನು ಹುಟ್ಟುಹಾಕಿದ ಈ ಮಿತಿಗಳುಳ್ಳ ಸರಳ ಬದುಕಿನ ವಿಚಾರವೇ ಗಾಂಧಿ ಬದುಕಿನ ಮತ್ತು ತತ್ವಮೀಮಾಂಸೆಯ ಕೇಂದ್ರವೆಂದು ನಾನು ಭಾವಿಸಿರುವೆ. ಈ ಕೇಂದ್ರ ವಸ್ತುವಿನೊಡನೆಯ ಕ್ರಿಯಾಶೀಲ ಸಂಬಂಧದ ಜೀವಂತಿಕೆ ಇಲ್ಲದೆ ಗಾಂಧಿವಾದದ ಹೆಸರಿನಲ್ಲಿ ಗಾಂಧಿ ಭವನವೂ ಸೇರಿದಂತೆ ಬಹುಪಾಲು ಗಾಂಧಿ ಸಂಸ್ಥೆಗಳು ಬೋಧಿಸುತ್ತಿರುವ ಬೋಳು ಬೋಳಾದ ಸತ್ಯ, ಅಹಿಂಸೆ, ಕೋಮು ಸೌಹಾರ್ದ, ಖಾದಿ, ಗ್ರಾಮೋದ್ಯೋಗ ಇತ್ಯಾದಿಗಳು ಗಾಂಧಿ ಪ್ರತಿಮೆಯ ಪೂಜಾ ಮಂತ್ರಗಳಂತೆ ನನಗೆ ಕೇಳಿಸುತ್ತವೆ. ನನ್ನಂಥವರಿಗೆ ಇವೆಲ್ಲ ಹಾಗೆ ಕೇಳಿಸಲು ಕಾರಣಗಳು ಮುಖ್ಯವಾಗಿ ಎರಡು. ಒಂದು, ಗಾಂಧಿ ನಮ್ಮನ್ನಗಲಿಹೋದ ನಂತರದ ದಿನಗಳಲ್ಲಿ ಗಾಂಧಿ ಬದುಕಿನ ದರ್ಶನಕ್ಕೆ ಮುಖ ತಿರುಗಿಸಿದ ನಮ್ಮ ರಾಷ್ಟ್ರ ಪ್ರಭುತ್ವಗಳ ಆಡಳಿತ ಶೈಲಿ, ನೀತಿ, ಕಾರ್ಯಕ್ರಮಗಳಿಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುವ ಇಚ್ಛಾಶಕ್ತಿಯನ್ನು ಗಾಂಧಿ ಭವನದ ಆಡಳಿತ ಪ್ರಕಟಿಸದಿರುವುದು. ಎರಡು, ಪ್ರಭುತ್ವವು ಗಾಂಧಿ ನೇತೃತ್ವದ ರಾಷ್ಟ್ರೀಯ ಹೋರಾಟ ರೂಪಿಸಿ ಕೊಟ್ಟ ರಾಷ್ಟ್ರ ನಿರ್ಮಾಣದ ಹಾದಿ ಬಿಟ್ಟು ಹೊರಟಿದೆ ಎಂದು ಅದನ್ನು ಎಚ್ಚರಿಸುವ ಕೆಚ್ಚನ್ನಾಗಲಿ ಅದು ತೋರದಿರುವುದು.

ನಿಜ ಒಮ್ಮೆ ಎಪ್ಪತ್ತರ ದಶಕದಲ್ಲಿ ಜಯಪ್ರಕಾಶ ನಾರಾಯಣರ ಪ್ರಬುದ್ಧ ನಾಯಕತ್ವದಲ್ಲಿ ಗಾಂಧಿ ಸಂಸ್ಥೆಗಳು ಪ್ರಭುತ್ವದ ವಿರುದ್ಧ ಸಿಡಿದೆದ್ದವು. ಆದರೆ ಆ ಸಿಟ್ಟು ಸುಸ್ಥಿರವಾಗಿ ಸಾಕಾರಗೊಳ್ಳದೆ, ಪ್ರತಿಭಟನೆ ಸುಸ್ತಾಗಿ ಗಾಂಧಿ ಭವನವೂ ಸೇರಿದಂತೆ ಗಾಂಧಿ ಸಂಸ್ಥೆಗಳು ಮತ್ತೆ ಗಾಂಧಿವಾದದ ಗಾಣದೆತ್ತುಗಳಂತೆ ಅದೇ ಸುಲಭ ಉಪದೇಶಗಳ ಸವಕಲು ಹಾದಿಯನ್ನೇ ಹಿಡಿದಿವೆ. ವಿಶೇಷವಾಗಿ, ಕಳೆದ ತೊಂಬತ್ತರ ದಶಕದಲ್ಲಿ ಆರ್ಥಿಕ ಸುಧಾರಣೆಗಳ ಹೆಸರಲ್ಲಿ ಆರಂಭವಾದ ಜಾಗತೀಕರಣ ಮತ್ತು ಅದರ ಭಾಗವಾಗಿ ಅನುಸರಿಸಲಾಗುತ್ತಿರುವ 'ಅಭಿವೃದ್ಧಿ'ಯ ಹೊಸ ಪರಿಕಲ್ಪನೆ ಗಾಂಧಿ ಚಿಂತನೆಗೆ ತದ್ವಿರುದ್ಧವಾಗಿದೆ ಎಂಬ ಪರಿವೆಯೇ ಈ ಸಂಸ್ಥೆಗಳಿಗೆ ಇನ್ನೂ ಉಂಟಾದಂತಿಲ್ಲ. ಯಾವ ವಸಾಹತುಶಾಹಿ ವಿರುದ್ಧ ಗಾಂಧಿ ಹೋರಾಡಿ ಅದು ಎಂದೂ ಮತ್ತೆ ಭಾರತಕ್ಕೆ ಕಾಲಿಡದಂತಹ ಚಿಂತನಾಕ್ರಮವೊಂದನ್ನು ರೂಢಿಸಿಕೊಟ್ಟರೋ ಆ ವಸಾಹತುಶಾಹಿ ಇಂದು ಈ ಹೊಸ ಅಭಿವೃದ್ಧಿಯ ಪರಿಕಲ್ಪನೆಯ ಮೂಲಕ ನವವಸಾಹತುಶಾಹಿಯಾಗಿ ನಮ್ಮ ಒಳ-ಹೊರಗೆರಡನ್ನೂ ಪ್ರವೇಶಿಸಿಬಿಟ್ಟಿದೆ. ಸಮಾಜವನ್ನು ಹಲವು ನೆಲೆಗಳಲ್ಲಿ ವಿಘಟಿಸಿಬಿಟ್ಟಿದೆ. ನಮ್ಮ ಮೂಲ ಸ್ವಭಾವ, ಪ್ರತಿಭೆ, ಗುರುತು ಮತ್ತು ಆವರಣಗಳೇ ನಮಗೆ ಅನ್ಯವಾದಂತಾಗಿವೆ. ಇದರ ಪರಿಣಾಮವಾಗಿ ಹಲವು ಹೊಸ ಬಗೆಯ ಹಿಂಸಾಚಾರಗಳು, ಅಶ್ಲೀಲತೆಗಳು ನಮ್ಮ ಒಳಗನ್ನೂ, ಹೊರಗನ್ನೂ ಪ್ರವೇಶಿಸಿ ನಮ್ಮನ್ನು ಆಕ್ರಾಂತರನ್ನಾಗಿಸಿವೆ. ಇವನ್ನೆಲ್ಲ ತಹಬಂದಿಗೆ ತರಲು ಪ್ರಭುತ್ವಗಳು ವಿಕ್ಷಿಪ್ತ ಮತೀಯತೆ, ಜಾತೀಯತೆ, ರಾಷ್ಟ್ರೀಯತೆಗಳಂತಹ ಸಂಕುಚಿತ ವಾದಗಳನ್ನು ಚಲಾವಣೆಗೆ ತರಲು ಹೊರಟಿವೆ. ಗಾಂಧಿ ಭವನ ಇದರ ಪ್ರತಿಹಂತದಲ್ಲೂ ಪ್ರತಿರೋಧದ ವೇದಿಕೆಯಾಗಬೇಕಿತ್ತು. ಕನಿಷ್ಟ ತಾತ್ವಿಕ ಪ್ರತಿರೋಧದ ಮುಖವಾಣಿಯಾಗಬೇಕಿತ್ತು. ಆದರೆ ಆಯಿತೇ? ನಮ್ಮ ಪ್ರಭುತ್ವಗಳು ಒಂದು ಕಡೆ ಗಾಂಧಿ ಯಾವುದನ್ನು ಅನಾಹುತಕಾರಿ, ಜೀವ ವಿರೋಧಿ, ಅನೈತಿಕ, ಅನಾಧ್ಯಾತ್ಮಿಕ, ಅನ್ಯ ಎಂದು ಗುರುತಿಸಿದ್ದರೋ ಅಂತಹ ಮೌಲ್ಯಗಳನ್ನು ಪ್ರಚೋದಿಸುವ ಬದುಕಿನ ಮಾದರಿಯನ್ನು ಸಮರೋಪಾದಿಯಲ್ಲಿ ಕಟ್ಟುತ್ತಿರುವ ಹೊತ್ತಿನಲ್ಲೇ ಅದಕ್ಕೆ ಸಂಬಂಧವೇ ಇರದಂತೆ ಗಾಂಧಿ ಭವನ ಗಾಂಧಿ ಉಪದೇಶಗಳ ಯಜ್ಞಗಳನ್ನು ಸಕಲ (ಕೆಲವೊಮ್ಮೆ ಸಂಭ್ರಮದ ಸರ್ಕಾರಿ) ಔಪಚಾರಿಕತೆಗಳೊಂದಿಗೆ ನಡೆಸುತ್ತಾ ಹೋಗಿದೆ! ಗಾಂಧಿವಾದಕ್ಕಾಗಿ ಗಾಂಧಿವಾದ ಎಂಬಂತೆ ತೋರುವ ಈ ವರ್ತನೆ ನಡೆ-ನುಡಿಗಳ ಅಭಿನ್ನತೆ ಮತ್ತು ಸಾವಯತೆಗಳನ್ನೇ ಜೀವವಾಗಿಸಿ ಕೊಂಡಿರುವ ಗಾಂಧಿ ವ್ಯಕ್ತಿತ್ವ ಮತ್ತು ಚಿಂತನೆಗೆ ಮಾಡುವ ಅನ್ಯಾಯವೇ ಆಗಿದೆ. ಗಾಂಧಿ ಭವನದ ಚಾಲಕ ಶಕ್ತಿಯಾದ ಗಾಂಧಿ ಸ್ಮಾರಕ ನಿಧಿಗೆ ಪ್ರಭುತ್ವಗಳ ಅನುದಾನಗಳ ಕೊಡುಗೆ ಇದೆ ಎಂಬುದು ಗಾಂಧಿ ಭವನದ ಕಾರ್ಯ ಸ್ವಾಯತ್ತತೆಗೆ

ಅಡ್ಡಿಯಾಗಬಾರದು. ಏಕೆಂದರೆ ಆ ಅನುದಾನಗಳ ಹಣ ಜನರದ್ದು; ಗಾಂಧಿ ಬಗೆಗೆ ಅಭಿಮಾನವಿರಿಸಿಕೊಂಡ ರಾಷ್ಟ್ರ ಗಾಂಧಿಚೇತನದ ಕ್ರಿಯಾಶೀಲತೆಗಾಗಿ ನೀಡಲೊಪ್ಪಿರುವ ಹಣವದು. ಅದು ಆ ಚೇತನದ ಕ್ರಿಯಾಶೀಲತೆಯ ಅಭಿವ್ಯಕ್ತಿ ರೂಪದ ಚಟುವಟಿಕೆ ಗಳಿಗಾಗಿ ಖರ್ಚಾಗಬೇಕು. ಕುರುಡು ಅಭಿಮಾನದ ಪ್ರದರ್ಶನಗಳಿಗಲ್ಲ. ಗಾಂಧೀ ಭವನ ಎಂದರೆ ಗಾಂಧಿ ಮಠ ಎಂದಾಗಬಾರದಲ್ಲವೆ?

ಗಾಂಧಿ ಭವನದ ಚಟುವಟಿಕೆಗಳಲ್ಲಿ ಪ್ರಭುತ್ವದ ಪಾತ್ರ ಕನಿಷ್ಠತಮ ವಾಗಿರಬೇಕು; ಅನೌಪಚಾರಿಕ ವಾಗಿರಬೇಕು. ಹಾಗಾದಾಗ ಗಾಂಧಿ ಚಿಂತನೆಯ ಹಿನ್ನೆಲೆಯಲ್ಲಿ ತನಗೆ ಜನವಿರೋಧಿಯಾಗಿ ಕಂಡ ಪ್ರಭುತ್ವಗಳ ನೀತಿ-ಕಾರ್ಯಕ್ರಮಗಳ ಬಗ್ಗೆ ಟೀಕೆ ಮಾಡುವ, ವಿರೋಧ ವ್ಯಕ್ತಪಡಿಸುವಂತೆ ಪ್ರೇರೇಪಿಸಬಲ್ಲ ಆತ್ಮಸಾಕ್ಷಿ ಎಚ್ಚರಗೊಳ್ಳುತ್ತದೆ. ಪ್ರತಿರೋಧದ ಗಾಂಧಿ ಮಾರ್ಗಗಳು ತಂತಾನೇ ಕಣ್ಮುಂದೆ ತೆರೆದುಕೊಳ್ಳುತ್ತವೆ. ಇದಕ್ಕಾಗಿ ಗಾಂಧಿ ಭವನ ಸಾರ್ವಜನಿಕ ವಿಶ್ವಾಸಾರ್ಹತೆ ಯುಳ್ಳ ಚಿಂತಕರ ಚಾವಡಿಯೊಂದನ್ನು ಸಜ್ಜುಗೊಳಿಸಿ ಕೊಳ್ಳಬೇಕು ಮತ್ತು ಇದಕ್ಕೆ ಸದಾ ಹೊಸ ನೀರು ಸೇರ್ಪಡೆಯಾಗುತ್ತಿರುವಂತೆ ನೋಡಿಕೊಳ್ಳಬೇಕು. ಈ ಚಾವಡಿ ಒಂದು ಅನೌಪಚಾರಿಕ ಸಂಶೋಧನಾ ತಂಡವಾಗಿಯೂ ಕೆಲಸ ಮಾಡುತ್ತಾ, ಇಂದಿನ ಕಾಲಕ್ಕೆ ಗಾಂಧಿಯನ್ನು ಪುನರನ್ವೇಷಿಸುವ ಪ್ರಯತ್ನವನ್ನೂ ಮಾಡಬೇಕು. ಅಂದರೆ, ಇಂದು ಗಾಂಧಿ ಬದುಕಿದ್ದರೆ ಪ್ರಚಲಿತ ಸವಾಲು, ಸಮಸ್ಯೆ, ಇಕ್ಕಟ್ಟು-ಬಿಕ್ಕಟ್ಟುಗಳ ಬಗ್ಗೆ ಏನು ಯೋಚಿಸುತ್ತಿದ್ದರು, ಏನು ನಿಲುವು ತೆಗೆದುಕೊಳ್ಳುತ್ತಿದ್ದರು ಮತ್ತು ಯಾವ ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದರು ಎಂಬುದನ್ನು ಸಾಧಾರವಾಗಿ ಊಹಿಸುವ, ಕಲ್ಪಿಸಿಕೊಂಡು ಆ ಸಂಬಂಧದ ಕ್ರಿಯಾಶೀಲತೆಗಳ ಸಾಧ್ಯತೆಗಳನ್ನು ಮತ್ತು ರೂಪಗಳನ್ನು ಮಂಡಿಸುವ ಕೆಲಸವದು. ಇದರ ಆಧಾರದ ಮೇಲೆ ಗಾಂಧಿ ಭವನ ತನ್ನ ಚಟುವಟಿಕೆಗಳನ್ನು ರೂಪಿಸಿಕೊಳ್ಳಬೇಕು ಮತ್ತು ನಿಯಮಿತವಾಗಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಇವುಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತಹ ಒಂದು ನಿಶ್ಚಿತ ಸಮೂಹವನ್ನು ಸಂಘಟಿಸಿ ಅದು ಬೆಳೆಯುತ್ತಾ ಹೋಗುವಂತೆ ನೋಡಿಕೊಳ್ಳಬೇಕು ಗಾಂಧಿ ಅಥವಾ ಗಾಂಧಿವಾದಿ ಪುಸ್ತಕಗಳನ್ನು ದಂಡಿ ದಂಡಿಯಾಗಿ ಪ್ರಕಟಿಸಿ ಅವನ್ನು ಸುಲಭ ದರಗಳಲ್ಲಿ ಮಾರಿದರೆ ಅಥವಾ ಉಚಿತವಾಗಿ ಹಂಚಿದರೆ ಹೆಚ್ಚಿನ ಪ್ರಯೋಜನ ಆಗಲಾರದೇನೋ. ಅವನ್ನು ಓದುವ ಮತ್ತು ಅದರಿಂದ ಸ್ಫೂರ್ತಿಗೊಳ್ಳುವಂತಹ ಒಂದು ವಾತಾವರಣವಿಲ್ಲದಿದ್ದರೆ ಯಾರು ಅವನ್ನು ಗಂಭೀರವಾಗಿ ಓದುತ್ತಾರೆ? ಅಥವಾ ಓದಿದರೂ ಅದು ಒಣ ಓದು ಮಾತ್ರವಾಗಿ ಉಳಿಯುತ್ತದೆ.

ಇಲ್ಲಿಯೇ ಒಂದು ಮಾತನ್ನು ಹೇಳಬೇಕು. ಸ್ವಾತಂತ್ರ್ಯ ಘೋಷಣೆ ಗಾಂಧಿಯ ಇಷ್ಟದಂತೆ ಆಗಲಿಲ್ಲ. ಆ ಹೊತ್ತಿಗೆ ಅವರಿಗೆ ತಾನು ಸೋತನೇನೋ ಎಂಬ ಅನುಮಾನವೂ ಆರಂಭವಾಗಿತ್ತೆನಿಸುತ್ತದೆ. ರಾಷ್ಟ್ರ ವಿಭಜನೆಯ ಸಂದರ್ಭದ ಕೋಮು ದಂಗೆ ಮತ್ತು ಅದನ್ನು ನಿರ್ವಹಿಸಲಾಗದ ಹೊಸ ದೇಶಿ ಸರ್ಕಾರ ಹಿಡಿಯತೊಡಗಿದ್ದ ಹಾದಿ ಅವರನ್ನು ಕಂಗೆಡಿಸಿದ್ದವು. ಅವರ ನೌಖಾಲಿ ಯಾತ್ರೆ ಅವರ ಒಂದು ಆತ್ಮಾವಲೋಕನದ ಮಹಾಯಾತ್ರೆಯೇ ಆಗಿತ್ತು. ಅದರ ಒಳ ಮತ್ತು ಹೊರ ವಿವರಗಳನನ್ನು ಓದಿದ ಯಾರಿಗಾದರೂ ಹೀಗೆ ಅನ್ನಿಸದಿರದು. ಈ ಯಾತ್ರೆಯ ನಂತರದಲ್ಲೇ ಅವರು ಭಾರತದ ಉಪಖಂಡಕ್ಕಾಗಿ (ಅವರು ರಾಷ್ಟ್ರ ವಿಭಜನೆಯನ್ನು ಗಾಯಗೊಂಡ ಮನಸ್ಸಿನಿಂದಷ್ಟೇ ಒಪ್ಪಿದ್ದರು ಎಂಬುದನ್ನೂ ನಾವಿಲ್ಲಿ ಗಮನಿಸಬೇಕು) ಹೊಸ ಯೋಜನೆಯೊಂದರ ನೀಲನಕ್ಷೆಯನ್ನು ಸಿದ್ಧ ಮಾಡಿಟ್ಟುಕೊಂಡಿದ್ದರು ತಮ್ಮ 'ಹಿಂದ್ ಸ್ವರಾಜ್'ನ ತಾತ್ವಿಕತೆಯನ್ನೂ, ಕಾಂಗ್ರೆಸ್ ಜನಾಂದೋಲನ ಒಂದು ರಾಜಕೀಯ ಪಕ್ಷವಾಗಿ ಪರಿವರ್ತಿತವಾಗದೆ 'ಲೋಕ ಸೇವಕ ಸಂಘ'ವೆಂಬ ರಚನಾತ್ಮಕ ಕಾರ್ಯಕ್ರಮಗಳ ಸ್ವಯಂಸೇವಾ ಸಂಘಟನೆಯಾಗಿ (ಬಹುಶಃ ಆ ಹೊತ್ತಿಗಾಗಲೇ ಪ್ರಭಾವಶಾಲಿಯಾಗಿ ಬೆಳೆಯುತ್ತಿದ್ದ ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ ಪರ್ಯಾಯವಾಗಿ?) ಪುನರ್ರೂಪಗೊಳ್ಳಬೇಕೆಂಬ ತಮ್ಮ ಸಲಹೆಯನ್ನು ಒಪ್ಪದ ಕಾಂಗ್ರೆಸ್ ನಾಯಕತ್ವದಿಂದ ಗಾಂಧಿ ಭ್ರಮನಿರಸನಗೊಂಡಂತಿದ್ದರು. ಅದರ ಪರಿಣಾಮವಾಗಿ ಅವರು ತಮ್ಮ ಯುವ ಶಿಷ್ಯ ಸಮೂಹದೊಡನೆ (ಅವರಲ್ಲಿ ಹೆಚ್ಚಿನವರು ಸಮಾಜವಾದಿಗಳಾಗಿದ್ದವರು) ತಮ್ಮ ಈ ಹೊಸ ಯೋಜನೆಯ ಬಗ್ಗೆ ಸಮಾಲೋಚನೆಗಳನ್ನು ಆರಂಭಿಸಿದ್ದರು. (ತಮ್ಮ ಕೊಲೆಯ ಎರಡು ದಿನಗಳ ಮುನ್ನ ಗಾಂಧಿ ತಮ್ಮ ನೌಖಾಲಿ ಯಾತ್ರೆಯ ಸಹಚರರೂ, ಸಮಾಜವಾದಿ ಶಿಷ್ಯರೂ ಆಗಿದ್ದ ರಾಮಮನೋಹರ ಲೋಹಿಯಾ ಅವರೊಂದಿಗೆ ಸುದೀರ್ಘ ಮಾತುಕತೆ ನಡೆಸಿ, ಈ ಮಾತುಕತೆಗಳನ್ನು ಮುಂದುವರೆಸಲು ಎರಡು–ಮೂರು ದಿನಗಳ ನಂತರ ಬರಲು ಆಹ್ವಾನಿಸಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು.) ಗಾಂಧಿ ತಮ್ಮ ಜೀವಿತದ ಅಂತಿಮ ಘಟ್ಟದಲ್ಲಿ ತಮಗೆ ನೂರಿಪ್ಪತ್ತೈದು ವರ್ಷ ಬದುಕುವ ಆಸೆ ಇದೆಯೆಂದು ಪದೇ ಪದೇ ಹೇಳುತ್ತಿದ್ದುದರ ಹಿಂದೆ (ಸ್ವಾತಂತ್ರ್ಯ ಘೋಷಣೆಯ ಸಂದರ್ಭ ಮತ್ತು ಆನಂತರದ ಹಲವು ಬೆಳವಣಿಗೆಗಳು ಅವರಲ್ಲಿ ತ್ವರಿತವಾಗಿ ಸಾವನ್ನು ಆಹ್ವಾನಿಸುವ ಸಂಚಾರಿ ಭಾವವನ್ನು ಹುಟ್ಟಿಸಿತ್ತಾದರೂ) ಈ ಹೊಸ ಯೋಜನೆಯ ಅನುಷ್ಠಾನದ ಕನಸೂ ಇತ್ತೆಂದು ಅನಿಸುತ್ತದೆ. ಯೋಜನೆಯ ಆರಂಭಿಕ ಹೆಜ್ಜೆಯೇ ಪಾಕಿಸ್ತಾನದ ಪ್ರವಾಸವಾಗಿತ್ತು ಎಂಬುದು ಈ ಯೋಜನೆಯ

ಬಗ್ಗೆ ಕುತೂಹಲ ಹುಟ್ಟಿಸುತ್ತದೆ. ಹಾಗಾಗಿ ಗಾಂಧಿ ತಮ್ಮ ವಾರಸುದಾರರಿಗೆ ಬಿಟ್ಟುಹೋಗಿರುವ ನಿಜವಾದ ಮುಖ್ಯ ಜವಾಬ್ದಾರಿ ಎಂದರೆ ಇನ್ನುಳಿದಿದ್ದ ತಮ್ಮ ಆಯುಷ್ಯದಲ್ಲಿ ಗಾಂಧಿ ಏನನ್ನು ಮಾಡಬಯಸಿದ್ದರು ಎಂಬುದನ್ನು ಸಂ-ಶೋಧಿಸಿ ಆ ಕಾರ್ಯಗಳನ್ನು ಕೈಗೊಳ್ಳುವುದೇ ಆಗಿದೆ. ಗಾಂಧಿ ಭವನದ ಚಿಂತಕರ ಚಾವಡಿ ಇದನ್ನು ತನ್ನ ಕೆಲಸಗಳ ದಿಕ್ಸೂಚಿಯಾಗಿ ಪರಿಗಣಿಸಬೇಕಿದೆ.

ಇವಿಷ್ಟೂ ನಾನು ಗಾಂಧೀಜಿಯನ್ನು ಅರ್ಥ ಮಾಡಿಕೊಂಡ ಪ್ರಕ್ರಿಯೆಯ ಭಾಗವಾಗಿ ನನ್ನಲ್ಲಿ ಮೂಡಿದ ವಿಚಾರಗಳು. ಇವು ದಿವಂಗತ ಹೊ. ಶ್ರೀನಿವಾಸಯ್ಯನವರ ನೆನಪಿನ ನೆಪದಲ್ಲಿ ನನ್ನಿಂದ ಮೂಡಿವೆ ಎಂಬುದು ನಾನು ಹಿರಿಯ ಜೀವಕ್ಕೆ ಸಲ್ಲಿಸುತ್ತಿರುವ ಶ್ರದ್ಧಾಂಜಲಿಯೇ ಆಗಿದೆ ಎಂದು ನಾನು ಭಾವಿಸಿದ್ದೇನೆ.



ಗಾಂಧೀ ಭವನದ ರೂವಾರಿ ಡಾ. ಹೊ. ಶ್ರೀನಿವಾಸಯ್ಯ

– ವೇಮಗಲ್ ಸೋಮಶೇಖರ್

ಡಾ.ಹೊ.ಶ್ರೀನಿವಾಸಯ್ಯ ವೃತ್ತಿಯಲ್ಲಿ ಇಂಜನಿಯರ್. ಪ್ರವೃತ್ತಿಯಲ್ಲಿ ಗಾಂಧೀ ತತ್ತ್ವೋಪಾಸಕರು. ತುಂಬು ಚಟುವಟಿಕೆಯ ಶಿಸ್ತಿನ ಸೇವಕರಾಗಿ ಸ್ವಾತಂತ್ರ್ಯ ಹೋರಾಟದಲ್ಲೂ ಮುಖ್ಯ ಪಾತ್ರ ವಹಿಸಿದ್ದ ಇವರು ಅನೇಕ ಸಂಘ ಸಂಸ್ಥೆಗಳಲ್ಲಿ ಯಾವುದೇ ಫಲಾಪೇಕ್ಷೆಯಿಲ್ಲದೆ ಸೇವೆ ಸಲ್ಲಿಸಿ ಹಿರಿಯ ಕಿರಿಯರೆಲ್ಲರಿಗೂ ಆತ್ಮೀಯ ವ್ಯಕ್ತಿಯಾಗಿದ್ದರು. ಗ್ರಾಮೀಣ ರೈತಕುಟುಂಬದಲ್ಲಿ ಜನಿಸಿ ಸ್ವಯಂ ಪ್ರತಿಭೆ ಸಾಹಸಗಳಿಂದ ಉಚ್ಚ ವ್ಯಾಸಂಗ ಮಾಡಿ ಎಚ್.ಎ.ಎಲ್‌ನ ರೈಲ್ವೆ ಕೋಚ್ ನಿರ್ಮಾಣ ವಿಭಾಗದಲ್ಲಿ ಉನ್ನತ ಹುದ್ದೆಯಲ್ಲಿದ್ದವರು. ಸಾಹಿತ್ಯ ಕೃಷಿ ಅವರ ಪ್ರೀತಿಯ ಹವ್ಯಾಸ. ಇವರಲ್ಲಿದ್ದ ಅಪೂರ್ವ ವ್ಯಕ್ತಿತ್ವ, ಬಹುಮುಖ ಪ್ರತಿಭೆ, ನಿರಂತರ ಸ್ವಾರ್ಥ ರಹಿತ ಸಾರ್ವಜನಿಕ ಸೇವೆ, ಸೇವಾ ಮನೋಭಾವ, ಸೌಜನ್ಯ, ನಿರಾಡಂಬರತೆ, ಸರಳತೆ ಹಾಗೂ ಪರಿಶುದ್ಧ ಜೀವನ ಇಂದಿನ ಯುವಜನತೆಗೂ ದಾರಿದೀಪವಾಗಬಲ್ಲದು.

ಹೊನ್ನಪ್ಪ ಮತ್ತು ತಿಮ್ಮಮ್ಮ ದಂಪತಿಗಳೇ ಶ್ರೀನಿವಾಸಯ್ಯನವರನ್ನು ಹೆತ್ತ ಪುಣ್ಯವಂತರು. ತಂದೆಯ ಊರು ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿಯ ಚೌದ್ರಿಕೊಪ್ಪಲು. ತಾಯಿಯ ಊರು ಚೌದ್ರಿಕೊಪ್ಪಲಿನಿಂದ ಒಂದೂವರೆ ಕಿ.ಮೀ ದೂರದ ಅದಮಗೆರೆ. ಸುಮಾರು 1901ರಲ್ಲೇ ಮಲ್ಲೇಶ್ವರಕ್ಕೆ ಬಂದು ನೆಲಸಿದ ಈ ದಂಪತಿಗಳಿಗೆ 1925ರ ಜನವರಿ ನಾಲ್ಕರಂದು ಶ್ರೀನಿವಾಸಯ್ಯ ಜನಿಸಿದರು. ಚಿಕ್ಕ ವಯಸ್ಸಿನಿಂದಲೂ ತಾಯಿಯನ್ನು ಕೇಳದೆ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಅಂತಹ ಶ್ರೀನಿವಾಸಯ್ಯನವರು ಮಲ್ಲೇಶ್ವರದ ನಾರ್ಮಲ್ ಶಾಲೆ, ನಂತರ ಬಾಯ್ಸ್ ಮಿಡ್ಲ್ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡಿ ಶಿಸ್ತಿನಿಂದ ಬದುಕುವುದನ್ನು ರೂಢಿಸಿಕೊಂಡರು.

ಮಹಾತ್ಮ ಗಾಂಧೀಜಿ ತಮ್ಮ ಸಂಗಡಿಗರೊಂದಿಗೆ ಹರಿಜನರ ಏಳ್ಗೆಗಾಗಿ ಪ್ರವಾಸ ಮಾಡುತ್ತಾ 1934ರ ಜನವರಿ ನಾಲ್ಕರಂದು ಹಿಂದೂಪುರದಿಂದ ಬೆಂಗಳೂರಿಗೆ ಆಗಮಿಸಿ, ಅಂದು ಸಂಜೆಯೇ ಮಲ್ಲೇಶ್ವರಕ್ಕೆ ಭೇಟಿ ನೀಡಿದ್ದರು. ಆಗ ಒಂಬತ್ತು ವರ್ಷದ ಬಾಲಕ ಶ್ರೀನಿವಾಸಯ್ಯನಿಗೆ ಮಹಾತ್ಮರನ್ನು ಹತ್ತಿರದಿಂದ ಕಾಣುವ ಸೌಭಾಗ್ಯ

ದೊರಕಿತು. 12ನೇ ವಯಸ್ಸಿನಲ್ಲಿ ಅವರ ಭಾವನವರ ಪ್ರೇರಣೆಯಿಂದ ಖಾದಿಯನ್ನು ಧರಿಸಲು ಪ್ರಾರಂಭಿಸಿದರು. ಮುಂದೆ, 1937ರಲ್ಲಿ ಅವರ ತಂದೆ ನಿಧನ ಹೊಂದಿದರು. ಇನ್ನು ಮನೆಯಲ್ಲಿ ಉಳಿದವರು ತಾಯಿ ಮತ್ತು ತಂಗಿ ಮಾತ್ರ. 1942ರಲ್ಲಿ ಅವರು ಇಂಟರ್ ಮೀಡಿಯಟ್ ಕಾಲೇಜಿನಲ್ಲಿದ್ದಾಗಲೇ ಕ್ವಿಟ್‌ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದರು. ಅದೇ ವರ್ಷ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರ ನೇತೃತ್ವದಲ್ಲಿ ಮಲ್ಲೇಶ್ವರದಲ್ಲಿ ಗಾಂಧಿ ಸಾಹಿತ್ಯ ಸಂಘವನ್ನು ಸ್ಥಾಪಿಸಿ ಗ್ರಂಥ ಭಂಡಾರವನ್ನೂ ಆರಂಭಿಸಿದರು. ಆ ನಂತರ ಬಾಪು ಕರೆಯ ಮೇರೆಗೆ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಬ್ರಿಟಿಷರ ವಿರುದ್ಧ ಚಳವಳಿಯನ್ನು ತೀವ್ರಗೊಳಿಸುವ ಅಂಗವಾಗಿ ರಹಸ್ಯ ಪತ್ರಿಕೆಗಳ ಪ್ರಕಟಣೆ ಮತ್ತು ಹಂಚುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಈ ಕಾರ್ಯಗಳಿಗೆಲ್ಲಾ ಪ್ರೇರಣೆ ನೀಡಿದವರು ಸಿದ್ಧವನಹಳ್ಳಿ ಕೃಷ್ಣಶರ್ಮರು. ಈ ಕಾರ್ಯಗಳಿಂದ ಶ್ರೀನಿವಾಸಯ್ಯನವರು ಆರು ತಿಂಗಳು ಜೈಲು ಶಿಕ್ಷೆ ಕೂಡ ಅನುಭವಿಸಿದರು ಮುಂದೆ, 1946ರ ಜನವರಿ 21ರಿಂದ ಫೆಬ್ರವರಿ ಒಂದರವರೆಗೆ(12ದಿವಸ) ಮದರಾಸಿನಲ್ಲಿ ದಕ್ಷಿಣ ಭಾರತ ಹಿಂದೂಸ್ಥಾನಿ (ಹಿಂದಿ) ಪ್ರಚಾರ ಸಭೆಯ ರಜತ ಮಹೋತ್ಸವ ಸಮಾರಂಭವು ಮಹಾತ್ಮ ಗಾಂಧೀಯ ಅಧ್ಯಕ್ಷತೆಯಲ್ಲಿ ನಡೆಯಿತು. ಆ ಸಂದರ್ಭದಲ್ಲಿ ಮೂರು ದಿನ ಸ್ವಯಂಸೇವಕರಾಗಿ ಸೇವೆ ಸಲ್ಲಿಸಿದರು. ಹೀಗೆ 1947ರವರೆಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯ ಪಾತ್ರ ವಹಿಸುವ ಮೂಲಕ ತಮ್ಮ ಅಳಿಲು ಸೇವೆಯನ್ನು ಸಲ್ಲಿಸಿದರು.

ಕಡುಬಡತನ ಹಿನ್ನೆಲೆಯಿಂದ ಬಂದ ಶ್ರೀನಿವಾಸಯ್ಯನವರು ಸರ್ಕಾರ ನೀಡಿದ ಸ್ಕಾಲರ್‌ಷಿಪ್‌ನಿಂದ ತಮ್ಮ ಇಂಜನಿಯರಿಂಗ್ ಪದವಿ ಮುಗಿಸಿದರು. 1949ರಲ್ಲಿ ಹೆಚ್.ಎ.ಎಲ್.ನಲ್ಲಿ ಡಿಸೈನರ್ ಆಗಿ ಸೇರಿದ ಇವರು ರಜಾ ದಿನಗಳಲ್ಲಿ ತಾಯಿಯ ಆದೇಶದಂತೆ ತಂದೆಯ ಊರಾದ ಚೌದ್ರಿಕೊಪ್ಪಲಿಗೆ ಹೋಗಿ ವ್ಯವಸಾಯದ ಎಲ್ಲಾ ಅನುಭವ ಪಡೆದು ಅಲ್ಲಿಯೂ ಎಲ್ಲರ ಪ್ರೀತಿ ಗಳಿಸಿದರು. ನಂತರ ಚೌದ್ರಿಕೊಪ್ಪಲಿನಲ್ಲಿ ರೈತ ಸೇವಾ ಸಂಘ, ಶ್ರೀರಾಮ ಯುವಜನ ಸೇವಾ ಸಂಸ್ಥೆ ಹಾಗೂ ಶ್ರೀರಾಮ ಮಂದಿರವನ್ನು ಸ್ಥಾಪಿಸಿ ಹಲವು ಸಂಘ ಸಂಸ್ಥೆಗಳ ಸಹಯೋಗ ದೊಂದಿಗೆ ಚೌದ್ರಿಕೊಪ್ಪಲು ಮಾದರಿ ಗ್ರಾಮವಾಗಲು ಕಾರಣರಾದರು.

ಮಲ್ಲೇಶ್ವರದಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮರ ನೇತೃತ್ವದಲ್ಲಿ ಶ್ರೀರಾಮ ಮಂದಿರ ಟ್ರಸ್ಟ್, ಶ್ರೀ ರಾಮ ಕೊ ಅಪರೇಟಿವ್ ಬ್ಯಾಂಕ್(1953), ಶೇಷಾದ್ರಿ ಪುರಂನಲ್ಲಿ ಆಂಜನೇಯ ಕೋ-ಅಪರೇಟಿವ್ ಬ್ಯಾಂಕ್(1964) ಮುಂತಾದವನ್ನು ಪ್ರಾರಂಭಿಸಿದರು.

ಗಾಂಧೀ ಶತಮಾನೋತ್ಸವ ಸಂದರ್ಭದಲ್ಲಿ(1969) ಗಾಂಧೀ ಸಾಹಿತ್ಯ ಸಂಘದಲ್ಲಿ ಪ್ರಕೃತಿ ಚಿಕಿತ್ಸಾ ತರಗತಿಗಳನ್ನು ಪ್ರಾರಂಭಿಸಿದ ಶ್ರೀನಿವಾಸಯ್ಯನವರು ನಂತರದಲ್ಲಿ ಪ್ರಕೃತಿ ಜೀವನ ಕೇಂದ್ರವನ್ನು ಪ್ರಾರಂಭಿಸಿ ವಾರಕ್ಕೊಂದು ಸಲ ಉಚಿತ ಸಲಹಾ ವ್ಯವಸ್ಥೆಯನ್ನೂ ಒದಗಿಸಿದರು. ಆ ದಿನಗಳಲ್ಲಿ ಕನ್ನಡದಲ್ಲಿ ಪ್ರಕೃತಿ ಜೀವನದ ಬಗ್ಗೆ ಯಾವ ಪತ್ರಿಕೆಯೂ ಇರಲಿಲ್ಲ. ಆಗ ಇವರು 'ಪ್ರಕೃತಿ ಜೀವನ' ಎಂಬ ತ್ರೈಮಾಸಿಕ ಪತ್ರಿಕೆಯನ್ನು 1972ರಲ್ಲಿ ಕನ್ನಡದಲ್ಲಿ ಪ್ರಾರಂಭಿಸಿ ದೇ.ಜವರೇಗೌಡರಿಂದ ಪ್ರಥಮ ಸಂಚಿಕೆಯನ್ನು ಬಿಡುಗಡೆ ಮಾಡಿಸಿದರು. (ಅದು ಈಗ ಮಾಸಪತ್ರಿಕೆಯಾಗಿ ಪ್ರಕಟವಾಗುತ್ತಿದೆ.) ಕರ್ನಾಟಕದಲ್ಲಿ ಪ್ರಕೃತಿ ಚಿಕಿತ್ಸೆ ಬೆಳೆಯಲು ಶ್ರೀನಿವಾಸಯ್ಯನವರು ಮುಖ್ಯ ಪಾತ್ರ ವಹಿಸಿದರು. 1975ರಿಂದ ಕಡಿದಾಳ್ ಮಂಜಪ್ಪನವರು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಆಗ ಸರ್ದಾರ್ ವೆಂಕಟರಾಮಯ್ಯನವರು ಅದರ ಕಾರ್ಯದರ್ಶಿಯಾಗಿದ್ದರು.

ಶ್ರೀನಿವಾಸಯ್ಯನವರು ಸಮಾಜಸೇವಾ ಸಂಸ್ಥೆಗಳಿಗೆ ಸಹಾಯ ಮಾಡುವ ಉದ್ದೇಶದಿಂದ 1979ರಲ್ಲಿ ತಮ್ಮ ಪತ್ನಿ ಹೆಸರಿನಲ್ಲಿ 'ಜಯಶ್ರೀ ಟ್ರಸ್ಟ್' ಸ್ಥಾಪನೆ ಮಾಡಿದರು. ಅದೇ ವರ್ಷ ಒಕ್ಕಲಿಗರ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿ ಮತ್ತು ಖಜಾಂಚಿಯಾಗಿ ಸುಮಾರು 20 ವರ್ಷಗಳ ಕಾಲ ಸೇವೆಸಲ್ಲಿಸಿ ಬಿ.ಬಿ.ಎಂ.ಪಿ ಕಛೇರಿ ಬಳಿ ಇರುವ ಒಕ್ಕಲಿಗರ ಸಂಘ ಕಟ್ಟಡ, ಇಂಜನಿಯರಿಂಗ್ ಕಾಲೇಜು ಮತ್ತು ವೈದ್ಯಕೀಯ ಕಾಲೇಜು ಪ್ರಾರಂಭವಾಗಲು ಮುಖ್ಯ ಕಾರಣರಾದರು.

ಆಚಾರ್ಯ ವಿನೋಬಾ ಅವರ ಕಾರ್ಯದರ್ಶಿಯಾಗಿದ್ದ ಜಯದೇವ್ ಅವರ ಆಹ್ವಾನದ ಮೇರೆಗೆ ಪವನಾರ್ ಆಶ್ರಮಕ್ಕೆ ಭೇಟಿ ನೀಡಿ 1982ರ ಸೆಪ್ಟೆಂಬರ್ 11ರಂದು ನಡೆದ ವಿನೋಬಾ ಅವರ 88ನೇ ಕೊನೆ ಜನ್ಮ ದಿನಾಚರಣೆಯಲ್ಲಿ ಭಾಗಿಯಾದರು. ಆಗ ವಿನೋಬಾಜಿಯವರು ಕನ್ನಡದಲ್ಲಿ ಆಶೀರ್ವದಿಸಿದ್ದು ಶ್ರೀನಿವಾಸಯ್ಯನವರಿಗೆ ಆಶ್ಚರ್ಯವನ್ನುಂಟು ಮಾಡಿತು. ವಿನೋಬಾಜಿ ಇದಾದ ಕೆಲವು ದಿವಸಗಳಲ್ಲಿ ಅಂದರೆ 1982ರ ಡಿಸೆಂಬರ್ 15ರಂದು ನಿಧನ ಹೊಂದಿದರು.

ಬಿ.ಇ.ಎಂ.ಎಲ್‌ನಲ್ಲಿ ಉಪವ್ಯವಸ್ಥಾಪಕರಾಗಿದ್ದು 1983ರಲ್ಲಿ ನಿವೃತ್ತಿ ಹೊಂದಿದ್ದ ಶ್ರೀನಿವಾಸಯ್ಯನವರು ಗಾಂಧೀಭವನಕ್ಕೆ ಆಗಾಗ್ಗೆ ಹೋಗಿ ಬರುತ್ತಿದ್ದರು. ಇವರಲ್ಲಿದ್ದ ಆಸಕ್ತಿಯನ್ನು ಕಂಡ ಕಡಿದಾಳ್ ಮಂಜಪ್ಪನವರು ಕರ್ನಾಟಕ ಸ್ಮಾರಕ ನಿಧಿ ಅಧ್ಯಕ್ಷರನ್ನಾಗಿ 1985ರಲ್ಲಿ ಇವರನ್ನು ನೇಮಿಸಿದರು. ಅಲ್ಲಿಂದೀಚೆಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಇವರು ಕಳೆದ 32 ವರ್ಷಗಳಲ್ಲಿ ಗಾಂಧೀಭವನವನ್ನು ವಿಸ್ತರಿಸಿ ಭವ್ಯವಾಗಿ ಬೆಳೆಸಿದರು.

ಶ್ರೀರಾಮ ಮಂದಿರ ಟ್ರಸ್ಟ್ ವತಿಯಿಂದ 1976ರಲ್ಲಿ ವೃದ್ಧಾಶ್ರಮ ಪ್ರಾರಂಭಿಸಿ, ಅತಿ ಕಡಿಮೆ ವೆಚ್ಚದಲ್ಲಿ ಉತ್ತಮ ಮಟ್ಟದ ಸೇವೆಯನ್ನು ನೀಡುವಲ್ಲಿ ಯಶಸ್ವಿಯಾದರು. ಮಲ್ಲೇಶ್ವರದ ಹಿರಿಯ ನಾಗರಿಕರಿಗೆ ಹಲವು ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿ ಹಿರಿಯ ನಾಗರಿಕ ವೇದಿಕೆಯನ್ನು ಸ್ಥಾಪಿಸಿದರು.

ನಾಡಿನ 300ಕ್ಕೂ ಹೆಚ್ಚು ಸಂಘ ಸಂಸ್ಥೆಗಳಿಂದ ಸನ್ಮಾನಿಸಲ್ಪಟ್ಟಿರುವ ಕರ್ನಾಟಕದ ಏಕೈಕ ವ್ಯಕ್ತಿ ಹೊ. ಶ್ರೀನಿವಾಸಯ್ಯನವರು. ಇವರ ಒಂಬತ್ತು ದಶಕಗಳ ಬದುಕು ಹಲವಾರು ಏಳು-ಬೀಳುಗಳನ್ನು ಕಂಡು ಕಠಿಣ ಪರಿಶ್ರಮದಿಂದ ಅತ್ಯಂತ ಸರಳ ಹಾಗೂ ಪ್ರಾಮಾಣೀಕತೆಯಿಂದ ರೂಪಿತಗೊಂಡಿದ್ದು. ಸ್ವಾತಂತ್ರ್ಯದ ಚಳವಳಿಯಲ್ಲಿ ಅವರು ವಹಿಸಿದ ಧೈರ್ಯ, ಸ್ಥೈರ್ಯ ಇಂದಿನ ಸಮಾಜಕ್ಕೆ ಹಾಗೂ ಯುವಕರಿಗೆ ಅಪೂರ್ವ ಮಾದರಿಯಾಗಿದೆ. ಅವರು ಕೇವಲ ಒಬ್ಬ ವ್ಯಕ್ತಿಯಾಗಿ ಬದುಕದೆ ಆದರ್ಶದ ಬಹು ದೊಡ್ಡ ಶಕ್ತಿಯಾಗಿ ಬದುಕಿ 'ಕರ್ನಾಟಕದ ಗಾಂಧೀ' ಎಂದೇ ಹೆಸರು ಪಡೆದಿದ್ದ ಹಿರಿಯ ಗಾಂಧಿವಾದಿ ಡಾ.ಹೊ.ಶ್ರೀನಿವಾಸಯ್ಯನವರು 2017ರ ಏಪ್ರಿಲ್ ಆರರಂದು ಇನ್ನಿಲ್ಲವಾದರು. ಆದರೂ ಅವರು ತಮ್ಮ ಮೌಲ್ಯಯುತ ಜೀವನ ಕ್ರಮದಿಂದಾಗಿ ಎಲ್ಲಾ ಕಾರ್ಯಕ್ಕೂ ಮಾನ್ಯರಾಗುತ್ತಾರೆ. ಬೆಂಗಳೂರಿನಲ್ಲಿ ಅವರು ವಾಸದ ಮನೆಯಿರುವ ರಸ್ತೆಗೆ ಅವರಿದ್ದಾಗಲೆ ಅವರ ಹೆಸರನ್ನೇ ಇಡುವ ಮೂಲಕ ಬೆಂಗಳೂರು ಮಹಾನಗರ ಪಾಲಿಕೆ ತನ್ನ ಗೌರವವನ್ನು ಸಮರ್ಪಿಸಿದೆ.

ನನಗೆ ಸಿಕ್ಕಿದ ನಿಧಿ

ಸುಮಾರು 1990ರ ದಶಕದಲ್ಲಿ ನನಗೆ ಶ್ರೀನಿವಾಸಯ್ಯನವರ ಪರಿಚಯವಾಯಿತು. 2003-2004ರಲ್ಲಿ ನಾನು ಬರೆದ "ಬೆಂಗಳೂರಿನಲ್ಲಿ ಮಹಾತ್ಮಾ ಗಾಂಧಿ" ಕೃತಿಗೆ 2005ರಲ್ಲಿ ಗಾಂಧೀ ಜಯಂತಿ ದಿನದಂದು ಗಾಂಧೀ ಭವನದಲ್ಲಿ ನಡೆದ ಸಮಾರಂಭದಲ್ಲಿ ಜಯಶ್ರೀ ಟ್ರಸ್ಟ್ ಪುರಸ್ಕಾರ ದೊರೆಯಿತು. ಅಂದು ನಾನು ಶ್ರೀನಿವಾಸಯ್ಯನವರನ್ನು ಕಂಡು "ಏನ್ ಸಾರ್ ನನ್ನ ಪುಸ್ತಕಕ್ಕೆ ಪ್ರಶಸ್ತಿ ಕೊಟ್ಟುಬಿಟ್ಟಿದ್ದೀರಲ್ಲಾ" ಎಂದೆ. ಆಗ ಅವರು ನಗುನಗುತ್ತಾ 'ನೀವು ಕೆಲಸ ಮಾಡಿದ್ದೀರಿ ಅದಕ್ಕೆ ಕೊಟ್ಟಿದ್ದೀವಿ' ಎಂದರು. ನನಗೆ ಬಹಳ ಸಂತೋಷವಾಯಿತು. ಅಂದಿನಿಂದ ಶ್ರೀನಿವಾಸಯ್ಯನವರು ನನಗೆ ಬಹಳ ಹತ್ತಿರವಾದರು. ಸ್ನೇಹಿತರಾದ ಸಂತೆ ನಾರಾಯಣ ಸ್ವಾಮಿಯವರ ಜೊತೆಯಲ್ಲಿ ನಾನು ಗಾಂಧೀ ಭವನಕ್ಕೆ ಹೋದಾಗಲೆಲ್ಲಾ ಅವರ ಕಛೇರಿಗೆ ಹೋಗುತ್ತಿದ್ದೆವು. ನಾನು ಸ್ವಲ್ಪ ದೂರದಲ್ಲಿ ಕುಳಿತುಕೊಳ್ಳುತ್ತಿದ್ದೆ. ಅವರು 'ಬನ್ರೀ ಇಲ್ಲಿ ಕುಳಿತುಕೊಳ್ಳಿ' ಎಂದು ಹತ್ತಿರ ಕುಳ್ಳಿರಿಸಿಕೊಂಡು 'ಏನು ಸಮಾಚಾರ' ಎಂದು ಕೇಳಿ ತಿಳಿ ಹಾಸ್ಯದಿಂದ ಮಾತನಾಡಿ 'ತುಳಸಿ ಗ್ರೀನ್ ಟೀ' ಕುಡಿಸಿ ಕಳುಹಿಸುತ್ತಿದ್ದರು. ನಂತರದಲ್ಲಿ ಒಂದು ದಿವಸ ಶ್ರೀನಿವಾಸಯ್ಯನವರು ನನಗೆ

ಫೋನ್ ಮಾಡಿ "ಗಾಂಧೀಜಿ ಕಲಬುರಗಿಗೆ ಭೇಟಿ ನೀಡಿದ್ದಾರಾ" ಎಂದು ಕೇಳಿದರು. ತಕ್ಷಣ ನಾನು "ಗಾಂಧೀಜಿ ಗುಲ್ಬರ್ಗಕ್ಕೆ 1927ರ ಫೆಬ್ರವರಿ 22 ಮತ್ತು 23ರಂದು(ಎರಡು ದಿವಸ) ಭೇಟಿ ನೀಡಿದ್ದರು" ಎಂದು ತಿಳಿಸಿದೆ. ಆಗ ಶ್ರೀನಿವಾಸಯ್ಯನವರು "ರೀ ನಿಮಗೆ ಪಿಹೆಚ್‌ಡಿ ಅವಾರ್ಡ್ ಕೊಡಬೇಕ್ರಿ" ಎಂದು ಹೇಳಿದರು. ಆಗ ನನಗೆ ಆದ ಸಂತೋಷ ಹೇಳತೀರದು.

ಮಹಾತ್ಮ ಗಾಂಧಿ ರಸ್ತೆಯಲ್ಲಿನ ಮೆಟ್ರೋ ಆರ್ಟ್ ಗ್ಯಾಲರಿಯಲ್ಲಿ 2014ರ ಅಕ್ಟೋಬರ್ ಎರಡರಿಂದ 13ರವರೆಗೆ ನಾನು ಸಂಗ್ರಹಿಸಿದ್ದ 'ಬೆಂಗಳೂರಿನಲ್ಲಿ ಗಾಂಧೀಜಿ" ಛಾಯಾಚಿತ್ರಗಳ ಪ್ರದರ್ಶನ ಏರ್ಪಾಟಾಗಿತ್ತು ಆ ಪ್ರದರ್ಶನದ ಅಂಗವಾಗಿ ಅಕ್ಟೋಬರ್ ಎರಡರಂದು ಸಂಜೆ ನಾನು 'ಧ್ಯಾನಸ್ತ ಗಾಂಧೀಜಿ' ಭಂಗಿಯಲ್ಲಿ ಕುಳಿತುಕೊಂಡಿದ್ದೆ. ಅಂದು ಶ್ರೀನಿವಾಸಯ್ಯನವರು ಆಗಮಿಸಿ ಗಾಂಧೀಜಿ ಉಡುಗೆಯಲ್ಲಿದ್ದ ನನ್ನನ್ನು ಕಂಡು ಮೆಚ್ಚಿಕೊಂಡರು.

2015ರ ಮೇ ಎಂಟರಂದು ಗಾಂಧೀಜಿ ಪ್ರಥಮ ಬಾರಿಗೆ ಬೆಂಗಳೂರಿಗೆ ಭೇಟಿ ನೀಡಿದ್ದ ಪ್ರಯುಕ್ತ ಶತಮಾನೋತ್ಸವ ಆಚರಣೆ ನಡೆಸಲು ಏರ್ಪಾಟು ಮಾಡುತ್ತಿದ್ದರು. ಶ್ರೀನಿವಾಸಯ್ಯನವರು ನನ್ನನ್ನು ಕರೆದು ಅಂದು ಉತ್ಸವದ ಅಂಗವಾಗಿ ನಡೆಯಲಿರುವ ಕಾರ್ಯಕ್ರಮದಲ್ಲಿ ನೀವೇ ಮುಖ್ಯ ಪಾತ್ರಧಾರಿ, ಅಂದು ನಗರದ ರೈಲ್ವೆ ನಿಲ್ದಾಣದಿಂದ ಗಾಂಧೀ ಭವನದವರೆಗೆ ನಡೆಯಲಿರುವ ಮೆರವಣಿಗೆಯಲ್ಲಿ ಗಾಂಧಿ ಉಡುಗೆಯೊಂದಿಗೆ ನೀವು ಭಾಗವಹಿಸಬೇಕು ಎಂದು ತಿಳಿಸಿದರು. ನಾನು ಸಂತೋಷದಿಂದ ಒಪ್ಪಿಕೊಂಡು ಭಾಗವಹಿಸಿದೆ. ಕಾರ್ಯಕ್ರಮವೂ ಯಶಸ್ವಿಯಾಯಿತು. ಅಂದು ನನ್ನನ್ನು ಕಂಡಿದ್ದ ಜನ ಅಂದಿನಿಂದ ನನ್ನನ್ನು ಕಂಡಕೂಡಲೆ 'ಏನು ಗಾಂಧಿಯವರೇ ಚನ್ನಾಗಿದ್ದೀರಾ' ಎಂದೇ ಮಾತನಾಡಿಸುತ್ತಾರೆ. ಇದರಿಂದ ನನಗೆ ಎಷ್ಟೋ ಸಂತೋಷವಾಗುತ್ತದೆ. ಆನಂತರದಲ್ಲಿ ಎಷ್ಟೋ ಕಡೆ ನನ್ನನ್ನು ಗಾಂಧಿ ವೇಷಕ್ಕೆ ನೀವೇ ಸರಿಯಾದ ವ್ಯಕ್ತಿ ಎಂದು ನನ್ನನ್ನು ಆಹ್ವಾನಿಸಿದ್ದಾರೆ. ಆಹ್ವಾನಿಸುತ್ತಲೂ ಇದ್ದಾರೆ. ಇದಕ್ಕೆಲ್ಲಾ ಮುಖ್ಯ ಕಾರಣಕರ್ತರು ಶ್ರೀನಿವಾಸಯ್ಯನವರು.

2016ರಲ್ಲಿ ಒಂದು ದಿವಸ ಮರೆಯಲಾಗದ ದಿನ. ನಮ್ಮೂರಾದ ವೇಮಗಲ್‌ನ ಕಾಲೇಜಿನಲ್ಲಿ ಗಾಂಧಿ ಅಧ್ಯಯನ ಕೇಂದ್ರ ಮತ್ತು ಧ್ಯಾನಸ್ಥ ಗಾಂಧಿ ಪ್ರತಿಮೆ ಉದ್ಘಾಟನಾ ಕಾರ್ಯಕ್ರಮ. ಅಂದು ಶ್ರೀನಿವಾಸಯ್ಯನವರು ಮತ್ತು ಆಗ್ಗೆ ಗೌರವ ಕಾರ್ಯದರ್ಶಿಗಳಾಗಿದ್ದ ಪ್ರೊ.ಜಿ.ಬಿ.ಶಿವರಾಜ್ ಅವರು ನನ್ನನ್ನೂ (ನಮ್ಮೂರಾಗಿದ್ದರಿಂದ) ಜೊತೆಯಲ್ಲಿ ಕರೆದುಕೊಂಡು ಹೋಗಿದ್ದರು. ಅಂದು ಶ್ರೀನಿವಾಸಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮ ವೇಮಗಲ್ಲಿನ ಇತಿಹಾಸದಲ್ಲಿ ಮರೆಯಲಾಗದ ದಿನ.

ನಾನು ಮತ್ತು ನಾರಾಯಣಸ್ವಾಮಿ ಗಾಂಧೀಭವನಕ್ಕೆ ಆಗಾಗ್ಗೆ ಭೇಟಿ ನೀಡುತ್ತಿದ್ದೆವು. ಅದೇ ರೀತಿ 2017ರ ಜನವರಿ ನಾಲ್ಕರ ಬುಧವಾರದಂದು ಮಧ್ಯಾಹ್ನ ಹೋದೆವು. ಅಂದು ಶ್ರೀನಿವಾಸಯ್ಯನವರ ಹುಟ್ಟುಹಬ್ಬ. ಗಾಂಧೀ ಭವನದ ವ್ಯವಸ್ಥಾಪಕರಾದ ಯೋಗೇಶ್ ಅವರು "ಸಾರ್ ಇಂದು ಶ್ರೀನಿವಾಸಯ್ಯನವರ ಹುಟ್ಟಿದ ಹಬ್ಬ, ಸಂಜೆ ಕಾರ್ಯಕ್ರಮವಿದೆ. ನೀವು ಬರಬೇಕು" ಎಂದರು. ಸರಿ ಸಂಜೆ ಮಹಾತ್ಮ ಗಾಂಧೀಯವರ ಪ್ರತಿಮೆಯ ಮುಂದೆ ಶ್ರೀನಿವಾಸಯ್ಯನವರ ಹುಟ್ಟಹಬ್ಬ ಆಚರಿಸಲಾಯಿತು. ಗಾಂಧೀಭವನದ ಸಿಬ್ಬಂದಿ ಎಲ್ಲರೂ ಹಾಜರಿದ್ದರು. ಸರಳವಾಗಿ ನಡೆದ ಆ ಕಾರ್ಯಕ್ರಮ ಶ್ರೀನಿವಾಸಯ್ಯನವರ ಕೊನೆಯ ಹುಟ್ಟುಹಬ್ಬವಾಗಿತ್ತು. ಹೂವಿನ ಜೊತೆಯಲ್ಲಿ ನಾರೂ ಸ್ವರ್ಗಕ್ಕೆ ಹೋದ ಹಾಗೆ ನಾನೂ ಶ್ರೀನಿವಾಸಯ್ಯನವರ ಸಹವಾಸ ಮಾಡಿದ ಮೇಲೆ ಅವರಿಂದ ಪ್ರೇರಣೆ ಹೊಂದಿ ಸರಳ ಜೀವನ ಸಾಗಿಸುತ್ತಿದ್ದೇನೆ.

ಜೈ ಜಗತ್.



ನನ್ನ ಗೆಳೆಯ ಶ್ರೀನಿವಾಸಯ್ಯ

– ಪ್ರೊ. ಎನ್. ಕೃಷ್ಣಸ್ವಾಮಿ

ಶ್ರೀನಿವಾಸಯ್ಯನ ಮೊದಲ ನೆನಪು ಗಾಂಧೀ ಸಾಹಿತ್ಯ ಸಂಘದ್ದು. 1942ರಲ್ಲಿ ಕ್ವಿಟ್‌ಇಂಡಿಯಾ ಚಳುವಳಿ ಆಗಸ್ಟ್ ನಲ್ಲಿ ಜೋರಾಗಿ ಆರಂಭ ಆಯಿತು. ಮೆರವಣಿಗೆಗಳು, ಭಾಷಣಗಳು ಇತ್ಯಾದಿ. ಅಕ್ಟೋಬರ್ ಗಾಂಧೀ ಜಯಂತಿ ಹತ್ತಿರ ಬಂತು. ನಮ್ಮನ್ನು ಚಂದ್ರಶೇಖರ ಅವನ ಮಿತ್ರ ಎನ್.ಜಿ. ರಾಮಚಂದ್ರ ಗಾಂಧೀಜಯಂತಿ ಆಚರಿಸಲು ಮಲ್ಲೇಶ್ವರದಲ್ಲಿ ಚಂದಾ ಎತ್ತಲು ಆರಂಭಿಸಿದರು. ತಾನೇ ಬೇರೆಯಾಗಿ ಚಂದಾ ಎತ್ತುತ್ತಿದ್ದಾಗ ಚಂದ್ರ ತಾನು ಶೇಖರಿಸಿದ ಹಣವನ್ನು ಇವರಿಗೆ ಒಪ್ಪಿಸಿದ. ಗಾಂಧೀ ಜಯಂತಿ ಚೆನ್ನಾಗಿ ನಡೆಯಿತು. ಮಲ್ಲೇಶ್ವರದಲ್ಲಿ ಸುಸಂಸ್ಕೃತ ಜನ ಸ್ಪಂದಿಸಿದರು. ಗಾಂಧೀ ಜಯಂತಿ ಚರಖಾ, ಪ್ರಾರ್ಥನಾ ಸಭೆ, ಭಾಷಣಗಳು ರಾಮ ಮಂದಿರದಲ್ಲಿ. ಸ್ವಲ್ಪ ಹಣ ಮಿಕ್ಕಿತು. ಇದರಲ್ಲಿ ಗಾಂಧೀ ಸಾಹಿತ್ಯದ ಪುಸ್ತಕಗಳ ಒಂದು ಪುಸ್ತಕ ಭಂಡಾರ ನಿರ್ಮಿಸಲಾಯಿತು. ಇದಕ್ಕೆ ಸ್ಥಳ ಶ್ರೀನಿವಾಸಯ್ಯನ ತಾಯಿ ನಿರ್ಮಿಸಿದ ವಠಾರದಲ್ಲಿ ಒಂದು ಸಣ್ಣ ಮನೆ ಲೈಬ್ರೇರಿಯನ್ ಜಯಸಿಂಹರಾವ್ ಮುಂದೆ ಜಯದೇವ ಅವರು ವಿನೋಬಾ ಅವರ ಆಪ್ತ ಸೇವಕನಾಗಿ ಪ್ರಸಿದ್ಧಿ ಪಡೆದ ಮೇಲೂ ಶ್ರೀನಿವಾಸಯ್ಯ ಗಾಂಧೀ ಸಾಹಿತ್ಯ ಸಂಘದ ಮುಖ್ಯ ಕಾರ್ಯಕರ್ತನಾದ. ಸಿದ್ದವನಹಳ್ಳಿ ಕೃಷ್ಣಶರ್ಮ ಅವರು ಮಾರ್ಗದರ್ಶಕರಾದರು. ಸಂಘ ವರ್ಷ ವರ್ಷವೂ ಗಾಂಧೀ ಜಯಂತಿ ಆಚರಿಸುತ್ತಿತ್ತು. ಉಳಿದ ಸಮಯದಲ್ಲಿ ಚರಖಾ ಮೊದಲಾದ ಕಾರ್ಯಕ್ರಮಗಳು ಒಂದು ಮುಖ್ಯ ಕಾರ್ಯಕ್ರಮ ಖಾದೀ–ಗಾಂಧೀ ಸಾಹಿತ್ಯ ಪ್ರಚಾರ, ವಿತರಣೆ ಒಂದು ತಳ್ಳುಗಾಡಿಯಲ್ಲಿ ಗಾಂಧೀ ಸಾಹಿತ್ಯ, ಖಾದೀ ಬಟ್ಟೆಗಳನ್ನು ಬೀದಿ ಬೀದಿಗೂ ತೆಗೆದುಕೊಂಡು ಹೋಗಿ ಮನೆ ಮನೆಗೂ ಮಾರಾಟ ಮಾಡಿದೆವು. ಶ್ರೀನಿವಾಸಯ್ಯ ಇದರಲ್ಲಿ ಮುಖಂಡತ್ವ ವಹಿಸಿದರು. ಒಂದು ತಿಂಗಳು ಗ್ರಾಮ ಸೇವೆಯ ಶಿಬಿರ ಬೇಸಿಗೆ ರಜದ ಕಾಲದಲ್ಲಿ ನಡೆಯಿತು. ಸ್ಥಳ ಮಜುರಾ ಹೊಸಹಳ್ಳಿ ಸುಮಾರು 30–40 ಯುವಕರು ಗ್ರಾಮ ಸೇವೆ ಮಾಡಿದೆವು. ದೊಡ್ಡಬಳ್ಳಾಪುರದ ಹತ್ತಿರ ಒಂದು ರಸ್ತೆಯ ನಿರ್ಮಾಣ ವಯಸ್ಕರ ಶಿಕ್ಷಣ ಬೆಳಗ್ಗೆ ಪ್ರಾರ್ಥನಾ ಸಭೆ, ಅದರಲ್ಲಿ ನನ್ನದೇ ಮುಖ್ಯ ಪಾತ್ರ. ಶ್ರೀನಿವಾಸಯ್ಯನೇ ನಾಯಕ. ಡಾ॥ ನಂಜುಂಡಯ್ಯನವರು ನಮಗೆ ವೈದ್ಯಕೀಯ

ನೆರವು ನೀಡಿದರು. ಎಲ್ಲರಿಗೂ ಹಿರಿಯರಾದ ಅವರು ನಮ್ಮ ಹಿತಚಿಂತಕರೂ ಆದರು. ಗ್ರಾಮ ಉತ್ತಮವಾಯಿತೋ ಇಲ್ಲವೋ ನಮಗೆ ಈ ಶಿಬಿರ ಒಳ್ಳೆ ಅನುಭವ ಕೊಟ್ಟಿತು.

ಶ್ರೀನಿವಾಸಯ್ಯನ ಪಾರ್ಟಿ : ಶ್ರೀನಿವಾಸಯ್ಯನ ತಂದೆ ಅವನ ಚಿಕ್ಕವಯಸ್ಸಿನಲ್ಲೇ ತೀರಿಕೊಂಡಿದ್ದರು.ತಾಯಿಯೇ ಅವನನ್ನು ಬೆಳಸಿ ವಿದ್ಯಾವಂತನನ್ನಾಗಿ ಮಾಡಿದವರು. ಅವನು ಬಿ.ಇ. ಪಾಸು ಮಾಡಿದ. ತಾಯಿ ಊರಿಗೆ ಹೋಗಿದ್ದರು. ಎಲ್ಲ ಸ್ನೇಹಿತರಿಗೂ ತಿಂಡಿ ಕೊಡಿಸಬೇಕು. ನಾನು ಮುಂದೆ ಬಂದು ಉಪ್ಪಿಟ್ಟು, ಕೇಸರಿ ಬಾತು, ಆಲೂಗಡ್ಡೆ ಚಿಪ್ಸ್ ಅವರ ಮನೆಯಲ್ಲೇ ತಯಾರಿಸಿದೆ. ಪುಷ್ಕಳವಾದ ಪಾರ್ಟಿ ಆಯಿತು.

ಶ್ರೀ ಸಿದ್ದವನ ಹಳ್ಳಿ ಕೃಷ್ಣಶರ್ಮರು : ಶ್ರೀನಿವಾಸಯ್ಯನಿಗೆ ಶರ್ಮಾಜಿ ಅವರು ತಂದೆಯ ಸ್ಥಾನ ವಹಿಸಿದರು. ಅವನ ಎಲ್ಲ ಕಾರ್ಯಗಳಲ್ಲಿಯೂ ಮಾರ್ಗದರ್ಶನ ನೀಡಿದರು. ಅವನ ಮದುವೆಗೂ ಅವರೆ ಮುಂದೆ ನಿಂತರು. ಅವರ ಶ್ರೀಮತಿಯವರೊಡನೆ ಕನ್ಯಾದಾನ ಸ್ವೀಕರಿಸಿದರು. ನಂಜನಗೂಡಿನಲ್ಲಿ ಕೊನೆಯವರೆಗೂ ಅವರೇ ಶ್ರೀನಿವಾಸಯ್ಯನ ಗುರು. ಬೆಂಗಳೂರಿನಲ್ಲಿ ರಾಜಕೀಯ ಮುಖಂಡರೆಲ್ಲರೂ ಶರ್ಮಾಜಿ ಅವರ ಮಾರ್ಗದರ್ಶನ ಪಡೆದರು. ಆದರೆ ಶರ್ಮಾಜಿ ಯಾವ ಪ್ರತಿಫಲವನ್ನು ನಿರೀಕ್ಷಿಸಲಿಲ್ಲ, ಪಡೆಯಲಿಲ್ಲ.

ಗಾಂಧೀ ಸಾಹಿತ್ಯ ಸಂಘವನ್ನು ಶರ್ಮಾಜಿ ಕಟ್ಟಿ ಅದಕ್ಕೆ ಒಂದು ಕಟ್ಟಡ ನಿರ್ಮಿಸಿದರು. ಮುಂದೆ ಶ್ರೀನಿವಾಸಯ್ಯನೇ ಅದಕ್ಕೆ ಅಧ್ಯಕ್ಷನಾದ ಕೊನೆಯವರೆಗೂ ಅವನೇ ದಶಕಗಳು ಅಧ್ಯಕ್ಷನಾಗಿದ್ದು, ಒಳ್ಳೆ ಕೆಲಸ ಮಾಡಿದ. ವೆಂಕೋಬರಾವ್ ಕಾರ್ಯದರ್ಶಿ ಆಗಿದ್ದಾಗ ವೆಂಕೋಬರಾಯರು ಶ್ರೀನಿವಾಸಯ್ಯನೊಡನೆ ಭಿನ್ನಾಭಿಪ್ರಾಯ ಹೊಂದಿ ರಾಜೀನಾಮೆ ಕೊಟ್ಟರು. ಆಗ ನಾನೂ ಕೆಲಸದಿಂದ ನಿವೃತ್ತನಾಗಿ ಬೆಂಗಳೂರಿಗೆ ಹಿಂದಿರುಗಿದ್ದೆ. ಕೆಲವು ಕಾಲ ಕಾರ್ಯದರ್ಶಿ ಕೆಲಸ ನೋಡಿಕೋ ಎಂದು ಶ್ರೀನಿವಾಸಯ್ಯ ಹೇಳಿದ. ಸುಮಾರು 3 ವರ್ಷ ಕೆಲಸ ಮಾಡಿದೆ. ಇಷ್ಟೇ ಸಾಕು ಎಂದು ನಾನು ಹೇಳಿದಾಗ ಶರ್ಮಾಜಿಯವರ ಹಿರಿಯ ಮಗ ಎಸ್.ಕೆ. ಮೋಹನ್ ಕೆಲವು ಕಾಲ ಕಾರ್ಯದರ್ಶಿಯಾದರು.

ಬೆಮೆಲ್‌ನಲ್ಲಿ ಶ್ರೀನಿವಾಸಯ್ಯ ಒಳ್ಳೆ ಎಂಜಿನಿಯರ್ ಎಂದು ಹೆಸರುಗಳಿಸಿದ. ಬಿ.ಇ.ಎಂ.ಎಲ್. ಸಂಸ್ಥೆಯ ರೈಲ್ ಕೋಚ್ ವಿಭಾಗದ ಜನರಲ್ ಮೆನೇಜರ್ ಆದ. ಜರ್ಮನಿಗೆ ಕಳುಹಿಸಿ ಅವನಿಗೆ ತರಬೇತಿ ಕೊಡಲಾಯಿತು. ಇದರ ಫಲವಾಗಿ "ನಾ ಕಂಡ ಜರ್ಮನಿ" ಎಂಬ ಗ್ರಂಥವನ್ನು ರಚಿಸಿದ. ಅದು ಬಹು ಜನಪ್ರಿಯವಾಯಿತು. ಅನೇಕ ಪುಸ್ತಕಗಳನ್ನು ಬರೆದು ಪ್ರಸಿದ್ಧನಾದ. ಬೆಮೆಲ್ ನೌಕರರ ವಸತಿ ನಿರ್ಮಾಣ ಕಾರ್ಯ ಕೈಗೊಂಡ. ರಾಜರಾಜೇಶ್ವರಿ ನಗರದಲ್ಲಿ ನಿರ್ಮಾಣ ಆಗಿರುವ ಬೆಮೆಲ್ ನೌಕರರ ಮನೆಗಳ ಗುಂಪಿಗೆ ಶ್ರೀನಿವಾಸಯ್ಯ ಕಾಲೋನಿ ಎಂದೇ ಹೆಸರು.

ಕೃಷ್ಣಶರ್ಮ ಸ್ಮಾರಕ ವಿದ್ಯಾಶಾಲೆ : ಮಲ್ಲೇಶ್ವರದ ಹಲವು ಸಂಸ್ಥೆಗಳು ಶ್ರೀನಿವಾಸಯ್ಯನ ಸೇವಾಪರತೆಗೆ ಸಾಕ್ಷಿಯಾಗಿ ನಿಂತಿವೆ. ಗಾಂಧೀ ಸಾಹಿತ್ಯ ಸಂಘ ಶರ್ಮಾಜಿಯವರ ಪ್ರೇರಣೆಯಿಂದಾಗಿ ಒಂದು ವಿದ್ಯಾಸಂಸ್ಥೆಯನ್ನು ಆರಂಭಿಸಿತು. ಸಂಘದ ಪಕ್ಕದಲ್ಲೇ ಆ ಶಾಲೆ ತನ್ನದೇ ಕಟ್ಟಡ ಹೊಂದಿದೆ. ಒಳ್ಳೆ ವಿದ್ಯಾಭ್ಯಾಸ ದೊರಕಿಸುವುದಕ್ಕಾಗಿ ಖ್ಯಾತಿ ಹೊಂದಿ ಜನಪ್ರಿಯವಾಗಿದೆ.

ಪ್ರಕೃತಿ ಜೀವನ ಕೇಂದ್ರ : ಗಾಂಧೀ ಸಾಹಿತ್ಯ ಸಂಘ ತನ್ನ ಕಟ್ಟಡದ ಮಹಡಿ ಮೇಲೆ ಒಂದು ಪ್ರಕೃತಿ ಚಿಕಿತ್ಸೆಯ ಸಂಸ್ಥೆಯನ್ನೂ ಆರಂಭಿಸಿತು. ಶ್ರೀನಿವಾಸಯ್ಯ ಪ್ರಕೃತಿ ಚಿಕಿತ್ಸೆಯ ತರಬೇತಿ ಪಡೆದು ಅದರಲ್ಲಿ ಡಾಕ್ಟರೇಟ್ ಕೂಡ ಸಂಪಾದಿಸಿದ. ಪ್ರಕೃತಿ ಚಿಕಿತ್ಸಾ ಕೇಂದ್ರ ಜನಪ್ರಿಯತೆಗಳಿಸಿ ಈಗ ಗಾಂಧೀ ಸಾಹಿತ್ಯ ಸಂಘಕ್ಕಿಂತ ಪ್ರಕೃತಿ ಚಿಕಿತ್ಸಾ ಕೇಂದ್ರವೇ ಹೆಚ್ಚು ಪ್ರಸಿದ್ಧವಾಗಿದೆ. ಬಾಲವೇ ನಾಯಿಯನ್ನು ಆಡಿಸುವಂತೆ ಆಗಿದೆ.

ಶ್ರೀರಾಮ ಸಂಸ್ಥೆಗಳು : ಶ್ರೀನಿವಾಸಯ್ಯ ಸರಕಾರದ ನಾಲ್ಕನೇ ವರ್ಗದ ನೌಕರರ ಮತ್ತು ಇತರ ಕಡಿಮೆ ಆದಾಯ ಉಳ್ಳ ಜನರಿಗಾಗಿ ಒಂದು ಸಹಕಾರೀ ಬ್ಯಾಂಕ್ ಸ್ಥಾಪಿಸಿದ. ಶರ್ಮಾಜಿಯವರೇ ಇದಕ್ಕೂ ಪ್ರೇರಕರು. ಬ್ಯಾಂಕ್ ಅಭಿವೃದ್ಧಿ ಹೊಂದುತ್ತಿದೆ, ಭದ್ರವಾಗಿದೆ.

ರಾಮಮಂದಿರ : ಮಲ್ಲೇಶ್ವರದ ತೆಂಗಿನಮರ ರಸ್ತೆಯಲ್ಲಿ ತನ್ನ ಎರಡನೆಯ ರಾಮ ಮಂದಿರವನ್ನು ಆರಂಭಿಸಿದೆ. ಇದರ ರೂವಾರಿಯೂ ಶ್ರೀನಿವಾಸಯ್ಯನೆ. ಭಜನಾಮಂದಿರದ ಜೊತೆಗೆ ಒಂದು ಸಭಾಭವನವೂ ನಿರ್ಮಿತವಾಗಿ ಉಪಯೋಗದಲ್ಲಿದೆ. ರಾಮಮಂದಿರಲ್ಲಿ ನಾನು ಅನೇಕ ಸಲ ಭಜನೆ ಕಾರ್ಯಕ್ರಮ ನಡೆಸಿದ್ದೇನೆ, ಜನಪ್ರಿಯವಾಗಿದೆ.

ಬಾಲಗಂಗಾಧರನಾಥ ಸ್ವಾಮೀಜಿಯವರ ಸನ್ನಿಧಿಗೆ : ಆದಿ ಚುಂಚನಗಿರಿಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಸಂಸ್ಥೆಗಳನ್ನು ನಿರ್ಮಿಸಿ ನಡೆಸಿದರು. ಅದರ ನಂತರವೂ ಈ ಕಾರ್ಯ ನಡೆದುಬಂದಿದೆ. ಶ್ರೀನಿವಾಸಯ್ಯ ಈ ಕಾರ್ಯಕ್ರಮಗಳಲ್ಲಿ ಸ್ವಾಮೀಜಿಗೆ ಸಹಾಯ, ಸಹಕಾರ ನೀಡಿದ್ದಾನೆ. ಅವರ ಜೊತೆಗೆ ವಿದೇಶ ಯಾತ್ರೆಯನ್ನು ಮಾಡಿ ಸಂಸ್ಥೆಗೆ ಹಣ ಸಂಗ್ರಹಿಸಿದ್ದಾನೆ.

ಹೀಗೆ ಶ್ರೀನಿವಾಸಯ್ಯ ಹಲವು ರೀತಿಯಲ್ಲಿ ತನ್ನ ಜೀವನ ಜನರಿಗೆ ಉಪಯೋಗ ಆಗುವಂತೆ ನಡೆದಿದ್ದಾನೆ. ಒಂದು ಜೀವನದಲ್ಲಿ ಅದೆಷ್ಟು ಸಾಧಿಸಿದ್ದಾನೆ ಎಂಬುದನ್ನು ಗಮನಿಸಿದರೆ ಆಶ್ಚರ್ಯ ಆಗುತ್ತದೆ. ಅವನಿಗೆ ಪ್ರೋತ್ಸಾಹಿತರಾಗಿ ಸಂಸ್ಥೆಗಳಲ್ಲಿ ಬೆಳೆದ ಕಾರ್ಯಕರ್ತರೂ ಅವನಿಗೆ ಋಣಿಗಳಾಗಿದ್ದಾರೆ. ಅವನು ಈಗ ಇಲ್ಲ. ಆದರೆ ಅವನ ನೆನಪು ಹಲವು ಕಾಲ ನಿಲ್ಲುತ್ತದೆ ಹೊಳೆಯುತ್ತದೆ.



"ನಾ ಕಂಡಂತೆ ಡಾ. ಹೊ. ಶ್ರೀನಿವಾಸಯ್ಯ ಕಳಿಚಿದ ಗಾಂಧಿ ಯುಗದ ಕೊಂಡಿ"

ಹೆಚ್.ಎಂ. ಶಿವಣ್ಣ

ಕರ್ನಾಟಕದ ಗಾಂಧೀ ಭವನಕ್ಕೆ ಹೊಸ ರೂಪಕೊಟ್ಟು ಇಡೀ ದೇಶದ ಗಮನ ಸೆಳೆದ ಮಹಾ ಚೇತನ ಡಾ. ಹೋ ಶ್ರೀನಿವಾಸಯ್ಯನವರು. ವೃತ್ತಿ ಇಂಜಿನಿಯರ್ ಪ್ರವೃತ್ತಿಯಲ್ಲಿ ದೇಶ ಭಾವೈಕ್ಯತೆಯ ಸಂಕೇತ. ಸ್ವಾತಂತ್ರ ಹೋರಾಟಗಾರರಾಗಿ ಗಾಂಧೀ ಮತ್ತು ಗಾಂಧೀ ವಿಚಾರಧಾರೆಗಳನ್ನು ಜನಮನದಲ್ಲಿ ಚಿರಸ್ಥಾಯಿಯಾಗಿ ನಿಲ್ಲುವಂತೆ ತಮ್ಮ ಜೀವನದ ಕೊನೆಯವರೆಗೂ ಶ್ರಮಿಸಿದ ಅಪರೂಪದ ವ್ಯಕ್ತಿತ್ವ ಹೊಂದಿದವರು, ಸರಳ ಸಜ್ಜನಿಕೆಯ ನಡೆ, ನುಡಿಯಿಂದ ಸರ್ವರಿಗೂ ಪ್ರಿಯವಾಗಿದ್ದವರು.ಅವರ ಬದುಕೇ ಒಂದು ತೆರೆದಿಟ್ಟ ಪುಸ್ತಕ, ಗಾಂಧೀಜಿಯವರ ವಿಚಾರಧಾರೆಗಳನ್ನು ಯುವಜನರಿಗೆ ತಲುಪುವಂತೆ ಮಾಡಲು ರಾಜ್ಯಾದ್ಯಂತ ಪ್ರವಾಸ ಮಾಡಿ ಯುವಜನತೆಯ ಸುಸ್ತಿರ ಬದುಕಿಗೆ ದಾರಿ ದೀಪವಾಗುವಂತೆ ಮತ್ತು ಯುವಜನರಲ್ಲಿ ದೇಶಭಕ್ತಿ, ರಾಷ್ಟ್ರಪ್ರೇಮ ಬೆಳೆಯಲು ಪ್ರೇರಕ ಶಕ್ತಿಯಾಗಿದ್ದರು. ಅವರು ಪ್ರತಿಜಿಲ್ಲೆಯಲ್ಲಿಯೂ ಗಾಂಧೀ ಭವನ ನಿರ್ಮಾಣವಾಗಲು ಸರ್ಕಾರದ ಮೇಲೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಮನ ಒಲಿಸಿ ಗಾಂಧಿ ಭವನ ಪ್ರತಿಜಿಲ್ಲೆಯಲ್ಲಿಯೂ ನಿರ್ಮಾಣವಾಗಲೂ ಕಂಡ ಕನಸು ಇಂದು ನನಸಾಗಿದೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಪ್ರತಿಜಿಲ್ಲೆಗೂ ಮೂರು ಕೋಟಿ ಅನುದಾನವನ್ನು 2016-17 ನೇ ಸಾಲಿನ ಬಡ್ಜೆಟ್ಟಿನಲ್ಲಿ ಕಾಯ್ದಿರಿಸಿದ್ದಾರೆ. ಅದರಂತೆ ಹಾಸನ ನಗರದಲ್ಲಿ ದಿನಾಂಕ 25-06-2017 ರಂದು ಮಾನ್ಯ ಮುಖ್ಯಮಂತ್ರಿಗಳು ಗಾಂಧೀ ಭವನ ನಿರ್ಮಾಣಕ್ಕೆ ಶಿಲಾನ್ಯಾಸ ಮಾಡಿದರು.ಜಿಲ್ಲಾಡಳಿತ ಮತ್ತುಉಸ್ತುವಾರಿ ಸಚಿವರು ಈ ದಿಕ್ಕಿನಲ್ಲಿ ಕಾರ್ಯ ಮಗ್ನರಾಗಿರುವುದು ಶ್ಲಾಘನೀಯ.

ಡಾ. ಹೊ. ಶ್ರೀನಿವಾಸಯ್ಯನವರು ಗಾಂಧೀ ಭವನದ ಅಧ್ಯಕ್ಷರಾಗಿ ಮೂರು ದಶಕಗಳಿಗೂ ಮಿಗಿಲಾಗಿ ಅನುಪಮ ಸೇವೆ ಸಲ್ಲಿಸಿ ಇಂದು ನಮ್ಮ ಮುಂದೆ ಇಲ್ಲವಾದರೂ ಅವರು ಸದಾ ಸ್ಮರಣೀಯರು. ನಾ ಕಂಡಂತೆ ಡಾ. ಹೊ. ಶ್ರೀನಿವಾಸಯ್ಯನವರು ಕರ್ನಾಟಕದ ಗಾಂಧಿಯಾಗಿ ನಮ್ಮೆಲ್ಲರೂ ಮಾರ್ಗದರ್ಶನ ಮಾಡಿ ಅಮರರಾಗಿದ್ದಾರೆ.



ಅಪರೂಪದ ಅಧ್ಯಕ್ಷರು ಗಾಂಧೀ ಭವನದ ಹೊ. ಶ್ರೀ...

– ಡಾ. ಎಮ್.ಎಸ್. ಪಾಟೀಲ

ನಾನು ಬೆಂಗಳೂರಿಗೆ ಪ್ರಥಮ ಬಾರಿಗೆ ಭೇಟಿ ನೀಡಿದ್ದು 1990 ರಲ್ಲಿ. ನಂತರದ ದಿನಗಳಲ್ಲಿ ಸುಮಾರು ಸಲ ಬೆಂಗಳೂರಿಗೆ ಬಂದು ಹೋಗಿದ್ದರೂ ಸಹ, ನನಗೆ ಗಾಂಧೀ ಭವನವೆಂಬುದು ಇದೆ ಅಂತ ತಿಳಿದಿರಲಿಲ್ಲ. ವಿಜ್ಞಾನದ ಪ್ರಾಧ್ಯಾಪಕನಾದ ನನಗೆ ಗಾಂಧೀಜಿ ಬಗ್ಗೆ ಅಷ್ಟಕ್ಕಷ್ಟೇ ತಿಳಿದಿತ್ತು. ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜಿನ ಗಣಿತ ಪ್ರಾಧ್ಯಾಪಕನಾದ ನನಗೆ, 2011–12 ರಿಂದ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಯಾಗುವ ಅವಕಾಶ ದೊರಕಿತ್ತು. ದಿನಾಂಕ.18–10–2012 ರಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಿಗಾಗಿ ಆಯೋಜಿಸಲ್ಪಟ್ಟ ಪ್ರೊ. ಜಿ. ಬಿ. ಶಿವರಾಜು ಅವರ ಅತಿಥಿ ಉಪನ್ಯಾಸಕ್ಕೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಿಗೆ ಆಹ್ವಾನವಿತ್ತು ಭಾಗವಹಿಸಿದೆ. ನಂತರ ಗಾಂಧೀ ಭವನದ ಗೌರವ ಕಾರ್ಯದರ್ಶಿಗಳಾದ ಪ್ರೊ.ಜಿ.ಬಿ.ಶಿವರಾಜು ಅವರಿಂದ ಗಾಂಧೀ ವಿಚಾರಗಳತ್ತ ಪ್ರೇರಿತನಾಗಿ ಬಾಗಲಕೋಟೆ ಜಿಲ್ಲಾ ಮಟ್ಟದ ಎನ್.ಎಸ್.ಎಸ್ ಶಿಬಿರವನ್ನು ಆಯೋಜಿಸಿದೆ. ಈ ಪ್ರವೃತ್ತಿಯೇ ನನ್ನನ್ನು ಗಾಂಧೀ ಭವನಕ್ಕೇ ಇನ್ನಷ್ಟು ಹತ್ತಿರವಾಗಿಸಿತು. ಗಾಂಧೀ ಭವನದ ವಿಶೇಷ ಶಿಬಿರಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಭಾಗವಹಿಸಿದ್ದರ ಪ್ರತಿಫಲವಾಗಿ ಮಾನ್ಯ ಅಧ್ಯಕ್ಷರು ದಿನಾಂಕ. 16–11–2013 ರಿಂದ ನನ್ನನ್ನು ಗಾಂಧೀ ಭವನದ ಆಹ್ವಾನಿತ ಸದಸ್ಯನನ್ನಾಗಿ ಆಯ್ಕೆ ಮಾಡುವ ಮೂಲಕ ನಾನು ಗಾಂಧೀ ಪ್ರಭಾವಲಯದಿಂದ ಆವರಿಸಲ್ಪಟ್ಟೆನೆಂದರೆ ತಪ್ಪಾಗದು.

ಗಾಂಧೀ ಭವನವೆಂದರೆ ನಮ್ಮ ಕಣ್ಮುಂದೆ ಕಾಣುವ ಮೊದಲ ದೃಶ್ಯವೇ ಡಾ. ಹೊ. ಶ್ರೀನಿವಾಸಯ್ಯ, ಅವರು ಅಜಾತಶತ್ರುವಿನಂತೆ ಎಲ್ಲರನ್ನು ನಗುಮೊಗದಿಂದ ಬರಮಾಡಿಕೊಳ್ಳುತ್ತಿದ್ದರು. ಪ್ರತಿಯೊಬ್ಬರ ವಿಚಾರಗಳನ್ನು ಗಮನವಿಟ್ಟು ಕೇಳಿ ತಮ್ಮ ನಿಲುವನ್ನು ವ್ಯಕ್ತಪಡಿಸುವ ವ್ಯಕ್ತಿತ್ವದಿಂದಲೇ ಅವರು ಆಕರ್ಷಕರಾಗಿದ್ದರು. ಅವರ ಆಹಾರ, ಉಡುಗೆ–ತೊಡುಗೆ, ಚಿಂತನೆಗಳಲ್ಲಿ ಗಾಂಧೀ ಹಾಸುಹೊಕ್ಕಾಗಿದ್ದರು. ಗಾಂಧೀಯವರನ್ನು ನೋಡಿರದಿದ್ದ ನನ್ನಂತ ಹಲವರಿಗೆ ಹೊ. ಶ್ರೀ ಯವರು

ಗಾಂಧೀಯನ್ನ ನಮ್ಮೊಳಗೆ ಹರಿಯಬಿಟ್ಟರು. ಯಾವಾಗಲೂ ಗಾಂಧೀ ಭವನದಲ್ಲೇ ಮುಂಜಾನೆ 8.30 ರಿಂದ ಸಾಯಂಕಾಲ 6–7 ರ ವರೆಗೆ ಇರುತ್ತಿದ್ದ, ಹೊ. ಶ್ರೀ ಇವರು ಸದಾ ನಗುಮೊಗದ, ಕೈಯಲ್ಲಿ ಕೋಲು ಹಿಡಿದು, ಗಾಂಧೀ ಭವನದಲ್ಲಿ ತಿರುಗಾಡುತ್ತ, ತಮ್ಮ ಕೊಠಡಿ (ಅಧ್ಯಕ್ಷರ ಕೋಣೆ) ಯಲ್ಲಿ ಕುಳಿತು ಜನಸಾಮಾನ್ಯರಿಗೆ, ಗ್ರಾಮೀಣ ಪರಿಸರದ ಜನರಿಗೆ ಗಾಂಧೀಯನ್ನ ಪರಿಚಯಿಸೋ ಹೊಸ–ಹೊಸ ಕಾರ್ಯಯೋಜನೆಗಳ ಕನಸುಗಳನ್ನು ಕಟ್ಟುವ ಹೋ.ಶ್ರೀ ಯವರು ಜಿ.ಬಿ.ಶಿವರಾಜು ಅವರಿಗೆ ಹಾಗೂ ವೂಡೇ.ಪಿ.ಕೃಷ್ಣಾರಿಗೆ ಅತ್ಯಾಪ್ತರು. ಈ ತ್ರಿಮೂರ್ತಿಗಳ ಜೋಡಿ ನನಗೆ ಬ್ರಹ್ಮ–ವಿಷ್ಣು–ಮಹೇಶ್ವರರಂತೆ ತೋರುತ್ತಿತ್ತು.

ಹೊ. ಶ್ರೀ ಅವರ ಅಧ್ಯಕ್ಷತೆಯ ಗಾಂಧೀ ಭವನಕ್ಕೆ ಗೌರವ ಕಾರ್ಯದರ್ಶಿಗಳಾಗಿ ಪ್ರೊ.ಜಿ.ಬಿ.ಶಿವರಾಜು ಹಾಗೂ ಉಪಾಧ್ಯಕ್ಷರಾಗಿ ಡಾ. ವೂಡೇ ಪಿ. ಕೃಷ್ಣ ಅವರು ಗುರುತಿಸಿಕೊಂಡದ್ದು ಗಾಂಧೀ ಭವನದ ಇತಿಹಾಸದಲ್ಲೇ ಉತ್ತುಂಗಶ್ರೇಣಿಯಾಗಿತ್ತೆಂದು ನನ್ನ ಅನಿಸಿಕೆ. ಏಕೆಂದರೆ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸಮಾಜದ ಸರ್ವ ಜಾತಿ–ಜನಾಂಗಗಳತ್ತ ಹಾಗೂ ಶಾಲಾ–ಕಾಲೇಜಿನ ಮಕ್ಕಳತ್ತ ಮತ್ತು ಗಾಂಧೀ ವಿಚಾರಗಳ ಕುರಿತಾಗಿ ಪ್ರಸ್ತುತ ಸರ್ಕಾರಗಳ ಗಮನವನ್ನು ಸೂಕ್ಷ್ಮವಾಗಿ ಸೆಳೆಯಲು ಪ್ರಯತ್ನಿಸಿ ಸಾರ್ಥಕವಾಗಿಸಿಕೊಂಡ ಹಲವಾರು ಘಟನೆಗಳು ಸಾಕ್ಷಿಯಾಗಿವೆ. ರಾಷ್ಟ್ರ ಮಟ್ಟದ ಗಾಂಧೀ ಪ್ರಣೀತ ಶಿಬಿರಗಳನ್ನು ಕೇಂದ್ರೀಯ ಗಾಂಧೀ ಸ್ಮಾರಕ ನಿಧಿ, ದೆಹಲಿಯ ರಾಜಘಾಟ್‌ದಲ್ಲಿ ಹಾಗೂ ಮಧ್ಯಪ್ರದೇಶದ ಛತ್ತರಪೂರ್‌ನ ಗಾಂಧೀ ಸ್ಮಾರಕ ನಿಧಿಯಲ್ಲಿ ಆಯೋಜಿಸಲು ನಮ್ಮ ಗಾಂಧೀ ಭವನದ ಶ್ರೇಯಸ್ಸು ಪ್ರಮುಖವಾದುದಾಗಿತ್ತು. ಪ್ರತಿ ಶಿಬಿರದಲ್ಲಿ ರಾಜ್ಯದಿಂದ 20 ವಿದ್ಯಾರ್ಥಿಗಳು ಹಾಗೂ 5 ಜನ ಪ್ರಾಧ್ಯಾಪಕರು ಭಾಗವಹಿಸಿ ಪ್ರೇರೇಪಿತರಾಗಿದ್ದಾರೆ, ಇದರ ಸಂಪೂರ್ಣ ಶ್ರೇಯಸ್ಸು ಹೊ. ಶ್ರೀ ಅವರಿಗೆ ಸಲ್ಲುತ್ತದೆ. ಗಾಂಧೀ ಭವನದ ಇಂದಿನ ಶ್ರೇಯೋಭಿವೃದ್ಧಿಗೆ ಹೊ. ಶ್ರೀ ಯವರ ದೂರದರ್ಶಿತ್ವ ಪ್ರಮುಖವಾದುದಾಗಿದೆ. ಗಾಂಧೀ ವಿಚಾರಗಳನ್ನು ಯುವಕರಲ್ಲಿ ಬಿತ್ತುವ ಕೆಲಸವಾಗಿ ಗೌರವ ಕಾರ್ಯದರ್ಶಿಗಳಾಗಿದ್ದ ಪ್ರೊ.ಜಿ.ಬಿ.ಶಿವರಾಜು ಯೋಜನೆಯೊಂದನ್ನು ರೂಪಿಸಿದಾಗ ರಾಜ್ಯಾದ್ಯಂತ ಸುಮಾರು 60 ಗಾಂಧೀ ಅಧ್ಯಯನ ಕೇಂದ್ರಗಳನ್ನು ಶಾಲಾ–ಕಾಲೇಜುಗಳಲ್ಲಿ ಸ್ಥಾಪಿಸುವ ಮೂಲಕ ರಾಷ್ಟ್ರೀಯ ಸೇವಾ ಯೋಜನೆಯನ್ನು ಗಾಂಧೀ ವಿಚಾರಗಳತ್ತ ಪ್ರೇರೇಪಿಸಿದ್ದು ಗಾಂಧೀ ಭವನದ ಸಾಧನೆ.

ಹೊ. ಶ್ರೀ ಯವರು ತಮ್ಮ 90 ರ ಇಳಿ ವಯಸ್ಸಿನಲ್ಲಿಯೂ ಸಹ ಸ್ವತಃ ಕಾರ್ಯಕ್ರಮಗಳಿಗೆ ಭೇಟಿ ನೀಡಿ ಯುವ ಸಮುದಾಯವನ್ನುದ್ದೇಶಿಸಿ ಅಧ್ಯಕ್ಷೀಯ ಮಾತುಗಳನ್ನಾಡುತ್ತ ನನ್ನ ಪ್ರೀತಿಯ ಮೊಮ್ಮಕ್ಕಳೆಂದು ಅಜ್ಜನ ಪ್ರೀತಿ–ವಿಶ್ವಾಸದ

ಮಾತುಗಳಿಂದ ಗಾಂಧೀ ಬದುಕಿನ ಸಂದೇಶಗಳನ್ನು ಹೇಳುತ್ತಿದ್ದರು. ತಾವು 5-ವರ್ಷದ ಬಾಲಕನಾಗಿದ್ದಾಗ ದೂರದಿಂದ ಗಾಂಧೀಜಿಯವರನ್ನು ನೋಡಿದ ಅನುಭವ ತಿಳಿಸುತ್ತಿದ್ದರು. ಅಪ್ಪಟ ಗಾಂಧೀವಾದಿ, ಶಾಂತಿಧೂತ, ಕಷ್ಟ ಸಹಿಷ್ಣು, ಬಹುಮಾನ, ಪುರಸ್ಕಾರಗಳಿಗೆ ಬೀಗದ-ಜೋತುಬೀಳದ ಹೊ. ಶ್ರೀ ಯವರು ಇಳಿವಯಸ್ಸಲ್ಲಿ ಮಡದಿಯನ್ನು ಕಳೆದುಕೊಂಡರು. ಆಗಲೂ ಗಾಂಧೀ ಭವನದ ನಂಟು ಬಿಡದ ಇವರು ಅನಾರೋಗ್ಯ ನಿಮಿತ್ಯ ಅಧ್ಯಕ್ಷ ಸ್ಥಾನವನ್ನು ಡಾ. ವೂಡೇ ಪಿ. ಕೃಷ್ಣ ಅವರಿಗೆ ವಹಿಸಲು ಕಾರ್ಯಕಾರಿ ಮಂಡಳಿಯಲ್ಲಿ ಪ್ರಸ್ತಾಪಿಸಿದ್ದರು, ಆದರೆ ಸ್ವತಃ ಕೃಷ್ಣ ಅವರೇ ಸಮ್ಮತಿಸದೇ, ತಮ್ಮ ಜೀವಿತದ ಅವಧಿಯವರೆಗೂ ತಾವೇ ಅಧ್ಯಕ್ಷರಾಗಿರಬೇಕೆಂಬುದು ನಮ್ಮೆಲ್ಲರ ಆಸೆಯಾಗಿದೆಯೆಂದು ಹೊ. ಶ್ರೀ. ಯವರನ್ನು ಡಾ. ವೂಡೇ ಪಿ. ಕೃಷ್ಣರು ವಿನಂತಿಸಿದರು, ಇದಕ್ಕೆ ಎಲ್ಲರೂ ಚಪ್ಪಾಳೆ ತಟ್ಟಿ ಸಮ್ಮತಿಸಿದೆವು. ಮುಂದೆ ಕೆಲವೇ ತಿಂಗಳಲ್ಲಿ ಹೊ. ಶ್ರೀ ಅವರು ದೇಹ ತ್ಯಜಿಸಿದಾಗ ಗಾಂಧೀ ಭವನ ಅನಾಥವಾಯಿತು. ಹೊ. ಶ್ರೀ ಅವರು ಮೊದಲೇ ನಿರ್ಧರಿಸಿದಂತೆ ಗಾಂಧೀ ಭವನದ ಅಧ್ಯಕ್ಷರನ್ನಾಗಿ ಡಾ. ವೂಡೇ ಪಿ. ಕೃಷ್ಣರನ್ನು ಸರ್ವಸಮ್ಮತಿಯಿಂದ ಆಯ್ಕೆ ಮಾಡಲಾಯಿತು.

90-95 ರ ಇಳಿವಯಸ್ಸಿನ ಹಿರಿಯರಾದ ಹೋ. ಶ್ರೀ ಯವರೊಂದಿಗೆ ಸಮಯಸಿಕ್ಕಾಗ ಅವರೊಂದಿಗೆ ಚರ್ಚಿಸುತ್ತಿದ್ದೆ. ಗಾಂಧೀಯವರನ್ನು ನಾವಿಂದು ಕೇವಲ ಸ್ವಾತಂತ್ರ್ಯ-ಸಮಾನತೆ-ಅಹಿಂಸೆ-ಸಹೋದರತ್ವ ವಿಚಾರಗಳಿಗಷ್ಟೇ ಸೀಮಿತಗೊಳಿಸಿದ್ದೇವೆಂದೆನಿಸುತ್ತಿಲ್ಲವೇ? ಎಂದಾಗ ನಿಜ, ಅವರ ನಿಸರ್ಗದತ್ತ ಬದುಕು, ನಿಸರ್ಗೋಪಚಾರ ಕುರಿತಾಗಿ ಗಾಂಧೀಜಿಯವರನ್ನು ನಾವಿನ್ನೂ ಅರಿಯಬೇಕಿದೆ ಎಂದಿದ್ದರು. "ಬ್ಯಾಚಲರ್ ಆಫ್ ನ್ಯಾಚರೋಪಥಿ ಯೋಗಿಕ್ ಸೈನ್ಸ್" ನ ಆರಂಭದಲ್ಲಿ ಧರ್ಮಸ್ಥಳದ ಬಿ.ಎನ್.ವಾಯ್.ಎಸ್ ಕಾಲೇಜಿಗೆ ತಾವೇ ಸಿಲೇಬಸ್‌ನ್ನ ಫ್ರೇಮ್ ಮಾಡಿದ್ದಾಗಿ ಅದರ ಮೂಲ ಪ್ರತಿಯೊಂದನ್ನೂ ಸಹ ತೋರಿಸಿದರು. ಈ ಕೋರ್ಸ್‌ನ ಆರಂಭದ ದಿನಗಳಲ್ಲಿ ಉಪನ್ಯಾಸಕರನ್ನಾಗಿ ಪದವಿ ರಹಿತ ಅನುಭವಿ ನೈಸರ್ಗಿಕ ಚಿಕಿತ್ಸಕರನ್ನೂ, ಯೋಗ ಶಿಕ್ಷಕರನ್ನು ಗುರುತಿಸುವಲ್ಲಿ ಇವರ ಕಾರ್ಯ ಶ್ಲಾಘನೀಯವಾದುದು.

ಆಹಾರ-ವಿಹಾರ-ಶಾರೀರಿಕ ಪರಿಶ್ರಮದ ಬದುಕು-ಸಮಯ ಪರಿಪಾಲನೆ-ಪ್ರಾರ್ಥನೆಗೆ ಗಾಂಧೀಯವರ ಕುರಿತಾಗಿ ನಾವಿನ್ನೂ ಅರಿಯಬೇಕಾಗಿದೆ ಎಂಬುದನ್ನು ತುಮಕೂರಿನ ಜಿ.ವಿ.ವಿ.ಶಾಸ್ತ್ರೀ ಯವರು ಹೇಳಿದ್ದನ್ನು ಅವರಿಗೆ ತಿಳಿಸಿದಾಗ, ನಿಜ ನಾವೀಗ ಆರೋಗ್ಯದ ಕುರಿತಾಗಿ ಗಾಂಧೀ ಭವನದಿಂದ ಕಿರು ಪುಸ್ತಕವನ್ನು ನೀಡಿದ್ದೇವೆ, ಶಿಬಿರಗಳಲ್ಲಿ ಇವುಗಳ ಕುರಿತಾಗಿ ಹೆಚ್ಚು-ಹೆಚ್ಚು ಉಪನ್ಯಾಸಗಳನ್ನು,

ಪ್ರಯೋಗಗಳನ್ನು ಮಾಡುವುದು ಅವಶ್ಯವಿದೆ ನೀವೆಲ್ಲಾ ತಯಾರಾಗಿ ಎಂಬ ಅಭಿಮಾತನ್ನೂ ಹೇಳುತ್ತಿದ್ದರು. ಶಾರೀರಿಕವಾಗಿ ಮುಪ್ಪಾಗಿದ್ದ ಹೋ.ಶ್ರೀ ಯವರು ಮಾನಸಿಕವಾಗಿ ಯುವ ಉತ್ಸಾಹದಿಂದಿರುತ್ತಿದ್ದರು. ಯಾರಾದರೂ ನೀವೀಗ ಇಳಿವಯಸ್ಸಿನವರೆಂದರೆ, ಹಾಗೇಳ್ಬಾದ್ರು, ಇನ್ಮೇಲಿಂದ ನೂರ ವರ್ಷ ಬದಕ್ತೀನಿ ಅನ್ಬೇಕ್ರೀ, ಅನ್ನೋ ಉತ್ಸಾಹಿ ಅಧ್ಯಕ್ಷರು ಗಾಂಧೀ ಭವನದ ಶಕ್ತಿಯಾಗಿ ಪಸರಿಸಿದರು.

ಇಂದು ಅವರಿಲ್ಲದಿರಬಹುದು, ಆದರೆ, ಹೋ. ಶ್ರೀ ಯವರ ಗರಡಿಯಲ್ಲಿ ಪಳಗಿದ ಡಾ. ವೂಡೇ ಪಿ. ಕೃಷ್ಣಾ ಅವರು ಅಧ್ಯಕ್ಷರಾಗಿ, ಪ್ರೊ. ಜಿ.ಬಿ. ಶಿವರಾಜು ಅವರ ಉಪಾಧ್ಯಕ್ಷತೆಯಲ್ಲಿ ಪುನಃ ಹರಿ-ಹರರ ಸಮಾಗಮವಾಗಿದೆ. ನಾವಿಂದು ಬಾ-ಬಾಪು ಅವರ 150ನೇ ವರ್ಷಾಚರಣೆಯಲ್ಲಿಯ ಹೊಸ್ತಿಲಲ್ಲಿ ಪ್ರತಿ ಭಾರತೀಯನೂ ಮಹಾತ್ಮನ ವಿಚಾರಗಳನ್ನು ಅರಿತುಕೊಳ್ಳಲೆತ್ನಿಸುವ ಕಾರ್ಯಕ್ರಮಗಳನ್ನು ಸಾಕಾರಗೊಳಿಸಿಕೊಳ್ಳುವುದೇ ಹೋ. ಶ್ರೀ ಯವರಿಗೆ ಗೌರವ ನೀಡಿದಂತಾಗುವುದು.

ಎಲ್ಲರಿಗೂ ಒಳಿತಾಗಲಿ, ಎಲ್ಲರಿಗೂ ಶುಭವಾಗಲಿ.



ನಾನು ಕಂಡಂತೆ ಡಾ॥ ಹೊ. ಶ್ರೀನಿವಾಸಯ್ಯ

– ಎಸ್.ಜಿ. ಸುಶೀಲಮ್ಮ

ಡಾ॥ ಹೊ. ಶ್ರೀನಿವಾಸಯ್ಯನವರು ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಚೌದರೀ ಕೊಪ್ಪಲು ಗ್ರಾಮದಲ್ಲಿ ಹುಟ್ಟಿ, ಬೆಳೆದದ್ದು ಬೆಂಗಳೂರಾದರೂ ಗ್ರಾಮೀಣ ಜೀವನ ಶೈಲಿಯ ಅರಿವಿತ್ತು. ಬಡತನವಿದ್ದರೂ ಪ್ರೀತಿ ವಿಶ್ವಾಸದ ಜೀವನ ನಡೆಸಿದರು. 13 ಜನ ಮಕ್ಕಳಲ್ಲಿ 10ನೇಯವರಾದರೂ, ಅವರಲ್ಲಿ ಉಳಿದವರೆಂದರೆ ಮೂರು ಮಂದಿ ಅಕ್ಕ ತಂಗಿ ಈರ್ವರೊಡನೆ ಡಾ॥ ಹೊ. ಶ್ರೀನಿವಾಸಯ್ಯನವರು. ಅಣ್ಣನ ಬೌದ್ಧ ತತ್ವಕ್ಕೆ ಅನುಸಾರವಾಗಿ ಶಾಖಾಹಾರಿಗಳಾದರು. ತಂದೆಯವರು ಡಾ॥ ಹೊ. ಶ್ರೀನಿವಾಸಯ್ಯ ನವರ 12ನೇ ಬಾಲ್ಯ ಜೀವನದ ವೇಳೆಯಲ್ಲಿ ವಿಧಿವಶರಾದರು. ನಂತರ ತಾಯಿಯೇ ಮೊದಲ ಗುರುವಾಗಿ ಬೆಳೆದರು. ಸಣ್ಣ ವಯಸ್ಸಿನಿಂದಲೇ ದೈವೀಭಕ್ತಿ ಮಾತಾ ಪಿತೃ ಭಕ್ತಿ ತುಂಬಾ ಇದ್ದಿತು. ಈ ನಿಟ್ಟಿನಲ್ಲಿ ಮಹಾಭಾರತ, ರಾಮಾಯಣ, ಪುರಾಣ, ಹರಿಕಥೆಗಳಲ್ಲಿ ತುಂಬಾ ಆಸಕ್ತಿ ಇಟ್ಟು ಮನಸ್ಸಿಗೆ ಶಾಂತಿ ಪಡೆದುಕೊಳ್ಳುತ್ತಿದ್ದರು. ಮಾತೃ ಪ್ರೀತಿಯಿಂದಾಗಿ ಪ್ರತಿಯೊಂದು ವಿಷಯವನ್ನು ತಾಯಿಗೆ ತಿಳಿಸದೆ ಮಾಡುತ್ತಿರಲಿಲ್ಲ. ಸದಾ ಕಾರ್ಯಶೀಲರಾಗಿ ತಾಯಿಯೊಂದಿಗೆ ಸಹಕರಿಸಿ ಕಾರ್ಯ ನಿರ್ವಹಿಸುತ್ತಿದ್ದರು.

ಕಷ್ಟದ ದಿನಗಳಲ್ಲಿ ಖುಷಿಯಿಂದ ಆತ್ಮೀಯವಾಗಿ ಎಡಬಿಡದೆ ಕೆಲಸ ಮಾಡುತ್ತಿದ್ದರು. ಅಪ್ಪಟ ಹಳ್ಳಿಗನಂತೆ ನಿಕ್ಕರ್ ಅದರ ಮೇಲೊಂದು ಅಂಗಿ, ಕೋಟ್ ತಲೆಗೆ ಟೋಪಿ ಹಣೆಗೆ ಮೂರು ನಾಮ ಕಿವಿಗೆ ತಟ್ಟು ತಲೆಗೆ ಎಣ್ಣೆ ಮೊದಲಾದವುಗಳನ್ನು ಅಂದಿನ ಸಂಪ್ರದಾಯಕ್ಕೆ ತಕ್ಕಂತೆ ಸಿದ್ಧವಾಗಿ ಶಾಲೆಗೆ ಹೋಗುತ್ತಿದ್ದರು. ಚಿಕ್ಕ ವಯಸ್ಸಿನಿಂದಲೇ ಹಲವಾರು ಪ್ರತಿಭೆಗಳಲ್ಲಿ ಹಿರಿಮೆ ಸಾಧಿಸಿದ್ದರು. ಗ್ರಾಮೀಣ ಕಲೆಗಳಲ್ಲಿ ಅತ್ಯಂತ ವಿಶೇಷ ಆಸಕ್ತಿ ಆಟದಲ್ಲಿ ಆಸಕ್ತಿ ಇದ್ದರೂ ಮನೆಯ ವಾತಾವರಣದಿಂದ ತಾಯಿಯ ಮಾತಿನಿಂದಾಗಿ ಅದನ್ನು ಕೈಬಿಟ್ಟರು. ಶಿಕ್ಷಣದಲ್ಲಿ ಹೆಚ್ಚು ಆಸಕ್ತಿ ಇದ್ದು, ಗಣಿತದಲ್ಲಿ 100ಕ್ಕೆ 95 ಅಂಕ ಪಡೆದು 3 ರೂ.ಗಳ ವಿದ್ಯಾರ್ಥಿ ವೇತನದಲ್ಲಿ ವಿದ್ಯಾಭ್ಯಾಸ ಸಾಗಿತ್ತು. ಬಾಲ್ಯದಿಂದಲೇ ಚಿತ್ರ ಬರೆಯುವುದು, ಬಣ್ಣ ಹಾಕುವುದು, ದೇಶ ಭಕ್ತರ ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ಬಹು ಉತ್ತಮವಾಗಿ ಬರೆಯುತ್ತಿದ್ದರು.

ರಾಷ್ಟ್ರ ಪ್ರೇಮ ಬಾಲ್ಯದಲ್ಲೇ ಬೆಳೆಸಿಕೊಂಡು, ಅನೇಕ ದೇಶ ಭಕ್ತರ ಗಣ್ಯರ ಜೀವನವನ್ನು ಓದಿ ಮನನ ಮಾಡಿಕೊಂಡು ಅನೂಚಾನವಾಗಿ ಧಾರಣೆ ಮಾಡಿಕೊಂಡು ರಾಷ್ಟ್ರ ಪ್ರೇಮಬೆಳೆಸಿ ಕೊಂಡವರು. ಸ್ವಾತಂತ್ರ್ಯದ ಬಗ್ಗೆ ಬಾಲ್ಯದಿಂದಲೇ ಆಕಾಂಕ್ಷೆ, ಸ್ವದೇಶಾಭಿಮಾನ ಹೆಚ್ಚಾಗಿತ್ತು. ಸಂಸ್ಕೃತ ಮತ್ತು ಹಿಂದಿ ಭಾಷೆಯಲ್ಲಿ ಹೆಚ್ಚು ಆಸಕ್ತಿ ಶಿಕ್ಷಣದ ಮಾಧ್ಯಮ ಮಾತ್ರ ಕನ್ನಡವೇ ಆಗಿತ್ತು. ಸಣ್ಣ ವಯಸ್ಸಿನಿಂದಲೇ ಖಾದಿ ವಸ್ತ್ರ ಧರಿಸುವ ಅಭಿಲಾಷೆ ಹೊಂದಿ ಅದನ್ನೇ ಕಟ್ಟ ಕಡೆಯವರೆಗೂ ಗಾಂಧಿತತ್ವ ಪಾಲಿಸಿದ ಕೀರ್ತಿ ಡಾ॥ ಹೊ. ಶ್ರೀನಿವಾಸಯ್ಯನವರದು.

ಯುವಕರಿಗೆ ಬೇಕಿರುವ ಯತಾರ್ಥ ಆದರ್ಶದ ಬದುಕನ್ನು ನೈಜವಾಗಿ ಸಿದ್ದಾರೆ. ಅತ್ಯಂತ ಕಠಿಣ ಪರಿಶ್ರಮದಿಂದ, ಸರಳತೆಯಿಂದ ಆದರ್ಶಜೀವನ ನಡೆಸಿದ ಗಣ್ಯರ ಜೀವನ ಚರಿತ್ರೆಯನ್ನು ಸಾಧನೆಯನ್ನು ಪಠಿಸಿ, ಮನನ ಮಾಡಿ ಕೊಳ್ಳುವುದರಿಂದ ಜೀವನ ಮೌಲ್ಯವನ್ನು ಅತ್ಯಂತ ಉತ್ತಮವಾಗಿ ಮಾಡಿಕೊಳ್ಳ ಬಹುದೆಂಬುದನ್ನು ಸಾಧಿಸಿ ತೋರಿಸಿರುತ್ತಾರೆ. ಆದರ್ಶ ವ್ಯಕ್ತಿಗಳಲ್ಲಿ ಡಾ॥ ಹೊ. ಶ್ರೀನಿವಾಸಯ್ಯನವರು ಸಹ ಅಪರೂಪದ ಸಾಧಕರು, ನಾಡಿನ ಹಿರಿಯ ಚಿಂತಕರು, ಸಮಾಜ ಸೇವಕರು, ಗಾಂಧೀವಾಧಿಗಳೂ, ಪ್ರಕೃತಿ ಚಿಕಿತ್ಸಾ ತಜ್ಞರು, ಯೋಗ ಪಟುಗಳೂ ಇದ್ದಾರೆ. ಆದರೆ ಈ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವರು ವಿರಳ. ಅಂತಹ ವಿರಳರಲ್ಲಿ ವಿರಳರು ಡಾ॥ ಹೊ. ಶ್ರೀನಿವಾಸಯ್ಯನವರು ಶ್ರೀಯುತರು ಅಪ್ಪಟ ಗ್ರಾಮೀಣ ಪ್ರತಿಭೆ, ಡಾ॥ ಹೊ. ಶ್ರೀನಿವಾಸಯ್ಯ ಅವರ ಜೀವನದ 9 ದಶಕಗಳ ಕಲ್ಲು ಮುಳ್ಳುಗಳ ಹಾದಿಯಲ್ಲಿ ಅತ್ಯಂತ ಕಠಿಣ, ದುರ್ಗಮ ಹಾಗೂ ಜೀವನೋತ್ಸಾಹ ಹುಟ್ಟಿಸುವಂತಹ ಯಶೋಗಾಥೆಯನ್ನು ನಾವು ಕಾಣಬಹುದು.

ಸ್ವಾತಂತ್ರ್ಯದ ಆಕಾಂಕ್ಷೆಯಿಂದ ಅನೇಕ ಸಂಘಟನೆಗಳ ಸಂಸ್ಥೆಗಳಲ್ಲಿ ಪ್ರಮುಖ ಪಾತ್ರವಹಿಸಿ ಅನೇಕ ಗಣ್ಯರ, ಸಮಾಜ ಮುಖಿಗಳ ಪ್ರಮುಖ ಸೇವಾ ಕರ್ತರ,ಸ್ವಾತಂತ್ರ್ಯ ಧುರೀಣರ ಪರಿಚಯದೊಂದಿಗೆ, ತುಂಬು ರಾಷ್ಟ್ರ ಪ್ರೇಮದೊಂದಿಗೆ ಅನೇಕ ಹೋರಾಟ ಚಳುವಳಿಗಳಲ್ಲಿ ಭಾಗವಹಿಸಿದ್ದರು. ದೇಶ ವಿದೇಶಗಳಿಗೂ ತಮ್ಮ ಭೇಟಿ ನೀಡಿ ಅನೇಕ ಅನುಭವಗಳನ್ನು ಹೆಚ್ಚಿಸಿಕೊಂಡಿರುತ್ತಾರೆ. ಇವರು ಸ್ವಾತಂತ್ರ್ಯ ಹೋರಾಟದಿಂದ ಹಿಡಿದು ಹಲವಾರು ಕ್ಷೇತ್ರಗಳಲ್ಲಿ, ಅನೇಕ ಶಿಬಿರಗಳು ಸೇವಾಕಾರ್ಯಗಳು, ಹರಿಜನೋದ್ಧಾರ ಯೋಜನೆಗಳು ಹಾಗೆಯೇ ಗ್ರಾಮೋದ್ಧಾರ ಕಾರ್ಯಗಳಲ್ಲಿ ಪಾಲ್ಗೊಂಡು ಅತ್ಯಂತ ಪ್ರಭಾವಶಾಲಿ ಜನಪ್ರಿಯತೆಗಳಿಸಿದ್ದಾರೆ. ಜನಜೀವನಕ್ಕೆ ಅಮೂಲ್ಯವಾದ ಮೌಲ್ಯಯುಕ್ತ ಕೊಡುಗೆ ನೀಡಿ, ಸ್ವಾತಂತ್ರ್ಯದ ಮೊದಲು ಹಾಗೂ ನಂತರದ ದಿನಗಳಲ್ಲೂ ಅಮೋಘವಾದ ಕಾರ್ಯಸಾಧನೆಗೈದಿದ್ದಾರೆ. ಭಗವದ್ಗೀತೆಯ ಚಿತ್ರ ಬರೆಯುತ್ತಿದ್ದುದನ್ನು ಈಗಲೂ ನೆನಪಿಸಿಕೊಳ್ಳುತ್ತಾರೆ.

ಬಾಲ್ಯದಲ್ಲಿ ಇವರಿಗೆ ಸ್ವಾತಂತ್ರ್ಯದ ಆಕಾಂಕ್ಷೆ, ಸ್ವದೇಶಾಭಿಮಾನ, ಖಾಕಿ ತೊಟ್ಟ ಪೊಲೀಸಿನವರು ಮತ್ತು ಸೈನ್ಯದವರನ್ನು ಕಂಡರೆ ಯಾವಾಗಲೂ ದೂರ. ಆದರೆ ಇವರಿಗೆ ಶಿಸ್ತು ಬೇಕು. ಅದಕ್ಕಾಗಿ ಆಗ ನಡೆಯುತ್ತಿದ್ದ ಸೇವಾದಳಕ್ಕೆ ಸೇರಿದರು. ಸ್ಕೌಟ್ ನಲ್ಲಿ ಖಾಕಿ ಬಟ್ಟೆ ಹಾಕುತ್ತಿದ್ದುದರಿಂದ ಪರದೇಶೀಯರ ಅನುಕರಣೆ ಎಂದು ಅದರ ಕಡೆ ದೃಷ್ಟಿ ಕಡಿಮೆಯಾಯಿತು. ಶಿಸ್ತನ್ನು ಗಣನೆಗಿಟ್ಟು ಸೇವಾದಳವನ್ನು ಸೇರಿದರು. ಅನೇಕ ಸಂಘಗಳನ್ನು ನಿರ್ಮಾಣ ಮಾಡಿ ಶಿಸ್ತಿನಿಂದ ಅದನ್ನು ನಡೆಸಿಕೊಂಡು ಹೋಗುತ್ತಿದ್ದರು. ಸ್ವಾತಂತ್ರ್ಯ ಹೋರಾಟಕ್ಕೆ ಇಳಿದ ಮೇಲೆ ಸಿನಿಮಾಗಳನ್ನು ನೋಡುವುದನ್ನು ಕಡಿಮೆ ಮಾಡಿದರು. ಡಾ|| ಹೊ. ಶ್ರೀನಿವಾಸಯ್ಯ ಅವರು 12ನೇ ವಯಸ್ಸಿನಲ್ಲಿ ಖಾದಿ ಧರಿಸಲು ಪ್ರಾರಂಭಿಸಿದರು. ಇವರ ಪಾಲಿಗೆ ಖಾದಿ ಕೇವಲ ಮೈಮೇಲೆ ಧರಿಸುವ ಬಟ್ಟೆಯಲ್ಲ, ಅದರಲ್ಲಿ ಒಂದು ಉತ್ತಮ ಆದರ್ಶವಿದೆ. ಸರಳತೆಯ ಸಂದೇಶವಿದೆ.

ಶ್ರೀಯುತರು ಸ್ವಾತಂತ್ರ್ಯ ಚಳವಳಿಗೆ ಧುಮುಕಿದ್ದು ಆಕಸ್ಮಿಕ ಘಟನೆ. 1934ರಲ್ಲಿ ತಮ್ಮ 9ನೇ ವಯಸ್ಸಿನಲ್ಲಿ ರಾಷ್ಟ್ರಪಿತರನ್ನು ನೋಡುವ ಭಾಗ್ಯ ಡಾ|| ಹೊ. ಶ್ರೀನಿವಾಸಯ್ಯ ಅವರಿಗೆ ದೊರೆತು ಅವರಿಂದ ಸ್ಫೂರ್ತಿ ಪಡೆದರು. ಆಚಾರ್ಯವಿನೋಭಾ ಅವರ ಸಂಪರ್ಕ, ಅವರಿಂದ ಗೀತಾಪ್ರವಚನ ಪುಸ್ತಕ ಪಡೆದಿದ್ದು, ಅವರೊಡನೆ ಭಾವಚಿತ್ರ ತೆಗೆಸಿಕೊಂಡಿದ್ದು, ಈ ಎಲ್ಲಾ ಅಮೂಲ್ಯ ಕ್ಷಣಗಳನ್ನು ಸುವರ್ಣ ಭಾಗ್ಯವೆನ್ನಬಹುದು. 1942–50 ರವರೆಗೆ ವಿದ್ಯಾರ್ಥಿಕಾಂಗ್ರೆಸ್ ಮತ್ತು ಯುವಕಾಂಗ್ರೆಸ್ ಕಾರ್ಯದರ್ಶಿಯಾಗಿ,ಸದಸ್ಯರಾಗಿ ಹಾಗೂ ವಿದ್ಯಾರ್ಥಿನಿಲಯ ಸ್ಥಾಪಕ ಸದಸ್ಯರಾಗಿ ಸೇವೆ ಸಲ್ಲಿಸಿದರು. ಇಂತಹ ಅನೇಕಾನೇಕ ಚಳುವಳಿ, ಸಂಗ್ರಾಮಗಳಲ್ಲಿ ಮುಂಚೂಣಿಯಾಗಿದ್ದು ಕಾರ್ಯನಿರ್ವಹಣೆ ಮಾಡಿ ಜಯಶೀಲರಾಗಿದ್ದರು. ವಯಸ್ಕರ ಶಿಕ್ಷಣ ಕೇಂದ್ರ, ಖಾದಿ ಮತ್ತು ಗಾಂಧೀ ಸಾಹಿತ್ಯ ಮಾರಾಟ, ವಿದ್ಯಾರ್ಥಿ ಸ್ವಯಂ ಸೇವಕರಾಗಿ ಆಹಾರ ಹಂಚಿಕೆಯಲ್ಲಿ ಸೇವೆ, ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಗ್ರಾಮ ಸೇವಾ ಶಿಬಿರ, ಅದೇ ವರ್ಷ ಬಂಗಾಳದ ಕ್ಷಾಮ ಪೀಡಿತ ಜನರಿಗೆ ಹಣ ಸಂಗ್ರಹಣೆ, 1945–46 ರಲ್ಲಿ ಹರಿಜನ ಸೇವಕ ಸಂಘದ ಕಾರ್ಯದರ್ಶಿಯಾಗಿಯೂ ಸಕ್ರಿಯ ಪಾತ್ರ ಹೊಂದಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಅಹರ್ನಿಶಿ ದುಡಿದಿದ್ದರು. ವಿಶೇಷವಾದ ಸಂಗತಿ ಎಂದರೆ ಸ್ವಾತಂತ್ರ್ಯ ಹೋರಾಟಕ್ಕಾಗಿ ಇವರು ಜೈಲು ಶಿಕ್ಷೆ ಅನುಭವಿಸಿದ್ದರೂ ಸಹ ಅದಕ್ಕಾಗಿ ಸರ್ಕಾರದಿಂದ ಯಾವುದೇ ಗೌರವ ಸಂಭಾವನೆಯನ್ನಾಗಲಿ ಮಾಶಾಸನವನ್ನಾಗಲಿ ಪಡೆಯದೆ ನಿಸ್ವಾರ್ಥ ದೇಶ ಸೇವೆಯಲ್ಲಿ ಶ್ರೀಯುತರು ಒಂದು ಆದರ್ಶವನ್ನು ಹಾಕಿಕೊಟ್ಟಿದ್ದಾರೆ.

ಸ್ವಾತಂತ್ರ್ಯದ ಆಕಾಂಕ್ಷೆ ಕನಸು, ಆ ಉಡುಪು, ಓಡಾಟ, ಸಾಹಸ, ಪ್ರಭಾವ ಬೀರಿ ಮೆರವಣಿಗೆ, ಸಭೆ ವಿಧ್ವಂಸಕ ಸಾಹಸ ಕಾರ್ಯಗಳು, ಬಾಂಬು ಸಿಡಿತ, ನಿಗೂಢ ಪತ್ರಿಕೆ ತಯಾರಿಕೆ ಹಂಚಿಕೆ ಒಂದೊಂದೂ ಬಹು ರೋಮಾಂಚಕ ಸಂಗತಿಗಳಾಗಿವೆ. 1942 ರಾಷ್ಟ್ರೀಯ ಆಂಧೋಲನದಲ್ಲಿ ಮುಖ್ಯವಾದ ಕಾರ್ಯಕ್ರಮ ಎಂದರೆ ನಿಗೂಢ ಪತ್ರಿಕೆಗಳನ್ನು ಹೊರಡಿಸುವುದು. 1943ರಲ್ಲಿ ವಿದ್ಯಾರ್ಥಿ ಸಂಘವನ್ನು ಸ್ಥಾಪಿಸಿದರು.

ದೇವಾಲಯಕ್ಕೆ ಹರಿಜನರ ಪ್ರವೇಶಕ್ಕೆ ಮುಂದಾಳತ್ವ ವಹಿಸಿ, ಶಿಬಿರ ನಡೆದ ಗ್ರಾಮದಲ್ಲಿ ಹರಿಜನರಿಗೆ ದೇವಸ್ಥಾನದ ಪ್ರವೇಶವಿಲ್ಲ ಎಂದು ತಿಳಿದು ಡಾ॥ ಹೊ. ಶ್ರೀನಿವಾಸಯ್ಯ ಮತ್ತು ಅವರ ಸ್ನೇಹಿತರೆಲ್ಲ ಒಂದು ಯೋಜನೆ ರೂಪಿಸಿಕೊಂಡು ಅದನ್ನು ಕಾರ್ಯಗತ ಮಾಡಿದ್ದಾರೆ. ಅಸ್ಪೃಶ್ಯತಾ ನಿವಾರಣೆ ಕಡೆಗೆ ತಾಯಿಯವರ ಸಹಕಾರ ಅತ್ಯಂತ ಪ್ರಭಾವ ಬೀರಿತು. ಕಡುಬಡತನದಿಂದ ಬಂದ ಡಾ॥ ಹೊ. ಶ್ರೀನಿವಾಸಯ್ಯ ಅವರು ತಮ್ಮ ಇಂಜಿನಿಯರಿಂಗ್ ಪದವಿ ಮುಗಿಸಿದ್ದು, ಸರ್ಕಾರ ನೀಡಿದ ಸ್ಕಾಲರ್ ಶಿಪ್‌ನಿಂದ. ರಜಾದಿನಗಳಲ್ಲಿ ತಾಯಿಯ ಆದೇಶದಂತೆ ತಾಯಿ ತವರೂರಾದ ನಾಗಮಂಗಲ ತಾಲ್ಲೂಕಿನ ಅದಮಗೆರೆಗೆ ಮತ್ತು (ತಂದೆ ಊರಾದ ಚೌದರೀ ಕೊಪ್ಪಲು) ಹೋಗಿ ಅಲ್ಲಿಯ ವ್ಯವಸಾಯದ ಎಲ್ಲಾ ಅನುಭವ ಪಡೆದು ಅಲ್ಲಿಯೂ ಎಲ್ಲರ ಪ್ರೀತಿಗಳಿಸಿದರು. ಅನೇಕ ಪ್ರಶಸ್ತಿಗಳನ್ನು ಪಡೆದು ಕೊಂಡಿರುವುದು ನಮ್ಮೆಲ್ಲರಿಗೂ ಸಂತೋಷವಾಗಿದೆ.

ತಾಂತ್ರಿಕ ಅನುಭವದಲ್ಲಿ ಹಿಂದೂಸ್ತಾನ ವಿಮಾನ ಕಾರ್ಖಾನೆಯಲ್ಲಿ ಡಿಸೈನರ್ ಆಗಿ 1949 ರಲ್ಲಿ ಸೇವೆಗೆ ಸೇರಿ ಹಂತ ಹಂತವಾಗಿ ಮೇಲಾಧಿಕಾರಿಗಳಾಗಿ 1983ರಲ್ಲಿ ಬಿ.ಇ.ಎಂ.ಎಲ್.ನಲ್ಲಿ ಉಪವ್ಯವಸ್ಥಾಪಕರಾಗಿ ನಿವೃತ್ತಿ. ರೈಲ್ವೆ ಕೋಚ್ ಬಸ್ ಬಾಡಿ ಅತಿ ಭಾರವಾದ ಟ್ರೈಲರಗಳ ಯೋಜನೆ ತಯಾರಿಕೆಯಲ್ಲಿ ಪರಿಣಿತಿ, ಸಂಶೋಧನೆ ಹಾಗೂ ಅಭಿವೃದ್ಧಿ ವಿಭಾಗದ ಸ್ಥಾಪನೆ ಹಾಗೂ ಮೇಲ್ವಿಚಾರಣೆ.


ವಿದ್ಯಾರ್ಥಿಗಳ ಕಾಂಗ್ರೆಸ್ ಮತ್ತು ಯುವಕಾಂಗ್ರೆಸ್ 1942–50 ರಲ್ಲಿ ಸಮಿತಿಯ ಸದಸ್ಯರಾಗಿ ಸಕ್ರಿಯ ಪಾತ್ರ, ಸಮ್ಮೇಳನಗಳಲ್ಲಿ ಭಾಗವಹಿಸುವುದು. ವಿದ್ಯಾರ್ಥಿ ನಿಲಯ ಸ್ಥಾಪಕ ಸದಸ್ಯತ್ವ 1943 ಚರಕಾ ಕೇಂದ್ರ ಸ್ಥಾಪನೆ ಮತ್ತು ವಯಸ್ಕರ ಶಿಕ್ಷಣ ಕೇಂದ್ರಗಳ ಸ್ಥಾಪನೆ, 1943–44 ವಿದ್ಯಾರ್ಥಿ ಸ್ವಯಂಸೇವಕರಾಗಿ ಆಹಾರ ಹಂಚಿಕೆ ಸೇವೆ, ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಗ್ರಾಮ ಸೇವಾ ಶಿಬಿರ, 1949 ರಲ್ಲಿ 100 ವಿದ್ಯಾರ್ಥಿಗಳ ಒಂದು ತಿಂಗಳ ಶ್ರಮದಾನ. ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಶ್ರೀ ಪಟ್ಟಾಭಿಸೀತರಾಮಯ್ಯರಿಂದ ಉದ್ಘಾಟನೆ, ದೊಡ್ಡಬಳ್ಳಾಪುರದ ಮಜೂರಾ ಹೊಸಹಳ್ಳಿ ಮತ್ತು ಸುತ್ತಲಿನ 5 ಹಳ್ಳಿಗಳಲ್ಲಿ ಶಿಬಿರಗಳಲ್ಲಿ ಆಯೋಜನೆಯಲ್ಲಿ ಯಶಸ್ವಿ ಪಾತ್ರವಹಿಸಿರುತ್ತಾರೆ.

ಶಿಕ್ಷಕರಿಗೆ, ಸಾರ್ವಜನಿಕರಿಗೆ, ಕೃಷಿಕರಿಗೆ, ಜನಪ್ರತಿನಿಧಿಗಳಿಗೆ ಗಾಂಧಿ ವಿಚಾರ ತಲುಪಿಸುವ ವೈವಿಧ್ಯಮಯ ಕಾರ್ಯಕ್ರಮಗಳ ಆಯೋಜನೆ. ಸಹಕಾರ ಸಂಸ್ಥೆಗಳಲ್ಲೂ ಸಹಭಾಗಿತ್ವವನ್ನು ಹೊಂದಿ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಅವರ ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ಕೇಂದ್ರದ ಅನುಭವಗಳು ಅಪಾರ ಇವರು ಶಿಕ್ಷಣ ಸಂಸ್ಥೆ ಮತ್ತು ಧಾರ್ಮಿಕ ಸಂಸ್ಥೆಗಳಲ್ಲೂ ಅದ್ವಿತೀಯ ಸೇವೆ ಸಲ್ಲಿಸಿರುತ್ತಾರೆ. ಸಾಹಿತ್ಯ, ಪತ್ರಿಕೆಗಳ ಸಂಪಾದಕ ಮತ್ತು ಪ್ರಕಾಶಕರು, ಲೇಖಕರು, ಆಕಾಶವಾಣಿ ಮತ್ತು ದೂರದರ್ಶನದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ.

300 ಕ್ಕೂ ಹೆಚ್ಚು ಸಂಸ್ಥೆಗಳಿಂದ ಸನ್ಮಾನಿಸಿ ಗೌರವಿಸಲ್ಪಟ್ಟಿದ್ದಾರೆ. ಈ ಮಹೋನ್ನತ ಗೌರವ ಇಡೀ ನಾಡಿಗೆ ಗೌರವವನ್ನು ಸಲ್ಲಿಸಿದಂತಾಗಿದೆ. ಗೀತಾ ಸಂದೇಶದ ಬಗ್ಗೆ ಲೇಖನವನ್ನು ಬರೆಯುತ್ತಿದ್ದರು. ಅಬ್ರಹಾಂಲಿಂಕನ್, ಶಿವಾಜಿ ಮೊದಲಾದ ಗಣ್ಯರ ವಿಚಾರ ಓದಿ ರಾಷ್ಟ್ರಪ್ರೇಮಗಳಿಸಿಕೊಂಡರು, ತಮ್ಮ ಶಿಕ್ಷಕರಾದ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿ ಮತ್ತು ಶ್ರೀ ಎಲ್. ಸ್ವಾಮಿರಾವ್ ಅವರ ವ್ಯಕ್ತಿತ್ವವನ್ನು ಈಗಲೂ ಸ್ಮರಿಸುತ್ತಾರೆ.

ಇಂತಹ ಅಮೋಘ ವ್ಯಕ್ತಿತ್ವವುಳ್ಳ ಶ್ರೀಯುತ ಡಾ॥ ಹೊ.ಶ್ರೀನಿವಾಸಯ್ಯನವರ ಜೀವನ ಶೈಲಿ ಮಾನವ ಕುಲಕ್ಕೆ ಕಳಶ ಪ್ರಾಯವಾಗಿದೆ. ಅವರ ಪ್ರತಿಯೊಂದು ಅನುಭವಗಳು ಘಟನೆಗಳು ಗುರಿಸಾಧನೆಯೆತ್ತ, ಉತ್ತಮ ದಾರಿಯಲ್ಲಿ ಮನೋಜ್ಞ ವಾದ ಘಟನಾವಳಿಗಳ ಸಂಘರ್ಷದಲ್ಲಿ ಮುಂದುವರೆದಿದೆ. ಅನೇಕ ಗಣ್ಯರ, ಸಮಾಜ ದುರೀಣರ ಒಡನಾಟದಲ್ಲಿದ್ದು ತಮ್ಮ ಮನೋಸ್ಥೈರ್ಯವನ್ನು ಹೆಚ್ಚಿಸಿಕೊಳ್ಳುತ್ತ, ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮದೇ ಶೈಲಿಯಲ್ಲಿ, ಕಷ್ಟ ಸುಖ ನೋವು ನಲಿವುಗಳ ಮಧ್ಯದಲ್ಲಿ ಜಯ ಸಾಧಿಸಿ ಜೀವನ ನಡೆಸಿದ ಮಹೋನ್ನತ ವ್ಯಕ್ತಿ–ಶಕ್ತಿಯಾಗಿದ್ದಾರೆ. ಇದಕ್ಕೆ ಕಳಶ ಪ್ರಾಯದಂತೆ ಕರ್ನಾಟಕದ ಬೆಂಗಳೂರಿನ ಗಾಂಧೀ ಭವನದ ಕಟ್ಟಡಗಳ ಕಾರ್ಯಗಳು, ಕಟ್ಟಡದಲ್ಲಿನ ಯೋಜನಾ ಅಭಿವೃದ್ಧಿ ಕಾರ್ಯಗಳು, ಅವರ ಸಾಧನೆಯ ಪ್ರತೀಕವಾಗಿದೆ. ಪ್ರತಿಯೊಬ್ಬರೂ ಮನವನ್ನು ಗೆಲ್ಲುವಂತಹ ಶಕ್ತಿ ಪಡೆದುಕೊಂಡು ಕಾರ್ಯನಿರ್ವಹಿಸುವಂತಹ ಅತ್ಯುನ್ನತ ಜನಾನುರಾಗಿಗಳಾಗಿದ್ದಾರೆ.

ಕರ್ನಾಟಕದ ಗಾಂಧೀಯೆಂದೇ ಸಕಲ ಜನತೆಯ ಹೃದಯಾಳದಲ್ಲಿ ನೆಲೆಸುವಂತಹ ವ್ಯಕ್ತಿತ್ವವನ್ನು ಹೊಂದಿದ್ದಾರೆ. ಎಂತಹ ಕಷ್ಟಗಳಲ್ಲೂ ಸ್ಥೈರ್ಯದಿಂದ ಮುಂದುವರೆದರೆ ಜಯ ನಮ್ಮದಾಗುತ್ತದೆಂಬ ಛಲ, ಬಲವನ್ನು ಉಳ್ಳವರಾಗಿದ್ದರು. ಇವರ ಜೀವನ ಶೈಲಿ ಮತ್ತು ಸಾಧನೆ ಅವಿಸ್ಮರಣೀಯ ಹಾಗೂ ಅಮರವಾದುದು. ಡಾ॥ ಹೊ. ಶ್ರೀನಿವಾಸಯ್ಯ ಅವರಿಗೆ ನಮ್ಮೆಲ್ಲರ ಕೋಟಿ ಕೋಟಿ ನಮನಗಳು.



ಡಾ॥ ಹೊ. ಶ್ರೀನಿವಾಸಯ್ಯನವರಿಗೊಂದು ಶ್ರದ್ಧಾಂಜಲಿ

ಬಿ.ಎಂ. ಹರಿಪ್ರಸಾದ್

ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಗಾಂಧೀ ಭವನವನ್ನು ಜತನದಿಂದ ಕಾಪಾಡಿ ಕೊಂಡು, ಗಾಂಧೀ ಮೌಲ್ಯಗಳನ್ನು ತಮ್ಮ ಬದುಕಿನ ಉಸಿರಾಗಿಸಿಕೊಂಡಿದ್ದ ಹಿರಿಯ ಜೀವ ಡಾ॥ ಹೊ. ಶ್ರೀನಿವಾಸಯ್ಯನವರು ಬಾಲ್ಯದಲ್ಲೇ ಗಾಂಧೀ ದರ್ಶನದಿಂದ ಪ್ರಭಾವಿತರಾಗಿ ಸ್ಥಳೀಯ ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಒಡನಾಟ ಹೊಂದಿ, ಭೂಗತರಾಗಿ ಪತ್ರಿಕೆಗಳನ್ನು ತಲಪಿಸುವುದು, ಪ್ರಭಾತ್‌ಭೇರಿ ನಡೆಸುವುದರ ಮೂಲಕ ಬ್ರಿಟೀಷರಿಂದ ಬಂಧಿತರಾಗಿ ಜೈಲುವಾಸ ಅನುಭವಿಸಿದ್ದರು. ಕಠಿಣ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡಿ ಬಿ.ಇ. (ಮೆಕಾನಿಕಲ್) ಪದವಿ ಪಡೆದು, ಹೆಚ್.ಎ.ಎಲ್.ನಲ್ಲಿ 1949ರಲ್ಲಿ ಸೇವೆಗೆ ಸೇರಿ 1983ರಲ್ಲಿ ಬಿ.ಇ.ಎಂ.ಎಲ್.ನಲ್ಲಿ ಉಪ ವ್ಯವಸ್ಥಾಪಕರಾಗಿ ನಿವೃತ್ತಿ ಹೊಂದಿದರು. ಸಿದ್ದವನಹಳ್ಳಿ ಕೃಷ್ಣಶರ್ಮ, ನಿಟ್ಟೂರು ಶ್ರೀನಿವಾಸ್‌ರಾವ್ ಮತ್ತು ಅಂದು ಗಾಂಧೀ ಭವನದ ಅಧ್ಯಕ್ಷರಾಗಿದ್ದ ಕಡಿದಾಳ್ ಮಂಜಪ್ಪನವರ ಒತ್ತಾಸೆಯಿಂದ ಗಾಂಧೀ ಭವನದ ಜವಾಬ್ದಾರಿ ಹೊತ್ತು ಸುಮಾರು 31 ವರ್ಷಗಳ ಕಾಲ ಅವಿರತ ಸೇವೆ ಸಲ್ಲಿಸಿದ್ದರು.

ಅವರ ಕೊನೆಯ ವರ್ಷಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನಾಧಿಕಾರಿಗಳ ತರಬೇತಿ ಕೇಂದ್ರದ ನಿರ್ದೇಶಕರೂ, ರಾಜ್ಯಶಾಸ್ತ್ರದ ನಿ॥ ಪ್ರಾಧ್ಯಾಪಕರಾಗಿ ರಾಜ್ಯಾದ್ಯಾಂತ ವಿಶೇಷ ಸಂಪರ್ಕ ಜಾಲವನ್ನು ಹೊಂದಿರುವ ನಿವೃತ್ತ ಪ್ರೊ॥ ಜಿ.ಬಿ. ಶಿವರಾಜುರವರ ಸೇವಾಕ್ಷಮತೆಯನ್ನು ಗುರುತಿಸಿ ಕಾರ್ಯದರ್ಶಿಗಳನ್ನಾಗಿ ನೇಮಕಮಾಡಿಕೊಂಡು ಇವರ ಮುಖೇನ ಗಾಂಧೀಭವನದ ಕಾರ್ಯವ್ಯಾಪ್ತಿಯನ್ನು ರಾಜ್ಯದ ವಿವಿಧ ಭಾಗಗಳಿಗೆ ವಿಸ್ತರಿಸಿದರು. ವಿಶೇಷವಾಗಿ ಗ್ರಾಮೀಣ ಭಾಗದ ಯುವ ಜನತೆಯಲ್ಲಿ ಗಾಂಧೀ ಮೌಲ್ಯಗಳನ್ನು ಬಿತ್ತರಿಸುವಲ್ಲಿ ಕಾಲೇಜು ಶಿಕ್ಷಣ ಇಲಾಖೆ ವತಿಯಿಂದ ರಾಜ್ಯದ ತಾಲ್ಲೂಕು, ಜಿಲ್ಲಾ ಕೇಂದ್ರದ ಸರ್ಕಾರಿ ಕಾಲೇಜುಗಳಲ್ಲಿ ಗಾಂಧೀ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿ ನೂರಾರು ಶಿಬಿರಗಳನ್ನು ಏರ್ಪಡಿಸಿ, ಗಾಂಧೀ ಭವನದಲ್ಲಿ ಗಾಂಧೀ ಚಲನಚಿತ್ರ ಪ್ರದರ್ಶನ, ವಸ್ತು ಸಂಗ್ರಹಾಲಯ, ಗಾಂಧೀ ಸಂಸ್ಕಾರ ಪರೀಕ್ಷೆಗಳ ಆಯೋಜನೆ ಮಾಡಿ ನಾಡಿನಾದ್ಯಂತ ಸಂಚರಿಸಿ ಯುವ

ಶಕ್ತಿಯನ್ನು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಗಾಂಧೀ ಮೌಲ್ಯಗಳನ್ನು ಅನುಷ್ಠಾನ ಮಾಡುವಂತೆ, ಎಲ್ಲರ ಪ್ರೀತಿಯ ಹಿರಿಯಜ್ಜನಾಗಿ ಸದಾ ಹಸನ್ಮುಖಿಯಾಗಿ ಪ್ರೇರಣೆ ನೀಡಿದ್ದರು. ದಿ॥ ಎಂ.ಎಸ್. ಸಂದೀಪ್ ಟ್ರಸ್ಟ್, ಹಾವೇರಿಯ ಮೈಲಾರ ಮಹಾದೇವ ಟ್ರಸ್ಟ್, ಪ್ರೊ॥ ಬಿ. ಕೃಷ್ಣಪ್ಪ ಟ್ರಸ್ಟ್, ಎಂ. ಚಂದ್ರಶೇಖರ್ ಪ್ರತಿಷ್ಠಾನ, ಶ್ರೀ ಗುರುಕುಲ ಟ್ರಸ್ಟ್ ಇತರ ಸಮಾನ ಮನಸ್ಕ ಸಂಘಟನೆಗಳ ಸಹಯೋಗದೊಂದಿಗೆ ವಿವಿಧ ದತ್ತಿ ಉಪನ್ಯಾಸ, ವಿಚಾರ ಸಂಕೀರ್ಣಗಳನ್ನು ಏರ್ಪಡಿಸಿ, ಇಂದು ಸಮಾಜದಲ್ಲಿ ಗಾಂಧೀಜಿಯವರನ್ನು ಅಂಬೇಡ್ಕರ್, ಸುಭಾಷ್‌ಚಂದ್ರಬೋಸ್, ಲೋಹಿಯಾ ಮುಂತಾದ ನಾಯಕರುಗಳ ವಿರುದ್ಧವಾಗಿ ನಿಲ್ಲಿಸಿ ಅವರ ವಿಚಾರಗಳನ್ನು ಸೀಮಿತ ಗೊಳಿಸಿ ಯುವ ಜನತೆಗೆ ತಪ್ಪು ಸಂದೇಶ ನೀಡುತ್ತಿರುವ ದಿನಮಾನಗಳಲ್ಲಿ ಗಾಂಧೀ ವಿಚಾರಗಳು ಹೇಗೆ ಸಮನ್ವಯತೆ ಕಾಪಾಡಿಕೊಂಡು ರಚನಾತ್ಮಕ ಕಾರ್ಯಗಳ ಮುಖೇನ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸರ್ಕಾರದ ಪ್ರತಿನಿಧಿಗಳನ್ನು ಬಳಸಿಕೊಂಡು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಗಾಂಧೀ ಭವನವನ್ನು ಅತ್ಯಂತ ಕ್ರಿಯಾಶೀಲವಾಗುವಂತೆ ಕಾರ್ಯನಿರ್ವಹಿಸಿದ್ದರು.

ಹವ್ಯಾಸಿ ಲೇಖಕರೂ ಆಗಿದ್ದ ಶ್ರೀಯುತರು ರಚಿಸಿದ 'ನಾ ಕಂಡ ಜರ್ಮನಿ' ಕೃತಿ 1976ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದೆ. ಗಾಂಧೀ ಚಿಂತನೆ, ಪ್ರಕೃತಿ ಚಿಕಿತ್ಸೆ, ಹಾಸ್ಯ ಕುರಿತು ನೂರಾರು ಕೃತಿಗಳನ್ನು ಪ್ರಕಟಿಸಿರುತ್ತಾರೆ. ಶ್ರೀಯುತರು "ಯೋಗಶ್ರೀ", "ಆರ್ಯಭಟ" ಪ್ರಶಸ್ತಿ, ಪತಂಜಲಿ ಸ್ವರ್ಣ ಪದಕ, ಕೆಂಪೇಗೌಡ ಪ್ರಶಸ್ತಿ, ಸರ್ಕಾರದ ಸಹಕಾರಿ ರತ್ನ, ಪ್ರಶಸ್ತಿ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ಪ್ರಶಸ್ತಿ, 2013ರಲ್ಲಿ ಮೈಸೂರು ವಿವಿಯಿಂದ ಗೌರವ ಡಾಕ್ಟರೇಟ್, 2015ರಲ್ಲಿ ಕರ್ನಾಟಕ ಸರ್ಕಾರದಿಂದ 'ಗಾಂಧೀ ಶಾಂತಿ ಸೇವಾ ಪ್ರಶಸ್ತಿ' 2016ರಲ್ಲಿ ಭಾರತ ಸರ್ಕಾರದ ಹಿರಿಯ ವಯೋಶ್ರೇಷ್ಠ ಪ್ರಶಸ್ತಿ ಇತ್ಯಾದಿ ಗೌರವಗಳು ಸಂದಿವೆ. ಇಡೀ ಭಾರತದಲ್ಲಿ ಉತ್ತಮವಾಗಿ, ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸುತ್ತಿರುವ ಗಾಂಧೀ ಸ್ಮಾರಕ ನಿಧಿ, ಕರ್ನಾಟಕ ಗಾಂಧೀ ನಿಧಿ ಎಂಬ ಹೆಗ್ಗಳಿಕೆಗೆ ಪಾತ್ರವಾಗುವಂತೆ, ಮಾಡಿರುವುದು ಇವರ ಕಾರ್ಯಕ್ಷಮತೆಯ ದ್ಯೋತಕವಾಗಿದೆ.

ತಿಪಟೂರಿನ ಗುರುಕುಲಾನಂದಾಶ್ರಮದ ಪೂಜ್ಯರೊಡನೆ ಆತ್ಮೀಯ ಸಂಬಂಧ ಹೊಂದಿ ಶ್ರೀಯುತರು ಆಶ್ರಮದಲ್ಲಿ ಗಾಂಧೀ ಭವನದ ಸರ್ವ ಸದಸ್ಯರ ಸಭೆ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ಹಾಗೂ ಶ್ರೀಮಠದ ಕಾರ್ಯಗಳಲ್ಲಿ ಅಭಿಮಾನ ಪೂರ್ವಕವಾಗಿ ಭಾಗವಹಿಸುತ್ತಿದ್ದರು. ನನ್ನನ್ನು ಸಹ ಗುರುತಿಸಿ ಗಾಂಧೀ ಭವನದ ಸದಸ್ಯನನ್ನಾಗಿ ನೇಮಕ ಮಾಡಿ, ಮಧುರೈನಲ್ಲಿ ನಡೆದ ರಾಷ್ಟ್ರೀಯ ಗಾಂಧೀ ಸ್ಮಾರಕ ನಿಧಿಯ ಸಭೆಗೆ ಕರೆದುಕೊಂಡು ಹೋಗಿ ಅಲ್ಲಿ ದೇಶದ ಅತ್ಯಂತ ಕಿರಿಯ ಗಾಂಧಿ

ಪರಿವಾರದ ಸದಸ್ಯನೆಂದು ಹೆಮ್ಮೆಯಿಂದ ಪರಿಚಯಿಸಿದ್ದರು. ಅಂತಿಮ ದಿನಗಳಲ್ಲಿ ಬೆಂಗಳೂರಿನ ಜಯದೇವ ಆಸ್ಪತ್ರೆಯ ಸಹೃದಯಿ ವೈದ್ಯರಾದ ಶ್ರೀ ಡಾ॥ ಮಂಜುನಾಥ್‌ರವರ ಆತ್ಮೀಯ ಚಿಕಿತ್ಸೆ, ಪುತ್ರನಂತೆ ಸ್ಪಂದಿಸಿದ ಪ್ರೊ॥ ಜಿ.ಬಿ. ಶಿವರಾಜು, ಮಗಳು ಶಶಿಕೃಷ್ಣ ಹಾಗೂ ಮೊಮ್ಮಗ ಅನಿರುದ್ಧ ಇವರ ಹಾರೈಕೆಯಲ್ಲಿ ದಿನಾಂಕ 6-4-2017ರ ಬೆಳಗಿನ ಜಾವ ಬಂಧುಗಳು ಗಾಂಧಿ ಪರಿವಾರದ ಅಪಾರ ಅಭಿಮಾನಿಗಳನ್ನು ಬಿಟ್ಟು ಅವರ ಪ್ರಸಿದ್ಧ ವಾಕ್ಯ 'ಜೈ ಜಗತ್' ನಂತೆಯೇ ಜಗತ್ಪ್ರಾಣ ಶಕ್ತಿಯಲ್ಲಿ ಲೀನರಾದರು. ಅವರ ಅಂತಿಮ ಇಚ್ಛೆಯಂತೆ ವೈದ್ಯಕೀಯ ಕಾಲೇಜಿಗೆ ದೇಹವನ್ನು ಅಂದೇ ದಾನ ನೀಡಲಾಯಿತು.



ನನ್ನ ಅಪ್ಪ

– ಶಶಿ ಕೃಷ್ಣ

ನನ್ನ ಅಪ್ಪ ಸದಾ ಬಾಯಿ ತುಂಬಾ ಮಾತನಾಡುತ್ತಾ, ಹೊಟ್ಟೆ ತುಂಬಾ ನಗುತ್ತಾ ಜೀವನ ಮಾಡಿದವರು. ನಾನು 50 ವರ್ಷದ ಹಿಂದಿನಿಂದ ಅದೇ ಶಿಸ್ತಿನ ಜೀವನ ನಡೆಸಿಕೊಂಡು ಬಂದಿದನ್ನು ನೋಡಿದ್ದೇನೆ. ಅವರು ಎಲ್ಲೇ ಇರಲಿ, ಯಾವ ಊರು–ದೇಶದಲ್ಲಿ ಇದ್ದರೂ ಅಲ್ಲಿಯ ವಾತಾವರಣಕ್ಕೆ ಹೊಂದಿಕೊಳ್ಳುತ್ತಿದ್ದರು. ಆದರೆ ಎಂದಿಗೂ ಅವರ ಶಿಸ್ತನ್ನು ಬಿಡಲಿಲ್ಲ.

ಬೆಳ್ಳಿಗ್ಗೆ ಎದ್ದು ನೀರು, ಕಷಾಯ ಕುಡಿದು ಅಮ್ಮ–ಅಪ್ಪ ಇಬ್ಬರೂ ವಾಕಿಂಗ್‌ಗೆ ಹೋಗಿ ಬಂದು ಯೋಗಾಸನ ಮಾಡಿ ಸ್ನಾನ ಪೂಜೆ ನಂತರ ಹಣ್ಣಿನ ರಸ, ರೆಡಿಯಾಗಿ ತಿಂಡಿ ತಿಂದು 8.30ಕ್ಕೆ ಫ್ಯಾಕ್ಟರಿಗೆ ಹೊರಡುತ್ತಿದ್ದರು. ಅಮ್ಮ ತಿಂಡಿ ಊಟ ಪ್ಯಾಕ್ ಮಾಡಿ, ಬಂದವರಿಗೆಲ್ಲಾ ತಿಂಡಿ–ಕಾಫಿ ಮಾಡುತ್ತಿದ್ದರು. ಸಂಜೆ 6–30ಕ್ಕೆ ವಾಪಸ್ಸು ಬರುತ್ತಿದ್ದರು ತಕ್ಷಣ ಸ್ನಾನ–ಊಟ 7 ಗಂಟೆಗೆ ಮುಗಿಯುತ್ತಿತ್ತು. ನಂತರ ಅವರ ರಾಮಮಂದಿರ, ಗಾಂಧಿ ಸಾಹಿತ್ಯ ಸಂಘ, ಪ್ರಕೃತಿ ಜೀವನ ಕೇಂದ್ರ ಹೀಗೆ ಸಂಸ್ಥೆಗಳ ಸೇವೆ ಬೆಳೆಯುತ್ತಾ ಹೋಗುತ್ತಿತ್ತೇ ವಿನಃ ಕಡಿಮೆ ಆಗಲಿಲ್ಲ. 9 ಗಂಟೆಗೆ ಮನೆಗೆ ಬಂದು ಪುಸ್ತಕ ಓದುವುದು, ಬರೆಯುವುದು ನಡೆಯುತ್ತಿತ್ತು. ಫ್ಯಾಕ್ಟರಿಯಿಂದ ನಿವೃತ್ತಿ ಹೊಂದಿದ ಮೇಲೆ ಅವರಿಗೆ ಸಮಯವಿರಲಿಲ್ಲ. ಸಮಾಜ ಸೇವೆ ಜಾಸ್ತಿ ಆಯಿತು. ಅಮ್ಮ ಸದಾ ಹೇಳುತ್ತಿದ್ದಳು ಫ್ಯಾಕ್ಟರಿಯಲ್ಲಿದ್ದಾಗ ಬೆಳಿಗ್ಗೆ ಹೊರಡುವುದು ಬರುವುದಕ್ಕೆ ಸಮಯವಿತ್ತು, ಆದರೆ ಈಗ ಅದೂ ಇಲ್ಲ. ಎಷ್ಟೋ ಸಾರಿ ಅಪ್ಪ 24 ಗಂಟೆ ಸಾಕಾಗುವುದಿಲ್ಲ ಎಂದು ಹೇಳುತ್ತಿದ್ದುದು ನೆನಪು.

ಅಮ್ಮ–ಅಪ್ಪ ಅಮೇರಿಕಾಗೆ ಬಂದಾಗ ನಮ್ಮ ಜೊತೆ ಕಳೆದ ಕ್ಷಣಗಳು ಅವಿಸ್ಮರಣೀಯ. ನನ್ನ ಮಗ ಹುಟ್ಟಿದಾಗ ಅಲ್ಲಿಗೆ ಬಂದ ಸಮಯದಲ್ಲಿ ಒಂದು ತಿಂಗಳ ಯೋಗಾಸನ ತರಗತಿಯನ್ನು ನಡೆಸಿದರು. ಈ ತರಗತಿಯಲ್ಲಿ 40–45 ಜನ ತರಬೇತಿ ಪಡೆದರು. ವಾಯು ವಿಹಾರದಲ್ಲಿ ಅನೇಕರನ್ನು ಸ್ನೇಹಿತರನ್ನಾಗಿ ಮಾಡಿಕೊಂಡಿದ್ದರು. ವಾಚನಾಲಯದಿಂದ ಪುಸ್ತಕಗಳನ್ನು ತರುತ್ತಿದ್ದೆವು. ದೊಡ್ಡ ಮೊಮ್ಮಗನ ಜೊತೆ ಈಜುವುದು, ಸೈಕಲ್ ಹೊಡೆಯುವುದು, ಅವನ ಗೆಳೆಯರ ಜೊತೆ ಎಲ್ಲಾ ಆಟಗಳನ್ನು ಆಡುತ್ತಿದ್ದರು.

ಬೆಂಗಳೂರಿನಲ್ಲಿ ನಮಗೆ ಅವರು ಮನೆಯಲ್ಲಿ ಸಿಗುವುದು ಕಡಿಮೆ ಇರುತ್ತಿತ್ತು. ಅಮೇರಿಕಾಕ್ಕೆ ಬಂದಾಗ ಇಡೀ ದಿನ ಅವರೊಂದಿಗೆ ಕಾಲ ಕಳೆಯುತ್ತಿದ್ದೆವು. ನಾವು 6 ಜನ ಒಂದಾಗಿ ಕಳೆದ ಕ್ಷಣಗಳು ತುಂಬಾ ಅವಿಸ್ಮರಣೀಯ.

ಅವರು ಯಾವುದೇ ಸಮಾರಂಭದಲ್ಲಿ ಮಾತನಾಡಬೇಕಾದರೂ ಹಿಂದಿನ ದಿನ ರಾತ್ರಿಯೇ ತಯಾರಿ ಮಾಡಿಕೊಳ್ಳುತ್ತಿದ್ದರು. ಮಾತನಾಡಬೇಕಾದ ಅಂಶಗಳನ್ನು ಬರೆದಿಟ್ಟುಕೊಳ್ಳುತ್ತಿದ್ದರು. ಅವರು ಒಂದು ಕೆಲಸ ಕೈಗೆ ತೆಗೆದುಕೊಂಡರೆ ಅದನ್ನು ಮುಗಿಸುವವರೆಗೂ ಅದರಲ್ಲಿಯೇ ಮಗ್ನರಾಗುತ್ತಿದ್ದರು. ಸುಮ್ಮನೆ ಮಾತನಾಡಿ ಸಮಯ ಹಾಳು ಮಾಡುತ್ತಿರಲಿಲ್ಲ. ಯಾವುದೇ ತೊಂದರೆ ಬಂದರೂ ಅದರ ಪರಿಹಾರಕ್ಕೆ ಏನು ಮಾಡಬೇಕೆಂಬುದನ್ನು ನೋಡಿಕೊಂಡು ಮುಂದೆ ಹೋಗುತ್ತಿದ್ದರು. ಬೇಜಾರಿನಲ್ಲಿ ಕೂತರೆ ಜೀವನ ಮಾಡುವುದಕ್ಕೆ ಆಗುವುದಿಲ್ಲ ಅಂತ ತಿಳಿಸಿಕೊಟ್ಟ ಅಪ್ಪ ನನ್ನ ದೊಡ್ಡ ಸಪೋರ್ಟರ್ ಆಗಿದ್ದರು. ಕಾಲ, ಬದುಕು ಏನೇ ಕೊಟ್ಟರೂ ಅದನ್ನ ಧೈರ್ಯವಾಗಿ ನಗುತ್ತಾ ಎದುರಿಸಬೇಕು ಎನ್ನುವುದನ್ನು ತೋರಿಸಿಕೊಟ್ಟರು.

ಅವರು 92ವರ್ಷದ ಜೀವನದಲ್ಲಿ ಕಾಲಕ್ಕೆ ಸರಿಯಾಗಿ ಹೊಂದಿಕೊಳ್ಳುತ್ತಿದ್ದರು. ಆದರೆ ಧ್ಯೇಯಗಳನ್ನು ಮಾತ್ರ ಬಿಡಲಿಲ್ಲ. ಮಕ್ಕಳ ಜೊತೆ ಮಕ್ಕಳಾಗಿ, ಮೊಮ್ಮಕ್ಕಳಿಗೆ ಒಳ್ಳೆ ತಾತ ಆಗಿ, ಯಾವಾಗಲೂ ನಗುನಗುತ್ತಾ ಧೈರ್ಯವಾಗಿ ಅನೇಕ ಸಂಘ ಸಂಸ್ಥೆಗಳನ್ನ ನಡೆಸಿಕೊಂಡು ಬಂದರು.

ಅಪ್ಪ ಯಾರಿಗೂ ಜೀವನದಲ್ಲಿ ತೊಂದರೆ ಕೊಡಲಿಲ್ಲ. ಅವರ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಸಹಾಯ ಮಾಡಿದರು. ಯಾರಿಂದಾನೂ ಯಾವ ಸರ್ಕಾರದಿಂದಲೂ ದುಡ್ಡು ಮುಟ್ಟಲಿಲ್ಲ. ಅವರು ನಂಬಿದ ಜೀವನವನ್ನೇ ಕೊನೆ ಕ್ಷಣದವರೆಗೂ ನಡೆಸಿದ್ದರು.

ಗಾಂಧೀ ಭವನಕ್ಕೆ ಸರ್ಕಾರ ದುಡ್ಡು ಕೊಟ್ಟರೆ ಎಲ್ಲರ ಹತ್ತಿರ ಹೇಳಿಕೊಂಡು ಸಂತೋಷ ಪಡುತ್ತಿದ್ದರು. ನೋಡುವುದಕ್ಕೆ ಖುಷಿಯಾಗುತ್ತಿತ್ತು. ಮುಂದೆ ಅದಕ್ಕೆ ಏನೇನು ಕೆಲಸ ಮಾಡಬೇಕು ಅಂತಾ ಹಗಲು-ರಾತ್ರಿ ಯೋಚನೆ ಮಾಡುತ್ತಿದ್ದರು. ಬೇರೆಯವರ ಸಾಧನೆಯನ್ನು ನೋಡಿ ಮನಸ್ಸು ಪೂರ್ತಿ ಸಂತೋಷ ಪಡುತ್ತಿದ್ದರು. ವಯಸ್ಸಿನಲ್ಲಿ ಎಷ್ಟೇ ಚಿಕ್ಕವರಾಗಿದ್ದರೂ ಅವರಿಗೆ ತಕ್ಷಣ ದೂರವಾಣಿ ಕರೆ ಮಾಡಿ ಶುಭಾಷಯ ತಿಳಿಸುತ್ತಿದ್ದರು. ಎಲ್ಲದರಲ್ಲೂ ಒಳ್ಳೆಯದನ್ನು ಕಾಣುತ್ತಿದ್ದರು. ಯಾರ ಬಗ್ಗೆಯೂ ಕೆಟ್ಟದಾಗಿ ಮಾತನಾಡಿದ್ದು ನಾನು ನೋಡಿಲ್ಲ.

ಮನೆಯಲ್ಲಿ ಅಪ್ಪ ಮತ್ತು ಅಮ್ಮ ನಮಗೆ ಧನಾತ್ಮಕ ಶಕ್ತಿ ಆಗಿದ್ದರು. ನಾವು ಏನೋ ಒಂದು ಚಿಕ್ಕ ಕೆಲಸ ಮಾಡಿದ್ದರೂ ಸಂತೋಷದಿಂದ ದೊಡ್ಡ ಮಾತು

ಆಡುತ್ತಿದ್ದ ಅಪ್ಪ ಈಗ ಇಲ್ಲ ಅನ್ನುವ ಬೇಜಾರು. ರಾತ್ರಿ 9 ಗಂಟೆ ವಾರ್ತೆಗಳನ್ನು ಡಿ.ಡಿ. ಚಾನಲ್‌ನಲ್ಲಿ ಒಟ್ಟಿಗೆ ನೋಡುತ್ತಿದ್ದೆವು. ಆಮೇಲೆ ಕೂತು ಮಾತಾಡುತ್ತಿದ್ದೆವು. ಬೆಳಗ್ಗೆ ಜೊತೆಯಾಗಿ ಕಾಫಿ ಕುಡಿಯುತ್ತಿದ್ದುದು ತುಂಬಾ ಮಿಸ್ ಮಾಡಿಕೊಳ್ಳುತ್ತಿದ್ದೇನೆ.

ಎಷ್ಟು ಕಡೆ ಶ್ರೀನಿವಾಸಯ್ಯ ಅವರಿಂದ ನಮ್ಮ ಮನೆ ದೀಪ ಬೆಳಗುತ್ತಿದೆ ಅಂತಾ ಹೇಳಿದಾಗ ಮನ ತುಂಬಿ ಬರುತ್ತದೆ. ಜನರನ್ನು ಬೇಗ ನಂಬಬೇಡಿ ಅಂತಾ ಹೇಳಿದರೂ ಸಹ, ಅಪ್ಪ ನಂಬಿ ಬಹಳ ಕಡೆ ನೋವು ಕಂಡರು. ಆದರೆ ಎಲ್ಲರಿಗೂ ಒಳ್ಳೆಯದಾಗಲಿ ಅನ್ನುತ್ತಿದ್ದ ದೊಡ್ಡ ಮನುಷ್ಯ

ಅವರ ಇಚ್ಛೆಯಂತೆ ರಾಮಯ್ಯ ಆಸ್ಪತ್ರೆಗೆ ದೇಹ ದಾನ ಮಾಡಿದರು. ಅವರ ಅನಿಸಿಕೆ 'ಸತ್ತ ಮೇಲೆ ಏನಿದೆ, ಬರೀ ದೇಹ ಅದನ್ನು ಸುಡುವುದಕ್ಕಿಂತ ಸಹಾಯ ಆದರೆ ಒಳ್ಳೆಯದು' ಎಂಬುದು ಅವರ ಅನಿಸಿಕೆಯಾಗಿತ್ತು. ಕಾಯಕವೇ ಕೈಲಾಸ ಅಂತಾ ಬದುಕಿದವರು. ಅವರ ಅಭಿಪ್ರಾಯಕ್ಕೆ ದೃಢವಾಗಿ ನಿಂತಿದ್ದರು. 92ರ ವಯಸ್ಸಿನಲ್ಲೂ ಗೊತ್ತಿಲ್ಲ ಅನ್ನುವುದನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು.

ನನಗೆ ನನ್ನ ಅಪ್ಪನ ಜೀವನ ನೋಡಿದಾಗ ಆಹಾ! ಒಬ್ಬ ಮನುಷ್ಯ ಒಂದು ಜೀವನದಲ್ಲಿ ಎಷ್ಟೆಲ್ಲಾ ಸಾಧಿಸಿದ್ದಾರೆ. ಎಲ್ಲಾ ರಂಗಗಳಲ್ಲೂ ಸಾಧನೆ ಮಾಡಿದ್ದಾರೆ. ಆಷ್ಟೆಲ್ಲಾ ಸಾಧಿಸಿದ್ದರೂ ಇಷ್ಟು ಸರಳವಾಗಿ ಜೀವನ ಮಾಡಿದ್ದರು ಎಂಬುದನ್ನು ಕಂಡು ಹೆಮ್ಮೆ ಎನಿಸುತ್ತದೆ.


ಅವರಿಗೆ 100 ವರ್ಷ ಬದುಕುವ ಮತ್ತು ಇನ್ನು ಬಹಳ ಕೆಲಸ ಮುಗಿಸುವ ಆಸೆ ಇತ್ತು. ಅಚಲವಾದ ಮಾನಸಿಕ ಸ್ಥೈರ್ಯ ಇತ್ತು. ಇವರ 100 ವರ್ಷದ ಹುಟ್ಟು ಹಬ್ಬವನ್ನು ಅವರೊಂದಿಗೆ ಆಚರಿಸಲು ಆಗುವುದಿಲ್ಲ ಅನ್ನುವ ಕೊರಗು ನನ್ನನ್ನು ಕಾಡುತ್ತಿದೆ.

ಒಂದು ಕ್ಷಣವನ್ನು ಜೀವನದಲ್ಲಿ ವ್ಯರ್ಥ ಮಾಡದೆ, ಸಮಾಜದ ಅಭಿವೃದ್ಧಿಗೆ ಜೀವನವನ್ನು ಸಮರ್ಪಿಸಿ ಪ್ರತಿ ಕ್ಷಣವೂ ನಗುನಗುತ್ತಾ ಒಳ್ಳೆಯದನ್ನೇ ಯೋಚಿಸುತ್ತಾ, ಒಳ್ಳೆಯದನ್ನೇ ಮಾಡುತ್ತಾ ಬದುಕಿದ ನನ್ನ ಅಪ್ಪನಿಗೆ ನನ್ನ ದೊಡ್ಡ ಸಲಾಮು.

ಇಂಜಿನಿಯರ್, ಪ್ರಕೃತಿ ಚಿಕಿತ್ಸಕ ಬರಹಗಾರ, ಸಮಾಜ ಸೇವಕರಾಗಿ ಗಾಂಧೀ ಭವನದ ಅಧ್ಯಕ್ಷರಾಗಿ ಎಲ್ಲರಿಗೂ ಗೌರವ ಪ್ರೀತಿ-ವಿಶ್ವಾಸ ಹಂಚಿಕೊಂಡು ಬದುಕಿದ ಮಹಾನುಭಾವ ನನ್ನ ಅಪ್ಪ ಅಂತಾ ಹೇಳಿಕೊಳ್ಳುವುದಕ್ಕೆ ನನಗೆ ಹೆಮ್ಮೆ.

ಡಾ.ಹೊ.ಶ್ರೀಯವರು ಪ್ರಶಸ್ತಿಗಳಿಗಾಗಿ ಬಯಸಿದವರಲ್ಲ ಆದರೂ ಕೂಡ ಹಲವಾರು ಪ್ರಶಸ್ತಿಗಳು ಇವರಿಗೆ ದೊರಕಿವೆ. 80ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದು ಜನ ಮಾನಸದಲ್ಲಿ ಚಿರಸ್ಥಾಯಿಯಾಗಿದ್ದಾರೆ.

ಇಂತಹವರ ನಡೆ-ನುಡಿ ಆದರ್ಶ ಎಲ್ಲವನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಂಡರೆ ಅಸಾಧ್ಯವಾದುದನ್ನು ಸಾಧ್ಯವನ್ನಾಗಿಸುವ ಚೈತನ್ಯ ಎಲ್ಲರಲ್ಲಿ ಮೂಡದೇ ಇರುವುದಿಲ್ಲ. ಆದ್ದರಿಂದ ಡಾ॥ ಹೊ. ಶ್ರೀಯವರ ನಡೆಯೇ ಎಲ್ಲರಿಗೂ ಮಾರ್ಗದರ್ಶನವಾಗಲಿ.



ಚರಕ ಸಂಪ್ರದಾಯದ ವಸ್ತ್ರಧಾರಿ ಡಾ॥ ಹೊ. ಶ್ರೀನಿವಾಸಯ್ಯ


– ಆರ್.ಡಿ.ಜಿ.

'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ಪಂಪನ ಮಾತು ಅದ್ಭುತ, ಅನನ್ಯ. ಗಾಂಧೀಜಿ ಹೇಳಿದ್ದು ಅದೇ. ಸರ್ವಜ್ಞನ ನುಡಿಯೂ ಅದೇ. ಅಂದ ಮೇಲೆ ನಾವೆಲ್ಲರೂ ಒಂದೇ. ಇದು ಗಾಂಧೀಜಿಯವರ ಕನಸು. ಆದರೆ ಅವರ ಕನಸು ನನಸಾಗುವ ಸಮಯ ಇನ್ನೂ ಬರಲಿಲ್ಲ. ಅಂತಹ ದೈವೀ ಪುರುಷನ ನಿಯಮಗಳ ಹಾದಿಯಲ್ಲಿ ಸಾಗಿ ಬಂದವರು ನಮ್ಮ ಹೊ. ಶ್ರೀನಿವಾಸಯ್ಯನವರು.

ಸರಳತೆಗೆ ಇನ್ನೊಂದು ಹೆಸರೇ ನಮ್ಮ ಹೊ. ಶ್ರೀನಿವಾಸಯ್ಯನವರು ತಮ್ಮ ಬದುಕಿನುದ್ದಕ್ಕೂ ಸರಳತೆಯನ್ನು ಮೆರೆದವರು. ಸದಾ ಕ್ರಿಯಾಶೀಲ ಮನಸ್ಸಿನಿಂದ ಉತ್ಸಾಹಿ ಮನಸ್ಸಿನ ಈ ಅಪ್ಪಟ ಗಾಂಧೀವಾದಿ ನಮ್ಮ ನಡುವಿನ ಅಪ್ರತಿಮ ಸಾಧಕ. 'ಸಾಧನೆಗೆ ಮಿತಿ ಇಲ್ಲ – ಸಾಧಕರಿಗೆ ಕೊನೆಯಿಲ್ಲ' ಎಂಬ ಮಾತಿಗೆ ಉದಾಹರಣೆಯೇ ಡಾ॥ ಹೊ. ಶ್ರೀನಿವಾಸಯ್ಯ. ಗಾಂಧೀ ಭವನವನ್ನು ಕಟ್ಟಿ ಬೆಳೆಸುವಲ್ಲಿ ಇವರ ಪಾತ್ರ ಅಮೋಘ. ಗಾಂಧೀ ಭವನ ಕೇವಲ ಹೆಸರಿಗಷ್ಟೇ ಅಲ್ಲ. ಅದರ ಕಾರ್ಯವೈಖರಿಗಳು ಹೇಗಿರಬೇಕೆಂಬುದನ್ನು ಕಾರ್ಯಗತ ಮಾಡಿ ತೋರಿಸಿದ ಇವರ ಪರಿಶ್ರಮ ಅಪ್ರತಿಮ ಸಾಧಕನ ಯಶಸ್ವೀ ಜೀವನಗಾಥೆ.

ಸದಾ ಹಾಸ್ಯ ಪ್ರವೃತ್ತಿಯ ಇವರು ಎಲ್ಲರನ್ನು ಹಾಸ್ಯದ ಹೊನಲಿನತ್ತ ಕೊಂಡೊಯ್ಯುವುದು, ನಾನು ಕಂಡುಕೊಂಡ ಒಂದು ಸಹಜ ಅನುಭವವೇ ಸರಿ. ಇವರೇ ಹೇಳಿರುವ ಹಾಗೆ ನಗುವಿಗೆ ಉತ್ತಮ ಆರೋಗ್ಯ ನೀಡುವ ಸಾಮರ್ಥ್ಯವಿದೆ. ಇದು ಕೌಟುಂಬಿಕ ಸಾಮರಸ್ಯ ಉಂಟುಮಾಡುವ ಸಾಧನ. ನಗುತ್ತಿದ್ದರೆ ಎಲ್ಲಾ ಖಾಯಿಲೆಗಳು ದೂರ ಎಂದು ಅವರೇ ನಮ್ಮನ್ನು ಹಾಸ್ಯದತ್ತ ಪ್ರೇರೇಪಿಸುತ್ತಿದ್ದರು.

ಒಬ್ಬ ವ್ಯಕ್ತಿ ಚಿಕ್ಕಂದಿನಿಂದಲೂ ಬದುಕಿನ ಏಳು ಬೀಳುಗಳನ್ನು ಕಂಡು ಮೇಲೆ ಬರಬೇಕಾದರೆ ಅವರ ಅನುಭವ ಸಹಜವಾಗಿಯೇ ಅಗಾಧವಾದುದು. ಇದಕ್ಕೆ ಅಪ್ಪಟ ಉದಾಹರಣೆ ನಮ್ಮ ಹೊ. ಶ್ರೀ ಅವರು. ಆಳವಾದ ಅಧ್ಯಯನ, ಸತತ ಪ್ರಯತ್ನ, ನಿರಂತರ ಪರಿಶ್ರಮದ ಫಲ. ಇಂತಹ ಒಂದು ಮೂರ್ತಿ ನಮ್ಮ ನಾಡಿಗೆ ದೊರಕಿರುವುದು ನಮ್ಮ ಭಾಗ್ಯ ಎಂದರೆ ಅತಿಶಯೋಕ್ತಿಯಲ್ಲ.



ಗಾಂಧೀವಾದಿ, ಸಾಹಿತಿ, ಪ್ರಕೃತಿಚಿಕಿತ್ಸಕ ಡಾ॥ ಹೊ. ಶ್ರೀನಿವಾಸಯ್ಯ

– ಬಳಕೂರು ವಿ.ಎಸ್. ನಾಯಕ

ಜೀವನದಲ್ಲಿ ಎಲ್ಲರೂ ಸಾಧಕರಾಗಲಾರರು ಸಾಧನೆ ಮಾಡುವುದು ಸುಲಭದ ಮಾತಲ್ಲ. ಸಾಧಿಸುವಂತಹ ಮನಸ್ಸು, ಗುರಿ, ಉದ್ದೇಶ ಎಲ್ಲವೂ ಸರಿಯಾದ ಮಾರ್ಗದಲ್ಲಿ ಸಾಗಿದರೆ ನಮ್ಮ ಗುರಿ ನಾವು ತಲುಪುತ್ತೇವೆ. ನಿರಂತರ ಪರಿಶ್ರಮ ಛಲವೊಂದಿದ್ದರೆ ಜೀವನದಲ್ಲಿ ಗಳಿಸಲಾರದಷ್ಟು, ಎಣಿಸಲಾರದಷ್ಟು ಮೊತ್ತವನ್ನು ಹೊಂದಿ ಜಗ್ಗದೇ, ಬಗ್ಗದೇ, ಕುಗ್ಗದೇ ಹಿಗ್ಗಿ ಮುನ್ನೆಡೆದು ಎಲ್ಲರ ನೆನಪಿನ ಪುಟದಲ್ಲಿ ಇರುವಂತಹ ಕಾರ್ಯಮಾಡಿ ಅವರ ನೆನಪುಗಳ ಕಾರ್ಯಗಳು ಮನಸ್ಸಿನಲ್ಲಿ ಬಚ್ಚಿಟ್ಟು, ಕಣ್ಣರೆಪ್ಪೆಯಲ್ಲಿ ಮುಚ್ಚಿಟ್ಟು ಆಗಾಗ ಸಾಧಕರ ಸಾಧನೆಯ ಪುಟಗಳನ್ನು ಮೆಲುಕು ಹಾಕಿಕೊಳ್ಳುತ್ತೇವೆ. ಅಂತಹ ಸಾಧಕರಲ್ಲಿ ಒಬ್ಬರು ಡಾ॥ ಹೊ. ಶ್ರೀನಿವಾಸಯ್ಯ.

ಕನ್ನಡ ನಾಡು ಕಂಡ ಗಾಂಧಿವಾದಿ ದಣಿವರಿಯದ ಹಿರಿಯ ಚೇತನ, ಸದಾ ಹಸನ್ಮುಖಿ ಡಾ॥ ಹೊ. ಶ್ರೀನಿವಾಸಯ್ಯ, ಅಪ್ಪಟ ಗಾಂಧಿವಾದಿಯಾಗಿ ಗಾಂಧೀ ತತ್ವಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಇಂದಿನ ಯುವಪೀಳಿಗೆಗೆ ಮಾರ್ಗದರ್ಶಕರಾದವರು. 80 ಕ್ಕೂ ಹೆಚ್ಚು ಪುಸ್ತಕ ಬರೆದಿದ್ದರೂ ಕೂಡ ತಾನೊಬ್ಬ ಸಾಹಿತಿಯೇ ಅಲ್ಲ ಎಂದು ಹೇಳುವ ಅವರು ತನ್ನ ಜೀವನದ ಅನುಭವವನ್ನು ಪುಸ್ತಕದಲ್ಲಿ ಬರೆದೆ ಎಂದು ಸರಳವಾಗಿ ನಗುನಗುತ್ತಲೇ ಉತ್ತರಿಸಿರುತ್ತಾರೆ. ತೊಂಭತ್ತರ ಹರೆಯದಲ್ಲೂ ಕೂಡ ಸದಾ ಕ್ರೀಯಾಶ್ರೀಲರಾಗಿರುವ ಡಾ: ಹೊ. ಶ್ರೀ ರವರಿಗೆ ಹಲವಾರು ರಾಷ್ಟ್ರ, ರಾಜ್ಯ ಮಟ್ಟದ ಪ್ರಶಸ್ತಿಗಳು ಸಿಕ್ಕಿದ್ದರೂ ಕೂಡ ಹಿಗ್ಗದೇ ಸಾದಾ ಸೀದಾ ವ್ಯಕ್ತಿಗಳ ಹಾಗೆ ನಮ್ಮ ಮುಂದಿರುವುದು ಒಂದು ಸೋಜಿಗವೇ ಸರಿ.

ಬಾಲ್ಯದಲ್ಲಿ ಸ್ಪೂರ್ತಿ ಮತ್ತು ಜೀವನದ ಗತಿ ಬದಲಿಸಿದವರು.

ಇವರು ನಾಗಮಂಗಲದ ಚೌದರಿಕೊಪ್ಪಲು ಗ್ರಾಮದ ಬಡಕುಟಂಬದಲ್ಲಿ ಜನನ. ಅವರ 12ನೇ ವರ್ಷದಲ್ಲಿ ತಂದೆಯನ್ನು ಕಳೆದುಕೊಂಡರು. ಅವರ ತಾಯಿಯ ಆಶ್ರಯದಲ್ಲಿ ಬೆಳೆದರು. ಅವರ ತಾಯಿಯ ಪ್ರೇರಣೆ ಹಾಗೂ ಅವರ ಗುರು ಹಿರಿಯರ ನೀತಿ ಪಾಠಗಳು ಸಾಧು ಸಂತರ ಕಥೆಗಳು ರಾಮಾಯಣ ಮಹಾಭಾರತದಲ್ಲಿ ಬರುವ ಘಟನೆಗಳು ಇವರ ಜೀವನದ ಮೇಲೆ ಅಪಾರ ಪರಿಣಾಮವನ್ನು ಬೀರಿದವು.

ಗಾಂಧೀಜಿಯವರ ಪ್ರಭಾವದ ಸೆಳೆತ

ಕ್ರಿ.ಶ. 1934 ರಲ್ಲಿ ಗಾಂಧೀಜಿಯವರು ಮಲ್ಲೇಶ್ವರಂ ಅಸೋಸಿಯೇಷನ್ ಜಾಗದಲ್ಲಿ ಹರಿಜನ ಪಂಥದವರಿಗಾಗಿ ದೇಣಿಗೆ ಸಂಗ್ರಹ ಮಾಡುತ್ತಿದ್ದರು. ಅವರ ವ್ಯಕ್ತಿತ್ವಕ್ಕೆ ಮಾರುಹೋದ ಡಾ.ಹೊ.ಶ್ರೀ ನಂತರ 1946 ರಲ್ಲಿ ಮದ್ರಾಸ್‌ನಲ್ಲಿ ಹಿಂದಿ ಸಮ್ಮೇಳನದಲ್ಲಿ ಭಾಗವಹಿಸಿದಾಗ ಗಾಂಧೀಜಿಯವರ ಭಾಷಣದ ಪ್ರಭಾವಕ್ಕೆ ಒಳಗಾಗಿ ರಾಷ್ಟ್ರಕ್ಕಾಗಿ ಸೇವೆಯನ್ನು ಮಾಡಬೇಕೆಂಬ ಸ್ಫೂರ್ತಿ ಹೊಂದಿದ್ದರು.

ಖ್ಯಾತ ಸಾಹಿತಿ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮಾರಿಂದ ಸ್ಫೂರ್ತಿ

ಡಾ.ಹೊ.ಶ್ರೀಯವರ ಜೀವನದಲ್ಲಿ ಮುಖ್ಯ ದಿಕ್ಸೂಚಿಯಾದವರು ಗಾಂಧಿವಾದಿಗಳೂ, ಸಾಹಿತಿಗಳು ಆದ ಶರ್ಮಾಜಿಯವರು. ಅವರು ಗಾಂಧಿವಾದಿಗಳು ಮತ್ತು ಡಾ.ಹೊ.ಶ್ರೀಯವರ ವಿಚಾರ ಧಾರೆಯು ಗಾಂಧೀಜಿಯವರ ಬಗ್ಗೆ ಇದ್ದುದರಿಂದ 1942 ರಲ್ಲಿ ಸ್ವಾತಂತ್ರ ಹೋರಾಟದಿಂದ ಆಕರ್ಷಿತರಾದರು.

ಸಾಹಿತ್ಯ ರಚನೆಯಲ್ಲಿ ಆಸಕ್ತಿ

ನಾನೊಬ್ಬ ಸಾಹಿತಿಯೇ ಅಲ್ಲ ಎಂದು ಹೇಳುವ ಡಾ.ಹೊ.ಶ್ರೀಯವರು ಜರ್ಮನಿ ಪ್ರವಾಸಕ್ಕೆ ಹೋದಾಗ ತನ್ನ ಗುರುಗಳಾದ ಶರ್ಮಾಜಿಯವರ ಮಾತಿನಂತೆ ಆ ದಿನ ನೋಡಿದ ನಡೆದ ಎಲ್ಲಾ ಘಟನೆಗಳನ್ನು ಬರೆದಿದ್ದರಿಂದ ನಂತರದ ದಿನಗಳಲ್ಲಿ "ನಾಕಂಡ ಜರ್ಮನಿ" ಎಂಬ ಪ್ರವಾಸ ಕಥನ ಮೂಡಿಬಂದಿತು.

ಕುವೆಂಪು ಬೇಂದ್ರೆಯವರಿಂದ ಮೆಚ್ಚುಗೆ

ಯಾವುದೇ ಒಬ್ಬ ವ್ಯಕ್ತಿಗೆ ತಾನು ಮಾಡಿದ ಕೆಲಸಕ್ಕೆ ಪ್ರೋತ್ಸಾಹ ಸಿಕ್ಕಿದ್ದರೆ ಇನ್ನು ಕೂಡ ಬರವಣಿಗೆಯ ಬಗ್ಗೆ ಹುಮ್ಮಸ್ಸು ಮೂಡುತ್ತದೆ. ಅವರ ಪುಸ್ತಕ ಪ್ರಕಟವಾದ ನಂತರ ಬೇಂದ್ರೆ ಮತ್ತು ಕುವೆಂಪುರವರು ಇವರ ಪ್ರವಾಸ ಕಥನಕ್ಕೆ ನೀಡದ ಮೆಚ್ಚುಗೆಯೇ ಮೊದಲನೆಯದಾಗಿತ್ತು. ಅವರಿಗೆ ಇನ್ನು ಹಲವಾರು ಪುಸ್ತಕಗಳನ್ನು ಬರೆಯಲು ಇದು ಉತ್ತೇಜನವಾಯಿತು. ಅವರನ್ನು ಕುವೆಂಪುರವರು ಜರ್ಮನಿ ಶ್ರೀನಿವಾಸಯ್ಯ ಎಂದು ಕರೆಯುತ್ತಿದ್ದರು.

ಕ್ರಿಯಾಶೀಲ ವ್ಯಕ್ತಿತ್ವದ ಡಾ. ಹೊ. ಶ್ರೀ

ಇವರು ಬೆಳೆದ ವಾತಾವರಣ ಮತ್ತು ಜನರ ಉತ್ತಮವಾದ ಒಡನಾಟ ಜೀವನದಲ್ಲಿ ಒಳ್ಳೆಯ ಮಾರ್ಗದಲ್ಲಿ ನಡೆಯಲು ಕಾರಣವಾಯಿತು. ಗಾಂಧೀ ಸಾಹಿತ್ಯ ಸಂಘದಲ್ಲಿ ಸಕಾರಾತ್ಮಕ ಧೋರಣೆ ಮಾಡದೆ, ಸಕಾರತ್ಮಕ ಧೋರಣೆ, ಪ್ರಾಣಾಯಾಮ ಸದಾ ಒಳ್ಳೆಯ ಆಲೋಚನೆ, ಹಲವಾರು ಪುಸ್ತಕಗಳನ್ನು ಓದುವುದು ಇವೆಲ್ಲಾ ತನಗೆ ವರ ಇದ್ದ ಹಾಗೆ ಎಂದು ನಗು ನಗುತ್ತಲೇ ಹೇಳುತ್ತಿದ್ದರು.



ಮಾರ್ಗದರ್ಶಕರು

– ಡಾ॥ ಅಭಿದಾ ಬೇಗಂ

ರಾಮನಗರ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ದೈಹಿಕ ಶಿಕ್ಷಣ ಶಿಕ್ಷಕಿಯಾಗಿ ನಾನು ಕೆಲಸ ಮಾಡುತ್ತಿದ್ದೆ. ಎನ್.ಎಸ್.ಎಸ್. ಹಿನ್ನೆಲೆಯಿದ್ದುದರಿಂದ ಕಾಲೇಜಿನಲ್ಲಿ ಎನ್.ಎಸ್.ಎಸ್.ಘಟಕ ಪ್ರಾರಂಭಿಸಲು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಅನುಮತಿ ಪತ್ರ ಬರೆದೆ. ನನಗೆ ಅಲ್ಲಿಂದ ಸ್ವಂತ ವೆಚ್ಚದಿಂದ ಘಟಕ ನಡೆಸಲು ಅನುಮತಿ ಬಂದಿತ್ತು. ಹಾಗೆ ಘಟಕ ಪ್ರಾರಂಭಿಸಿ ನಡೆಸುವಾಗ 2012-13 ರಲ್ಲಿ ವಾರ್ಷಿಕ ವಿಶೇಷ ಶಿಬಿರ ನಡೆಸಲು ಮತ್ತು ಅದರ ವೆಚ್ಚ ಬೆಂಗಳೂರು ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್. ಕೋಶದಿಂದ ಪಡೆಯುವ ಬಗ್ಗೆ ಪತ್ರ ಬಂದಿತ್ತು. ಆಗ ರಾಮನಗರ ಜಿಲ್ಲೆಯ ನಾಲ್ಕು ಕಾಲೇಜುಗಳನ್ನು ಒಟ್ಟಿಗೆ ಸೇರಿಸಿ ಬೆಂಗಳೂರು ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್. ಭವನದಲ್ಲಿ ಶಿಬಿರವನ್ನು ಆಯೋಜಿಸಲಾಯಿತು. ಶಿಬಿರದ ಎರಡನೆ ದಿನದ ಕಾರ್ಯಕ್ರಮದಲ್ಲಿ ಹಿರಿಯ ಗಾಂಧಿವಾದಿಗಳಾದ ಡಾ॥ಹೊ.ಶ್ರೀನಿವಾಸಯ್ಯ ಅವರ ಭೇಟಿಯಾಯಿತು. ಅಷ್ಟಲ್ಲದೆ ಅವರ ಜೊತೆಯಲ್ಲಿ ನನ್ನ ಗುರುಗಳಾದ ಪ್ರೊ॥ಜಿ.ಬಿ.ಶಿವರಾಜುರವರ ಭೇಟಿಯೂ ಆಯಿತು. ನನ್ನ ಗುರುಗಳೇ ನನ್ನನ್ನು ಗುರುತಿಸಿದ್ದರು. ನಾನು 1993ರಲ್ಲಿ ಶಿವಮೊಗ್ಗ ಕಮಲ ನೆಹರು ಮಹಿಳಾ ಕಾಲೇಜಿನಲ್ಲಿ ವಿದ್ಯಾರ್ಥಿನಿಯಾಗಿದ್ದ ಎಲ್ಲಾ ನೆನಪುಗಳು ಧುಮ್ಮಿಕ್ಕಿ ಬಂದವು. ಈ ಶುಭ ಸಂದರ್ಭವೇ ನನ್ನ ಜೀವನದಲ್ಲಿ ಗಾಂಧೀ ಮತ್ತು ವಿನೋಬಾರವರ ಸೇವಕಿಯಾಗಿ ಕೆಲಸ ಮಾಡಲು ಅವಕಾಶ ಒದಗಿಸಿತ್ತು. ಬೆಂಗಳೂರಿನ ವಿಶ್ವನೀಡಂ ಯುವಜನರಿಗೆ ಗಾಂಧೀ ತತ್ವ ಪ್ರಣೀತ ಶಿಬಿರಕ್ಕೆ, ಶಿಬಿರದ ಅಧಿಕಾರಿಯಾಗಿ ನನ್ನನ್ನು ತೊಡಗಿಸಿಕೊಂಡರು. ಅಲ್ಲಿಂದ ಈವರೆಗೆ ಡಾ॥ ಹೊ. ಶ್ರೀನಿವಾಸಯ್ಯನವರು ಅನೇಕ ಸಂಧರ್ಭಗಳಲ್ಲಿ ಬೆನ್ನುತಟ್ಟಿ ಪ್ರೋತ್ಸಾಹಿಸಿ ಗಾಂಧೀಜಿ ಮತ್ತು ವಿನೋಬಾರವರ ಮಾರ್ಗದಲ್ಲಿ ಸಾಗಲು ಪ್ರೇರಣೆಯಾಗಿದ್ದಾರೆ. ಇವರು ಬದುಕಲು ಕಲಿಸಿದ ಗುರುಗಳೂ ಇವರು ಗಾಂಧೀ ಮತ್ತು ವಿನೋಬಾರವರ ಆದರ್ಶಗಳನ್ನು ನನ್ನಲ್ಲಿ ಬೆಳೆಸಲು ಮಾರ್ಗದರ್ಶಕರೂ ಆಗಿದ್ದಾರೆ. ಇವರು ತೋರಿದ ಸಹಕಾರ, ಪ್ರೀತಿ-ವಿಶ್ವಾಸ ನಾನು ಸಮಾಜ ಮುಖಿಯಾಗಿ ತೊಡಗಿಸಿಕೊಳ್ಳಲು ಸಹಕಾರಿಯಾಗಿದೆ. ಕೆಲಸ ಯಾವುದೇ ಇರಲಿ ಅದನ್ನು ಧೈರ್ಯವಾಗಿ ಮಾಡುವಂತಹ ವಿಶ್ವಾಸ ಅವರಿಂದ ಕಲಿತೆ. ಇಳಿ

ವಯಸ್ಸಿನಲ್ಲಿ "94 ವರ್ಷದ ಯುವಕ ನಾನು" ಎಂಬ ಅವರ ಮಾತು ನನ್ನನ್ನು ಹುರಿದುಂಬಿಸುತ್ತದೆ. ಮಾಗಿದ ವಯಸ್ಸಿನಲ್ಲಿ ಅವರಲ್ಲಿನ ಸಾಮಾಜಿಕ ಕಾಳಜಿ,ಆಸಕ್ತಿ, ನಮ್ಮಂತಹ ಯುವಕ ಯುವತಿಯರಿಗೆ ಸ್ಫೂರ್ತಿಯನ್ನು ತುಂಬುತ್ತದೆ. ನಾನು ಯಾವುದೇ ಗಾಂಧೀ ಅಥವಾ ವಿನೋಬಾರವರ ಆಶ್ರಮಕ್ಕೆ ಶಿಬಿರಾರ್ಥಿಗಳಾಗಿ ಯುವತಿಯರನ್ನು ಕರೆದುಕೊಂಡು ಹೋಗಲು ಇವರು ಆರ್ಥಿಕವಾಗಿ ಸಾಮಾಜಿಕವಾಗಿ ಪ್ರೋತ್ಸಾಹಿಸುತ್ತಿದ್ದರು. ಅಲ್ಲದೆ ಯಾವುದೇ ಶಿಬಿರ ಆಯೋಜಿಸಿದಾಗ ಆ ಗ್ರಾಮ ಸರ್ವೆಯನ್ನು ಮಾಡಲು ಮಾರ್ಗದರ್ಶನ ನೀಡುತ್ತಿದ್ದರು. ಅಲ್ಲದೆ ಆ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮುಖಾಂತರ ನಮ್ಮಂತಹ ಯುವತಿಯರಿಗೆ ಸಹಕರಿಸುತ್ತಿದ್ದರು. ಮೊದಲು ನಾನು ಅವರಲ್ಲಿ ವಿನೋಬಾಜಿ ಅವರ ಬಗ್ಗೆ ಕೇಳುತ್ತಿದ್ದಾಗ "ಅವರ ಮೊದಲ ಭೇಟಿ ವಿನೋಬಾ ಭಾವೆಯವರ ಬ್ರಹ್ಮವಿದ್ಯಾ ಮಂದಿರದಲ್ಲಿ ಆಯಿತು (ಅವರ ಸ್ನೇಹಿತರೊಂದಿಗೆ ಹೋಗಿದ್ದಾಗ) ನನ್ನ ಸ್ನೇಹಿತರು ಇವರು "ಡಾ॥ಹೊ.ಶ್ರೀನಿವಾಸಯ್ಯ" ಎಂದು ಪರಿಚಯಿಸಿದ್ದಾಗ ವಿನೋಬಾ ಭಾವೆಯವರು ಕನ್ನಡದಲ್ಲಿ "ನಮಸ್ಕಾರವೆಂದು" ಹೇಳಿದರು. ಇದು ನನ್ನ ಸಂತೋಷವನ್ನು ನೂರ್ಮಡಿಗೊಳಿಸಿ ಎಂದು ಬಹಳ ಉತ್ಸಾಹದಿಂದ ಹೇಳಿದರು. ವಿನೋಬಾರವರಿಂದ ಹಸ್ತಾಕ್ಷರ ಕೇಳಿದಾಗ ಬಾಬ(ವಿನೋಬಾ) ಶೂನ್ಯ ಬರೆದು "ವಿನೋಬಾ ಶೂನ್ಯ ಹೈ" ಎಂದು ಹೇಳಿದರು. ತಮ್ಮ ಅನುಭವದ ಮಾತಿನಿಂದಲೇ ನನ್ನನ್ನು ಪ್ರೋತ್ಸಾಹಿಸುತ್ತಿದ್ದರು ಎಂದು ಅವರ ಅನುಭವದ ಬುತ್ತಿಯಲ್ಲಿನ ಕೆಲವನ್ನು ಸ್ಮರಿಸಿಕೊಂಡರು. ಗಾಂಧೀಭವನದಲ್ಲಿ ರಾಜ್ಯ ಮಟ್ಟದಲ್ಲಿ ಗಾಂಧೀ ಪರೀಕ್ಷೆ ನಡೆಸಲು ಯಾವುದೇ ಅನುಭವವಿಲ್ಲದ ನನಗೆ ಪ್ರೊ॥ಜಿ.ಬಿ.ಶಿವರಾಜ್ ಮತ್ತು ನನ್ನ ತಂದೆಯ ಸಮಾನರಾದ ಡಾ॥ಹೊ.ಶ್ರೀನಿವಾಸಯ್ಯನವರು ಹೇಳಿದಾಗ ವಿಧೇಯತೆಯಿಂದ ಒಪ್ಪಿಕೊಂಡು ಅವರ ಮಾರ್ಗದರ್ಶನದಲ್ಲಿ ಯಾವುದೇ ಅಡೆ ತಡೆಗಳಿಲ್ಲದೆ ಕೆಲಸ ಮಾಡುತ್ತಿದ್ದೇನೆ. 15 ಸಾವಿರ ವಿದ್ಯಾರ್ಥಿಗಳಿಗೆ ಪರೀಕ್ಷೆ ವ್ಯವಸ್ಥಿತವಾಗಿ ಮಾಡಿದ್ದೇನೆ. ನಾನು ಪರೀಕ್ಷೆಯ ವಿವರಗಳನ್ನು ಹೇಳಲು ಅವರ ಬಳಿ ಹೋಗುವಾಗ "ನನಗೆ ಎಲ್ಲಾ ಗೊತ್ತಿದೆ ತಾವು ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ, ಮಾಡಿ" ಎಂದು ಹೇಳುವ ಮುಖಾಂತರ ನನ್ನನ್ನು ಇನ್ನು ಹೆಚ್ಚು ಕೆಲಸ ಮಾಡಲು ಪ್ರೋತ್ಸಾಹಿಸುತ್ತಿದ್ದರು. ಅವರ ಆಶೀರ್ವಾದ, ಪ್ರೀತಿ ಸಹನೆ ಸಹಕಾರಗಳು ನನ್ನ ನೆನಪಲ್ಲಿ ಹಸಿರಾಗಿದೆ. ನಾನು ಬರೀ ಒಂದು ಕಲ್ಲಾಗಿದೆ ಅದಕ್ಕೆ ರೂಪ ಕೊಟ್ಟವರು ಡಾ॥ಹೊ.ಶ್ರೀನಿವಾಸಯ್ಯನವರು ಮತ್ತು ಪ್ರೊ॥ಜಿ.ಬಿ.ಶಿವರಾಜ್‌ರವರು ಇಂತಹ ಸನ್ನಿವೇಶಗಳು ಪರೋಕ್ಷವಾಗಿ ಬಾಪೂ ಮತ್ತು ಬಾಬರವರ ನೋಡಿದಷ್ಟು ಸಂತೋಷ ಕೊಡುತ್ತದೆ. ಇವರ ಆಶೀರ್ವಾದ ನನಗಿದೆ ಎಂದು ಭಾವಿಸಿದ್ದೇನೆ. ಅವರನ್ನು ನೋಡಲು ಆಸ್ಪತ್ರೆಗೆ ಹೋಗಿದ್ದಾಗ ಕೊನೆಯ

ಡಾ॥ ಹೊ. ಶ್ರೀನಿವಾಸಯ್ಯನವರು ಶಿಕ್ಷಣ ತಜ್ಞರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಮಹಾತ್ಮ ಗಾಂಧೀಜಿಯವರ ಅನುಯಾಯಿಗಳಾಗಿ, ಸಮಾಜಸೇವಕರಾಗಿ, ಪ್ರಕೃತಿ ಚಿಕಿತ್ಸಾ ಪ್ರತಿಪಾದಕರಾಗಿ, ಪತ್ರಿಕೋದ್ಯಮಿಯಾಗಿ, ಸಮಾಜಮುಖಿ ಚಿಂತಕರಾಗಿ, ತಮ್ಮ ಬದುಕಿನ ವಿವಿಧ ಘಟ್ಟಗಳಲ್ಲಿ ಅಪಾರವಾದ ಅನುಭವವನ್ನು ಪಡೆದು ಕೊಂಡವರಾಗಿದ್ದರು.

ಮೂಲತಃ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವೀಧರರಾದ ಡಾ॥ ಹೊ.ಶ್ರೀ ಅವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ 80ಕ್ಕೂ ಹೆಚ್ಚು ಮೌಲ್ಯಯುತ ಗ್ರಂಥಗಳನ್ನು ಸಾಹಿತ್ಯಲೋಕಕ್ಕೆ ನೀಡಿದ್ದಾರೆ. ಹಲವಾರು ಸಂಘ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ, ಕಾರ್ಯದರ್ಶಿಗಳಾಗಿ ಕೆಲಸ ನಿರ್ವಹಿಸುವುದರ ಜೊತೆಗೆ ಇವರ 'ನಾ ಕಂಡ ಜರ್ಮನಿ ಪ್ರವಾಸ ಕಥನ'ಕ್ಕೆ 'ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ'ಯೂ ಸಂದಿದೆ. ಇದೇ ಕೃತಿ ವಿಶ್ವವಿದ್ಯಾಲಯದ ಪದವಿ ತರಗತಿಗಳಿಗೆ ಪಠ್ಯಪುಸ್ತಕವಾಗಿದ್ದು, ಇವರ ಬರಹದ ವೈಖರಿಯನ್ನು ತಿಳಿಸುತ್ತದೆ.

ಈ ಎಲ್ಲದರ ಹಿನ್ನೆಲೆಯಿಂದ ಇವರ ಸೇವಾ ಮನೋಭಾವವನ್ನು ಗುರುತಿಸಿ ಕರ್ನಾಟಕ ಸರ್ಕಾರವು 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ಯನ್ನು ನೀಡಿ ಗೌರವಿಸಿದೆ. ಇದಲ್ಲದೇ ಚುಂಚಶ್ರೀ, ಕನ್ನಡಶ್ರೀ, ಕರ್ನಾಟಕಶ್ರೀ, ಪ್ರಕೃತಿ ಚಿಕಿತ್ಸಾ ರತ್ನ, ಕರ್ನಾಟಕ ಸರ್ಕಾರದ ಪತಂಜಲಿ ಸುವರ್ಣ ಪದಕ, ಯೋಗಶ್ರೀ, ಆರ್ಯಭಟ ಮುಂತಾದ ಪ್ರಶಸ್ತಿಗಳಿಗೆ ಭಾಜನರಾದ ನಮ್ಮ ಹೊ. ಶ್ರೀ ಸುಮಾರು 30 ವರ್ಷಗಳ ಕಾಲ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಕನ್ನಡ ಓದು-ಬರಹ, ಪುಸ್ತಕ ಪ್ರಸರಣ, ಬರವಣಿಗೆ ಹೀಗೆ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಸುಮಾರು 28 ವರ್ಷಗಳ ಅನುಭವವಿರುವ ನಾನು ನನ್ನ ಮಟ್ಟಿಗೆ ಹೇಳುವುದಾದರೆ ನನ್ನ ಹಾಗೂ ಡಾ॥ ಹೊ. ಶ್ರೀ ಯವರ ಸಂಬಂಧ ಸುಮಾರು 20 ವರ್ಷಗಳಿಗೂ ಹೆಚ್ಚಿನದು. ಅವರನ್ನು ಕಂಡಾಗಲೆಲ್ಲ ಅದೇನೋ ಉತ್ಸಾಹ, ಹೊಸ ಹೊಸ ಆಲೋಚನೆಗಳು, ಚೈತನ್ಯಪೂರ್ಣ ಸಲಹೆಗಳು ನನ್ನ ಮನಸ್ಸಿಗೆ ಬಂದದ್ದು ಉಂಟು. ಆ ಇಳಿ ವಯಸ್ಸಿನಲ್ಲಿಯೂ ಅವರ ಈ ಚೇತನವನ್ನು ಕಂಡು ಬೆಕ್ಕಸ ಬೆರಗಾದದ್ದು ಇದೆ. ನನ್ನಂತಹ ಕಿರಿಯವನೊಬ್ಬ ಇಂತಹ ಮೇಧಾವಿಗಳ ಜೊತೆ ಅಷ್ಟು ಸಲಿಗೆಯಿಂದ ಇದ್ದದ್ದನ್ನು ಕಂಡರೆ ಅದು ಅವರ ಸರಳತೆಗೆ ಸಾಕ್ಷಿ. ಸದಾ ಗಾಂಧೀ ಟೋಪಿ, ಖಾದಿ ದಿರಿಸು ಧರಿಸುತ್ತಿದ್ದ ಈ ಅಪ್ಪಟ ಗಾಂಧೀವಾದಿ ನಮ್ಮ ನಾಡಿಗಷ್ಟೇ ಅಲ್ಲ ಇಡೀ ದೇಶಕ್ಕೆ ಮಾದರಿ.

ನಾವು ಹೇಗೆ ಬದುಕಿದೆವು ಎಂಬುದಕ್ಕಿಂತ ನಮ್ಮ ಬದುಕು ಬದಲಿಸಿದ ತಿರುವುಗಳತ್ತ ಗಮನ ಹರಿಸಬೇಕು. ಅಂತಹ ಬದುಕಿನ ವಿವಿಧ ಮಜಲುಗಳನ್ನು

ಅನುಭವಗಳ ಮೂಲಕವೇ ಸಾರಸಗಟಾಗಿ ಅತ್ಯಂತ ಜವಾಬ್ದಾರಿಯಿಂದ ಸಂಯೋಗಿಸಿದ ಧೀಮಂತ ಚೇತನ ನಮ್ಮ ಹೊ. ಶ್ರೀ. ಹೆಸರಿಗೂ ಹೇಳದಷ್ಟು ದುಸ್ಥಿತಿಯಲ್ಲಿದ್ದ ನಮ್ಮ ಗಾಂಧೀಭವನವನ್ನು ರಾಜ್ಯ, ರಾಷ್ಟ್ರಮಟ್ಟದಲ್ಲಿ ಗುರುತಿಸುವಂತೆ ಶ್ರಮವಹಿಸಿ, ತಮ್ಮ ಸ್ವಂತ ಕೆಲಸಗಳನ್ನು ಬದಿಗಿಟ್ಟು ಸದಾ ಗಾಂಧೀ ಭವನದ ನಿರ್ವಹಣೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಅಪ್ರತಿಮ ಮೇಧಾವಿ, ಸದೃಢ ಮನಸ್ಸಿನ ಹಿತ ಚಿಂತಕ, ಹಾಸ್ಯದ ಹೊನಲು ಹರಿಕಾರ, ಸ್ನೇಹಜೀವಿ, ಸಂಘಜೀವಿ ಹೀಗೆ ಏನೆಲ್ಲಾ ಹೇಳಬಯಸುವ ನಮ್ಮ ಹೊ. ಶ್ರೀ ಅವರನ್ನು ಗೆಳೆಯ ಎಂದರೆ ತಪ್ಪಾಗಲಿಕ್ಕಿಲ್ಲ. ಕಾರಣ ಅವರು ಚಿಕ್ಕವರೊಂದಿಗೆ ಚಿಕ್ಕವರಾಗಿ ದೊಡ್ಡವರೊಂದಿಗೆ ದೊಡ್ಡವರಾಗಿ ನಿರ್ವಹಿಸುತ್ತಿದ್ದ ಕಾರ್ಯವೈಖರಿ ಅದ್ಭುತ.

ಹೊ. ಶ್ರೀ. ನಿರ್ವಹಣೆಯ ಗಾಂಧೀ ಭವನಕ್ಕೆ ಹೋದರೆ ಇದು ನಮಗೊಂದು ಹೊಸ ಪ್ರಪಂಚವನ್ನು ಕಂಡಂತೆ ಭಾಸವಾಗುತಿತ್ತು. ಅಲ್ಲಿಯ ವಾತಾವರಣ, ಕಾರ್ಯಪ್ರವೃತ್ತಿ ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತಿತ್ತು. ಅಷ್ಟೇ ಅಲ್ಲ, ಅಲ್ಲಿನ ಅವರ ಆತಿಥ್ಯ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ.

ಮೂಲಮಂತ್ರಗಳಾದವು. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ 1942 ರಿಂದ 1947ರ ವರೆಗೆ ಸ್ವಾತಂತ್ರ್ಯ ಹೋರಾಟಗಾರರಾಗಿ ಸಕ್ರಿಯವಾಗಿ ಭಾಗವಹಿಸಿ ರಹಸ್ಯ ಪತ್ರಿಕೆಗಳ ಪ್ರಕಟಣೆ, ಹಂಚಿಕೆ ಮಾಡಿ ಜೈಲುವಾಸವನ್ನು ಅನುಭವಿಸಿದರು. ವಿದ್ಯಾರ್ಥಿ ಮತ್ತು ಯುವ ಕಾಂಗ್ರೆಸ್ ಸಮಿತಿ ಸದಸ್ಯರಾಗಿ ಚರಕಾ ಸಂಘ, ವಯಸ್ಕರ ಶಿಕ್ಷಣ ಸಂಘ ಪ್ರಾರಂಭಿಸಿದ್ದೇ ಅಲ್ಲದೆ, 1942 ರಲ್ಲಿ ಸಿದ್ದವನಹಳ್ಳಿ ಕೃಷ್ಣಶರ್ಮರ ನೇತೃತ್ವದಲ್ಲಿ ಮಲ್ಲೇಶ್ವರದಲ್ಲಿ ಗಾಂಧೀ ಸಾಹಿತ್ಯ ಸಂಘ ಸ್ಥಾಪಿಸಿದರು. ಅಂದಿನಿಂದ ಇಲ್ಲಿಯವರೆಗೂ ಗಾಂಧೀ ತತ್ವವನ್ನು ಅಳವಡಿಸಿಕೊಂಡು ಸೇವೆ ಸಲ್ಲಿಸುತ್ತಿರುವ ಶ್ರೀಯುತರನ್ನು ಕರ್ನಾಟಕದ ಗಾಂಧಿ ಹಾಗೂ ಗಾಂಧಿಯನ್ನು ಕಂಡಿಲ್ಲದ ನಮಗೆ ಇವರನ್ನೇ ಗಾಂಧೀಜಿಯವರ ಪ್ರತಿರೂಪ ಎಂದರೆ ಅತಿಶಯೋಕ್ತಿಯೇನಲ್ಲ. ಇವರು ಸೇವೆ ಸಲ್ಲಿಸಿದ ಸಂಸ್ಥೆಗಳಲ್ಲಿ ಸದಸ್ಯರು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳಿಗೆ ಖಾದಿ ತೊಡುವ ಪ್ರವೃತ್ತಿಯನ್ನು ಬೆಳೆಸಿದ್ದಾರೆ.

ಶ್ರೀಯುತರು ಶ್ರೀ ರಾಮ ಮಂದಿರ ಟ್ರಸ್ಟ್, ಶ್ರೀ ರಾಮ ಕೋ-ಆಪರೇಟಿವ್ ಬ್ಯಾಂಕ್, ಶ್ರೀ ಆಂಜನೇಯ ಕೋ-ಆಪರೇಟಿವ್ ಬ್ಯಾಂಕ್, ಪ್ರಗತಿ ಕೋ-ಆಪರೇಟಿವ್ ಬ್ಯಾಂಕ್, ಒಕ್ಕಲಿಗರ ಸಂಘ, ಜಿ.ಇ.ಎಂ.ಎಲ್. ಎಂಪ್ಲಾಯೀಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ, ಜಯಶ್ರೀ ಟ್ರಸ್ಟ್, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಪುಸ್ತಕ ಪ್ರಕಟಣಾ ಮತ್ತು ಮಾರಾಟಗಾರರ ಸಂಘ, ದೆಹಲಿಯ ಕೇಂದ್ರ ಗಾಂಧೀ ಸ್ಮಾರಕ ನಿಧಿ, ಬಿ.ಹೆಚ್.ಇ.ಎಲ್, ಕರ್ನಾಟಕ ಸಂಘ, ಪ್ರಕೃತಿ ಜೀವನ ಕೇಂದ್ರ ಮುಂತಾದ ಹಲವಾರು ಸಂಘ ಸಂಸ್ಥೆಗಳು ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ಸಂಸ್ಥಾಪಕರು ಹಾಗೂ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿರುತ್ತಾರೆ.

1985 ರಿಂದಲೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಧರ್ಮದರ್ಶಿ ಗಳಾಗಿ ಹಾಗೂ ಬೆಂಗಳೂರು ಎಜುಕೇಷನ್ ಸೊಸೈಟಿಯಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮಾರ ಶಿಷ್ಯರಾದ ಡಾ: ಹೊ. ಶ್ರೀನಿವಾಸಯ್ಯನವರು ವೃತ್ತಿಯಿಂದ ಇಂಜಿನಿಯರ್, ಪ್ರವೃತ್ತಿಯಿಂದ ಗಾಂಧೀತತ್ತ್ವೋಪಾಸಕರು. ಸಾಹಿತ್ಯ ಕೃಷಿ ಅವರ ಪ್ರೀತಿಯ ಹವ್ಯಾಸ. ಇದಕ್ಕೆ ಸಿದ್ದವನಹಳ್ಳಿಯವರ ವಿಚಾರಧಾರೆ ಸಾಕಷ್ಟು ಸ್ಫೂರ್ತಿ ನೀಡಿತು. ಇವರಿಂದ ಪ್ರೇರಿತರಾಗಿ ಉತ್ತಮ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಅವರು ಬರೆದ 'ನಾ ಕಂಡ ಜರ್ಮನಿ' ಪ್ರವಾಸ ಸಾಹಿತ್ಯಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಈ ಪ್ರವಾಸ ಸಾಹಿತ್ಯ 1976-1977ನೇ ಸಾಲಿನ ಪಿಯುಸಿ ಪಠ್ಯಪುಸ್ತಕವಾಗಿ ಮನ್ನಣೆ ಪಡೆದಿದೆ. 1995-1996ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪದವಿ ತರಗತಿಗೆ ಪಠ್ಯಪುಸ್ತಕವಾಗಿದೆ. ಪ್ರಸ್ತುತ ಚಿತ್ರಕಲಾ ಪರಿಷತ್ತಿನಲ್ಲಿ ಪಠ್ಯವಾಗಿದೆ. ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಪ್ರಕಟವಾದ 50

ಪುಸ್ತಕಗಳಲ್ಲಿ ಏಕೈಕ ಪ್ರವಾಸ ಕೃತಿ ನಾ ಕಂಡ ಜರ್ಮನಿ ಗ್ರಂಥವಾಗಿದೆ. ಪ್ರಪಂಚ ಪರ್ಯಟನೆ ಮಾಡಿ 'ಜಯಶ್ರೀ ಕಂಡ ಜಗತ್ತು', ಪರಿವ್ರಾಜಕರ ಪ್ರಪಂಚ ಪರ್ಯಟನೆ ಎಂಬ ಪ್ರವಾಸ ಸಾಹಿತ್ಯ ರಚಿಸಿ ಪ್ರಖ್ಯಾತ ಸಾಹಿತಿಗಳಾಗಿದ್ದರು. ಆರೋಗ್ಯದ ಬಗ್ಗೆ 'ಜೀವನ ಸಂಜೀವನ' ಎಂಬ ಆರೋಗ್ಯ ಗ್ರಂಥ ಬರೆದಿದ್ದಾರೆ. ಶ್ರೀಯುತರು ಕೃಷಿ, ಕೈಗಾರಿಕೆ, ಕಾರ್ಮಿಕರ ಬಗ್ಗೆ, ಮಕ್ಕಳ ಸಾಹಿತ್ಯ, ಪ್ರವಾಸ ಸಾಹಿತ್ಯ, ಆರೋಗ್ಯ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ, ಹಾಸ್ಯ ಸಾಹಿತ್ಯ, ವ್ಯಕ್ತಿ ಚಿತ್ರಣಗಳನ್ನು ಕುರಿತು ಸುಮಾರು 80ಕ್ಕೂ ಹೆಚ್ಚು ಗ್ರಂಥಗಳ ಕರ್ತೃಗಳಾಗಿದ್ದಾ ಜ್ಞಾನ ಗಂಗೋತ್ರಿ ಮತ್ತು ವಿಶ್ವಕೋಶಗಳಿಗೆ ಲೇಖಕರು, ಅನೇಕ ಸ್ಮರಣ ಸಂಚಿಕೆಗಳ ಸಂಪಾದಕರು, ಪ್ರಕೃತಿ ಜೀವನ ಕೇಂದ್ರದಿಂದ ಸುಮಾರು 46 ವರ್ಷಗಳಿಂದ ಪ್ರಕಟವಾಗುತ್ತಿರುವ 'ಪ್ರಕೃತಿ ಜೀವನ' ಆರೋಗ್ಯ ಮಾಲೆಯ ಪ್ರಧಾನ ಸಂಪಾದಕರಾಗಿದ್ದರು.

ಪತ್ರಿಕೋದ್ಯಮಿಯಾಗಿಯೂ ಸೇವೆ ಸಲ್ಲಿಸಿದ್ದ ಇವರು ಆದಿ ಚುಂಚನಗಿರಿ ಪತ್ರಿಕೆಯ ಮಾಜಿ ಸಂಪಾದಕರು ಪ್ರಕಾಶಕರೂ ಆಗಿದ್ದರು. ನಾಡಿನ ಅನೇಕ ಪತ್ರಿಕೆಗಳಲ್ಲಿ ಅನೇಕ ವಿಚಾರಾತ್ಮಕ ಲೇಖನಗಳನ್ನು ಬರೆದಿದ್ದರು. ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಭಾಷಣಗಳನ್ನು, ಸಂದರ್ಶನಗಳನ್ನು ನೀಡಿದ್ದಾರೆ. ಸಮಾಜಸೇವೆ, ಸಾಹಿತ್ಯ, ವೃತ್ತಿ ಶಿಕ್ಷಣ, ಪ್ರಕೃತಿ ಚಿಕಿತ್ಸೆ, ಗಾಂಧೀ ಚಟುವಟಿಕೆ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತೊಡಗಿಕೊಂಡು ಸೇವೆ ಸಲ್ಲಿಸುತ್ತಿದ್ದ ಶ್ರೀಯುತರನ್ನು ಅರಸಿ ಬಂದು ಸಂದಿರುವ ಪ್ರಶಸ್ತಿ ಪುರಸ್ಕಾರಗಳು ನೂರಾರು. ಇವರ ಸಮಾಜ ಸೇವೆಯನ್ನು ಕರ್ನಾಟಕ ಸರ್ಕಾರ ಗುರುತಿಸಿ 1984ರಲ್ಲಿ ರಾಜ್ಯ ಪ್ರಶಸ್ತಿ ನೀಡಿದೆ. ಇನ್ನೂರಕ್ಕೂ ಹೆಚ್ಚು ಸಂಸ್ಥೆಗಳು ಇವರನ್ನು ಗೌರವಿಸಿದೆ.

ಇವರು ಸೇವೆ ಸಲ್ಲಿಸುತ್ತಿದ್ದ ಎಲ್ಲಾ ಸಂಸ್ಥೆಗಳಲ್ಲಿಯೂ ಸಂಸ್ಥೆಯ ಆರ್ಥಿಕ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿರಿಸಿ, ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಕ್ಷೇಮವನ್ನರಿತು ಅವರಿಗೆ ಬೇಕಾಗುವ ಎಲ್ಲಾ ಸವಲತ್ತುಗಳನ್ನು ಕಲ್ಪಿಸುವುದರಲ್ಲಿ ಮುಂಚೂಣಿಯಲ್ಲಿದ್ದರು. ಇವರ ಕಟುಮಾತು ಕ್ಷಣಕಾಲ ಮುಗುಡ ಉಂಟುಮಾಡುತ್ತಿದ್ದಾದರೂ, ಆ ಮಾತಿನ ಒಳಮರ್ಮ ನಮ್ಮ ತಪ್ಪನ್ನು ಸರಿಪಡಿಸುವ ಪ್ರೀತಿಯದ್ದಾಗಿತ್ತೆಂಬುದು ಅವರನ್ನು ಹತ್ತಿರದಿಂದ ಬಲ್ಲವರಿಗೇ ಗೊತ್ತು. ಇವರ ಹಸನ್ಮುಖ, ಸರಳತೆ, ನೇರನುಡಿ, ಆದರ್ಶ, ಆಡಳಿತ ದಕ್ಷತೆ, ಸಮರ್ಪಕ ಕಾರ್ಯನಿರ್ವಹಣೆ, ಪ್ರತಿಫಲಾಪೇಕ್ಷೆ ಬಯಸದ ಇವರ ನಿಸ್ವಾರ್ಥತೆಯಿಂದ ಸರ್ಕಾರ ಮತ್ತು ಇತರೆ ಸಂಘ ಸಂಸ್ಥೆಗಳಿಂದ ಅನುದಾನ ಪಡೆಯುವುದರಲ್ಲಿ ಯಶಸ್ವಿಯಾಗಿದ್ದರು. ಈ ಗುಣಗಳಿಂದ ಇವರಿಗೆ ಸಮಾಜದ ಗಣ್ಯವ್ಯಕ್ತಿಗಳ, ರಾಜಕೀಯ ಧುರೀಣರ, ಧಾರ್ಮಿಕ ಸಂಸ್ಥೆಗಳ ಮುಂಬಾಗಿಲು ಸದಾ ತೆರೆದಿರುತ್ತಿತ್ತು.

ಸಮಯದಲ್ಲಿಯೂ ತನ್ನ ಕೆಲಸದಲ್ಲಿ ಉತ್ಸುಕತೆ ತೋರುತ್ತಿದ್ದರು. ಗಾಂಧೀಭವನದ ಬಗ್ಗೆ ಗಾಂಧೀ ಕೆಲಸದ ಬಗ್ಗೆ ಅಪಾರ ಉತ್ಸಾಹ ಹೊಂದಿದ್ದರು. ನನಗೆ ಬಹಳ ಆಶ್ಚರ್ಯವಾಯಿತು. ಡಾ॥ಹೊ.ಶ್ರೀನಿವಾಸಯ್ಯನವರು ಗಾಂಧೀ ಮಾರ್ಗದಲ್ಲಿ ಬದುಕುತ್ತಿರುವವರೆಲ್ಲರಿಗೂ ಗಾಂಧೀಜಿರವರು ಕುರಿತಾಗಿ ಒಂದು ರೀತಿಯ ಹುಚ್ಚು ಹತ್ತಿಸಿದ್ದಾರೆ. ಕೆಲವರಲ್ಲಿ "ನಾನು ಕೊನೆಯ ಹಂತದಲ್ಲಿರುವೆ" ಎಂದು ಹೇಳುತ್ತಾ, "ನನ್ನ ಜೀವನದಲ್ಲಿ ಎರಡು ಇಂಜಿನ್‌ಗಳಿವೆ ನಾವೆಲ್ಲ ಬೋಗಿಗಳು" ಎನ್ನುತ್ತಿದ್ದರು. ಅಂದರೆ ಬಾಪೂ ಮತ್ತು ಬಾಬ ಎರಡು ಇಂಜಿನ್‌ಗಳು ಇದ್ದಂತೆ ಅದರ ಹಿಂದೆ ನಾವೆಲ್ಲವೂ ಬೋಗಿಗಳು ಎಂದು ಸದಾ ಉತ್ಸಾಹದಿಂದ ಸ್ವಾವಲಂಬಿಯಾಗಿ ತಮ್ಮ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಸಮಾಜಮುಖಿಯಾಗಿಯೂ, ಗಾಂಧೀಜಿ ಮತ್ತು ವಿನೋಬಾರವರ ಮಾರ್ಗದಲ್ಲಿ ಸಾಗಲು ಮಾರ್ಗದರ್ಶಿ ಆಗಿರುವ ತಂದೆ ಡಾ॥ಹೊ.ಶ್ರೀನಿವಾಸಯ್ಯನವರು, ಅಜೀವ ಪರ್ಯಂತ ನನ್ನಲ್ಲಿ ಜಾಗೃತಿ ಮೂಡಿಸುತ್ತಿರುತ್ತಾರೆ.

ಜೈ.ಜಗತ್



ಸಮಾಜ ರತ್ನ ಡಾ: ಹೊ. ಶ್ರೀನಿವಾಸಯ್ಯ

– ಹೆಚ್.ಹೆಚ್. ನಾಗರಾಜ

ನಮ್ಮೆಲ್ಲರ ಮೆಚ್ಚಿನ ಹಿರಿಯ ಚೇತನ ಡಾ: ಹೊ. ಶ್ರೀನಿವಾಸಯ್ಯನವರು ನಾಗಮಂಗಲದ ದೇವಲಾಪುರ ಹೋಬಳಿ ಚೌದರಿಕೊಪ್ಪಲು ಗ್ರಾಮದಲ್ಲಿ ಶ್ರೀ ಹೊನ್ನಪ್ಪ ಮತ್ತು ಶ್ರೀಮತಿ ತಿಮ್ಮಮ್ಮ ದಂಪತಿಗಳ ಸುಪುತ್ರರಾಗಿ 1925 ರ ಜನವರಿ 4 ರಂದು ಅವಿದ್ಯಾವಂತ ಬಡ ರೈತ ಕುಟುಂಬದಲ್ಲಿ ಜನಿಸಿದರು. 1949ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಎಂಜಿನಿಯರಿಂಗ್ ಪದವಿ ಪಡೆದು ನಂತರ ಹಿಂದೂಸ್ಥಾನ ವಿಮಾನ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿ ಪರಿಶ್ರಮದಿಂದ ಹಂತ ಹಂತವಾಗಿ ಮೇಲಾಧಿಕಾರಿಗಳಾಗಿ, ತದನಂತರ ಬಿ.ಇ.ಎಂ.ಎಲ್ ಕಾರ್ಖಾನೆಯಲ್ಲಿ ರೈಲುಗಾಡಿಗಳ ವಿನ್ಯಾಸಕರಾಗಿ ಕಾರ್ಯನಿರ್ವಹಿಸಿ, 1983 ರಲ್ಲಿ ಡೆಪ್ಯುಟಿ ಜನರಲ್ ಮ್ಯಾನೇಜರ್‌ರಾಗಿ ನಿವೃತ್ತರಾದರು.

ಮೇಲ್ಕಂಡ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವಾಗ ಹೆಚ್ಚಿನ ತರಬೇತಿಗಾಗಿ 1954 ರಲ್ಲಿ ಪಶ್ಚಿಮ ಜರ್ಮನಿಯ ಎಲ್.ಹೆಚ್.ಬಿ. ಸಂಸ್ಥೆಯಲ್ಲಿ ರೈಲು ನಿರ್ಮಾಣದ ತರಬೇತಿ, 1957 ರಲ್ಲಿ ಪಶ್ಚಿಮ ಜರ್ಮನಿಯ ಎಂ.ಎ.ಎನ್. ಕಾರ್ಖಾನೆಯಲ್ಲಿ ರೈಲುಗಾಡಿಗಳ ವಿನ್ಯಾಸದ ತರಬೇತಿಯನ್ನು ಪಡೆದು ಪರಿಣಿತರಾಗಿದ್ದರು. ನಂತರ ರೈಲು ಗಾಡಿಗಳ ರಫ್ತಿನ ಸಲುವಾಗಿ ಬಾಂಗ್ಲಾ ದೇಶ, ಶ್ರೀಲಂಕಾಕ್ಕೆ ಭೇಟಿ ನೀಡಿ ರೈಲು ಗಾಡಿಗಳನ್ನು ರಫ್ತು ಮಾಡಿದ್ದರು.

1983 ರಲ್ಲಿ ನಿವೃತ್ತಿಯ ನಂತರ 1985 ರಲ್ಲಿ ಪಶ್ಚಿಮ ಜರ್ಮನಿಯ ಬರ್ಲಿನ್ ನಲ್ಲಿ ನಡೆದ ಶಿಕ್ಷಣ ಸಮ್ಮೇಳನದಲ್ಲಿ ಭಾಗವಹಿಸಿರುತ್ತಾರೆ. ಇದಲ್ಲದೆ ಇಟಲಿ, ಜರ್ಮನಿ, ಹಾಲೆಂಡ್, ಫ್ರಾನ್ಸ್, ಇಂಗ್ಲೆಂಡ್, ಅಮೇರಿಕಾ, ಜಪಾನ್, ಚೈನಾ, ಹಾಂಕಾಂಗ್, ಬ್ಯಾಂಕಾಕ್, ಸಿಂಗಾಪುರ ಹಾಗೂ ಇತರೆ ದೇಶಗಳಿಗೆ ಭೇಟಿ ನೀಡಿ ಯೋಗಾಸನ ಮತ್ತು ಪ್ರಕೃತಿ ಚಿಕಿತ್ಸೆ ಬಗ್ಗೆ ಪ್ರವಚನ ಮತ್ತು ಪ್ರದರ್ಶನದೊಂದಿಗೆ ಪ್ರಚಾರ ನೀಡಿದ್ದರು.

ಬಾಲ್ಯದಲ್ಲಿಯೇ ಮಲ್ಲೇಶ್ವರದಲ್ಲಿ ಗಾಂಧೀಜಿಯವರ ಭಾಷಣದಿಂದ ಪ್ರೇರಿತರಾದ ಶ್ರೀಯುತರು ಅಂದಿನಿಂದಲೇ ಗಾಂಧೀ ಅನುಯಾಯಿಗಳಾದರು. ಸತ್ಯ, ಅಹಿಂಸೆ, ಖಾದಿ ಬಟ್ಟೆ ಧಾರಣೆ, ಸ್ವದೇಶ ಪ್ರೇಮ, ಸಮಾಜಸೇವೆ ಇವರ

ಶ್ರೀನಿವಾಸಯ್ಯನವರು ಒಳ್ಳೆಯ ವಾಗ್ಮಿ ಹಾಗೂ ಸಾಹಿತಿಯೂ ಆಗಿದ್ದರು. ಪ್ರವಾಸ ಮಾಡುವುದು, ಪ್ರವಾಸ ಕಥನಗಳನ್ನು ಬರೆಯುವುದು ಅವರ ಅಚ್ಚುಮೆಚ್ಚಿನ ಹವ್ಯಾಸ. ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆದ ಅವರ "ನಾ ಕಂಡ ಜರ್ಮನಿ" ಎಂಬ ಕೃತಿಯನ್ನು ನಾವು ಬಹಳ ಇಷ್ಟಪಟ್ಟು ಓದಿದ್ದೇವೆ. ಮಹಾತ್ಮಗಾಂಧೀ ಬಗ್ಗೆ ಇವರು ಹಲವು ಉಪಯುಕ್ತ ಗ್ರಂಥಗಳನ್ನು ರಚಿಸಿದ್ದು ಅವು ಮಕ್ಕಳಿಗೆ ಅರಿವು ಮೂಡಿಸಿವೆ.

ಕರ್ನಾಟಕ ಒಕ್ಕಲಿಗರ ಸಂಘದ ಖಜಾಂಚಿಯಾಗಿ ಪಾರದರ್ಶಕ ಹಾಗೂ ಪ್ರಾಮಾಣಿಕ ಸೇವೆ ಸಲ್ಲಿಸಿದ್ದ ಅವರು ವಯಸ್ಸಿನ ಅಂತರವಿಲ್ಲದೆ ಪ್ರತಿಯೊಬ್ಬರನ್ನೂ ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಸೌಜನ್ಯದ ಖನಿಯಂತಿದ್ದ ಶ್ರೀಯುತರು ನಮ್ಮ ಕಚೇರಿಗೆ ಹಲವು ಸಲ ಬಂದಿದ್ದಾರೆ. ತಮ್ಮ ಅನುಭವ ಹಾಗೂ ವಿದ್ವತ್ತಿನಿಂದ ಕೂಡಿದ ಮಾತುಗಳ ಮೂಲಕ ಜ್ಞಾನದೀಪಿಗೆ ಬೆಳಗಿದ್ದಾರೆ. ತಮ್ಮ ಜೀವನದುದ್ದಕ್ಕೂ ಉಪಯುಕ್ತ ಕೆಲಸಗಳನ್ನೇ ಮಾಡಿಕೊಂಡು ಬಂದ ಶ್ರೀನಿವಾಸಯ್ಯನವರು ಸಾವಿನಲ್ಲೂ ಅದೇ ಗುಣ ಮೆರೆದರು. ತಮ್ಮ ಪಾರ್ಥಿವ ಶರೀರವನ್ನು ಆಸ್ಪತ್ರೆಗೆ ದಾನ ಮಾಡುವಂತೆ ಆದೇಶಿಸಿದ್ದರು.

ಮದ್ಯಪಾನ ನಿಷೇಧ, ಹರಿಜನೋದ್ಧಾರ, ಖಾದಿ ಅವಲಂಬನೆ, ಪ್ರಕೃತಿಚಿಕಿತ್ಸೆ, ಆಧ್ಯಾತ್ಮಿಕ ಚಿಂತನೆ, ಸಹಕಾರ ತತ್ವ ಹೀಗೆ ಹಲವು ಅಂಶಗಳನ್ನು ಪ್ರತಿಪಾದಿಸಿದ ಡಾ: ಹೊ. ಶ್ರೀನಿವಾಸಯ್ಯನವರು ನಿಜಕ್ಕೂ ಮಹಾನ್ ವ್ಯಕ್ತಿತ್ವ. ಆ ಮಹಾನ್ ಚೇತನಕ್ಕೆ ನಮ್ಮ ನಮನ.



ನಾ ಕಂಡ ಶ್ರೀನಿವಾಸಯ್ಯನವರು?

– ಕೆ.ಹೆಚ್. ಗೋಪಾಲಕೃಷ್ಣೇಗೌಡ

ಶ್ರೀಯುತ ಹೊ.ಶ್ರೀನಿವಾಸಯ್ಯನವರು ನನಗೆ ಪರಿಚಯವಾದದ್ದು ಅವರ ಜೀವನ ಸಂಧ್ಯಾಕಾಲದಲ್ಲಿ ಅವರು ಪತ್ನಿ ಜಯಲಕ್ಷ್ಮಿಯವರನ್ನು ಕಳೆದುಕೊಂಡು ವಿದುರ ಜೀವನ ನಡೆಸುತ್ತಿದ್ದ ಕಾಲಘಟ್ಟದಲ್ಲಿ ಅವರು ಅಧ್ಯಕ್ಷರಾಗಿದ್ದ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಅಧಿನಿಯಮದಡಿ ಓಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರ ನನ್ನನ್ನು ಸದಸ್ಯರಾಗಿ ನೇಮಕ ಮಾಡಿದ 2014ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ತೊಂಬತ್ತರ ಇಳಿ ವಯಸ್ಸಿನಲ್ಲಿಯೂ ಅವರ ಅದಮ್ಯ ಉತ್ಸಾಹ ನನ್ನನ್ನು ದಂಗುಬಡಿಸಿತ್ತು. ಬಹುಮಹಡಿ ಕಟ್ಟಡದ ಎರಡನೆಯ ಅಂತಸ್ತಿನಲ್ಲಿದ್ದ ವಿಚಾರಣಾ ಕೊಠಡಿಗೆ ಅವರು ಕೋಲೂರಿಕೊಂಡು ಮೆಟ್ಟಲು ಹತ್ತಿ ಬರುತ್ತಿದ್ದರು. ಲಿಫ್ಟ್ ಇದ್ದರೂ ಬಳಸುತ್ತಿರಲಿಲ್ಲ.

ಮೇಲ್ಮನವಿ ಪ್ರಕರಣಗಳ ವಿಚಾರಣಾ ಸಮಯದಲ್ಲಿ ಉಭಯ ಪಕ್ಷಗಳೊಡನೆ ಅವರು ಸ್ಪಂದಿಸುತ್ತಿದ್ದ ರೀತಿ, ಕೇಳುತ್ತಿದ್ದ ಪ್ರಶ್ನೆಗಳು, ದಾಖಲೆಗಳನ್ನು ಪರಿಶೀಲಿಸುವ ಕ್ರಮ,ನಿರ್ದೋಷಿಗಳಿಗೆ ಶಿಕ್ಷೆಯಾಗಬಾರದು ಸಾಕ್ಷಾಧಾರಗಳಿಲ್ಲದೆ ಕುಹಕ ದೂರುಗಳನ್ನು ನೀಡುವ ವ್ಯಕ್ತಿಗಳ ವಿರುದ್ಧವೂ ಕ್ರಮ ಕೈಗೊಳ್ಳಬೇಕೆಂಬ ನಿಲುವು ಸತ್ಯಾನ್ವೇಷಣೆಗೆ ನೀಡುತ್ತಿದ್ದ ಆದ್ಯತೆ ನಿಷ್ಪಕ್ಷಪಾತ ನಡತೆ ಇವುಗಳು ಅವರಲ್ಲಿ ಅಡಗಿಕೊಂಡಿದ್ದು ಸಂಪೂರ್ಣ ಪಕ್ವತೆಯ ನ್ಯಾಯಾಧೀಶನನ್ನು ಪ್ರಕಾಶ ಗೊಳಿಸುತ್ತಿದ್ದವು. 2ವರ್ಷಗಳ ಅವಧಿಯಲ್ಲಿ ನಾವಿಬ್ಬರೂ ಮೇಲ್ಮನವಿ ಪ್ರಾಧಿಕಾರದಲ್ಲಿ ಒಟ್ಟಾಗಿ ಕಾರ್ಯ ನಿರ್ವಹಿಸಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಯಾ ಓಂಬುಡ್ಸ್‌ಮನ್‌ರ ನಿರ್ಣಯಗಳನ್ನು ಪ್ರಶ್ನಿಸಿ ದಾಖಲಾಗಿದ್ದ 400ಕ್ಕೂ ಹೆಚ್ಚು ಮೇಲ್ಮನವಿಗಳನ್ನು ಇತ್ಯರ್ಥ ಪಡಿಸಿದ್ದೇವೆ. ಇಬ್ಬರ ನಡುವೆ ತೀರ್ಮಾನ ಕೈಗೊಳ್ಳುವಲ್ಲಿ ಭಿನ್ನಾಭಿಪ್ರಾಯವೇ ಇರಲಿಲ್ಲ ಗಾಂಧೀಭವನದ ಅಧ್ಯಕ್ಷರಾಗಿದ್ದ ಅವರಿಗೆ ನೂರೆಂಟು ಜವಾಬ್ದಾರಿಗಳು. ಆದರೂ ನಡುವೆ ದೂರದ ವಿದ್ಯಾಸಂಸ್ಥೆಗಳಲ್ಲಿನ ಶೈಕ್ಷಣಿಕ

ಶ್ರೀಯವರ ಜೀವನದಲ್ಲಿ ಪ್ರಮುಖ ಸ್ಥಾನ ಹೆಣ್ಣಿಗೆ. ಬಾಲ್ಯದಿಂದಲೇ ಇವರನ್ನು ಸದ್ಗುಣವಂತರನ್ನಾಗಿಸಿದ ಇವರ ತಾಯಿಯವರು ಒಬ್ಬರು ಹಾಗೂ ತಾರುಣ್ಯದಿಂದ ಇಳಿವಯಸ್ಸಿನವರೆಗೂ ಇವರ ಬಾಳಸಂಗಾತಿಯಾಗಿ ಇವರ ಬರಹ, ಬದುಕು, ಸಮಾಜಸೇವೆ ಎಲ್ಲದರಲ್ಲೂ ಬೆಂಗಾವಲಾಗಿ ನಿಂತು ಪ್ರೋತ್ಸಾಹಿಸಿದ ಇವರ ಧರ್ಮಪತ್ನಿ ಶ್ರೀಮತಿ ಜಯಲಕ್ಷ್ಮಿಯವರ ಸ್ಥಾನ ಹೊ. ಶ್ರೀಯವರ ಜೀವನ ಚರಿತ್ರೆಯಲ್ಲಿ ಅತೀ ದೊಡ್ಡದು. ಸಹಧರ್ಮಿಣಿ ಎಂಬ ಪದದ ತುಂಬು ಅರ್ಥವೇ ಇವರಾಗಿದ್ದರು. ಇವರ ಜೀವನದಲ್ಲಿ ಜೀವನದಿಯಂತೆ ಬೆರೆತಿದ್ದರು. ಇವರದು ಅನುರೂಪದ ಆದರ್ಶ ದಾಂಪತ್ಯವಾಗಿತ್ತು. ಇವರು 2014ರಲ್ಲಿ ನಿಧರಾದರು. ಅವರೀರ್ವರ ನಿರ್ಧರಿತ ಆಸೆಯಂತೆ ಮೃತ ದೇಹವನ್ನು ಯಾವ ಸಂಸ್ಕಾರ ಮಾಡದೆ ಎಸ್. ರಾಮಯ್ಯ ವೈದಕೀಯ ಕಾಲೇಜಿಗೆ ದಾನ ಮಾಡಲಾಯಿತು.

ಆಡುಮುಟ್ಟದ ಸೊಪ್ಪಿಲ್ಲ ಎಂಬ ನಾಣ್ಣುಡಿಯಂತೆ ಶ್ರೀಯುತರು ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದರೂ, ಇವರು ಸೇವೆ ಸಲ್ಲಿಸದ ಕ್ಷೇತ್ರವೇ ಇಲ್ಲ. ಸಮಾಜದಲ್ಲಿ ಯಾವುದೇ ಕಪ್ಪು ಚುಕ್ಕೆಯಿಲ್ಲದೆ 93ನೇ ವಯಸ್ಸಿನಲ್ಲಿಯೂ ಯುವಕರೂ ನಾಚುವಂತೆ ಚೈತನ್ಯದ ಚಿಲುಮೆಯಾಗಿ ಸಮಾಜಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸುತ್ತಾ ನಮಗೆಲ್ಲರಿಗೂ ಆದರ್ಶಪ್ರಾಯರಾಗಿದ್ದರು. ದಿನಾಂಕ:06-04-2017 ರಂದು ಸಮಾಜ ರತ್ನ ಡಾ. ಹೊ. ಶ್ರೀ ರವರ ಪ್ರಾಣ ದಿವ್ಯ ಜ್ಯೋತಿಯು ಅವರ ದೇಹವನ್ನು ತ್ಯಜಿಸಿತು. ಇವರ ಅಗಲಿಕೆಯು ಇಡೀ ಸಮಾಜಕ್ಕೆ ತುಂಬಲಾರದ ನಷ್ಟವಾಗಿರುತ್ತದೆ. ಇಂತಹವರ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸಿದ್ದು ನಮ್ಮೆಲ್ಲರ ಪುಣ್ಯ ವಿಶೇಷವೇ ಸರಿ. ಅವರು ಕಾಲವಾಗುವ ಹಿಂದಿನ ದಿನ ನಾನು ಸಹ ಆಸ್ಪತ್ರೆಯಲ್ಲಿ ಅವರ ಜತೆಗಿದ್ದ ಸಂದರ್ಭದಲ್ಲಿ ವಿದೇಶದಲ್ಲಿರುವ ಮೊಮ್ಮಗನ ಕರೆ ಬಂದಾಗ ಅವರು ಮಾತನಾಡಲು ಸಾಧ್ಯವಾಗದಿದ್ದರೂ ಕೈಯಿಂದಲೂ ಸನ್ನೆ ಮಾಡಿ ನಾನು ಚೆನ್ನಾಗಿದ್ದೇನೆ ನೀನು ಹೇಗಿದ್ದೀಯ ಎಂದು ಅತ್ಯುತ್ಸಾಹದಿಂದ ಕೇಳಿದರು. ಜೀವನದ ಕೊನೆಯ ಕ್ಷಣದಲ್ಲೂ ಸಹಿತ ಅವರಿಗಿದ್ದ ಆತ್ಮಸ್ಥೈರ್ಯ ಹೇಳಲಸಾಧ್ಯ. ಇಂತಹವರ ಒಡನಾಡಿಯಾಗಿದ್ದವರೆಲ್ಲರೂ ಧನ್ಯರು.

ಇವರ ಜೀವನ, ಸಮಾಜ ಸೇವೆ, ಸಾಧನೆಯು ಹೇಳತೀರದು. ಇವರ ಆತ್ಮೀಯ ಶಿಷ್ಯನಾಗಿ ನನ್ನ ಜೀವನದಲ್ಲೇನಾದರೂ ಈ ಸಮಾಜಕ್ಕಾಗಿ ಕಿಂಚಿಂತು ಸೇವೆ ಮಾಡಿದ್ದೇನೆಯಾದರೆ ಅದು ಇವರ ಪ್ರೇರಣೆಯಿಂದಲೇ ಹೊರತು ನನ್ನಿಂದಲ್ಲವೆಂಬುದನ್ನು ಈ ಸಂದರ್ಭದಲ್ಲಿ ಹಂಚಿಕೊಳ್ಳಲು ಇಚ್ಛಿಸುತ್ತೇನೆ. ಈ ಅದಮ್ಯ ಚೇತನದ ಮಾರ್ಗದರ್ಶನದಂತೆ ನಡೆದರೆ ಸಮಾಜಕ್ಕೆ ಕಿಂಚಿಂತ್ತು ಸೇವೆ ಸಲ್ಲಿಸಿದ ಪುಣ್ಯ ನಮಗಾಗುವುದರಲ್ಲಿ ಸಂದೇಹವಿಲ್ಲ.



ಡಾ: ಹೊ. ಶ್ರೀನಿವಾಸಯ್ಯ

– ಟಿ. ವೆಂಕಟೇಶ್

ನಾವು ಕಂಡ ಅತ್ಯಂತ ಸರಳ ಸಂಪನ್ನ ವ್ಯಕ್ತಿಗಳ ಪೈಕಿ ಡಾ:ಹೊ. ಶ್ರೀನಿವಾಸಯ್ಯ ನವರೊಬ್ಬರು. ಗಾಂಧೀವಾದಿಗಳು, ಪತ್ರಕರ್ತರು ಎಂಜಿನೀಯರ್ ಹಾಗೂ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾಗಿದ್ದಾಗ ಅವರು ನಮ್ಮ ಪರಮ ಆತ್ಮೀಯರಾಗಿದ್ದರು ಎಂದು ಹೇಳಿಕೊಳ್ಳುವುದು ಹೆಮ್ಮೆಯ ವಿಷಯ.

ನಾವು ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಹುಟ್ಟಿದವರಾದರೆ, ಹೊ. ಶ್ರೀನಿವಾಸಯ್ಯರವರು ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಜನಿಸಿದವರು. ಬ್ರಿಟೀಷರ ದಾಸ್ಯದಿಂದ ಭರತಖಂಡವನ್ನು ಮುಕ್ತಗೊಳಿಸಬೇಕು ಎಂಬ ಉದಾತ್ತಧ್ಯೇಯ ದೊಂದಿಗೆ ಹೋರಾಡಿದವರು. ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರಿಂದ ಖುದ್ದಾಗಿ ಸ್ಫೂರ್ತಿ ಪಡೆದಂಥವರು. ಅಂತಹವರ ದರ್ಶನ ಮಾತ್ರದಿಂದ ನಮ್ಮಲ್ಲಿ ಸಹಜವಾಗಿಯೇ ಸಕಾರಾತ್ಮಕ ಕಂಪನಗಳು ಸೃಷ್ಟಿಯಾಗುತ್ತಿದ್ದವು.

ಹೆಚ್.ಡಿ. ಕುಮಾರಸ್ವಾಮಿ ಅವರಿಂದ ಆರಂಭಗೊಂಡು ಸಿದ್ಧರಾಮಯ್ಯ ಅವರ ನಡುವಿನ ಎಲ್ಲ ಮುಖ್ಯಮಂತ್ರಿಗಳನ್ನೂ ಗಾಂಧಿ ಭವನಕ್ಕೆ ಆಹ್ವಾನಿಸಿ ಸರ್ಕಾರ ಗಾಂಧಿ ಚಟುವಟಿಕೆಯಲ್ಲಿ ತೊಡಗುವಂತೆ ಪ್ರೇರೇಪಿಸಿದ್ದರು. ಅವರ ಆಶಯದಂತೆ ಎಲ್ಲ ಜಿಲ್ಲೆಗಳಲ್ಲೂ ಗಾಂಧಿಭವನ ನಿರ್ಮಿಸಲು ಸಿಎಂ ಸಿದ್ಧರಾಮಯ್ಯ ಅವರು ಆದೇಶಿಸಿದ್ದರು. ವಾರ್ತಾ ಇಲಾಖೆಯ ಜೊತೆ ಅನ್ಯೋನ್ಯ ಸಂಬಂಧ ಹೊಂದಿದ್ದರು. ಮಹಾತ್ಮಾಂಧೀಜಿಯವರ 150ನೇ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ ನಡೆಸಿದ್ದರು. ಈ ಬಗ್ಗೆ ಸರ್ಕಾರಕ್ಕೂ ತಿಳಿಸಿದ್ದರು. ಆದರೆ, ಅವರ ಕೊನೆಯ ಆಸೆ ಈಡೇರದೇ ಹೋಗಿದ್ದು ಕಾಲನ ಕರೆಗೆ ಹೋಗುವಂತಾಗಿದೆ.

ಗಾಂಧೀವಾದಿ ಹೊ. ಶ್ರೀನಿವಾಸಯ್ಯ ನಿಧನ : ಬೆಂಗಳೂರು : ಹಿರಿಯ ಗಾಂಧೀವಾದಿ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ॥ ಹೊ. ಶ್ರೀನಿವಾಸಯ್ಯ (93) ಗುರುವಾರ ಬೆಳಗ್ಗೆ ಬೆಂಗಳೂರಿನಲ್ಲಿ

ನಿಧನರಾಗಿದ್ದಾರೆ. ಮೂತ್ರಪಿಂಡ ವೈಫಲ್ಯ ಮತ್ತು ಹೃದ್ರೋಗ ಸಮಸ್ಯೆಯಿಂದಾಗಿ ಕಳೆದ ಕೆಲವು ದಿನಗಳಿಂದ ನಗರದ ಜಯದೇವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಮುಂಜಾನೆ ಕೊನೆಯುಸಿರೆಳೆದಿದ್ದಾರೆ. ಅವರು ಓರ್ವ ಪುತ್ರಿ ಮತ್ತು ಅಪಾರಸಂಖ್ಯೆಯ ಅಭಿಮಾನಿಗಳನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ನಗರದ ಗಾಂಧಿ ಭವನದಲ್ಲಿ 12 ಗಂಟೆಗೆ ತಂದು ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು. ಈ ವೇಳೆ ಅನೇಕ ಗಣ್ಯರು ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿ ಅಗಲಿದ ಗಾಂಧೀವಾದಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಡಾ॥ ಹೊ. ಶ್ರೀನಿವಾಸಯ್ಯ ಅವರು ಮಹಾತ್ಮಗಾಂಧಿಯವರನ್ನು ಭೇಟಿ ಮಾಡಿ ಅವರ ಪ್ರಭಾವಕ್ಕೊಳಗಾದವರು. ವಿದ್ಯಾರ್ಥಿದಿಸೆಯಲ್ಲಿಯೇ ಖಾದಿ ಧರಿಸುತ್ತಿದ್ದರು. 80 ವರ್ಷಗಳ ಹಿಂದೆ ಎಂಜಿಜಿಯರಿಂಗ್ ಪದವಿ ಪಡೆದು ಬಿ.ಇ.ಎಂ.ಎಲ್ ನಲ್ಲಿ ಮೆಕಾನಿಕ್ ಎಂಜಿನಿಯರ್ ಆಗಿದ್ದರು ಸುಮಾರು 80 ಕೃತಿಗಳನ್ನು ಅವರು ರಚಿಸಿದ್ದಾರೆ. ಕಳೆದ ನಾಲ್ಕು ದಶಕಗಳಿಂದ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾಗಿ, ಗಾಂಧಿಭವನದ ಏಳಿಗೆಗೆ ತನ್ನನ್ನು ತಾನು ಸಮರ್ಪಿಸಿಕೊಂಡು ಕರ್ನಾಟಕದ ಗಾಂಧಿ ಎಂದೇ ಖ್ಯಾತರಾಗಿದ್ದರು.

ಅಸಂಖ್ಯಾತ ಅಭಿಮಾನಿಗಳು ಅಗಲಿದ ಹಿರಿಯ ಚೇತನರ ಅಂತಿಮ ದರ್ಶನ ಪಡೆದು ಶ್ರದ್ಧಾಂಜಲಿ ಸಲ್ಲಿಸಿದರು. ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಹಿರಿಯ ಚೇತನಕ್ಕೆ ಪೊಲೀಸ್ ಗೌರವ ಸಲ್ಲಿಸಿದ ನಂತರ ಪಾರ್ಥೀವ ಶರೀರವನ್ನು ಸಂಜೆ 7.30ಕ್ಕೆ ಹೊ. ಶ್ರೀನಿವಾಸಯ್ಯ ಅವರ ಆಶಯದಂತೆ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಹಸ್ತಾಂತರಿಸಲಾಯಿತು.

ಕನ್ನಡ ಪ್ರಭ ದಿ: 7-4-2017

ಮಂಡ್ಯ ಹುಡುಗ 'ಕರ್ನಾಟಕ ಗಾಂಧಿ' ಯಾದದ್ದು ಹೇಗೆ?

ಕಾಲೇಜು ದಿನಗಳಲ್ಲಿಯೇ ಭೂಗತ ಪತ್ರಿಕೆಗಳ ಪ್ರಕಟಿಸಿ ಸ್ವಾತಂತ್ರ್ಯ ಹೋರಾಟ ಪ್ರತಿ ಜಿಲ್ಲೆಯಲ್ಲೂ ಗಾಂಧಿ ಭವನ ನಿರ್ಮಿಸುವ ಗುರಿ ಹೊಂದಿದ್ದ ಹೊ. ಶ್ರೀನಿವಾಸಯ್ಯನವರು : ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಚೌಧರಿ ಕೊಪ್ಪಲಿನಲ್ಲಿ 4ನೇ ಜನವರಿ 1925ರಲ್ಲಿ ಜನಿಸಿದ ಡಾ॥ ಹೊ. ಶ್ರೀನಿವಾಸಯ್ಯ ಅವರು ವಿದ್ಯಾರ್ಥಿಯಾಗಿದ್ದಾಗಲೇ ಮಹಾತ್ಮ ಗಾಂಧೀಜಿ ಅವರನ್ನು ಭೇಟಿಯಾಗಿದ್ದು. ಅದು ಅವರ ಜೀವನದ ಮಜಲು ಬದಲಾವಣೆಗೆ ಪ್ರಮುಖದಾರಿಯಾಯಿತು. ಗಾಂಧೀಜಿ ಅವರನ್ನು ಭೇಟಿಯಾದ ದಿನದಿಂದಲೂ ಅವರ ಪ್ರಭಾವಕ್ಕೊಳಗಾಗಿ ಗಾಂಧೀಜಿ ತತ್ವ ಆದರ್ಶಗಳನ್ನು ಮೈಗೂಡಿಸಿಕೊಂಡು ಬೆಳೆದು ಕರ್ನಾಟಕದ ಗಾಂಧಿ ಎಂದೇ ಪ್ರಖ್ಯಾತರಾಗಿದ್ದರು.

ಕಾಲೇಜು ದಿನಗಳಲ್ಲಿಯೇ ಭೂಗತ ಪತ್ರಿಕೆಗಳನ್ನು ಪ್ರಕಟಿಸಿ, ಹಂಚುವ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ದೇಶಪ್ರೇಮಿ. ಕಠಿಣ ಪರಿಶ್ರಮದಿಂದ 1949ರಲ್ಲಿ ಮೆಕ್ಯಾನಿಕಲ್ ಇಂಜಿನಿಯರ್ ಆಗಿ ವೃತ್ತಿ ಪ್ರಾರಂಭಿಸಿ, 1983ರಲ್ಲಿ ಬಿಇಎಂಎಲ್‌ನಲ್ಲಿ ಜನರಲ್ ಮ್ಯಾನೇಜರ್ ಆಗಿ ನಿವೃತ್ತರಾದರು. ಕಳೆದ ನಾಲ್ಕು ದಶಕಗಳಿಂದ ಅವರು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾಗಿ, ಗಾಂಧೀಭವನದ ಏಳಿಗೆಗೆ ತನ್ನನ್ನು ತಾನು ಸಮರ್ಪಿಸಿಕೊಂಡಿದ್ದರು. ಪ್ರವಾಸ, ಜೀವನ ಚರಿತ್ರೆ, ಹಾಸ್ಯ, ಪ್ರಕೃತಿ ಚಿಕಿತ್ಸೆ, ಗಾಂಧಿ ಚಿಂತನೆ ಕುರಿತ 90ಕ್ಕೂ ಹೆಚ್ಚು ಕೃತಿಗಳನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಬರೆದಿದ್ದಾರೆ. ಅವರ 'ನಾ ಕಂಡ ಜರ್ಮನಿ' ಕೃತಿಗೆ 1976ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಹಾಲಿ ಸಚಿವ ಎಚ್.ಕೆ. ಪಾಟೀಲ್ ಅವರೊಂದಿಗೆ ಅವರದ್ದು ವಿಶೇಷ ಒಡನಾಟ.

ಭಾರತ ಮತ್ತು ಜರ್ಮನಿಯ ಹಲವು ತಾಂತ್ರಿಕ ಸಂಸ್ಥೆಗಳ ಸದಸ್ಯರಾಗಿ ಆ ಸಂಸ್ಥೆಗಳ ಅಭ್ಯುದಯಕ್ಕಾಗಿ ದುಡಿದಿರುವ ಇವರು ಬೆಂಗಳೂರಿನ ಶ್ರೀ ಆಂಜನೇಯ ಕೋ-ಅಪರೇಟಿವ್ ಬ್ಯಾಂಕಿನ ಸ್ಥಾಪಕರು. ಪ್ರಕೃತಿ ಜೀವನ ಕೇಂದ್ರದ ಮೂಲ ಪುರುಷರು.

ಹಲವು ಪ್ರಶಸ್ತಿಗಳು : ಇವರ ಸೇವೆಯ ಹಿರಿಮೆಯನ್ನು ಗುರುತಿಸಿ ಈಗಾಗಲೇ ಕರ್ನಾಟಕ ಸರ್ಕಾರದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಪ್ರಕೃತಿ ಚಿಕಿತ್ಸೆಯಲ್ಲಿ ಗೌರವ ಡಾಕ್ಟರೇಟ್, ಚುಂಚಶ್ರೀ, ಕನ್ನಡ ಶ್ರೀ, ಕರ್ನಾಟಕ ಶ್ರೀ, ಪ್ರಕೃತಿ ಚಿಕಿತ್ಸಾ ರತ್ನ, ಕರ್ನಾಟಕ ಸರ್ಕಾರದ ಪತಂಜಲಿ ಸುವರ್ಣ ಪದಕ ಯೋಗಶ್ರೀ, ಅರ್ಯಭಟ ಮತ್ತು ಮೈಸೂರು

ವಿವಿಯಿಂದ ಗೌರವ ಡಾಕ್ಟರೇಟ್ ಮುಂತಾದ ಪ್ರಶಸ್ತಿಗಳು ಸಂದಿವೆ. ಇಡೀ ದೇಶದಲ್ಲಿಯೇ ಪ್ರಥಮ ಬಾರಿಗೆ ಗಾಂಧೀ ಶಾಂತಿ ಸೇವಾ ಪ್ರಶಸ್ತಿ ನೀಡುತ್ತಿರುವ ಕರ್ನಾಟಕ ಸರ್ಕಾರ, 2015ನೇ ಸಾಲಿನ ಗಾಂಧೀ ಶಾಂತಿ ಸೇವಾ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇತ್ತೀಚೆಗಷ್ಟೆ ರಾಷ್ಟ್ರಪತಿ ಅವರು ವಯೋಶ್ರೇಷ್ಠ ಸನ್ಮಾನ-2016 ಪ್ರಶಸ್ತಿ ನೀಡಿ ಗೌರವಿಸಿದ್ದರು.

ಸಿದ್ಧರಾಮಯ್ಯ (ಮುಖ್ಯಮಂತ್ರಿ) : ಮಹಾತ್ಮ ಗಾಂಧಿ ಅವರ ಸತ್ವಭರಿತ ತತ್ವಗಳು ಹಾಗೂ ಮೌಲಿಕ ಆದರ್ಶಗಳಿಂದ ಪ್ರಭಾವಿತರಾದ ಲಕ್ಷಾಂತರ ಮಂದಿಯಲ್ಲಿ ಶ್ರೀನಿವಾಸಯ್ಯ ಅವರೂ ಒಬ್ಬರು. ಸರಳತೆ ಬೋಧಿಸಲು ಸುಲಭ. ಪಾಲಿಸುವುದು ಕಷ್ಟ ಎಂಬುದನ್ನು ಮನಗಂಡು ಮೊದಲು ಸರಳತೆ ದೀಕ್ಷೆ ಪಡೆದರು. ಖಾದಿ ಬಟ್ಟೆ ತೊಟ್ಟರು. ಜಾತ್ಯತೀತ ನಿಲುವಿಗೆ ಬದ್ಧರಾದರು. ಗಾಂಧೀಜಿ ಅವರ ಸಂದೇಶಗಳನ್ನು ಪ್ರಚುರಪಡಿಸಲು ಟೊಂಕ ಕಟ್ಟಿ ನಿಂತರು. ಅವರ ನಿಧನದಿಂದ ರಾಜ್ಯಕ್ಕೆ ತುಂಬಲಾಗದ ಹಾನಿ ಸಂಭವಿಸಿದೆ.

ಬಿ.ಎಸ್. ಯಡಿಯೂರಪ್ಪ (ಬಿಜೆಪಿ ರಾಜ್ಯಾಧ್ಯಕ್ಷರು) : ಸ್ವಾತಂತ್ರ್ಯ ಹೋರಾಟಗಾರ ಹೊ. ಶ್ರೀನಿವಾಸಯ್ಯ ನಿಧನ ಸುದ್ದಿ ಕೇಳಿ ಆಘಾತವಾಗಿದೆ. ಸರಳ ಜೀವನದ ಮೂಲಕ ಗಾಂಧಿ ತತ್ವಗಳನ್ನು ಇಂದಿನ ಯುವ ಪೀಳಿಗೆಗೆ ತಲುಪಿಸುತ್ತಿದ್ದ ಹಿರಿಯರನ್ನು ಕಳೆದುಕೊಂಡು ಇಡೀ ಸಮಾಜ ಬಡವಾಗಿದೆ. ಮಹಾತ್ಮ ಗಾಂಧೀಜಿ ಅವರ ತತ್ವ ಮತ್ತು ಸರಳತೆಯಲ್ಲಿ ನಂಬಿಕೆ ಇಟ್ಟಿರುವವರಿಗೆ ಅವರ ಸಾವು ತುಂಬಲಾರದ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ.

ಉಮಾಶ್ರೀ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ) : ಬಾಲ್ಯದಿಂದಲೇ ಗಾಂಧೀಜಿಯವರ ಬಗ್ಗೆ ಅಪಾರ ಒಲವು ಬೆಳೆಸಿಕೊಂಡಿದ್ದ ಹೊ. ಶ್ರೀನಿವಾಸಯ್ಯ ಗಾಂಧೀಜಿಯವರನ್ನು ವೈಯಕ್ತಿಕವಾಗಿ ಬಲ್ಲವರಾಗಿದ್ದರು. ನಂತರ ತಮ್ಮ ಇಡೀ ಬದುಕನ್ನು ಗಾಂಧೀಜಿಯವರ ತತ್ವ ಮತ್ತು ಸಂದೇಶವನ್ನು ಪಸರಿಸುವ ಕೆಲಸಕ್ಕಾಗಿ ಮೀಸಲಿಟ್ಟವರು ಗಾಂಧೀ ಸ್ಮಾರಕ ನಿಧಿ ಮೂಲಕ ಕಳೆದ 4 ದಶಕಗಳಿಂದ ಗಾಂಧೀಜಿ ಯವರ ಜೀವನಾದರ್ಶಗಳ ಮತ್ತು ತತ್ವಪ್ರಚಾರಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿದ್ದರು.

ಅನಂತಕುಮಾರ್ (ಕೇಂದ್ರ ಸಂಸದಿಯ ವ್ಯವಹಾರಗಳ ಸಚಿವ) : ಗಾಂಧಿ ತತ್ವಗಳನ್ನು ಅನುಷ್ಠಾನಕ್ಕೆ ತಂದು ಅವರ ಚಿಂತನೆಗಳಲ್ಲೇ ಬದುಕನ್ನು ನಡೆಸಿದ ಹೊ. ಶ್ರೀನಿವಾಸಯ್ಯ ಅವರು ನಡೆದು ಬಂದ ದಾರಿ ಕಠಿಣ ಪರಿಶ್ರಮದ್ದಾಗಿದೆ. ಗಾಂಧಿ ದರ್ಶನಕ್ಕೊಂದು ಆಯಾಮ ಕಲ್ಪಿಸಿಕೊಟ್ಟವರು. ನೂರಾರು ಗಾಂಧಿ ಅಧ್ಯಯನ ಕೇಂದ್ರಗಳ ಸ್ಥಾಪನೆಗೆ ಕಾರಣರಾಗಿದ್ದಾರೆ. ಶ್ರೀನಿವಾಸಯ್ಯನವರ ಅಗಲಿಕೆಯಿಂದಾಗಿ ರಾಷ್ಟ್ರವು ಹಿರಿಯ ಗಾಂಧಿವಾದಿಯನ್ನು ಕಳೆದುಕೊಂಡಿದೆ.

ಕರ್ನಾಟಕದ ಗಾಂಧಿ ಹೊ. ಶ್ರೀನಿವಾಸಯ್ಯ ನಿಧನ

ವಿದ್ಯಾರ್ಥಿಯಾಗಿದ್ದಾಗಲೇ ಮಹಾತ್ಮ ಗಾಂಧಿ ಬೇಟಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ 90ಕ್ಕೂ ಹೆಚ್ಚು ಕೃತಿಗಳ ರಚನೆ : ಮಹಾತ್ಮಾಗಾಂಧೀಜಿ ಅವರ ತತ್ವ ಆದರ್ಶಗಳನ್ನು ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಂಡು ಕರ್ನಾಟಕದಗಾಂಧಿ ಎಂದೇ ಹೆಸರಾಗಿದ್ದ ಹಿರಿಯ ಗಾಂಧಿವಾದಿ ಸ್ಮಾರಕ ನಿಧಿಯ ಅಧ್ಯಕ್ಷ ಹೊ. ಶ್ರೀನಿವಾಸಯ್ಯ (93) ಅವರು ಗುರುವಾರ ಇಹಲೋಕ ತ್ಯಜಿಸಿದರು.

ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದ ಶ್ರೀನಿವಾಸಯ್ಯ ಅವರು ಕೆಲ ದಿನಗಳಿಂದ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ಮುಂಜಾನೆ ಕೊನೆಯುಸಿರೆಳೆದರು. ಮೃತರು ಒಬ್ಬ ಪುತ್ರಿ ಹಾಗೂ ಅಪಾರ ಪ್ರಮಾಣದ ಅಭಿಮಾನಿಗಳು, ಹಿತೈಷಿಗಳನ್ನು ಅಗಲಿದ್ದಾರೆ. ಶ್ರೀನಿವಾಸಯ್ಯ ಅವರ ಅಗಲಿಕೆಯಿಂದ ಅಹಿಂಸೆ, ಸರಳತೆ, ತ್ಯಾಗ, ಸತ್ಯ ಪ್ರತಿಪಾದಿಸಿ ವಿಶ್ವಮಾನ್ಯರಾದ ಮಹಾತ್ಮಗಾಂಧೀಜಿಯವರ ತತ್ವಾದರ್ಶಗಳನ್ನು ಜೀವನುದದ್ದಕ್ಕೂ ಪಾಲಿಸುತ್ತಾ ಬಂದ ಗಾಂಧೀಜಿಯ ಬಹುದೊಡ್ಡ ಕೊಂಡಿಯೊಂದು ಕಳಚಿದಂತಾಗಿದೆ. ಸರಳ ಜೀವಿಯಾಗಿದ್ದ ಶ್ರೀನಿವಾಸಯ್ಯ ಅವರ ಇಚ್ಛೆಯಂತೆ ಅವರ ದೇಹವನ್ನು ರಾಮಯ್ಯ ಆಸ್ಪತ್ರೆಗೆ ದಾನ ಮಾಡಲಾಗಿದೆ.

ಹೊ. ಶ್ರೀನಿವಾಸಯ್ಯ ಅವರ ನಿಧನದ ಬಳಿಕ ಅವರ ಪಾರ್ಥೀವ ಶರೀರವನ್ನು ಜಯದೇವ ಆಸ್ಪತ್ರೆಯಿಂದ ಮಲ್ಲೇಶ್ವರ 6ನೇ ಕ್ರಾಸ್‌ನಲ್ಲಿರುವ ಅವರ ನಿವಾಸಕ್ಕೆ ತರಲಾಯಿತು. ನಂತರ ಅಲ್ಲಿಂದ ಮಧ್ಯಾಹ್ನ 12.30ಕ್ಕೆ ಗಾಂಧಿ ಭವನಕ್ಕೆ ತಂದು ಅಲ್ಲಿ ಸಂಜೆ 7.30ರವರೆಗೂ ಸಾರ್ವಜನಿಕ ದರ್ಶನಕ್ಕೆ ಅವಕಾಶ ಮಾಡಲಾಗಿತ್ತು. ಬಳಿಕ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಸೂಚನೆ ಮೇರೆಗೆ ಪಾರ್ಥಿವ ಶರೀರಕ್ಕೆ ಸರ್ಕಾರಿ ಗೌರವಸಲ್ಲಿಸಲಾಯಿತು. ಆನಂತರ ಪಾರ್ಥಿವ ಶರೀರವನ್ನು ನಗರದ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ತಂದು ದಾನ ಮಾಡಲಾಯಿತು. ತಾವು ಮೃತಪಟ್ಟ ಬಳಿಕ ತಮ್ಮ ದೇಹವನ್ನು ರಾಮಯ್ಯ ಆಸ್ಪತ್ರೆಗೆ ನೀಡುವುದಾಗಿ ಶ್ರೀನಿವಾಸಯ್ಯ ಅವರು ಮೊದಲೇ ಒಪ್ಪಂದ ಮಾಡಿಕೊಂಡಿದ್ದರು.

ಗಣ್ಯರ ಸಂತಾಪ : ಹೊ. ಶ್ರೀನಿವಾಸಯ್ಯ ಅವರ ನಿಧನಕ್ಕೆ ಮುಖ್ಯ ಮಂತ್ರಿ ಸಿದ್ಧರಾಮಯ್ಯ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವ ಅನಂತ್‌ಕುಮಾರ್, ಮಾಜಿ ಮುಖ್ಯಮಂತ್ರಿಗಳಾದ ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಹಲವು ರಾಜಕೀಯ ಗಣ್ಯರು, ಆದಿಚುಂಚನಗಿರಿ ಮಠದ ನಿರ್ಮಲಾನಂದ ಸ್ವಾಮೀಜಿ ಸೇರಿದಂತೆ ವಿವಿಧ

ಮಠಾಧೀಶರು, ಸಾಹಿತಿಗಳು, ಅವರ ಅಭಿಮಾನಿಗಳು ಹಾಗೂ ಕುಟುಂಬಸ್ಥರು ಕಂಬನಿ ಮಿಡಿದಿದ್ದಾರೆ.

ನಿರ್ಮಲಾನಂದ ಸ್ವಾಮೀಜಿ, ಎಚ್.ಕೆ. ಪಾಟೀಲ, ಎಂ.ವಿ. ರಾಜಶೇಖರ್, ಜಾಫರ್ ಷರೀಫ್, ಬಿ.ಜಿ. ಬಣಕಾರ್, ರಾಮಚಂದ್ರಗೌಡ, ಮನು ಬಳಿಗಾರ್, ಸಾ.ರಾ. ಗೋವಿಂದು ಸೇರಿ ಅನೇಕ ಗಣ್ಯರು ಅಂತಿಮ ನಮನ ಸಲ್ಲಿಸಿದರು.

ಕರ್ನಾಟಕದ ಗಾಂಧಿ : ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಚೌಧರಿ ಕೊಪ್ಪಲಿನಲ್ಲಿ 4ನೇ ಜನವರಿ 1925ರಲ್ಲಿ ಜನಿಸಿದ ಸ್ವಾತಂತ್ರ್ಯ ಯೋಧ ಡಾ॥ ಹೊ. ಶ್ರೀನಿವಾಸಯ್ಯ ಅವರು ವಿದ್ಯಾರ್ಥಿಯಾಗಿ ದ್ದಾಗಲೇ ಮಹಾತ್ಮ ಗಾಂಧೀಜಿ ಅವರನ್ನು ಭೇಟಿಯಾಗಿದ್ದು ಅವರು ಜೀವನದ ಮಜಲು ಬದಲಾವಣೆಗೆ ಪ್ರಮುಖ ದಾರಿಯಾಯಿತು. ಗಾಂಧೀಜಿ ಅವರನ್ನು ಭೇಟಿಯಾದ ದಿನದಿಂದಲೂ ಅವರ ಪ್ರಭಾವಕ್ಕೊಳಗಾಗಿ ಗಾಂಧೀಜಿ ತತ್ವ ಆದರ್ಶಗಳನ್ನು ಮೈಗೂಡಿಸಿಕೊಂಡು ಬೆಳೆದು ಕರ್ನಾಟಕದ ಗಾಂಧಿ ಎಂದೇ ಪ್ರಖ್ಯಾತರಾಗಿದ್ದರು.

ವಿಜಯಕರ್ನಾಟಕ ದಿ: 7-4-2017

ಗಾಂಧಿವಾದಿ ಹೊ. ಶ್ರೀನಿವಾಸಯ್ಯ ಇನ್ನಿಲ್ಲ

ಸ್ವಇಚ್ಛೆಯಂತೆ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಪಾರ್ಥಿವ ಶರೀರ ದಾನ : ಹಿರಿಯ ಗಾಂಧಿವಾದಿ, ಸ್ವಾತಂತ್ರ್ಯ ಹೋರಾಟಗಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ॥ ಹೊ. ಶ್ರೀನಿವಾಸಯ್ಯ (93) ಅವರು ಅನಾರೋಗ್ಯದಿಂದ ಕೊನೆಯುಸಿರೆಳೆದರು. ಎರಡು ವಾರಗಳ ಹಿಂದೆ ಹೃದಯ ಸಮಸ್ಯೆಯಿಂದಾಗಿ ಜಯದೇವ ಆಸ್ಪತ್ರೆಗೆ ದಾಖಲಾಗಿದ್ದ ಅವರಿಗೆ ವಯೋಸಹಜವಾಗಿ ಮೂತ್ರ ಪಿಂಡ ತೊಂದರೆ ಕಾಣಿಸಿಕೊಂಡಿತ್ತು. ಆದರೆ ಚಿಕಿತ್ಸೆ ಫಲಿಸದೆ ಗುರುವಾರ ಬೆಳಗ್ಗೆ 5.30ಕ್ಕೆ ಇಹಲೋಕ ತ್ಯಜಿಸಿದರು.

ನಾಗಮಂಗಲ ತಾಲೂಕಿನ ಚೌಧರಿ ಕೊಪ್ಪಲು ಗ್ರಾಮದಲ್ಲಿ 1925ರ ಜನವರಿ 4ರಂದು ಜನಿಸಿದ್ದ ಹೊ. ಶ್ರೀನಿವಾಸಯ್ಯ ಬಿ.ಇ. ಪದವೀಧರರಾಗಿದ್ದರು. ಕೆಲವರ್ಷಗಳ ಮಟ್ಟಿಗೆ ಎಚ್‌ಎಎಲ್‌ನಲ್ಲಿ ಅಧಿಕಾರಿ ಯಾಗಿದ್ದ ಅವರು, ನಂತರ ಬಿಇಎಂಎಲ್ ನಲ್ಲಿ ದಶಕಗಳ ಕಾಲ ಉಪವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಕಳೆದ ನಾಲ್ಕು ದಶಕಗಳಿಂದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಬೆಂಗಳೂರಿನ ಗಾಂಧಿ ಭವನವನ್ನು ಪುನರುಜ್ಜೀವನಗೊಳಿಸಿದ್ದರು.

1942ರಿಂದ 1947ರವರೆಗೆ ದೇಶದ ಸ್ವಾತಂತ್ರ್ಯ ಚಳವಳಿ ತುತ್ತ ತುದಿಯಲ್ಲಿದ್ದಾಗ ರಹಸ್ಯವಾಗಿ ಪತ್ರಿಕೆಗಳನ್ನು ಪ್ರಕಟಿಸಿ, ಹಂಚುತ್ತಿದ್ದರು. ಜತೆಗೆ, ಬ್ರಿಟಿಷರ ವಿರುದ್ಧ ಕೈಬಾಂಬ್ ಇಟ್ಟು ಜೈಲುವಾಸ ಅನುಬವಿಸಿದ್ದರು. 1946ರಲ್ಲಿ ನಡೆದ ವಿದ್ಯಾರ್ಥಿಗಳ 'ವಂದೇ ಮಾತರಂ' ಸಂಗ್ರಾಮದಲ್ಲು ಅವರು ಪಾಲ್ಗೊಂಡಿದ್ದರು. ಆದರೆ ಮುಂದೆ ಸರಕಾರಗಳು ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡುವ ಯಾವ ಸವಲತ್ತುಗಳನ್ನೂ ಅವರು ಸ್ವೀಕರಿಸಿರಲಿಲ್ಲ.

ಮಹಾತ್ಮ ಗಾಂಧೀಜಿ ಕುರಿತು ಮಕ್ಕಳಿಗೆ ಬರೆದ 'ಗಾಂಧಿ ನಮ್ಮತಾತ' ಕೃತಿಯ ಎರಡು ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿವೆ. ಅವರ 'ನಾನು ಕಂಡ ಜರ್ಮನಿ' ಕೃತಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರಕ್ಕೆ ಪಾತ್ರವಾಗಿದೆ. ಅವರು ತಮ್ಮಲ್ಲಿದ್ದ 20 ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಗಾಂಧಿ ಭವನಕ್ಕೆ ದಾನ ಮಾಡಿದ್ದರು. 1940–50ರ ನಡುವೆ ವಿದ್ಯಾರ್ಥಿ ಕಾಂಗ್ರೆಸ್‌ನ ಚುಕ್ಕಾಣಿ ಹಿಡಿದಿದ್ದ ಅವರು, ಮಹಾತ್ಮ ಗಾಂಧೀಜಿ ಪ್ರತಿಪಾದಿಸಿದ ಪ್ರಕೃತಿ ಚಿಕಿತ್ಸೆಯಲ್ಲೂ ಪರಿಣತಿ ಸಾಧಿಸಿದ್ದರು. ತಮ್ಮ ಹುಟ್ಟೂರನ್ನು ಮಾದರಿ ಗ್ರಾಮವಾಗಿ ಅಭಿವೃದ್ಧಿಪಡಿಸಿದ್ದರು.

ಮೈಸೂರು ವಿವಿಯ ಗೌರವ ಡಾಕ್ಟರೇಟ್, ರಾಜ್ಯ ಸರಕಾರದ 'ಪತಂಜಲಿ ಸುವರ್ಣ ಪದಕ', ಕೆಂಪೇಗೌಡ ಪ್ರಶಸ್ತಿ, 2015ರಲ್ಲಿ ರಾಜ್ಯ ಸರಕಾರದ 'ಗಾಂಧಿ ಸೇವಾ ಪ್ರಶಸ್ತಿ' ಮುಂತಾದ ಹತ್ತುಹಲವು ಪುರಸ್ಕಾರಗಳಿಗೆ ಪಾತ್ರರಾಗಿದ್ದರು.

ಅಂತಿಮ ದರ್ಶನ : ಪಾರ್ಥಿವ ಶರೀರವನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕಾಗಿ ಬೆಳಗ್ಗೆ 9 ರಿಂದ ಮಧ್ಯಾಹ್ನ 12ರವರೆಗೆ ಮಲ್ಲೇಶ್ವರಂನಲ್ಲಿರುವ ಅವರ ನಿವಾಸ ಹಾಗೂ ಸಂಜೆ 7 ಗಂಟೆಯವರೆಗೆ ಗಾಂಧಿ ಭವನದಲ್ಲಿ ಇಡಲಾಗಿತ್ತು.

ಸರಕಾರಿ ಗೌರವ : ರಾಜ್ಯ ಸರಕಾರದ ಪರವಾಗಿ ಪೊಲೀಸರು 21 ಸುತ್ತು ಕುಶಾಲತೋಪುಗಳನ್ನು ಹಾರಿಸಿದರು. ಬಳಿಕ ಎಂಎಸ್ ರಾಮಯ್ಯ ಆಸ್ಪತ್ರೆಯವರು ಪಾರ್ಥಿವ ಶರೀರ ಸ್ವೀಕರಿಸಿದರು. ಕೆಲವರ್ಷಗಳ ಹಿಂದೆ ನಿಧನರಾದ ಇವರ ಪತ್ನಿಯ ಪಾರ್ಥಿವ ಶರೀರವನ್ನೂ ಇದೇ ಆಸ್ಪತ್ರೆಗೆ ದಾನ ಮಾಡಲಾಗಿತ್ತು.

ಅವರೊಬ್ಬ ರೋಲ್ ಮಾಡೆಲ್ ! (ಡಾ॥ ವೂಡೆ ಪಿ ಕೃಷ್ಣ, ಕಾರ್ಯಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ) : ಡಾ॥ ಹೊ. ಶ್ರೀನಿವಾಸಯ್ಯ ಅವರ ಜತೆ 25 ವರ್ಷಗಳಿಂದ ನಿಕಟ ಸಂಬಂಧ ಹೊಂದಿದ್ದೆ ಮುಖ್ಯವಾಗಿ ಗಾಂಧಿ ಸ್ಮಾರಕ ನಿಧಿಯ ಪ್ರತಿಯೊಂದು ಚಟುವಟಿಕೆಗಳ ಹಿಂದೆಯೂ ಅವರ ದೊಡ್ಡ ಶಕ್ತಿ ಇದ್ದೇ ಇರುತ್ತಿತ್ತು. ಅವರ ನಿಧನದಿಂದಾಗಿ ಗಾಂಧಿ ಬಳಗದ ಮಿತ್ರರನ್ನು ಶೂನ್ಯಭಾವ ಆವರಿಸಿದೆ.

ಮದ್ಯಪಾನ ನಿಷೇಧ, ಹರಿಜನೋದ್ಧಾರ, ಖಾದಿ ಅವಲಂಬನೆ, ಪ್ರಕೃತಿ ಚಿಕಿತ್ಸೆ ಸಹಕಾರ ತತ್ವ, ಆಧ್ಯಾತ್ಮಿಕ ಮನೋಭಾವ, ವ್ಯಾಪಕವಾದ ವಿಶ್ವಪ್ರಜ್ಞೆ. . . . ಗಾಂಧೀಜಿ ಪ್ರತಿಪಾದಿಸಿದ ವಿಚಾರಗಳು ಇವೆಲ್ಲವನ್ನೂ ಶ್ರೀನಿವಾಸಯ್ಯನವರು ವ್ರತದಂತೆ ಪಾಲಿಸುತ್ತಿದ್ದರು. ವಿದ್ಯಾರ್ಥಿಯಾಗಿದ್ದಾಗಲೇ ಎರಡು ಬಾರಿ ಗಾಂಧೀಜಿ ದರ್ಶನ ಪಡೆದಿದ್ದ ಅವರು, ಅಂದಿನಿಂದಲೂ ಚರಕದ ಬಗ್ಗೆ ರಚನಾತ್ಮಕ ದೃಷ್ಟಿಕೋನ ಹೊಂದಿದ್ದರು. ಕೊನೆಯುಸಿರು ಇರುವವರೆಗೂ ಖಾದಿಧಾರಿಗ ಳಾಗಿದ್ದರು.

ಯಾವುದನ್ನೂ ಜಾತಿ-ಮತಗಳ, ಊರು-ಸೀಮೆಗಳ ಸೀಮಿತ ಚೌಕಟ್ಟಿನಲ್ಲಿ ನೋಡುತ್ತಿರಲಿಲ್ಲ. "ನಾವೆಲ್ಲರೂ ಈ ವಿಶ್ವಕ್ಕೆ ಸೇರಿದವರು. ಹೀಗಾಗಿ ಒಂದು ಹಂತದ ನಂತರ ಸೀಮಿತ ಎಲ್ಲೆಗಳನ್ನು ಮೀರಿ, ಪೂರ್ಣದೃಷ್ಟಿಯನ್ನು ಬೆಳೆಸಿಕೊಳ್ಳಬೇಕು." ಎನ್ನುತ್ತಿದ್ದರು ಗಾಂಧೀಜಿ ಪ್ರತಿಪಾದಿಸಿದ ಸರ್ವೋದಯ ತತ್ವಕ್ಕೆ ಅನುಗುಣವಾಗಿರುವ ಜೀವನದೃಷ್ಟಿ ಇದು.

ಯುವಕರಿಗೆ ರೋಲ್ ಮಾಡೆಲ್‌ಗಳೇ ಇಲ್ಲದಂತಹ ದುಷ್ಟಕಾಲವಿದು. ಆದರೆ ಶ್ರೀನಿವಾಸಯ್ಯ ನವರು ಸದಾ ಯುವಜನವ ಒಳಿತಿನ ಬಗ್ಗೆಯೇ ಗಾಢವಾಗಿ ಆಲೋಚಿಸುತ್ತಿದ್ದರು. ನಮ್ಮ ಯುವಜನರಿಗೆ ಗಾಂಧೀಜಿಯವರಂಥ ಧೀಮಂತರ

ಮತ್ತು ಋಷಿಸಮಾನರ ವಿಚಾರಗಳನ್ನು ದಾಟಿಸಿ, ಮನದಟ್ಟು ಮಾಡಿಕೊಡಬೇಕು ಎಂದು ಅವರು ಸದಾ ತುದಿಯುತ್ತಿದ್ದರು. ಈ ಅರ್ಥದಲ್ಲಿ ಅವರೇ ನಮ್ಮ ಇಂದಿನ ಕಿರಿಯರಿಗೆ ರೋಲ್ ಮಾಡೆಲ್ ಆಗಿದ್ದರು!

ಯಾವ ಅಧಿಕಾರ / ಪದವಿಯನ್ನೂ ಅಪೇಕ್ಷಿಸಿದವರಲ್ಲ. ಕೆಲವರ್ಷಗಳ ಹಿಂದೆ ಬಿಜೆಪಿ ಸರಕಾರವಿದ್ದಾಗ ಅವರನ್ನು ಎಂಎಲ್‌ಸಿಯನ್ನಾಗಿ ಮಾಡಲು ತೀರ್ಮಾನಿಸಲಾಗಿತ್ತು. ಆಗ "ಅವೆಲ್ಲ ನನಗೆ ಬೇಡಪ್ಪ ನಾನು 1947ರ ಕಾಂಗ್ರೆಸ್‌ಗೆ ಸೇರಿದವನು . . . . " ಎಂದು ನಯವಾಗಿ ನಿರಾಕರಿಸಿದ್ದರು.

ಎಚ್.ಡಿ. ದೇವೇಗೌಡ (ಮಾಜಿ ಪ್ರಧಾನಿ) : ಶ್ರೀನಿವಾಸಯ್ಯ ನಿಧನದಿಂದ ಮನಸ್ಸಿಗೆ ಬಹಳ ನೋವಾಗಿದೆ. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ.

ಸಿದ್ದರಾಮಯ್ಯ (ಮುಖ್ಯ ಮಂತ್ರಿ) : ಸರಳತೆ ಬೋಧಿಸಲು ಸುಲಭ, ಪಾಲಿಸಲು ಕಷ್ಟ ಎಂಬುದನ್ನು ಮನಗಂಡಿದ್ದ ಶ್ರೀನಿವಾಸಯ್ಯ ಮೊದಲು ಸರಳತಾ ದೀಕ್ಷೆಪಡೆದರು. ಖಾದಿ ಬಟ್ಟೆ ತೊಟ್ಟು ಜಾತ್ಯತೀತ ನಿಲುವಿಗೆ ಬದ್ಧರಾಗಿದ್ದರು.

ಯಡಿಯೂರಪ್ಪ (ಬಿಜೆಪಿ ರಾಜ್ಯಧ್ಯಕ್ಷ) : ಸರಳ ಜೀವನದ ಮೂಲಕ ಗಾಂಧಿ ತತ್ವಗಳನ್ನು ಇಂದಿನ ಯುವ ಪೀಳಿಗೆಗೆ ತಲುಪಿಸುತ್ತಿದ್ದ ಹಿರಿಯರನ್ನು ಕಳೆದುಕೊಂಡು ಇಡೀ ಸಮಾಜ ಬಡವಾಗಿದೆ.

ಅನಂತ್ ಕುಮಾರ್ (ಕೇಂದ್ರ ಸಚಿವ) : ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ 4 ದಶಕಗಳ ಕಾಲ ಸೇವೆ ಸಲ್ಲಿಸಿ ಗಾಂಧೀಜಿಯವರ ಚಿಂತನೆಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ಮಾಡಿದ್ದ ಇವರ ಅಗಲಿಕೆ ದೇಶ ಹಿರಿಯ ಗಾಂಧೀವಾದಿಯನ್ನು ಕಳೆದುಕೊಂಡಂತೆ ಆಗಿದೆ.

ಹೊಸ ದಿಗಂತ ದಿ: 7-4-2017

ಹೊ. ಶ್ರೀನಿವಾಸಯ್ಯನವರ ಗಾಂಧೀ ಮಾರ್ಗ

ಕಳಚಿತು ಗಾಂಧಿವಾದದ ಮತ್ತೊಂದು ಕೊಂಡಿ : ಗಾಂಧಿವಾದಿ, ಸ್ವಾತಂತ್ರ್ಯ ಹೋರಾಟಗಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ॥ ಹೊ. ಶ್ರೀನಿವಾಸಯ್ಯ ಅವರು ಗುರುವಾರ ಬೆಂಗಳೂರು ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನಿಧನರಾದರು. ಸುಮಾರು 93 ವರ್ಷ ವಯಸ್ಸಾಗಿದ್ದ ಅವರು, ಹಲವು ದಿನಗಳಿಂದ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದರು. ಡಯಾಲಿಸಿಸ್ ಚಿಕಿತ್ಸೆಯಲ್ಲಿದ್ದರು. ಅಷ್ಟೇ ಅಲ್ಲದೆ ಇತ್ತೀಚೆಗೆ ಜ್ವರ, ಗಂಟಲು ನೋವು ಕೂಡ ಕಾಣಿಸಿಕೊಂಡಿತ್ತು. ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದರು. ಎದೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರನ್ನು ಜಯದೇವ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು.

ಸ್ವಾತಂತ್ರ್ಯ ಹೋರಾಟಗಾರ, ಗಾಂಧಿವಾದಿ, ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷ ಹೊ. ಶ್ರೀನಿವಾಸಯ್ಯ ಅವರು ಸಾರ್ಥಕ ಬದುಕು ಕಂಡವರು. ಇದೀಗ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ ಎಂದರೆ ಅತಿಶಯೋಕ್ತಿ ಎನಿಸಲಾರದು.

ಅಪ್ಪ-ಅಮ್ಮ ಇಬ್ಬರೂ ಕೂಲಿಯವರಂತೆ ಕೆಲಸ ಮಾಡಿ ಕಟ್ಟಿದ ಮನೆಯಲ್ಲಿ ಹುಟ್ಟಿದವರು ಅವರು. ಅವರಿಗೆ ಶ್ರಮದ ಬೆಲೆ ಏನೆಂಬುದು ಗೊತ್ತಿತ್ತು. ಹೀಗಾಗಿಯೇ ಶ್ರಮವೊಂದನ್ನೇ ಅಚಲವಾಗಿ ನಂಬಿ ಬದುಕಿದ್ದವರು. ಅವರು ಮೈಗೂಡಿಸಿಕೊಂಡಿದ್ದ ಗಾಂಧಿ ತತ್ವವನ್ನೇ ಉಸಿರಾಡುತ್ತಾ ಈಗಲೂ ಬದುಕಿದ್ದಾರೆ ಕೂಡ. ಸಾರ್ಥಕ ಜೀವನ ನಡೆಸಿದ ಅವರು, ಸಾವಿನ ನಂತರ ತಮ್ಮ ದೇಹವನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾನ ಮಾಡುವುದಾಗಿ ಕೊಟ್ಟಿದ್ದ ಮಾತನ್ನು ಉಳಿಸಿಕೊಳ್ಳುವ ಮೂಲಕವೂ ಸಾರ್ಥಕ್ಯ ಪಡೆದಿದ್ದಾರೆ.

ಸದ್ಯಕ್ಕೆ ಕರ್ನಾಟಕದಲ್ಲಿರುವ ಬೆರಳೆಣಿಕೆಯಷ್ಟು ಗಾಂಧಿವಾದಿಗಳಲ್ಲಿ ಹೊ. ಶ್ರೀನಿವಾಸಯ್ಯ ಕೂಡ ಒಬ್ಬರಾಗಿದ್ದರು. ಕೊನೆಯವರೆಗೂ ಗಾಂಧಿ ತತ್ತ್ವ ಪ್ರಚಾರ ಕಾರ್ಯದಲ್ಲಿ ಸಕ್ರಿಯರಾಗಿದ್ದ ಅವರು, ಮಹಾತ್ಮ ಗಾಂಧೀಜಿ ಅವರ ಆದರ್ಶ ಪರಿಪಾಲನೆಯ ಜೊತೆಗೆ ಗಾಂಧಿ ತತ್ತ್ವ ಪ್ರಚಾರದ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಯುವಪೀಳಿಗೆಯನ್ನು ಸೆಳೆಯುವ ಪ್ರಯತ್ನದಲ್ಲೂ ಸಾಫಲ್ಯ ಕಂಡವರು. ದೇಹಕ್ಕಾಗಿದ್ದ ವಯಸ್ಸನ್ನು ಗಣನೆಗೆ ತೆಗೆದುಕೊಳ್ಳದ ಹೊ. ಶ್ರೀನಿವಾಸಯ್ಯ ಸದಾ ಕ್ರಿಯಾಶೀಲರಾಗಿದ್ದದ್ದು ಸ್ಫೂರ್ತಿದಾಯಕ.

ಇಂತಹ ಒರ್ವ ಗಾಂಧೀವಾದಿಯನ್ನು ಕಳೆದುಕೊಂಡಿರುವ ಕನ್ನಡ ನಾಡು ಬಡವಾಗಿರುವುದು ಸುಳ್ಳಲ್ಲ. ಅದರಲ್ಲಿಯೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯನ್ನೂ ಅವರ ಶರೀರ ಬಿಟ್ಟು ಹೊರಟಿದೆ. ಹೊ. ಶ್ರೀನಿವಾಸಯ್ಯ ಅವರ ಮಾರ್ಗದರ್ಶನವಿಲ್ಲದಿದ್ದರೂ ಅವರ ಚೇತನದೊಂದಿಗೆ ಗಾಂಧೀ ಸ್ಮಾರಕ ನಿಧಿಯನ್ನು ಮುಂದುವರೆಸಿಕೊಂಡು ಹೋಗಬೇಕಿದೆ.

ಒಟ್ಟಾರೆ ಸದಾ ಖಾದಿ ಬಟ್ಟೆ ತೊಟ್ಟು ಕಂಗೊಳಿಸುತ್ತಿದ್ದ ಹೊ. ಶ್ರೀನಿವಾಸಯ್ಯ ಈಗಿನ ಪೀಳಿಗೆಗೂ ಹಿಂದಿನ ತಲೆಮಾರಿಗೂ ಹಿರಿಯ ಕೊಂಡಿಯಂತಿದ್ದರು. ಅಂತಹಕೊಂಡಿಯೊಂದು ಕಳಚಿದ್ದು ಅವರ ಜೀವನ ಚರಿತ್ರೆಯ ಜೊತೆಗೆ ಸೇವೆ, ಕೊಡುಗೆಯನ್ನು ಸ್ಮರಿಸುತ್ತಾ ವಿದಾಯ ಹೇಳುವುದಷ್ಟೇ ನಮ್ಮ ಪಾಲಿಗೆ ಈಗ ಉಳಿದಿರುವುದು.

ಅಪ್ಪ-ಅಮ್ಮ ಕಟ್ಟಿದ ಮನೆಯಲ್ಲಿ ಹುಟ್ಟಿದರು : ಮಲ್ಲೇಪುರಂ ಜಿಲ್ಲೆ, ವೆಂಕಟೇಶ ಹಾಗೂ ಆರ್. ಚಂದ್ರಶೇಖರ್ ಸಂಪಾದಿತ ಧವಳಶ್ರೀ ಎಂಬ ಪುಸ್ತಕದಲ್ಲಿ ತಮ್ಮ ಜೀವನದ ಕೆಲ ಪ್ರಸಂಗಗಳನ್ನು ಮೆಲುಕು ಹಾಕಿರುವ ಹೊ. ಶ್ರೀನಿವಾಸಯ್ಯ ಅವರು ಬಾಲ್ಯದ ಬಗ್ಗೆ ಪ್ರಸ್ತಾಪಿಸಿದ್ದಾರೆ. 1925ರ ಜನವರಿ 4ರಂದು ಹೊನ್ನಪ್ಪ-ತಿಮ್ಮಮ್ಮ ದಂಪತಿಯ 12 ಮಕ್ಕಳಲ್ಲಿ 10ನೇ ಮಗನಾಗಿ ಹೊ. ಶ್ರೀನಿವಾಸಯ್ಯ ಹುಟ್ಟಿದರು. ಮೈಸೂರು ಅರಮನೆಯಲ್ಲಿ ಚೌದರಿ ಕೆಲಸ ಮಾಡುತ್ತಿದ್ದ ತಾತ ಚೌದರಿಗೌಡರು ಕಟ್ಟಿದ ಚೌದರಿಕೊಪ್ಪಲಿನಲ್ಲಿ ತಂದೆ ಹೊನ್ನಪ್ಪ ಹುಟ್ಟಿ ಬೆಳೆದವರು. ತಾಯಿ ತಿಮ್ಮಮ್ಮ ಅದಮಗೆರೆಯವರು ಅದ್ಯಾವ ಕಾರಣಕ್ಕೆ ಅಪ್ಪ ಊರು ಬಿಟ್ಟು ಬಂದರೋ ಗೊತ್ತಿಲ್ಲ. 1895ರ ಸುಮಾರಿಗೆ ಬೆಂಗಳೂರಿಗೆ ಬಂದು ಮಲ್ಲೇಶ್ವರದ ಬಳಿ 1901ರಲ್ಲಿ ಅಡಿ 30 x 100 ವಿಸ್ತೀರ್ಣದ ನಿವೇಶನ ಪಡೆದರು. ಅಪ್ಪ-ಅಮ್ಮ ಇಬ್ಬರೇ ಸೇರಿ ಕೂಲಿಕಾರ್ಮಿಕರಂತೆ ಕಷ್ಟಪಟ್ಟು 10 x 20 ಅಡಿ ಜಾಗದಲ್ಲಿ ಪುಟ್ಟ ಮನೆ ನಿರ್ಮಿಸಿದರು. ನಾನು ವಿದ್ಯಾವಂತನಾಗಿ ಕೆಲಸಕ್ಕೆ ಸೇರುವವರೆಗೂ ಅಗತ್ಯ ಬಿದ್ದಾಗಲೆಲ್ಲಾ ತಾಯಿಯೇ ಮನೆಗೆ ಸುಣ್ಣ ಬಳಿಯುತ್ತಿದ್ದರು ಎಂಬುದನ್ನು ಸ್ವತಃ ಹೊ. ಶ್ರೀನಿವಾಸಯ್ಯ ಅವರೇ ಹೇಳಿಕೊಂಡಿದ್ದರು. ಸುಮಾರು 248 ಪುಟಗಳಿರುವ ಧವಳಶ್ರೀ ಪುಸ್ತಕದಲ್ಲಿ ತಮ್ಮ ಬಾಳಹಾದಿಯನ್ನು ಖುದ್ದು ಹೊ. ಶ್ರೀನಿವಾಸಯ್ಯ ಅವರೇ ಬರೆದಿದ್ದಾರೆ. ಉಳಿದಂತೆ ಜಯಲಕ್ಷ್ಮೀ ಶ್ರೀನಿವಾಸಯ್ಯ ಅವರು ನಾನು ಕಂಡಂತೆ ಎಂಬ ಲೇಖನದ ಮೂಲಕ ಹೊ. ಶ್ರೀನಿವಾಸಯ್ಯ ಅವರ ಕುರಿತು ಬರೆದಿದ್ದಾರೆ. ಎಂ. ಶರ್ಮಿಳಾ ಅವರು ದೊಡ್ಡಪ್ಪನ ನಿಷ್ಕಲ್ಮಶ ಪ್ರೀತಿಯ ಕುರಿತು ಬರೆದಿದ್ದಾರೆ. ಅದೇ ರೀತಿ ಬೆಂಗಳೂರಿನ ಚಿತ್ರಕಲಾ ಸಂಸ್ಕೃತಿ, ಬೆಂಗಳೂರು ಇತಿಹಾಸ, ಬೆಂಗಳೂರಿನಲ್ಲಿ ಸ್ವಾತಂತ್ರ್ಯ ಹೋರಾಟ, ಸಮಾಜಸೇವೆ ಕೆಲವು ವಿಚಾರಗಳು, ಸರ್ವೋದಯ ಪರಂಪರೆ, ಡ್ಯೂಯಿ ಮತ್ತು

ಗಾಂಧಿ ಶಿಕ್ಷಣ ಕುರಿತು ಕೆಲವು ಚಿಂತನೆಗಳು, ಔಷಧಿರಹಿತ ಚಿಕಿತ್ಸೆ; ಪ್ರಕೃತಿ ಚಿಕಿತ್ಸೆ, ಮನುಷ್ಯನ ಬೆಳವಣಿಗೆ, ಸಹಕಾರ ಮತ್ತು ಡಾ॥ ಹೊ. ಶ್ರೀನಿವಾಸಯ್ಯ, ಪ್ರವಾಸ ಸಾಹಿತ್ಯ, ಮಕ್ಕಳ ಸಾಹಿತ್ಯ, ಪ್ರಬಂಧ ಸಾಹಿತ್ಯ, ಹಾಸ್ಯ ಸಾಹಿತ್ಯ ಒಳಗೊಂಡ ಲೇಖನಗಳದ್ದು, ಹೊ. ಶ್ರೀನಿವಾಸಯ್ಯ ಅವರಿಗೆ ಸಂಬಂಧಿಸಿದ ಅತ್ಯಪರೂಪದ ಭಾವಚಿತ್ರಗಳೂ ಪುಸ್ತಕದಲ್ಲಿವೆ.

ವಿದ್ಯಾರ್ಥಿಗಳ ಕಾಂಗ್ರೆಸ್ ಮತ್ತು ಯುವ ಕಾಂಗ್ರೆಸ್ : 1942–50ರ ವರೆಗೆ ಸಮಿತಿಯ ಸದಸ್ಯರಾಗಿ ಸಕ್ರಿಯ ಪಾತ್ರ. 1943ರಲ್ಲಿ ಚರಕ ಕೇಂದ್ರ ಸ್ಥಾಪನೆ ಮತ್ತು ವಯಸ್ಕರ ಶಿಕ್ಷಣ ಕೇಂದ್ರಗಳ ಸ್ಥಾಪನೆ. 1943–44ರಲ್ಲಿ ವಿದ್ಯಾರ್ಥಿ ಸ್ವಯಂಸೇವಕರಾಗಿ ಆಹಾರ ಹಂಚಿಕೆ ಸೇವೆ. ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿಯಾಗಿ ದೊಡ್ಡಬಳ್ಳಾಪುರದಲ್ಲಿ ಗ್ರಾಮ ಸೇವಾ ಶಿಬಿರ ಆಯೋಜನೆ.

ಪ್ರಶಸ್ತಿ ಪುರಸ್ಕಾರಗಳು : 1976ರಲ್ಲಿ ನಾ ಕಂಡ ಜರ್ಮನಿ ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ. 1984ರಲ್ಲಿ ಕರ್ನಾಟಕ ಸರ್ಕಾರದಿಂದ ರಾಜ್ಯ ಪ್ರಶಸ್ತಿ. 1988ರಲ್ಲಿ ಗಾಗಿ ಗೌರವ ಡಾಕ್ಟರೇಟ್ ಪ್ರಶಸ್ತಿ (ಪ್ರಕೃತಿ ಚಿಕಿತ್ಸೆ). 1990ರಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗದ ಸೇವೆಗಾಗಿ ಕರ್ನಾಟಕ ಸರ್ಕಾರದಿಂದ ಪತಂಜಲಿ ಸುವರ್ಣಪದಕ. 1993ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕೆಂಪೇಗೌಡ ಪ್ರಶಸ್ತಿ. 1994ರಲ್ಲಿ ಬೆಂಗಳೂರು ಯೋಗ ಕೇಂದ್ರದಿಂದ ಯೋಗಶ್ರೀ ಪ್ರಶಸ್ತಿ. ಸ್ವಾತಂತ್ರ್ಯ ಹೋರಾಟ ಮತ್ತು ಪ್ರಕೃತಿ ಚಿಕಿತ್ಸೆಗಾಗಿ ಆರ್ಯಭಟ ಪ್ರಶಸ್ತಿ. 1998ರಲ್ಲಿ ಆದರ್ಶ ದಂಪತಿಗಳು ಪ್ರಶಸ್ತಿ. ಆದಿ ಚುಂಚನಗಿರಿ ಮಠದಿಂದ ಚುಂಚಶ್ರೀ ಪ್ರಶಸ್ತಿ. ಗೊರೂರು ಪ್ರತಿಷ್ಠಾನದಿಂದ ಗೊರೂರು ಸಾಹಿತ್ಯ ಪ್ರಸಸ್ತಿ. ಕರ್ಮಯೋಗಿ ಎಂ.ಎಸ್. ರಾಮಯ್ಯ ಪ್ರಶಸ್ತಿ. ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ರಾಷ್ಟ್ರೀಯ ಪ್ರಶಸ್ತಿ. 2013ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೌ॥ ಡಾಕ್ಟರೇಟ್ (ಡೀಲಿಟ್). 2015ರಲ್ಲಿ ಕರ್ನಾಟಕ ಸರ್ಕಾರ ಗಾಂಧೀ ಸೇವಾ ಪ್ರಶಸ್ತಿ. 2016ರಲ್ಲಿ ಭಾರತ ಸರ್ಕಾರದ ವಯೋಶ್ರೇಷ್ಠ ಪ್ರಶಸ್ತಿ. 2016ರಲ್ಲಿ ಕರ್ನಾಟಕ ಸರ್ಕಾರದಿಂದ ಸಹಕಾರ ರತ್ನ ಪ್ರಶಸ್ತಿ.

ಸಾಹಿತ್ಯ ಸೇರಿ ಹಲವು ಕ್ಷೇತ್ರದಲ್ಲಿ ಹೊ. ಶ್ರೀನಿವಾಸಯ್ಯ ಕರಸೇವೆ : 1942ರಲ್ಲಿ ಸಿದ್ದವನಹಳ್ಳಿ ಕೃಷ್ಣಶರ್ಮರ ನೇತೃತ್ವದಲ್ಲಿ ಮಲ್ಲೇಶ್ವರದಲ್ಲಿ ಸ್ಥಾಪನೆಯಾದ ಗಾಂಧೀ ಸಾಹಿತ್ಯ ಸಂಘದಲ್ಲಿ ಗಾಂಧೀ ವಿಚಾರ ಪ್ರಚಾರ ಸೇವೆಗಾಗಿ ಗ್ರಂಥ ಭಂಡಾರ ಸ್ಥಾಪಿಸಿದರಲ್ಲದೆ, ಸಮಾಜ ಸೇವೆಗಾಗಿ ಸ್ಥಾಪಿಸಿದ ಸಂಸ್ಥೆಯ ಧರ್ಮದರ್ಶಿ ಮತ್ತು ಗೌರವ ಕಾರ್ಯದರ್ಶಿಯೂ ಆಗಿದ್ದರು ದಕ್ಷಿಣ ಭಾರತ ಗೋ ಸೇವಾ ಸಂಘದ ಧರ್ಮದರ್ಶಿ ಮತ್ತು ಗೌರವ ಅಧ್ಯಕ್ಷ, ಜಯಶ್ರೀ ಟ್ರಸ್ಟಿನ ಸ್ಥಾಪಕ ಧರ್ಮದರ್ಶಿಯಾಗಿ ಅದೆಷ್ಟೋ ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದ್ದಾರೆ. 1968ರಿಂದ1978

ರವರೆಗೆ 9 ವರ್ಷಗಳ ಕಾಲ ಕನ್ನಡ ಸಾಹಿತ್ಯ ಪರಿಷತ್ ಸಮಿತಿ ಸದ್ಯಸ್ಯರಾಗಿದ್ದರಲ್ಲದೆ, ಬೆಂಗಳೂರು ಪುಸ್ತಕ ಪ್ರಕಟಣಾ ಮತ್ತು ಮಾರಾಟಗಾರರ ಸಂಘದ ಉಪಾಧ್ಯಕ್ಷರೂ ಆಗಿದ್ದರು. 1985ರಿಂದ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸಂಸ್ಥೆಯಲ್ಲಿ 31 ವರ್ಷಗಳ ಗೌರವ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಅವರು, 2003 ರಿಂದ ದೆಹಲಿ ಕೇಂದ್ರ ಗಾಂಧೀ ಸ್ಮಾರಕ ನಿಧಿಯ ಸದಸ್ಯರಾಗಿಯೂ ಸೇವೆ ಕಾರ್ಯ ಮುಂದುವರೆಸಿದ್ದರು.

ಹೊ. ಶ್ರೀನಿವಾಸಯ್ಯನವರ ವಿಶ್ವಪರ್ಯಟನೆ : 1949ರಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಮಾಡಿದ್ದ ಹೊ. ಶ್ರೀನಿವಾಸಯ್ಯನವರು 1949ರಲ್ಲಿ ಹಿಂದೂಸ್ತಾನ ವಿಮಾನ ಕಾರ್ಖಾನೆಯಲ್ಲಿ ಡಿಸೈನರ್ ಆಗಿ ನೇಮಕಗೊಂಡರು. 1968ರಲ್ಲಿ ಡಿಸೈನ್ ಇಂಜಿನಿಯರಿಂಗ್ ಫ್ಯಾಕ್ಟರಿ ಸೇರಿದ ಅವರು 1977ರಲ್ಲಿ ಬೆಮೆಲ್ ವ್ಯವಸ್ಥಾಪಕರಾಗಿ ಸೇರಿದರು. ರೈಲು ಕೋಚು, ಬಸ್ ಬಾಡಿ, ಅತಿ ಭಾರವಾದ ಟ್ರೈಲರ್‌ಗಳ ಯೋಜನೆ ತಯಾರಿಕೆಯಲ್ಲಿ ಪರಿಣತಿ, ಸಂಶೋಧನೆ ಹಾಗೂ ಅಭಿವೃದ್ಧಿ ವಿಭಾಗದ ಸ್ಥಾಪನೆ ಹಾಗೂ ಮೇಲ್ವಿಚಾರಕರಾಗಿಯೂ ಸೇವೆ ಸಲ್ಲಿಸಿದ್ದಾರೆ. 1954ರಲ್ಲಿ ಪಶ್ಚಿಮ ಜರ್ಮನಿಯ ಅಂಕೆ ಹ್ಯಾಪ್ ಮನ್ ಬುಷ್ ಬ್ರಾನ್ಸ್ ವೈಗ್‌ನಲ್ಲಿ ಒಂದುವರೆ ವರ್ಷಗಳ ಕಾಲ ರೈಲು ನಿರ್ಮಾಣದ ತರಬೇತಿ ಪಡೆದುಕೊಂಡರು. 1955ರಲ್ಲಿ ಪಶ್ಚಿಮ ಜರ್ಮನಿಯ ಎಂಎಎನ್ ಕಾರ್ಖಾನೆಯಲ್ಲಿ 13 ತಿಂಗಳ ತರಬೇತಿ ಪಡೆದುಕೊಂಡರು. 1955ರಲ್ಲಿ ಪಶ್ಚಿಮ ಜರ್ಮನಿಯ ಎಂಎಎನ್ ಕಾರ್ಖಾನೆಯಲ್ಲಿ 13 ತಿಂಗಳ ತರಬೇತಿ ಪಡೆದುಕೊಂಡರು. ರೈಲ್ವೆ ಬೋಗಿಗಳ ರಫ್ತಿಗಾಗಿ 1974, 1976, 1978 ಬಾಂಗ್ಲಾದೇಶಕ್ಕೆ ಭೇಟಿ ನೀಡಿದ್ದರು. ಅದೇ ರೀತಿ 1978, 1980-81ರಲ್ಲಿ ಶ್ರೀಲಂಕಾಕ್ಕೂ ಭೇಟಿ ಕೊಟ್ಟಿದ್ದರು. 1985ರಲ್ಲಿ ಪಶ್ಚಿಮ ಜರ್ಮನಿಯ ಬರ್ಲಿನ್ ನಲ್ಲಿ ನಡೆದ ಅಂತರಾಷ್ಟ್ರೀಯ ಶಿಕ್ಷಣ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಇಟಲಿ, ಜರ್ಮನಿ, ಹಾಲೆಂಡ್, ಇಂಗ್ಲೆಂಡ್, ಅಮೆರಿಕಾ, ಜಪಾನ್, ಚೀನಾ, ಹಾಂಕಾಂಗ್, ಬ್ಯಾಂಕಾಕ್, ಸಿಂಗಾಪುರಗಳಿಗೆ ಭೇಟಿ ಕೊಟ್ಟಿದ್ದಾರೆ.

ಆದಿ ಚುಂಚನಗಿರಿ ಮಠದ ಶ್ರೀಬಾಲಗಂಗಾಧರ ನಾಥ ಸ್ವಾಮೀಜಿ ಅವರ ಅಶೀರ್ವಾದದಿಂದ 10 ಜನ ಸ್ವಾಮೀಜಿಗಳೊಂದಿಗೆ ವಿಶ್ವಪರ್ಯುಟನೆ ಮಾಡಿದ್ದ ಹೊ. ಶ್ರೀನಿವಾಸಯ್ಯ ಅವರು ಇಂಜಿನಿಯರಿಂಗ್ ಮತ್ತು ವೈದ್ಯಕೀಯ ವಿಚಾರ ಪ್ರಚಾರಕ್ಕಾಗಿ 8 ದಿನಗಳ ಅಬುದಾಬಿ ಪ್ರವಾಸ ಮಾಡಿದ್ದರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯ : 1942-47ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯಾ ಪಾತ್ರ ರಹಸ್ಯ ಪತ್ರಿಕೆಗಳ ಪ್ರಕಟಣೆ ಮತ್ತು ಹಂಚಿಕೆ (ಅಂಡರ್ ಗ್ರೌಂಡ್ ಪೇಪರ್) ಜೈಲುವಾಸ. 1946ರಲ್ಲಿ ವಿದ್ಯಾರ್ಥಿಗಳ ವಂದೇ ಮಾತರಂ ಸಂಗ್ರಾಮದಲ್ಲಿ ಸಕ್ರಿಯ ಪಾತ್ರ. ಕೇಂದ್ರ ಸರ್ಕಾರದಿಂದ ಪ್ರಕಟಗೊಂಡ "ಫ್ರೀಡಂ ಫೈಟರ್ ರಿಮೆಂಬರ್"

ಪುಸ್ತಕದಲ್ಲಿ ಹೊ. ಶ್ರೀನಿವಾಸಯ್ಯ ಸ್ವಾತಂತ್ರ್ಯ ಹೋರಾಟಗಾರ ಲೇಖನ ಪ್ರಕಟವಾಗಿದೆ. ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡುವ ಯಾವ ಸೌಲಭ್ಯಗಳನ್ನು ತೆಗೆದುಕೊಂಡಿಲ್ಲ ಎಂಬುದು ಗಮನಿಸಬೇಕಾದ ಮತ್ತೊಂದು ಸಂಗತಿ.

ಗಾಂಧೀ ಭವನಕ್ಕೆ ಕಾಯಕಲ್ಪ : ಗಾಂಧೀ ಭವನದಲ್ಲಿ ಗಾಂಧಿ ಚಿತ್ರ ಪ್ರದರ್ಶನ, ವಸ್ತು ಸಂಗ್ರಹಾಲಯ ಸ್ಥಾಪಿಸಲಾಗಿದೆ. ಗ್ರಂಥಾಲಯ ಸ್ಥಾಪನೆ (ಸಂಶೋಧನೆಗಾಗಿ) ಗಾಂಧಿ ಪುಸ್ತಕಗಳನ್ನು ಯುವಕರಿಗಾಗಿ ಉಚಿತ ಹಂಚಿಕೆ, 55 ಕಾಲೇಜುಗಳಲ್ಲಿ ಗಾಂಧಿ ಅಧ್ಯಯನ ಕೇಂದ್ರ ಸ್ಥಾಪನೆ. ಡಾ॥ ಹೊ. ಶ್ರೀನಿವಾಸಯ್ಯನವರು ಸಂಗ್ರಹಿಸಿದ 20 ಸಾವಿರ ಗ್ರಂಥಗಳನ್ನು ಭವನಕ್ಕೆ ದಾನ ಮಾಡಿದ್ದಾರೆ. ಪುಸ್ತಕ ಭಂಢಾರ, ಉಚಿತ ವಾಚಾನಾಲಯ ಸ್ಥಾಪಿಸಿದ್ದು, ಗಾಂಧಿ ಅನುಯಾಯಿಗಳು, ಸರ್ವೋದಯ ಸೇವಕರುಗಳಿಗಾಗಿ 36 ಜನರ ಡಾರ್ಮಿಟರಿ, ಸುಸಜ್ಜಿತ 6 ಕೊಠಡಿಗಳ ಸ್ಥಾಪನೆಗೆ ಅನುವಾಗಿದ್ದಾರೆ. ಯುವಕರನ್ನು ಗಾಂಧಿ ಮಾರ್ಗಕ್ಕೆ ಕರೆತರಲು ಅನೇಕ ಗಾಂಧಿ ತತ್ತ್ವ ಪ್ರೇರಿತ ಶಿಬಿರಗಳ ವ್ಯವಸೆ, ಕಾಲೇಜುಗಳಲ್ಲಿ ಪ್ರತಿ ವರ್ಷ 1 ಲಕ್ಷ ಯುವ ಜನರಿಗೆ ಗಾಂಧಿ ವಿಚಾರ ಪ್ರಚಾರ, ಯುವಕರನ್ನು ಗಾಂಧೀಜಿ ವಿಚಾಗಳೆಡೆಗೆ ಆಕರ್ಷಿಸುವುದರಲ್ಲಿ ಯಶಸ್ವಿಯಾದವರು. ಗ್ರಾಮೀಣ ಪ್ರದೇಶದಲ್ಲಿ ಗಾಂಧಿ ವಿಚಾರ ಹರಡುವ ಕಾರ್ಯಕ್ರಮಗಳನ್ನು ಆಯೋಜಿಸಿ ಅನೇಕರ ಮನೆ–ಮನಗಳಿಗೆ ಗಾಂಧಿ ಧಾರೆಯನ್ನು ಹರಿಸಿದ್ದಾರೆ.

ಗಾಂಧಿ ತತ್ವದ ಪ್ರಚಾರಕ ಡಾ॥ ಹೊ. ಶ್ರೀನಿವಾಸಯ್ಯ ನಿಧನ

ಗಾಂಧಿವಾದಿ ಡಾ॥ ಹೊ. ಶ್ರೀನಿವಾಸಯ್ಯ ನಿಧನಕ್ಕೆ ಗಣ್ಯರ ಕಂಬನಿ (ಎಂ.ವಿ. ರಾಜಶೇಖರನ್, ಮಾಜಿ ಸಚಿವರು) : ಡಾ॥ ಹೊ. ಶ್ರೀನಿವಾಸಯ್ಯರವರ ನಿಧನ ದಿಂದ ರಾಷ್ಟ್ರವು ನಿಷ್ಠಾವಂತ ಗಾಂಧಿವಾದಿಯನ್ನು ಕಳೆದುಕೊಂಡಂತಾಗಿದೆ. ತಮ್ಮ ಇಡೀ ಜೀವನವನ್ನು ಗಾಂಧಿ ತತ್ವದಂತೆ ಬಾಳಿದ ಅವರು ಯುವ ಜನತೆಗೆ ಸದಾಮಾದರಿ.

ಮಲ್ಲೇಪುರಂ ಜಿ. ವೆಂಕಟೇಶ್ (ಹಿರಿಯ ಸಾಹಿತಿಗಳು) : ಕರ್ನಾಟಕ ಸ್ಮಾರಕ ನಿಧಿಗೆ ಹೊಸ ಚೈತನ್ಯವನ್ನು ನೀಡಿ ರಾಜ್ಯಾದ್ಯಂತ ಗಾಂಧಿ ತತ್ವವನ್ನು ಮನೆ ಮನಗಳಿಗೆ ತಲುಪಿಸುವಲ್ಲಿ ಹೊ. ಶ್ರೀನಿವಾಸಯ್ಯನವರು ಬಹುಮುಖ್ಯ ಪಾತ್ರವನ್ನು ವಹಿಸಿದ್ದಾರೆ. ಇವರ ತತ್ವಾದರ್ಶಗಳನ್ನು ಪಾಲಿಸುವ ಮೂಲಕ ಅವರಿಗೆ ನಿಜವಾದ ಶ್ರದ್ಧಾಂಜಲಿ ಸಲ್ಲಿಸೋಣ.

ಎ.ಜೆ. ಸದಾಶಿವ (ನಿವೃತ್ತ ನ್ಯಾಯಮೂರ್ತಿ) : ಹೊ. ಶ್ರೀನಿವಾಸಯ್ಯ ನಮ್ಮೆಲ್ಲರಿಗೂ ಆದರ್ಶ ಪ್ರಾಯರಾಗಿದ್ದರು. ಅವರ ನಡೆ-ನುಡಿಯಿಂದಲೇ ಸಾಕಷ್ಟು ಕಲಿತಿದ್ದೇವೆ. ಪ್ರಕೃತಿ ಪ್ರೇಮ, ಮಕ್ಕಳ ಮೇಲಿನ ಅವರ ಪ್ರೀತಿ ಅವರ ಮನಸನ್ನು ಸದಾ ಉಲ್ಲಸಿತರನ್ನಾಗಿ ಮಾಡಿತ್ತು. ಅವರು ಜೀವನಾದರ್ಶಗಳನ್ನು ನಾವೆಲ್ಲರೂ ಪಾಲಿಸೋಣ.

ಸಿಎಂ ಸೇರಿದಂತೆ ವಿವಿಧ ಗಣ್ಯರ ಸಂತಾಪ : ಬೆಂಗಳೂರು ಏಪ್ರಿಲ್ 6 ತಮ್ಮ ಇಡೀ ಜೀವನವನ್ನು ಗಾಂಧಿ ತತ್ವದಂತೆ ಬಾಳಿದ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ರಾಜ್ಯದೆಲ್ಲೆಡೆ ಗಾಂಧೀಜಿಯ ವಿಚಾರಗಳನ್ನು ಮನೆ ಮನಗಳಿಗೆ ತಲುಪಿಸುತ್ತಿದ್ದ ಹಿರಿಯ ಗಾಂಧಿವಾದಿ ಹೊ. ಶ್ರೀನಿವಾಸಯ್ಯ ವಿಧಿವಶರಾಗಿದ್ದಾರೆ.

ಕೆಲವು ದಿನಗಳಿಂದ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದ 93 ವರ್ಷದ ಡಾ॥ ಹೊ. ಶ್ರೀನಿವಾಸಯ್ಯರನ್ನು ಜಯದೇವ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ಬೆಳಗ್ಗೆ ವಿಧಿವಶರಾಗಿದ್ದಾರೆ.

ಕಣ್ಣು ಹಾಗೂ ದೇಹದಾನ : ತಮ್ಮ ಬದುಕಿನುದ್ದಕ್ಕೂ ಜನಾನುರಾಗಿಯಾಗಿ ಬದುಕಿದ್ದ ಡಾ॥ ಹೊ. ಶ್ರೀನಿವಾಸಯ್ಯ ಮರಣಾನಂತರವೂ ತಮ್ಮ ದೇಹವನ್ನು ಜನರ ಉಪಯೋಗಕ್ಕೆ ಬಿಟ್ಟುಕೊಟ್ಟಿದ್ದಾರೆ. ತಮ್ಮ ಕಣ್ಣು ಹಾಗೂ ದೇಹವನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾನವಾಗಿ ಕೊಡುವುದಾಗಿ ಈ ಮೊದಲೇ ಘೋಷಿಸಿದ್ದರು.

ಈ ಹಿನ್ನೆಲೆಯಲ್ಲಿ ಗುರುವಾರ ಸಂಜೆ ಗಾಂಧಿ ಭವನದಲ್ಲಿ ಸರಕಾರಿ ಗೌರವಗಳೊಂದಿಗೆ ಶ್ರದ್ಧಾಂಜಲಿ ಸಲ್ಲಿಸಿ, ದೇಹವನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಸಾಗಿಸಲಾಯಿತು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ : 1942ರಿಂದ 47ರವರೆಗಿನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯ ಪಾತ್ರ ವಹಿಸಿ, ರಹಸ್ಯ ಪತ್ರಿಕೆಗಳ ಪ್ರಕಟನೆ ಮತ್ತು ಹಂಚುವಂತಹ ಕೆಲಸ ಮಾಡಿದ್ದಕ್ಕಾಗಿ ಮೂಲಕ ಜೈಲುವಾಸ ಅನುಭವಿಸಿದ್ದಾರೆ.

1946ರ ವಿದ್ಯಾರ್ಥಿಗಳ ವಂದೇ ಮಾತರಂ ಸಂಗ್ರಾಮದಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಹೀಗೆ ಸ್ವಾತಂತ್ರ್ಯ ಪೂರ್ವದಿಂದ ಸ್ವಾತಂತ್ರ್ಯಾ ನಂತರದವರೆಗೂ ದೇಶಕ್ಕಾಗಿ ತನು-ಮನವನ್ನು ಸಮರ್ಪಿಸಿದ್ದಾರೆ.

ಸಾಹಿತ್ಯದ ಪರಿಚಾರಕ : ಬಾಲ್ಯದಿಂದಲೂ ಸಾಹಿತ್ಯಾಸಕ್ತಿಯನ್ನು ಮೂಡಿಸಿಕೊಂಡಿದ್ದ ಹೊ. ಶ್ರೀನಿವಾಸಯ್ಯ, ಪ್ರವಾಸ, ಮಕ್ಕಳ ಸಾಹಿತ್ಯ, ಜೀವನ ಚರಿತ್ರೆ, ಪ್ರಕೃತಿ ಜೀವನ, ಯೋಗ, ಕಾರ್ಮಿಕರ ಜೀವನ, ಜೀವನ ಶೈಲಿ ಸೇರಿದಂತೆ ಅನೇಕ ಪ್ರಕಾರದ ಸಾಹಿತ್ಯವನ್ನು ರಚಿಸುವ ಮೂಲಕ ಗಾಂಧಿ ತತ್ವವನ್ನು ಜನತೆಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

The New Indian Express News Paper Date 7–4–2017

Sreenivasaiah, Gandhian & Freedom Fighter, Dies at 92

"Father would push himself so much, and when we would ask him not to, he would assure us he wuld be alive until the age of 100," said Shashi Krishna, the daughter of freedom fighter Dr. H. Sreenivasaiah, who passed away at the age of 92 on Thursday.

Dr. Sreenivasaiah was accorded a guard of honour at Gandhi Bhavan in Seashadripuram on Thursday evening, where his body was kept for public viewing. A Gandhian through and through, he actively participated in the freedom movement and was imprisoned twice-in 1942 and 1947. He also published papers on the freedom movement prior to independence. An engineer by profession, he had also been involved in naturopathy, literary writing, journalism and social service.

His daughter Shashi's voice had a lot of pride in it when she spoke about him, his habits and his influence on her life. She said, "His life and habits were a big influence on my life, although he never told us what to do, rather led by example. His strength was his immense will power and he wanted to do everything himself without taking anyone's help. He had a heart problem, but still pushed himself a lot."

Speaking about some of the freedom fighter's peculiar but endearing qualities, she said even at this age, he would try to learn what the youngsters were into, like operate the smartphone for example. Before every speech, he would prepare for it the night before and read it loudly, although he had given thousands of speeches before.

Sreenivasaiah was surprisingly accepting of the changes in the city over the decades, which reflected his own ability to evolve with the times.

Body Donated to MS Ramaiah Hospital : Sreenivasalah's body was donated to MS Ramaiah Hospital and will be used to teach medical students, as per his own wishes. Anirudh Aditya, his grandson, said the decision was taken because his grandmother too had pledged her body upon her passing away three years ago, and his grandfather wanted to follow suit.

The Hindu News Paper Date 7-4-2017

Ho. Srinivasaiah dead

Ho. Srinivasaiah, Gandhian, freedom fighter, journalist and president of Karnataka Gandhi Smaraka Nidhi, passed away in Bengaluru on Thursday morning. He was 93. Mr. Srinivasaiah died at Jayadeva hospital according to a release. His body was kept at the Gandhi Bhavan in Bengaluru for people to pay their last respects. His body has been donated to M.S. Ramaiah College as per his wishes.

The State government had honoured him with Gandhi Seva Award in 2015.

Born in Chowdrikopplu of Nagamangala taluk in Mandya district, Mr. Srinivasaiah participated in the freedom struggle during his student days, met Gandhi, and was greatly inspired by him. He was instrumental in setting up more than 200 Gandhian Study Centres across the State.

Chief Minister Siddaramaiah, former Prime Minister H.D. Deve Gowda and former chief minister B.S. Yeddyurappa, Union Minister Ananth Kumar condoled his death.

The Times of India News Paper Date 7–4–2017

Gandhian Srinivasaiah dies at 92

BENGALURU: Noted Gandhian and president of Gandhi Bhavan, Bengaluru, Ho Srinivasaiah, died of a heart attack on Thursday.

The 92-year-old Gandhian was treated for a kidney disorder for a month at Sri Jayadeva Institute of Cardiovascular Sciences and Research.

His body will be donated to MS Ramaiah Medical College as per his wish.

Born on January 4, 1925 at Chaudharikoppa in Nagamangala taluk, Mandya district, Srinivasaiah headed the Karnataka Gandhi Smaraka Nidhi for over 20 years. He was associated with the organization for nearly four decades and actively involved in popularizing Gandhi's message amongst the youth. Manu Baligar, president, Kannada Sahitya Parishat, said Srinivasaiah never availed of any benefits accorded to freedom fighters. "He utilized the funds allocated to Gandhi Bhavan effectively. He organized motivation camps for over 20,000 youths and is a role model for the younger generation. He not only preached Gandhism but also lived it," he said.

Srinivasaiah participated in the freedom struggle after meeting Gandhi when he was a student.

"I know him since 2012. He liked children and would be happy when they called him grandpa. He was very active and would motivate us with his energy," said Abhaya, a volunteer at Gandhi Bhavan.



ಕಿರು ಪರಿಚಯ

ಹೆಸರು	:	ಡಾ: ಹೊ. ಶ್ರೀನಿವಾಸಯ್ಯ
ಜನ್ಮ ದಿನಾಂಕ	:	04–01–1925,
ಜನ್ಮ ಸ್ಥಳ	:	ಚೌದರಿಕೊಪ್ಪಲು, ದೇವಲಾಪುರ ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.
ತಂದೆ ಹೆಸರು	:	ಹೊನ್ನಪ್ಪ
ತಾಯಿ ಹೆಸರು	:	ತಿಮ್ಮಮ್ಮ
ಶಿಕ್ಷಣ	:	ಬಿ.ಇ.(ಮೆಕಾನಿಕಲ್), ಎಫ್.ಐ.ಇ., ಎಂ.ಎಸ್.ಇ.ಐ., ವಿ.ಡಿ.ಐ., ಚಾರ್ಟರ್ಡ್ ಇಂಜಿನಿಯರಿಂಗ್ (ಇಂಡಿಯ)ಎನ್.ಡಿ., ಗೌ॥ ಡಾಕ್ಟರೇಟ್(ಡೀಲಿಟ್) ಮೈಸೂರು ವಿಶ್ವವಿದ್ಯಾಲಯ

ತಾಂತ್ರಿಕ ಅನುಭವ

❖ ಹಿಂದೂಸ್ತಾನ ವಿಮಾನ ಕಾರ್ಖಾನೆಯಲ್ಲಿ ಡಿಸೈನರ್ ಆಗಿ 1949ರಲ್ಲಿ ಸೇವೆಗೆ ಸೇರಿದರು. 1983ರಲ್ಲಿ ಬಿ.ಇ.ಎಂ.ಎಲ್.ನಲ್ಲಿ ಸಹಾಯಕ ಜನರಲ್ ಮ್ಯಾನೇಜರ್ ಆಗಿ ನಿವೃತ್ತಿ.

❖ ರೈಲ್ವೆ ಕೋಚ್, ಬಸ್ ಬಾಡಿ, ಅತಿ ಭಾರವಾದ ಟ್ರೈಲರಗಳ ಯೋಜನೆ ತಯಾರಿಕೆಯಲ್ಲಿ ಪರಿಣಿತಿ. ಸಂಶೋಧನೆ ಹಾಗೂ ಅಭಿವೃದ್ಧಿ ವಿಭಾಗದ ಸ್ಥಾಪನೆ ಹಾಗೂ ಮೇಲ್ವಿಚಾರಣೆ.

ವಿದೇಶ ಪ್ರವಾಸ

❖ 1954. ಪಶ್ಚಿಮ ಜರ್ಮನಿಯ ಎಲ್.ಹೆಚ್.ಬಿ ಸಂಸ್ಥೆಯಲ್ಲಿ ಒಂದುವರೆ ವರ್ಷ ರೈಲು ನಿರ್ಮಾಣದ ತರಬೇತಿ.

❖ 1957. ಎರಡನೆ ಬಾರಿಗೆ ಪಶ್ಚಿಮ ಜರ್ಮನಿಯ ಎಂ.ಎ.ಎನ್. ಕಾರ್ಖಾನೆಯಲ್ಲಿ ಒಂದೂವರೆ ವರ್ಷ ಸಹರಚನೆ ಕೆಲಸ(Collaboration).

❖ 1974, 1976, 1978, ಬಾಂಗ್ಲಾದೇಶ ಮತ್ತು 1978, 1980–81 ರಲ್ಲಿ ಶ್ರೀಲಂಕಕ್ಕೆ ಭೇಟಿ, ರೈಲುಗಾಡಿಗಳ ರಫ್ತು ಮಾಡುವಲ್ಲಿ ಸೇವೆ.

❖ 1985. ಪಶ್ಚಿಮ ಜರ್ಮನಿಯ ಬರ್ಲಿನ್‌ನಲ್ಲಿ ನಡೆದ ಅಂತರಾಷ್ಟ್ರೀಯ ಶಿಕ್ಷಣ ಸಮ್ಮೇಳನದಲ್ಲಿ ಭಾಗವಹಿಸುವ ಸಲುವಾಗಿ ಭೇಟಿ. ನಂತರ ಇಟಲಿ, ಜರ್ಮನಿ, ಹಾಲೆಂಡ್, ಫ್ರಾನ್ಸ್, ಇಂಗ್ಲೆಂಡ್, ಅಮೆರಿಕಾ, ಜಪಾನ್, ಚೈನಾ, ಹಾಂಕಾಂಗ್, ಬ್ಯಾಂಕಾಕ್, ಸಿಂಗಾಪುರಗಳಿಗೆ ಭೇಟಿ.

❖ ಇಂಜಿನೀಯರಿಂಗ್ ಮತ್ತು ವೈದ್ಯಕೀಯ ವಿಚಾರ ಪ್ರಚಾರಕ್ಕಾಗಿ ಎಂಟು ದಿನಗಳ ಅಬುದಾಬಿ ಪ್ರವಾಸ.

ಸ್ವಾತಂತ್ರ್ಯ ಹೋರಾಟ

1) 1942–47 ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯ ಪಾತ್ರ. ರಹಸ್ಯ ಪತ್ರಿಕೆಗಳ ಪ್ರಕಟಣೆ ಮತ್ತು ಹಂಚಿಕೆ (ಅಂಡರ್‌ಗ್ರೌಂಡ್ ಪೇಪರ್) 'ಕೈಬಾಂಬ್ ಇಡುವುದು' – ಜೈಲುವಾಸ.

2) 1946. ವಿದ್ಯಾರ್ಥಿಗಳ ವಂದೇ ಮಾತರಂ ಸಂಗ್ರಾಮದಲ್ಲಿ ಸಕ್ರಿಯ ಪಾತ್ರ.

3) "ಹೊ. ಶ್ರೀನಿವಾಸಯ್ಯ ಸ್ವಾತಂತ್ರ್ಯ ಹೋರಾಟಗಾರ" – ಒಂದು ಲೇಖನ, ಭಾರತ ಸರ್ಕಾರದ ಪ್ರಕಟಣನೆಯ ಪುಸ್ತಕ "ಫ್ರೀಡಮ್ ಫೈಟರ್ ರಿಮೆಂಬರ್" (Freedom Fighter Remember).

4) ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡುವ ಯಾವ ಸೌಲಭ್ಯಗಳನ್ನು ತೆಗೆದು ಕೊಳ್ಳದೇ ಆದರ್ಶ ಪಾಲಿಸಿರುವುದು.

ವಿದ್ಯಾರ್ಥಿಗಳ ಕಾಂಗ್ರೆಸ್ ಮತ್ತು ಯುವ ಕಾಂಗ್ರೆಸ್

1) 1942–50. ಸಮಿತಿಯ ಸದಸ್ಯರಾಗಿ ಸಕ್ರಿಯ ಪಾತ್ರ, ಸಮ್ಮೇಳನದಲ್ಲಿ ಭಾಗವಹಿಸಿರುವುದು. ವಿದ್ಯಾರ್ಥಿ ನಿಲಯ ಸ್ಥಾಪಕ ಸದಸ್ಯ.

2) 1943. ಚರಕಾ ಕೇಂದ್ರ ಸ್ಥಾಪನೆ ಮತ್ತು ವಯಸ್ಕರ ಶಿಕ್ಷಣ ಕೇಂದ್ರಗಳ ಸ್ಥಾಪನೆ.

3) 1943–44. ವಿದ್ಯಾರ್ಥಿ ಸ್ವಯಂಸೇವಕರಾಗಿ ಆಹಾರ ಹಂಚಿಕೆ ಸೇವೆ. (ಫುಡ್ ವಾಲೆಂಟಿರ್ಸ್).

4) ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಗ್ರಾಮ ಸೇವಾ ಶಿಬಿರ. 1949 ರಲ್ಲಿ

ದೊಡ್ಡಬಳ್ಳಾಪುರದ ಮಜುರಾ ಹೊಸಹಳ್ಳಿ ಮತ್ತು ಸುತ್ತಲಿನ 5 ಹಳ್ಳಿಗಳಲ್ಲಿ 100 ವಿದ್ಯಾರ್ಥಿಗಳ ಒಂದು ತಿಂಗಳ ಶಿಬಿರ. ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಶ್ರೀ ಪಟ್ಟಾಭಿಸೀತಾರಾಮಯ್ಯರಿಂದ ಉದ್ಘಾಟನೆ.

ಸಂಸ್ಥೆಗಳಲ್ಲಿ ಸೇವೆ

1) 1942 ವಿದ್ಯಾರ್ಥಿ ದೆಸೆಯಲ್ಲಿ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರ ನೇತೃತ್ವದಲ್ಲಿ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘ ಸ್ಥಾಪನೆ. ಗಾಂಧೀ ವಿಚಾರ ಪ್ರಚಾರ ಸೇವೆಗಾಗಿ ಗ್ರಂಥ ಭಂಡಾರ ಸ್ಥಾಪನೆ.

2) ದಕ್ಷಿಣ ಭಾರತ ಗೋ ಸೇವಾ ಸಂಘದ ಧರ್ಮದರ್ಶಿ ಮತ್ತು ಗೌರವ ಅಧ್ಯಕ್ಷ.

3) ಜಯಶ್ರೀ ಟ್ರಸ್ಟಿನ ಸ್ಥಾಪಕ ಧರ್ಮದರ್ಶಿ. ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವಲ್ಲಿ ಸೇವೆ.

4) ಸಮಿತಿಯ ಸದಸ್ಯ: ಕನ್ನಡ ಸಾಹಿತ್ಯ ಪರಿಷತ್, 1968–78. ಶ್ರೀ ಜಿ. ನಾರಾಯಣ ರವರು ಅಧ್ಯಕ್ಷರಾಗಿದ್ದು 9 ವರ್ಷಗಳ ಕಾಲ ಸಂಘ ಸಂಸ್ಥೆಗಳ ಪ್ರತಿನಿಧಿಯಾಗಿ ಕನ್ನಡ ಸಾಹಿತ್ಯಪರಿಷತ್ ಸೇವೆ.

5) ಮಾಜಿ ಉಪಾಧ್ಯಕ್ಷ : ಬೆಂಗಳೂರು ಪುಸ್ತಕ ಪ್ರಕಟಣಾ ಮತ್ತು ಮಾರಾಟಗಾರರ ಸಂಘ.

6) 1985 ರಿಂದ 6.4.2017 ರ ವರೆಗೆ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸಂಸ್ಥೆಯಲ್ಲಿ 31 ವರ್ಷಗಳ ಗೌರವ ಅಧ್ಯಕ್ಷ, ಮತ್ತು ದೆಹಲಿ ಕೇಂದ್ರ ಗಾಂಧೀ ಸ್ಮಾರಕ ನಿಧಿಯಲ್ಲಿ 2003 ರಿಂದ 13 ವರ್ಷಗಳ ಕಾಲ ಸದಸ್ಯನಾಗಿ ಸೇವೆ.

7) (1)ಗಾಂಧೀಭವನದಲ್ಲಿ ವಾರ್ತಾ ಇಲಾಖೆ ನೆರವಿನಿಂದ ಗಾಂಧಿ ಚಿತ್ರ ಪ್ರದರ್ಶನ, ವಸ್ತುಸಂಗ್ರಹಾಲಯ ಸ್ಥಾಪನೆ. ಕರ್ನಾಟಕ ಸರ್ಕಾರದ ಸಹಾಯದಿಂದ ಎರಡು ಹವಾನಿಯಂತ್ರಣ ಸಭಾಂಗಣ, ಒಂದು ಹವಾನಿಯಂತ್ರಣ ಕೊಠಡಿ ಸಂಶೋಧನೆಗಾಗಿ ಗ್ರಂಥಾಲಯ ಸ್ಥಾಪನೆ. ಗಾಂಧಿ ವಿಹಾರಧಾರೆ ಗ್ರಂಥಗಳ ಪ್ರದರ್ಶನ ಮತ್ತು ಉಚಿತ ಹಂಚಿಕೆ. 75 ಕಾಲೇಜುಗಳಲ್ಲಿ ಗಾಂಧಿ ಅಧ್ಯಯನ ಕೇಂದ್ರಗಳ ಸ್ಥಾಪನೆ. ಡಾ. ಹೊ. ಶ್ರೀನಿವಾಸಯ್ಯರವರು ಸಂಗ್ರಹಿಸಿದ 17 ಸಾವಿರ ಗ್ರಂಥಗಳನ್ನು ಭವನಕ್ಕೆ ದಾನ ಮಾಡಿದ್ದಾರೆ. ಪುಸ್ತಕ ಭಂಡಾರ, ಉಚಿತ ವಾಚಾನಾಲಯ ಸ್ಥಾಪನೆ ಮಾಡಲು ಶ್ರಮಿಸಿದ್ದಾರೆ.

(2)ಗಾಂಧಿ ಅನುಯಾಯಿಗಳು, ಸರ್ವೋದಯ ಕೆಲಸಗಾರರು ತಂಗುವುದಕ್ಕಾಗಿ 36 ಜನರ ಡಾರ್ಮಿಟರಿ, ಸುಸಜ್ಜಿತ 6 ಕೊಠಡಿಗಳನ್ನು ಬಿ.ಡಿ.ಎ. ಆರ್ಥಿಕ ನೆರವಿನಿಂದ ನಿರ್ಮಾಣ ಮಾಡಿಸಿದ್ದಾರೆ.

(3)ಯುವಕರನ್ನು ಗಾಂಧಿ ಮಾರ್ಗಕ್ಕೆ ಕರೆತರಲು ಅನೇಕ ಗಾಂಧೀ ತತ್ವಪ್ರೇರಣೀತ ಶಿಬಿರಗಳ ವ್ಯವಸ್ಥೆ, ಕಾಲೇಜುಗಳಿಗೆ ಹೋಗಿ ಪ್ರತಿ ವರ್ಷ 1ಲಕ್ಷ ಯುವಜನರಿಗೆ ಗಾಂಧೀವಿಚಾರ ಪ್ರಚಾರ, ಯುವಕರನ್ನು ಗಾಂಧೀಜಿ ವಿಚಾರಗಳೆಡೆಗೆ ಆಕರ್ಷಿಸುವುದರಲ್ಲಿ ಯಶಸ್ವಿ. ಶಿಕ್ಷಕರಿಗೆ, ಸಾರ್ವಜನಿಕರಿಗೆ, ಕೃಷಿಕರಿಗೆ, ಜನಪ್ರತಿನಿಧಿಗಳಿಗೆ ಗಾಂಧೀ ವಿಚಾರತಲುಪಿಸುವ ವೈವಿಧ್ಯಮಯ ಕಾರ್ಯಕ್ರಮಗಳ ಆಯೋಜನೆ.

ಸಹಕಾರ ಸಂಸ್ಥೆಗಳು

1) 1953 ರಲ್ಲಿ ಮಲ್ಲೇಶ್ವರದಲ್ಲಿ ಶ್ರೀ ರಾಮ ಕೋ – ಆಪರೇಟಿವ್ ಬ್ಯಾಂಕ್ ಸ್ಥಾಪನೆ, ಉಪಾಧ್ಯಕ್ಷ ಮತ್ತು ಕಾರ್ಯದರ್ಶಿಯಾಗಿ 13 ವರ್ಷಗಳ ಸೇವೆ(ಬಡಜನತೆಗಾಗಿ ಸ್ಥಾಪಿಸಿದ ಬ್ಯಾಂಕ್).

2) 1964 ರಲ್ಲಿ ಶ್ರೀ ಆಂಜನೇಯ ಕೋ – ಅಪರೇಟಿವ್ ಬ್ಯಾಂಕ್ ಸ್ಥಾಪನೆ. ಸ್ಥಾಪಕ ಅಧ್ಯಕ್ಷರಾಗಿ ಏಳು ವರ್ಷಗಳ ಸೇವೆ.

3) ಸ್ಥಾಪಕ ಉಪಾಧ್ಯಕ್ಷ : ಪ್ರಗತಿ ಕೋ–ಆಪರೇಟಿವ್ ಬ್ಯಾಂಕ್.

4) ಬಿ.ಇ.ಎಂ.ಎಲ್.ನ ಕಾರ್ಮಿಕರ ಸಲುವಾಗಿ ಸ್ಥಾಪಿಸಿದ ಬಿ.ಇ.ಎಂ.ಎಲ್. ಎಂಪ್ಲಾಯೀಸ್ ಹೌಸಿಂಗ್ ಕೋ– ಆಪರೇಟಿವ್ ಸೊಸೈಟಿಯ ಸ್ಥಾಪನೆ. ಅಧ್ಯಕ್ಷರಾಗಿ 8000 ಸೈಟುಗಳ ಹಂಚಿಕೆ ಮಾಡಿರುವುದು.

5) ಮಹಿಳಾ ಸಹಕಾರಿ ಬ್ಯಾಂಕ್ ಸಂಸ್ಥಾಪಕ ಸದಸ್ಯರು.

6) ಲೋಕಪಾವನಿ ಕ್ರೆಡಿಟ್ ಸಹಕಾರ ಸೊಸೈಟಿಯ ಸ್ಥಾಪಕ ಸದಸ್ಯರು.

ಪ್ರಕೃತಿ ಚಿಕಿತ್ಸೆ

1) ಸ್ಥಾಪಕ ಅಧ್ಯಕ್ಷ, ಪ್ರಕೃತಿ ಜೀವನ ಕೇಂದ್ರ, (1969): ಪುಸ್ತಕ ಭಂಡಾರ, ಸಲಹೆ, ಆರೋಗ್ಯಕ್ಕಾಗಿ ತರಗತಿಗಳು, ಪ್ರದರ್ಶನ, ಕರ್ನಾಟಕದ ನಾನಾ ಪ್ರದೇಶಗಳಲ್ಲಿ ಮತ್ತು ಹೊರನಾಡಿನಲ್ಲಿಯೂ ತರಗತಿಗಳ ವ್ಯವಸ್ಥೆ.

ಯೋಗಾಸನ ಕೇಂದ್ರ ಮತ್ತು ತರಗತಿಗಳು

2) ಕರ್ನಾಟಕ ಪ್ರದೇಶ ಪ್ರಕೃತಿ ಚಿಕಿತ್ಸಾ ಪರಿಷತ್ ಅಧ್ಯಕ್ಷ.

3) ಉಪಾಧ್ಯಕ್ಷ (ಮಾಜಿ) : ಅಖಿಲ ಭಾರತ ಪ್ರಕೃತಿ ಚಿಕಿತ್ಸಾ ಪರಿಷತ್, ಹೊಸ ದೆಹಲಿ.

4) ಉಪಾಧ್ಯಕ್ಷ : ಬೆಂಗಳೂರು ಯೋಗ ಸೆಂಟರ್.

5) ಕರ್ನಾಟಕ ಸರ್ಕಾರದ ಕರ್ನಾಟಕ ಪ್ರಕೃತಿ ಮತ್ತು ಯೋಗಾ ಚಿಕಿತ್ಸಾ ಸಲಹಾ ಸಮಿತಿಯ ಸದಸ್ಯರು. 2005 ರಿಂದ 2 ವರ್ಷಗಳ ಕಾಲ ಅಧ್ಯಕ್ಷರು.

6) ಆರೋಗ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯುರ್ವೇದ, ಸಿದ್ಧ, ಪ್ರಕೃತಿ ಮತ್ತು ಯೋಗ ಚಿಕಿತ್ಸೆಗಳ ಸರ್ವತೋಮುಖ ಅಭಿವೃದ್ಧಿಗಾಗಿ ರಾಜ್ಯ ಮಟ್ಟದ ಸಲಹಾ ಸಮಿತಿಯ ಸದಸ್ಯರಾಗಿ ಸೇವೆ.

7) ಪ್ರಕೃತಿ ಚಿಕಿತ್ಸೆ ಪ್ರಚಾರಕ್ಕಾಗಿ ನೇಮಿಸಿದ ಶ್ರೀನಿವಾಸಯ್ಯ ಉಪಸಮಿತಿ ವರದಿಯ ಕರ್ತೃ.

8) ಸದಸ್ಯ : ಕರ್ನಾಟಕ ಸರ್ಕಾರದ ಭಾರತೀಯ ವೈದ್ಯ ಪದ್ಧತಿಯ ಪ್ರಕಟಣಾ ಸಲಹಾ ಸಮಿತಿ.

9) ಇನ್ಸಿಟ್ಯೂಟ್ ಆಪ್ ನ್ಯಾಚುರೋಪತಿ ಅಂಡ್ ಯೋಗಿಕ್ ಸೈನ್ಸ್‌ನ ಸಂಶೋಧನಾ ಸಲಹಾ ಸಮಿತಿಯ ಸದಸ್ಯ.

10)ತಮ್ಮ ತಾಲ್ಲೂಕು ನಾಗಮಂಗಲದಲ್ಲಿ ಸ್ವ ಪರಿಶ್ರಮದಿಂದ 200 ಕೋಟಿ ರೂ. ಗಳಲ್ಲಿ 200 ಹಾಸಿಗೆಗಳ ಕರ್ನಾಟಕ ರಾಜ್ಯದ ಮೊದಲ ಪ್ರಕೃತಿ ಮತ್ತು ಯೋಗ ಸಂಶೋಧನ ಆಸ್ಪತ್ರೆಗೆ 15 ವರ್ಷಗಳ ಹಿಂದೆ ಶಂಕು ಸ್ಥಾಪನೆ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಗೆ ನೇರ ಪತ್ರದ ಮೂಲಕ ಒತ್ತಡ ತಂದು 2016 ರಲ್ಲಿ ಕೇಂದ್ರ ಆರೋಗ್ಯ ಸಚಿವರಿಂದ ಉಧ್ಘಾಟಿಸಿ 73 ಕೋಟಿ ರೂ. ಗಳ ಬಿಡುಗಡೆಗೆ ಶ್ರಮಿಸಿ ಯಶಸ್ವಿಯಾಗಿರುವುದು.

11) ಕರ್ನಾಟಕ ಸರ್ಕಾರ ಯೋಗ ಶಿಕ್ಷಣ ಪಠ್ಯವಸ್ತುವಿನ ರಚನಾ ಸಮಿತಿ ಸದಸ್ಯ.

12)ದೇಶಾದ್ಯಂತ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ತರಗತಿಗಳನ್ನು ನಡೆಸಿ ಉಪನ್ಯಾಸ ಮತ್ತು ಪ್ರದರ್ಶನ ಮಾಡಿರುವುದು.

ಗ್ರಾಮೀಣ ಸೇವೆ

1) ಸ್ಥಾಪಕ ಮತ್ತು ಅಧ್ಯಕ್ಷ:ಚೌದರಿಕೊಪ್ಪಲು ಶ್ರೀರಾಮ ಯುವಜನ ಸೇವಾ ಸಂಸ್ಥೆ(ರಿ).

2) ಧರ್ಮದರ್ಶಿ ಅಧ್ಯಕ್ಷರು : ಪೀಪಲ್ಸ್ ಟ್ರಸ್ಟ್.

ಆದರ್ಶ ಗ್ರಾಮ ರಚನೆ

ನಾಗಮಂಗಲ ತಾಲ್ಲೂಕು ಚೌದ್ರಿ ಕೊಪ್ಪಲು ಗ್ರಾಮವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ನೆರವಿನಿಂದ ಗಾಂಧೀ ಭವನದ ನೇತೃತ್ವದಲಿ ಹಲವು ಸಂಘ ಸಂಸ್ಥೆಗಳ ಸಹಯೋಗದಲ್ಲಿ ಗಾಂಧೀ ಕನಸಿನ ಗ್ರಾಮ ರಚನೆಯಲ್ಲಿ ಸೇವೆ.

ಶಿಕ್ಷಣ ಸಂಸ್ಥೆ

1) ಬೆಂಗಳೂರು ಎಜುಕೇಷನ್ ಸೊಸೈಟಿ, ಮಾಜಿ ಗೌ. ಕಾರ್ಯದರ್ಶಿ ಖಜಾಂಚಿಯಾಗಿ ಹತ್ತು ವರ್ಷ ಸೇವೆ. ಉಪಾಧ್ಯಕ್ಷರಾಗಿ ಐದು ವರ್ಷ ಸೇವೆ. ಹದಿಮೂರು ವರ್ಷ ಸೇವೆ.

2) ಅಧ್ಯಕ್ಷರು ಸರ್ ಎಂ. ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಅಂಡ್ ಎಜುಕೇಶನ್ ಸೊಸೈಟಿ.

3) ವಿ.ವಿ.ಪುರಂ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಸೇವೆ.

4) ಶ್ರೀ ಆದಿ ಚುಂಚನಗಿರಿ ಶಿಕ್ಷಣ ಟ್ರಸ್ಟನ ಧರ್ಮದರ್ಶಿ, ಗ್ರಾಮಾಂತರ ಪ್ರದೇಶಗಳಲ್ಲಿ ಐ.ಟಿ.ಐ.ಗಳ ಸ್ಥಾಪನೆ.

ಧಾರ್ಮಿಕ ಸಂಸ್ಥೆಗಳು

1) ಗೌ. ಅಧ್ಯಕ್ಷ : ಶ್ರೀರಾಮಮಂದಿರ ಟ್ರಸ್ಟ್ (ಸ್ಥಾಪನೆ 1928)

2) ಗೌ. ಅಧ್ಯಕ್ಷ : ಶ್ರೀರಾಮ ಕಲ್ಯಾಣ ಮಂಟಪ ಮತ್ತು ವೃದ್ಧಾಶ್ರಮ ಸ್ಥಾಪನೆ 1976.

3) ಮಾಜಿ ಕಾರ್ಯನಿರ್ವಾಹಕ ಧರ್ಮದರ್ಶಿ : ಯಲಹಂಕಬಾಗಿಲು ಆಂಜನೇಯ ಸ್ವಾಮಿ ದೇವಾಲಯ, 25ವರ್ಷಗಳು (ಸರ್ಕಾರದ ಮುಜರಾಯಿ ಇಲಾಖೆಯಿಂದ ನೇಮಕ, ಮೈಸೂರು ಬ್ಯಾಂಕ್ ವೃತ್ತ).

4) ಟ್ರಸ್ಟಿ : ಶ್ರೀ ಆದಿ ಚುಂಚನಗಿರಿ ಎಜುಕೇಷನ್ ಟ್ರಸ್ಟ್.

5) ಒಕ್ಕಲಿಗರ ಸಂಘದ ಆಡಳಿತ ಸಮಿತಿಯಲ್ಲಿ 10ವರ್ಷ ಸದಸ್ಯರಾಗಿ ಮತ್ತು ಖಜಾಂಚಿಯಾಗಿ ಸೇವೆ.

6) ಬಿಐಟಿ ಕಾಲೇಜು ಸ್ಥಾಪನೆ ಮತ್ತು ವೈದ್ಯ ಕಾಲೇಜು ಸ್ಥಾಪನೆಗಾಗಿ ಸೇವೆ.

ಸಾಹಿತ್ಯ

1) ಪ್ರವಾಸ ಸಾಹಿತ್ಯ; ಮಕ್ಕಳ ಸಾಹಿತ್ಯ; ಜೀವನ ಚರಿತ್ರೆ; ಪ್ರಕೃತಿ ಜೀವನ; ಯೋಗ; ಕಾರ್ಮಿಕರ ಬಗ್ಗೆ; ತಾಂತ್ರಿಕ; ತಾಲ್ಲೂಕು ದರ್ಶನ; ಜೀವನ ಶೈಲಿ, ಆರೋಗ್ಯ; ಸಂಗ್ರಹಾಲಯ; ಹಾಸ್ಯಸಾಹಿತ್ಯ; ಜ್ಞಾನ ಗಂಗೋತ್ರಿ ಮತ್ತು ವಿಶ್ವಕೋಶಗಳಲ್ಲಿ ಲೇಖನಗಳು. ಕನ್ನಡ ಪ್ರಭ ಪತ್ರಿಕೆಗಳಲ್ಲಿ ಪ್ರಕೃತಿ, ಬದುಕು, ಆರೋಗ್ಯ ಲೇಖನ ಮಾಲೆ. ಗಾಂಧೀಜಿ; ಗಾಂಧೀಜಿಯ ಸಂದೇಶಗಳು (ಸಂಗ್ರಹ); ಆತ್ಮಕಥೆ ಹೀಗೆ ಒಟ್ಟು 90ಕ್ಕೂ ಮೀರಿದ ಗ್ರಂಥಗಳನ್ನು ಇಂಗ್ಲಿಷ್, ತಮಿಳು ಮತ್ತು ಕನ್ನಡದಲ್ಲಿ ಪ್ರಕಟಿಸಿದ್ದಾರೆ.

2) "ನಾ ಕಂಡ ಜರ್ಮನಿ"– 1976–77 ರಲ್ಲಿ ಪಿ.ಯು.ಸಿ. ಗೆ ಮತ್ತು 1979ರಲ್ಲಿ ಬಿ.ಎ. ಗೆ (ಮೈಸೂರು ವಿಶ್ವವಿದ್ಯಾನಿಲಯ) 1995 ರಲ್ಲಿ ಪಠ್ಯಪುಸ್ತಕ, ಚಿತ್ರಕಲಾ ಪರಿಷತ್ತಿನ ಮೊದಲನೆ ವರ್ಷದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ.

ಪತ್ರಿಕೆಗಳು ಸಂಪಾದಕ ಮತ್ತು ಪ್ರಕಾಶಕರು

1) "ಪ್ರಕೃತಿ ಜೀವನ" ಸಂಪಾದಕ 1970 ರಿಂದ (ಪ್ರಕೃತಿ ಚಿಕಿತ್ಸೆ ಬಗ್ಗೆ ಕನ್ನಡದ ಏಕೈಕ ಪತ್ರಿಕೆ ಕಳೆದ 47 ವರ್ಷಗಳಿಂದ ಪ್ರಕಟ).

2) ಮೊದಲ ಸಂಪಾದಕರು ಹಾಗೂ ಪ್ರಕಾಶಕ : "ಆದಿ ಚುಂಚನಗಿರಿ" ಧಾರ್ಮಿಕ, ಸಾಂಸ್ಕೃತಿಕ ಕೃಷಿ ಪ್ರಚಾರ ಪತ್ರಿಕೆ; 5 ವರ್ಷಗಳ ಕಾಲ ಸೇವೆ.

3) ಕರುಣಾ ರತ್ನ–ಸಂಸ್ಮರಣ ಸಂಚಿಕೆ ಸಂಪಾದಕ.

4) ಪ್ರಕೃತಿ ಜೀವನ ಕೇಂದ್ರದ–ಆರೋಗ್ಯ ಮಾಲೆಯ ಪ್ರಧಾನ ಸಂಪಾದಕ.

ಆಕಾಶವಾಣಿ ಮತ್ತು ದೂರದರ್ಶನ

ಚಿಂತನ, ಕಾರ್ಮಿಕ, ಗಾಂಧೀಜಿ, ಸರ್ವೋದಯ ಮತ್ತು ಮಕ್ಕಳ ಬಗ್ಗೆ ಆಕಾಶವಾಣಿ ಮತ್ತು ದೂರದರ್ಶನದ ಮೂಲಕ ಭಾಷಣ, ಸಂದರ್ಶನ ಕಾರ್ಯಕ್ರಮಗಳು. 300 ಕ್ಕೂ ಹೆಚ್ಚು ಸಂಸ್ಥೆಗಳಿಂದ ಸನ್ಮಾನಿಸಲ್ಪಟ್ಟಿದ್ದಾರೆ.

ಪ್ರಶಸ್ತಿಗಳು

- ❖ 1976. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ "ನಾ ಕಂಡ ಜರ್ಮನಿ" ಪುಸ್ತಕಕ್ಕೆ.
- ❖ 1984. ಕರ್ನಾಟಕ ಸರ್ಕಾರದಿಂದ "ರಾಜ್ಯೋತ್ಸವ ಪ್ರಶಸ್ತಿ" ಸಮಾಜ ಸೇವೆಗೆ'.
- ❖ 1988. "ಗೌರವ ಡಾಕ್ಟರೇಟ್ ಪ್ರಶಸ್ತಿ" (ಪ್ರಕೃತಿಚಿಕಿತ್ಸೆಗೆ).
- ❖ 1990. ಪ್ರಕೃತಿ ಚಿಕಿತ್ಸೆ ಮತ್ತು ಯೋಗದ ಸೇವೆಗಾಗಿ 'ಪತಂಜಲಿ ಸುವರ್ಣಪದಕ' ಕರ್ನಾಟಕ ಸರ್ಕಾರದಿಂದ.
- ❖ 1993. "ಕೆಂಪೇಗೌಡ" ಪ್ರಶಸ್ತಿ – ಬೆಂಗಳೂರು ಮಹಾನಗರ ಪಾಲಿಕೆವತಿಯಿಂದ.
- ❖ 1994. "ಯೋಗಶ್ರೀ" ಪ್ರಶಸ್ತಿ– ಬೆಂಗಳೂರು ಯೋಗ ಸೆಂಟರ್.
- ❖ 'ಆರ್ಯಭಟ' ಪ್ರಶಸ್ತಿ –ಸ್ವಾತಂತ್ರ್ಯ ಹೋರಾಟ ಮತ್ತು ಪ್ರಕೃತಿ ಚಿಕಿತ್ಸೆ ಪರಿಣಿತಿಗಾಗಿ.
- ❖ 1998. "ಆದರ್ಶ ದಂಪತಿಗಳು" ಪ್ರಶಸ್ತಿ.
- ❖ "ಕನ್ನಡ ಶ್ರೀ." – ಕನ್ನಡ ಸಾಹಿತ್ಯ ಪರಿಷತ್.

- "ಕರ್ನಾಟಕ ಶ್ರೀ." – ಕನ್ನಡ ಸಾಹಿತ್ಯ ಪರಿಷತ್.
- "ಸಮಾಜ ಸೇವಾ ಭೂಷಣ".
- "ಚುಂಚಶ್ರೀ" ಪ್ರಶಸ್ತಿ – ಆದಿಚುಂಚನಗಿರಿ ಮಹಾಸಂಸ್ಥಾನ ಮಠ.
- "ಮಾಸ್ಟರ್ ಆಫ್ ಮಿಲೆನಿಯಮ್" ಪ್ರಶಸ್ತಿ.
- "ಗೊರೂರು ಸಾಹಿತ್ಯ ಪ್ರಶಸ್ತಿ" – ಗೊರೂರು ಪ್ರತಿಷ್ಠಾನದಿಂದ.
- "ಕರ್ಮಯೋಗಿ ಎಂ.ಎಸ್. ರಾಮಯ್ಯ ಪ್ರಶಸ್ತಿ".
- ವೂಡೇ ಫೌಂಡೇಷನ್‌ನಿಂದ "ವೂಡೇ ಪ್ರಶಸ್ತಿ".
- "ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ರಾಷ್ಟ್ರೀಯ ಪ್ರಶಸ್ತಿ".
- 2013–ಮೈಸೂರು ವಿಶ್ವವಿದ್ಯಾನಿಲಯ ಗೌ॥ ಡಾಕ್ಟರೇಟ್ "ಡಿಲಿಟ್".
- 2015–ಕರ್ನಾಟಕ ಸರ್ಕಾರ "ಗಾಂಧೀ ಸೇವಾ ಪ್ರಶಸ್ತಿ".
- 2016–ಭಾರತ ಸರ್ಕಾರ ವಯೋಶ್ರೇಷ್ಠ (Centanarian) ಪ್ರಶಸ್ತಿ
- ಸಹಕಾರ ರತ್ನ – 2016 ಕರ್ನಾಟಕ ಸರ್ಕಾರ.
- ಕರುನಾಡ ರತ್ನ ಪ್ರಶಸ್ತಿ.
- ವಿಶ್ವಮಾನವ ಪ್ರಶಸ್ತಿ.
- ನಿಧನ : 6.4.2017 ರಂದು ಸಕಲ ಸರ್ಕಾರಿ ಗೌರವಗಳೊಡನೆ ಅಂತಿಮ ನಮನ. ಅವರ ಅಪೇಕ್ಷೆಯಂತೆ ಡಾ. ಹೊ. ಶ್ರೀ ಪ್ರಾರ್ಥಿವ ಶರೀರವನ್ನು ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜಿಗೆ ನೀಡಲಾಯಿತು. ಅವರ ಪತ್ನಿ ಜಯಲಕ್ಷ್ಮಿ ಅವರ ಪಾರ್ಥಿವ ಶರೀರವನ್ನು ಸಹ 2015ರಲ್ಲಿ ಅವರ ಅಪೇಕ್ಷೆಯಂತೆ ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜಿಗೆ ನೀಡಲಾಯಿತು.

ಲೇಖಕರ ಮಾಹಿತಿ

ನಾಡೋಜ ಡಾ॥ ಪಾಟೀಲ್ ಪುಟ್ಟಪ್ಪ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು,
ಅಧ್ಯಕ್ಷರು, ಕರ್ನಾಟಕ ಖಾದಿ ಗ್ರಾಮೋದ್ಯೋಗ (ಸಂ)ಸಂಘ, ಹುಬ್ಬಳ್ಳಿ

ಎಂ.ವಿ. ರಾಜಶೇಖರನ್
ಮಾಜಿ ಯೋಜನಾ ಖಾತೆ ರಾಜ್ಯ ಸಚಿವರು
ಭಾರತ ಸರ್ಕಾರ.

ಡಾ: ಜಿ. ಮಾದೇಗೌಡ
ಮಾಜಿ ಸಂಸದರು ಹಾಗೂ ಸಚಿವರು
ಅಧ್ಯಕ್ಷರು, ಮಹಾತ್ಮ ಗಾಂಧೀ ಸ್ಮಾರಕ ಟ್ರಸ್ಟ್(ರಿ). ಮಂಡ್ಯ

ಡಾ. ಬಿ.ಎಲ್. ಶಂಕರ್
ಅಧ್ಯಕ್ಷರು,
ಕರ್ನಾಟಕ ಚಿತ್ರಕಲಾ ಪರಿಷತ್ತು

ಡಾ. ಪಿ. ರಾಮಯ್ಯ
ಲೇಖಕ, ಹಿರಿಯ ಪತ್ರಕರ್ತ
ಮತ್ತು ಮಾಜಿ ವಿಧಾನ ಪರಿಷತ್ ಸದಸ್ಯ

ಮಾರ್ಕಂಡಪುರಂ ಶ್ರೀನಿವಾಸ್
ಕವಿ, ಸಾಹಿತಿ ಹಾಗೂ ಚಿಂತಕರು,
ನಿರ್ದೇಶಕರು(ನಿವೃತ್ತ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಕರ್ನಾಟಕ ಸರ್ಕಾರ.

ಡಾ: ಬಿ.ಎಸ್. ಶ್ರೀಕಂಠ
ಪ್ರಾಂಶುಪಾಲರು, ಸಿಂಧಿಕಾಲೇಜು, ಬೆಂಗಳೂರು
ಮಾಜಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಥಮ ದರ್ಜೆಕಾಲೇಜುಗಳ
ಪ್ರಾಂಶುಪಾಲರ ಸಂಘಗಳ ಒಕ್ಕೂಟ

ಇಂದಿರಾ ಕೃಷ್ಣಪ್ಪ
ಗೌ. ಕಾರ್ಯದರ್ಶಿ
ಕರ್ನಾಟಕ ಗಾಂಧಿ ಸ್ಮಾರಕ ನಿಧಿ.

ಎನ್.ಆರ್. ವಿಶುಕುಮಾರ್
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಸರ್ಕಾರ.

ಹೆಚ್.ಬಿ. ದಿನೇಶ್
ಕಾರ್ಯಕಾರಿ ಸಮಿತಿ ಸದಸ್ಯರು
ಕರ್ನಾಟಕ ಗಾಂಧಿ ಸ್ಮಾರಕ ನಿಧಿ.

ಡಿ.ಎಸ್. ನಾಗಭೂಷಣ್
ಲೋಹಿಯಾ ಪ್ರತಿಷ್ಠಾನ, ಶಿವಮೊಗ್ಗ

ವೇಮಗಲ್ ಸೋಮಶೇಖರ್
#160, ನಾಲ್ಕನೇ ತಿರುವು, ಲಕ್ಷ್ಮೀಪುರ
ಕೆಂಪೇಗೌಡ ನಗರ, ಬೆಂಗಳೂರು–19. ಮೊ: 99015 62292.

ಪ್ರೊ. ಎನ್. ಕೃಷ್ಣಸ್ವಾಮಿ
ಕಾರ್ಯದರ್ಶಿಗಳು, ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆ,
ಹನುಮಂತನಗರ, ಬೆಂಗಳೂರು ಹಾಗೂ
ಮಾಜಿ ಕಾರ್ಯದರ್ಶಿಗಳು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಹೆಚ್.ಎಂ. ಶಿವಣ್ಣ
ಅಧ್ಯಕ್ಷರು, ಹಾಸನ ಜಿಲ್ಲಾ ಸ್ವಾತಂತ್ರ ಹೋರಾಟಗಾರರ ಸಂಘ,
ಹಾಸನ. 573201

ಡಾ. ಎಮ್.ಎಸ್. ಪಾಟೀಲ
ಆಹ್ವಾನಿತ ಸದಸ್ಯರು, ಗಾಂಧೀ ಭವನ, ಬೆಂಗಳೂರು
ಗಣಿತಶಾಸ್ತ್ರ ಪ್ರಾಧ್ಯಾಪಕರು, ಭಂಡಾರಿ–ರಾಠಿ ಪದವಿ
ಕಾಲೇಜು, ಗುಳೇದಗುಡ್ಡ – 587203 ಬಾಗಲಕೋಟೆ–ಜಿಲ್ಲೆ

ಎಸ್.ಜಿ. ಸುಶೀಲಮ್ಮ
ಅಧ್ಯಕ್ಷರು, ಸುಮಂಗಲಿ ಸೇವಾ ಆಶ್ರಮ
ಚೋಳನಾಯಕನಹಳ್ಳಿ, ಆರ್.ಟಿ. ನಗರ ಅಂಚೆ, ಬೆಂಗಳೂರು

ಶ್ರೀ ಬಿ.ಎಂ. ಹರಿಪ್ರಸಾದ್
ಸಿ.ಇ.ಒ. ಗುರುಕುಲಾನಂದಾಶ್ರಮ,
ತಿಪಟೂರು.

ಶಶಿ ಕೃಷ್ಣ
ಆಹ್ವಾನಿತ ಸದಸ್ಯರು
ಕರ್ನಾಟಕ ಗಾಂಧಿ ಸ್ಮಾರಕ ನಿಧಿ.

ಬಳಕೂರು ವಿ.ಎಸ್. ನಾಯಕ
ಲೇಖಕರು, ನಂ 164/1 2ನೇ ಮಹಡಿ
1ನೇ ಮುಖ್ಯರಸ್ತೆ, 7ನೇ ಮುಖ್ಯರಸ್ತೆ,
ಮಾರುತಿ ಬಡಾವಣೆ, ಮಲ್ಲೇಶ್ವರಂ ರೈಲು ನಿಲ್ದಾಣ ಎದುರು,
ಶ್ರೀರಾಮಪುರಂ, ಅಂಚೆ ಬೆಂ–21

ಆರ್.ದೊಡ್ಡೇಗೌಡ (ಆರ್.ಡಿ.ಜಿ.)
ಮುಖ್ಯಸ್ಥರು,
ಸಪ್ನ ಪುಸ್ತಕ ಮಳಿಗೆ.

ಡಾ॥ ಅಭಿದಾ ಬೇಗಂ
ದೈಹಿಕ ಶಿಕ್ಷಣ ನಿರ್ದೇಶಕರು
ಸರ್ಕಾರಿ ಮಹಿಳಾ ಕಾಲೇಜು, ರಾಮನಗರ.

ಹೆಚ್.ಹೆಚ್. ನಾಗರಾಜ
ನಿಕಟಪೂರ್ವ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು
ಶ್ರೀ ಆಂಜನೇಯ ಸಹಕಾರ ಬ್ಯಾಂಕ್ ಲಿ.
ಲಿಂಕ್ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560 003.

ಟಿ. ವೆಂಕಟೇಶ್
ವ್ಯವಸ್ಥಾಪಕ ನಿರ್ದೇಶಕರು,
ಅಭಿಮಾನಿ ಸಮೂಹಸಂಸ್ಥೆ.

ಕೆ.ಹೆಚ್. ಗೋಪಾಲಕೃಷ್ಣೇಗೌಡ
ನಿವೃತ್ತ ಐ.ಎ.ಎಸ್ ಅಧಿಕಾರಿ

Ram Chandra Rahi
Chairman, Gandhi Smarak Nidhi, New Delhi

K.M. Natarajan
Secretary, Gandhi Smaraka Nidhi
Madurai, Tamil Nadu.

Sanjoy Singha
Secretary, Gandhi Smarak Nidhi, New Delhi

Santhe Narayana Swamy
Presently Gandhi Bhavan Campus,
Garden Development Officer.

Anirudh Aditya
Grand Son of Dr. H. Srinivasaiah

ಭಾವಚಿತ್ರಗಳು



ಬಾಲಕ ಹೊ. ಶ್ರೀನಿವಾಸಯ್ಯ 1932ರ ಚಿತ್ರ



ಪೂಜಾ ನಿರತರಾದ ತಾಯಿ



ತಂದೆಯೊಡನೆ ಬಾಲಕ ಹೊ. ಶ್ರೀನಿವಾಸಯ್ಯ



ಧರ್ಮಸ್ಥಳದ ಧರ್ಮಾಧಿಕಾರಿ ವಿರೇಂದ್ರ ಹೆಗಡೆ
ಅವರಿಂದ ಹೊ. ಶ್ರೀ ಅವರಿಗೆ ಅಭಿನಂದನೆ



ಬಿ.ಇ. ಪದವೀಧರ 1950ರ ಚಿತ್ರ

ಹೊ. ಶ್ರೀನಿವಾಸಯ್ಯನವರ ಮದುವೆ ಆಮಂತ್ರಣ

SIDDAVANAHALLI KRISHA SHARMA

requests the pleasure of your company

on the occasion of the marriage of

CHI. H. SREENIVASIAH, B.E.
(Son of late Sri Honnappa, Malleswaram, Bangalore)

WITH

CHI. SOW. JAYALAKSHMI
(Daughter of Sri Puttiah, Contractor, Chamalapur, Nanjangud)

on Thursday the 11th May 1950

at Sahukar Ranappa's Choultry, Nanjangud

MUHURTHAM : 10-30 to 11 a.m. **Reception : 6 p.m.**

ಹೊ. ಶ್ರೀನಿವಾಸಯ್ಯನವರ ಮದುವೆ ಆಮಂತ್ರಣ ಪತ್ರಿಕೆ



ಮದುವೆಯ ಸಂದರ್ಭ ಕುಳಿತವರಲ್ಲಿ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ,
ಶ್ರೀ ಎಚ್.ಸಿ. ದಾಸಪ್ಪ, ಹೊ. ಶ್ರೀ ದಂಪತಿಗಳು, ಸಿದ್ಧವನಹಳ್ಳಿ ಕೃಷ್ಣಶರ್ಮ ಅವರ ಪತ್ನಿ




ಧರ್ಮಪತ್ನಿಯಾದ ಶ್ರೀಮತಿ ಜಯಲಕ್ಷ್ಮಿಯವರೊಂದಿಗೆ



ಅರವತ್ತನೆಯ ಹುಟ್ಟುಹಬ್ಬದಂದು ಆದಿಚುಂಚನಗಿರಿ ಶ್ರೀಗಳ
ಜೊತೆ ಹೊ. ಶ್ರೀ ದಂಪತಿಗಳು



ರಾಮಕೃಷ್ಣಾಶ್ರಮದ ಶ್ರೀ ಸಿದ್ದೇಶ್ವರಾನಂದ ಸ್ವಾಮೀಜಿ ಅವರೊಡನೆ
ಪ್ಯಾರಿಸ್‌ನಲ್ಲಿ ಡಾ: ಹೊ. ಶ್ರೀ



ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಣೆಯಲ್ಲಿ ಡಾ: ಹೊ. ಶ್ರೀ




ಕವಿ ಕುವೆಂಪು ಅವರೊಡನೆ ಡಾ: ಹೊ. ಶ್ರೀ



ಡಾ: ಹೊ. ಶ್ರೀ ಅವರನ್ನು ಅಭಿನಂದಿಸುತ್ತಿರುವ
ಮಾಜಿ ಮುಖ್ಯಮಂತ್ರಿ ಶ್ರೀ ಕಡಿದಾಳ್ ಮಂಜಪ್ಪ ಅವರು



ಧರ್ಮಸ್ಥಳದ ಧರ್ಮಾಧಿಕಾರಿ ಡಾ: ವೀರೇಂದ್ರ ಹೆಗ್ಗಡೆಯವರೊಡನೆ ಡಾ: ಹೊ. ಶ್ರೀ



ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರೊಡನೆ ಡಾ: ಹೊ. ಶ್ರೀ



ಗಾಂಧೀ ಭವನದ ಕಾರ್ಯಕ್ರಮದಲ್ಲಿ ಪಂಡಿತ್ ಸುದಾಕರ ಚರ್ತುರ್ವೇದಿ
ಅವರೊಡನೆ ಡಾ: ಹೊ. ಶ್ರೀ



ಗಾಂಧೀ ಸಾಹಿತ್ಯ ಸಂಘದ ಗೆಳೆಯರೊಂದಿಗೆ ಹಾಗೂ ಶ್ರೀಮತಿ ನಿರ್ಮಲಾ ಗಾಂಧೀ
ಅವರೊಡನೆ ಡಾ: ಹೊ. ಶ್ರೀ




ಡಾ: ರಾಜ್ ಅವರೊಂದಿಗೆ ಡಾ: ಹೊ. ಶ್ರೀ



ಗಾಂಧೀವಾದಿ ಡಾ: ಹೆಚ್. ನರಸಿಂಹಯ್ಯ ಅವರೊಂದಿಗೆ
ಮತ್ತೊರ್ವ ಗಾಂಧೀವಾದಿ ಡಾ: ಹೊ. ಶ್ರೀ



ಚುಂಚನಗಿರಿಯಲ್ಲಿ ಕವಿ ಪುಂಗವರೊಡನೆ ಡಾ: ಹೊ. ಶ್ರೀ



ಗಾಂಧೀ ಸಾಹಿತ್ಯ ಸಂಘದ ಕಾರ್ಯಕ್ರಮದಲ್ಲಿ ಜೆ.ಪಿ ರಾಜರತ್ನಂ ಅವರೊಡನೆ




ಡಾ: ಜೀಶಂಪ, ಡಾ: ಹಾ.ಮಾ ನಾಯಕ ರೊಡನೆ ಡಾ: ಹೊ. ಶ್ರೀ



ಪುಸ್ತಕ ಬಿಡುಗಡೆ ಪ್ರೊ ಮಲ್ಲೇಪುರಂ ಜಿ. ವೆಂಕಟೇಶ, ಶ್ರೀಗಳು ಹಾಗೂ
ಡಾ. ಜಿ.ಎಸ್. ಶಿವರುದ್ರಪ್ಪ ರವರೊಡನೆ ಡಾ: ಹೊ. ಶ್ರೀ




ಡಾ: ಬಾಲಗಂಗಾಧರ ನಾಥ ಸ್ವಾಮೀಜಿ ಹಾಗೂ
ನಿಟ್ಟೂರು ಶ್ರೀನಿವಾಸರಾವ್ ಅವರೊಂದಿಗೆ ಡಾ: ಹೊ. ಶ್ರೀ.



ಪಂಡಿತ್ ಜವಹರ್‌ಲಾಲ್ ನೆಹರು ಅವರೊಂದಿಗೆ ಡಾ. ಹೊ. ಶ್ರೀ



ಜರ್ಮನಿಯ ಮಿತ್ರರೊಂದಿಗೆ ಡಾ: ಹೊ. ಶ್ರೀ




ಶ್ರೀ ಎ.ಎಸ್. ನಾರಾಯಣ ರಾವ್ ಹಾಗೂ ಬಿ.ಡಿ. ಜತ್ತಿಯವರೊಡನೆ ಕುಶಲ ಸಂಭಾಷಣೆ




ಕವಿ ಕುವೆಂಪು ಅವರ ಮನೆಯಲ್ಲಿ ಕುಟುಂಬ ಸದಸ್ಯರೊಂದಿಗೆ



ರಾಷ್ಟ್ರಪತಿ ಭವನದಲ್ಲಿ ಡಾ: ಎ.ಪಿ.ಜೆ. ಅಬ್ದುಲ್ ಕಲಾಂ ಅವರೊಂದಿಗೆ ಡಾ: ಹೊ. ಶ್ರೀ



ಪ್ರಕೃತಿ ಚಿಕಿತ್ಸಾ ಸಮ್ಮೇಳನದಲ್ಲಿ ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ
ಬಾಲಗಂಗಾಧರನಾಥ ಸ್ವಾಮೀಜಿ ಅವರೊಂದಿಗೆ ಡಾ: ಹೊ. ಶ್ರೀ




ಡಾ: ಎಂ.ಸಿ ಮೋದಿ ಅವರೊಂದಿಗೆ ಡಾ: ಹೊ ಶ್ರೀ



ರೈಲು ಕೋಚ್ ವೀಕ್ಷಣೆ ನಡೆಸುತ್ತಿರುವ ಹೊ. ಶ್ರೀ




ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ
ಗೌ: ಡಾಕ್ಟರೇಟ್ ಸ್ವೀಕರಿಸುತ್ತಿರುವ ಡಾ: ಹೊ. ಶ್ರೀ



ಆದಿ ಚುಂಚನಗಿರಿಯ ನಿಸರ್ಗದ ಮಡಿಲಲ್ಲಿ ಡಾ: ಹೊ ಶ್ರೀ




ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯರು ಹಾಗೂ ಇತರೆ ಪ್ರಕೃತಿ ಚಿಕಿತ್ಸಾ ತಜ್ಞರೊಂದಿಗೆ




ಯೋಗ ಗುರು ಡಾ: ಬಿ. ಕೆ ಎಸ್ ಐಯ್ಯಗಾರ್ ಅವರೊಂದಿಗೆ ಡಾ: ಹೊ. ಶ್ರೀ.



ಆದಿ ಚುಂಚನಗಿರಿ ಪೀಠಾಧಿಪತಿ ಡಾ: ನಿರ್ಮಲಾನಂಧನಾಥ ಸ್ವಾಮೀಜಿ
ಅವರೊಂದಿಗೆ ಡಾ: ಹೊ.ಶ್ರೀ




ಅಮೆರಿಕೆಯಲ್ಲಿ ಪ್ರಕೃತಿ ಚಿಕಿತ್ಸೆ ತರಗತಿಯಲ್ಲಿ ಪ್ರಕೃತಿ ಚಿಕಿತ್ಸೆಬಗ್ಗೆ ಉಪನ್ಯಾಸ ನೀಡುತ್ತಿರುವ ಡಾ: ಹೊ. ಶ್ರೀ



ಕನ್ನಡ ಪೂಜಾರಿ ಹಿರೆಮಗಳೂರು ಕಣ್ಣನ್ ಅವರೊಂದಿಗೆ
ಹಿರೆಮಗಳೂರಿನ ದೇವಾಲಯಲ್ಲಿ ಡಾ: ಹೊ. ಶ್ರೀ



ಸಚಿವ ರಾಮಲಿಂಗಾ ರೆಡ್ಡಿ ಅವರೊಂದಿಗೆ ಕಾರ್ಯಕ್ರಮದಲ್ಲಿ ಡಾ: ಹೊ. ಶ್ರೀ




ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳದಲ್ಲಿ ಡಾ: ಹೊ ಶ್ರೀನಿವಾಸಯ್ಯ
ಹಾಗೂ ಶ್ರೀಮತಿ ಜಯಲಕ್ಷಿ ಶ್ರೀನಿವಾಸಯ್ಯ



ಡಾ: ಹೊ. ಶ್ರೀ ಅವರ ಎಪ್ಪತ್ತೈದನೇ ವರ್ಷದ ಅಭಿನಂದನಾ ಸಮಾರಂಭದಲ್ಲಿ



ಸಚಿವ ಪ್ರೊ: ಬಿ.ಕೆ ಚಂದ್ರಶೇಖರ್ ಅವರು ಡಾ: ಹೊ ಶ್ರೀ ಅವರನ್ನು ಸನ್ಮಾನಿಸುತ್ತಿರುವುದು



ಗಾಂಧಿ ಭವನದ ಅತಿಥಿ ಗೃಹ ಉದ್ಘಾಟನೆ ಸಮಯದಲ್ಲಿ
ಮುಖ್ಯಮಂತ್ರಿ ಸದಾನಂದ ಗೌಡರೊಂದಿಗೆ



ಗಾಂಧೀ ಭವನದಲ್ಲಿ ನಡೆದ ಗಾಂಧೀ ಜಯಂತಿ ಕಾರ್ಯಕ್ರಮದಲ್ಲಿ
ಸಚಿವ ಆರ್. ಅಶೋಕ ಅವರೊಂದಿಗೆ ಡಾ: ಹೊ. ಶ್ರೀ



ಮುಕ್ತ ವಿಶ್ವವಿದ್ಯಾಲಯದಲ್ಲಿ ಗಾಂಧೀ ಉದ್ಯಾನವನ ಉದ್ಘಾಟನೆ ಕಾರ್ಯಕ್ರಮದಲ್ಲಿ
ಸುತ್ತೂರು ಶ್ರೀ ಹಾಗೂ ಕುಲಪತಿ ಪ್ರೊ: ಕೆ.ಎಸ್. ರಂಗಪ್ಪ ಅವರೊಂದಿಗೆ ಡಾ: ಹೊ. ಶ್ರೀ




ಶ್ರೀ ರಾಮಮಂದಿರ ಉದ್ಘಾಟನೆಯಲ್ಲಿ ಅಂದಿನ ಮುಖ್ಯಮಂತ್ರಿ ಹೆಚ್.ಡಿ ದೇವೇಗೌಡ
ಅವರೊಂದಿಗೆ ಡಾ: ಹೊ. ಶ್ರೀ.



ನವೀಕೃತ ಗಾಂಧೀ ಭವನ ಉದ್ಘಾಟನಾ ಸಮಾರಂಭದಲ್ಲಿ
ಮುಖ್ಯಮಂತ್ರಿ ಕುಮಾರಸ್ವಾಮಿ ಅವರೊಂದಿಗೆ ಡಾ: ಹೊ. ಶ್ರೀ



ಗಾಂಧೀ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪರವರನ್ನು
ಡಾ: ಹೊ ಶ್ರೀನಿವಾಸಯ್ಯನವರು ಅಭಿನಂಧಿಸುತ್ತಿರುವುದು



ವಿಶ್ವ ಪರ್ಯಟನೆಯಲ್ಲಿ ಸ್ವಾಮೀಜಿ ಅವರೊಂದಿಗೆ ಡಾ: ಹೊ ಶ್ರೀ.




ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಅವರಿಂದ ಸನ್ಮಾನಿಸಲ್ಪಡುತ್ತಿರುವ ಡಾ: ಹೊ. ಶ್ರೀ



ಮಾಸ್ಟರ್ ಹಿರಣ್ಣಯ್ಯ ಅವರೊಂದಿಗೆ ಡಾ: ಹೊ. ಶ್ರೀ



ಸನ್ಮಾನ ಸಮಾರಂಭದಲ್ಲಿ ಡಾ: ಹೊ. ಶ್ರೀ



ಸ್ವಾಮೀಜಿ ಅವರಿಂದ ಚುಂಚಶ್ರೀ ಪದವಿ ಸ್ವೀಕರಿಸುತ್ತಿರುವ ಡಾ: ಹೊ. ಶ್ರೀ.



ರಾಷ್ಟ್ರಪತಿಗಳಾದ ಡಾ: ಎ.ಪಿ.ಜೆ. ಅಬ್ದುಲ್ ಕಲಾಂ ರವರ ಜೊತೆ
ಪ್ರಕೃತಿ ಚಿಕಿತ್ಸಾ ಸಂಮ್ಮೇಳನದಲ್ಲಿ ಡಾ: ಹೊ. ಶ್ರೀ



ಸಾಂಗ್ಲೀಯಾನ ಅವರೊಂದಿಗೆ ಡಾ: ಹೊ ಶ್ರೀ ಕುಶಲೋಪರಿಯಲ್ಲಿ



ಗೊರೂರು ಪ್ರಶಸ್ತಿ ಪುರಸ್ಕಾರ ಸ್ವೀಕರಿಸುತ್ತಿರುವ ಡಾ: ಹೊ. ಶ್ರೀ



ದೇವಲಾಪುರ ದರ್ಶನ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಡಾ: ಹೊ. ಶ್ರೀ




ಪಾಮು ಅವರೊಂದಿಗೆ ಡಾ: ಹೊ. ಶ್ರೀ ದಂಪತಿ



ಡಾ: ರವಿಶಂಕರ್ ಗುರೂಜಿ ಅವರೊಂದಿಗೆ



ಸಂಗೀತ ದಿಗ್ಗಜ ಯೇಸುದಾಸ್ ಮತ್ತು ಹಿನ್ನೆಲೆ ಗಾಯಕ ಡಾ: ಬಾಲಸುಬ್ರಮಣ್ಯಂ
ಅವರಿಂದ ಡಾ: ಹೊ ಶ್ರೀ ಸನ್ಮಾನ ಸ್ವೀಕಾರ.



ಡಾ. ಹೊ. ಶ್ರೀ ಅವರೊಂದಿಗೆ ಸಚಿವ ಹೆಚ್.ಕೆ. ಪಾಟೀಲ್
ಮತ್ತು ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ



ಯೋಗಶ್ರೀ ಪ್ರಶಸ್ತಿ ಪುರಸ್ಕಾರ ಪ್ರಧಾನ ಸಮಾರಂಭದಲ್ಲಿ



ಬಿ.ಇ.ಎಸ್ ಬೆಳ್ಳಿಹಬ್ಬ ಕಾರ್ಯಕ್ರಮದಲ್ಲಿ ರಾಮಕೃಷ್ಣ ಆಶ್ರಮದ ಸ್ವಾಮೀಜಿ ಅವರೊಂದಿಗೆ.



ರಾಜ್ಯಪಾಲ ಚತುರ್ವೇದಿ ಅವರನ್ನ ಗೌರವಿಸುತ್ತಿರುವ ಡಾ: ಹೊ ಶ್ರೀ.



ಅರಸಿಕೆರೆ ಕಸ್ತೂರ ಬಾ ಆಶ್ರಮಕ್ಕೆ 2 ಕೋಟಿ ಅನುಧಾನ ನೀಡಿದರ ಸಲುವಾಗಿ
ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರಿಗೆ ಅಭಿನಂದಿಸುತ್ತಿರುವ ಡಾ. ಹೊ. ಶ್ರೀ




ಗಾಂಧೀ ಸೇವಾ ಪ್ರಶಸ್ತಿ ಪ್ರಧಾನ ಸಮಾರಂಭ ಚನ್ನಮ್ಮ ಹಳ್ಳಿಕೇರಿ,
ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಮತ್ತು ಡಾ. ಹೊ. ಶ್ರೀ



ಕರುನಾಡ ಸಂಭ್ರಮ ಕಾರ್ಯಕ್ರಮದಲ್ಲಿ ಡಾ. ಹೊ. ಶ್ರೀ




ಡಾ. ಹೊ. ಶ್ರೀ ಅವರಿಗೆ ಗಾಂಧೀ ಸೇವಾ ಪ್ರಶಸ್ತಿ ಪ್ರದಾನ
ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರಿಂದ.




ಕರ್ನಾಟಕದಲ್ಲಿ ಗಾಂಧೀ ಶತಮಾನೋತ್ಸವ ಸಮಾರಂಭದಲ್ಲಿ ಸಚಿವ ರೋಷನ್ ಬೇಗ್
ಅವರೊಂದಿಗೆ ಡಾ. ಹೊ. ಶ್ರೀ. ಗಾಂಧೀ ಚಿತ್ರ ಪ್ರದರ್ಶನ ವೀಕ್ಷಣೆ.



ಕರ್ನಾಟಕದಲ್ಲಿ ಗಾಂಧೀ ಶತಮಾನೋತ್ಸವ ಸಮಾರಂಭ ಪಾದಯಾತ್ರೆಗೆ
ಡಾ. ಹೊ. ಶ್ರೀ ಯವರಿಂದ ಚಾಲನೆ.



ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಡಾ. ಹೊ. ಶ್ರೀ .



ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರಿಂದ ಗಾಂಧೀ ಜಯಂತಿ ಕಾರ್ಯಕ್ರಮ ಉದ್ಘಾಟನೆ.
ನಾಡೋಜ ಪಾಪು ಮತ್ತು ಡಾ. ಹೊ. ಶ್ರೀ .




ವಾರ್ತಾ ಇಲಾಖೆ ಕಾರ್ಯಕ್ರಮದಲ್ಲಿ ಉಪ ನಿರ್ದೇಶಕ ದಿನೇಶ್ ಅವರನ್ನು ಅಭಿನಂದಿಸುತ್ತಿರುವ
ಡಾ. ಹೊ. ಶ್ರೀಜೊತೆಗೆ ಶ್ರೀ ಎನ್.ಆರ್. ವಿಶು ಕುಮಾರ್.




ಶರಣಧರ್ಮ ಚಿಂತನ ಸಮಾರಂಭದಲ್ಲಿ ಹೊ. ಶ್ರೀ. ಗೆ ಗೌರವಾರ್ಪಣೆ




ಅಣ್ಣ ಹಜಾರೆ ಅವರೊಂದಿಗೆ ಡಾ. ಹೊ. ಶ್ರೀ. ಮತ್ತು ಡಾ. ವೂಡೇ ಪಿ. ಕೃಷ್ಣ




ಗಾಂಧೀ ಭವನದ ಕಾರ್ಯಕ್ರಮದಲ್ಲಿ ಸಚಿವ ಹೆಚ್.ಕೆ. ಪಾಟೀಲ್, ಡಾ. ವೂಡೇ ಪಿ. ಕೃಷ್ಣ
ಮತ್ತು ಡಾ. ಹೊ. ಶ್ರೀ.



ಡಾ. ಹೊ. ಶ್ರೀನಿವಾಸಯ್ಯ ಅವರ 90ನೇ ಹುಟ್ಟುಹಬ್ಬದ ಆಚರಣೆ




ಎಚ್. ಎಸ್. ದೊರೆಸ್ವಾಮಿ ಮತ್ತು ಶ್ರೀಮತಿ ಉಷಾ ಅವರೊಂದಿಗೆ ಡಾ. ಹೊ. ಶ್ರೀ



ಬಿ.ಜಿ. ಬಣಕಾರ್ ಅವರೊಂದಿಗೆ ಡಾ. ಹೊ. ಶ್ರೀ.



ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರಿಂದ ಡಾ. ಹೊ. ಶ್ರೀ ಅವರಿಗೆ ವಯೋಶ್ರೇಷ್ಠ ಸನ್ಮಾನ













"ಡಾ॥ ಹೊ. ಶ್ರೀನಿವಾಸಯ್ಯ ನವರು ತಮ್ಮ ನಡೆ-ನುಡಿಯಲ್ಲಿ ಯಾವ ಅತಿರೇಕಗಳಿಗೂ ಎಡೆಯಿಲ್ಲದಂತೆ ಬಾಳಿದವರು. ಇಲ್ಲದ ಬೊಗಳೆಹೊಡೆದುಕೊಳ್ಳದೆ ಇದಷ್ಟು ಇದ್ದಂತೆಯೇ ವಿನಯದಲ್ಲಿ ಹೇಳುತ್ತ ನಡೆದವರು. ಸಮಯ ಪಾಲನೆ ಕರ್ತವ್ಯ ನಿರ್ವಹಣೆಯಲ್ಲಿ ಸದಾ ಬದ್ಧಶೀಲರು. ಅವರು ಗಾಂಧೀ ಭವನದ ಅಧ್ಯಕ್ಷರಾಗಿದ್ದಾಗ ಸಮಿತಿಯ ಸಭೆಗಳಲ್ಲಿ ನಡೆದುಕೊಳ್ಳುತ್ತಿದ್ದ ರೀತಿ, ಎಲ್ಲಾ ಸದಸ್ಯರ ಅಭಿಪ್ರಾಯಗಳಿಗೆ ಕೊಡುತ್ತಿದ್ದ ಮಾನ್ಯತೆ ಪ್ರಜಾಸತ್ತಾತ್ಮಕ ನಡೆಯದಾಗಿರುತ್ತಿತ್ತು. ಇವರು ಅಧ್ಯಕ್ಷರಾಗಿ ಬರುವುದಕ್ಕೆ ಮುಂಚೆ ನಡೆದಿದ್ದ ತಪ್ಪು ಘಟನೆಯೊಂದನ್ನು ಕುರಿತಾಗಿ ಅದನ್ನು ಸರಿಪಡಿಸಲು ಅವರು ತೋರಿದ ಸಮಯಾವಧಾನ, ಸಂಯಮ ಹಾಗೂ ಸತ್ಯನಿಷ್ಠ ನೈಷ್ಠುರ್ಯ ಅವರ ಗಾಂಧಿ ಚಿಂತನೆಯ ನಡವಳಿಕೆಗೆ ಸಾಕ್ಷಿ ಎನ್ನುವಂತಿತ್ತು. ತಪ್ಪಿತಸ್ಥ ಸ್ವಜಾತಿಯವನಾದರೂ ಅವನ ಬಗ್ಗೆ ಅವರು ನಡೆದುಕೊಂಡ ರೀತಿ ಅವರ ನಿಷ್ಪಕ್ಷಪಾತ ನ್ಯಾಯಪರ ನಿಲುವಿಗೆ, ಗಾಂಧೀ ಮಾರ್ಗದ ನಡೆಗೆ ಕನ್ನಡಿ ಹಿಡಿದ ಘಟನೆಯಾಗಿದೆ. ಅವರ ಅವಧಿಯಲ್ಲಿ ಗಾಂಧೀ ಭವನದ ಬಹಿರಂಗ ಸೌಂದರ್ಯ ಪಾರದರ್ಶಕ ಪ್ರಜ್ಞೆಯಲ್ಲಿ ಬೆಳಗಿದೆ. ಗಾಂಧೀ ಭವನಕ್ಕೆ ಬಂದರೆ ಸ್ವಾತಂತ್ರ್ಯ ಹೋರಾಟದ ಸಾಕ್ಷ್ಯ ಚಿತ್ರಗಳ ಪ್ರತಿಮಾಕೃತಿಗಳು ಕಣ್ಮನ ಸೆಳೆಯುತ್ತವೆ. ಭವನದೊಳಕ್ಕೆ ಕಾಲಿಡುತ್ತಿದ್ದಂತೆಯೇ ಸದಭಿರುಚಿಯ ಉತ್ತಮೋತ್ತಮ ಕೃತಿಗಳ ಪುಸ್ತಕ ಮಳಿಗೆ ಬರುವವರನ್ನು ಸ್ವಾಗತಿಸುತ್ತದೆ. ಒಳ್ಳೆಯ ಮನಸ್ಸು ಒಂದು ಸಂಸ್ಥೆಯನ್ನು ನಡೆಸಿದರೆ ಅದರ ಪಾವಿತ್ರ್ಯ ಕೆಡದಂತೆ ಅದನ್ನು ಹೇಗೆ ಬೆಳೆಸಬಲ್ಲದು ಎಂಬುವುದಕ್ಕೆ ಗಾಂಧೀಭವನ ಸಾಕ್ಷಿಯಾಗಿದೆ.

– ಪ್ರೊ. ಎಸ್.ಜಿ. ಸಿದ್ಧರಾಮಯ್ಯ

